

ನ್ಯಾಸ್ತನೆ ನೆಲಬಾಲನೆ

ಡಾ. ಕೆ.ವೈ. ನಾರಾಯಣಸ್ವಾಮಿ

ಪಂಪಭಾರತ
ಅನಭಿಜ್ಞ ಶಾಕುಂತಲ
ಕೈವಾರ ನಾರೇಯಣ
ಚಕ್ರರತ್ನ
ವಿನುರ ವೇಮನ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು.

ನ್ಯಾಸ್ತನೆ ನೆಲಬಾಲನೆ

(ಕೆವೈಎನ್ ಐದು ನಾಟಕಗಳು)

ಕೆ. ವೈ. ನಾರಾಯಣಸ್ವಾಮಿ

೧೯೯೩ - ೨೦೧೮
ಬೆಳ್ಳಿ ಹೊತ್ತಿಗೆ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೧೦೭೭೦೪, ೨೨೪೮೪೫೧೬
ವೆಬ್‌ಸೈಟ್: www.kannadapustakapradhikara.com
ಈಮೇಲ್: kannadappradhikara@gmail.com

NYATHANE NELABALANE - by: K. Y. Narayanaswamy; Published by: Sowbhagya, Administrative Officer, Kannada Pusthaka Pradhikara, Kannada Bhavana, J.C.Road, Bengaluru-560 002.

ಪ್ರಥಮ ಮುದ್ರಣ	:	೨೦೧೯
ಪುಟಗಳು	:	x + ೩೦೦
ಬೆಲೆ	:	ರೂ. ೨೨೦/-
ಪ್ರತಿಗಳು	:	೫೦೦
ಐ.ಎಸ್.ಬಿ.ಎನ್. ಸಂಖ್ಯೆ	:	೯೭೮-೯೩-೫೨೮೯-೨೬೭-೯
ಬಳಸಿದ ಕಾಗದ	:	೭೦ ಜಿಎಸ್‌ಎಂ ಎನ್‌ಎಸ್ ಮ್ಯಾಪ್ಲಿಥೋ
ಅಳತೆ	:	೧/೮ ಡೆಮಿ
© ಗ್ರಂಥಸ್ವಾಮ್ಯ	:	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಮುಖಪುಟ ವಿನ್ಯಾಸ	:	ಎಸ್. ಮಂಜುನಾಥ್

First Print	:	2019
Page	:	x + 300
Price	:	Rs. 220/-
Copies	:	500
ISBN	:	978-93-5289-267-9
Paper Used	:	70 GSM NS Maplitho
Size	:	1/8 Demy
© Copy Rights	:	Kannada pusthaka Pradhikara, Bengaluru

ಪ್ರಕಾಶಕರು
ಸೌಭಾಗ್ಯ
ಆಡಳಿತಾಧಿಕಾರಿ
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು-೫೬೦ ೦೦೨
☎: ೦೮೦-೨೨೧೦೭೭೦೪/೨೨೪೮೪೫೧೬
ಈಮೇಲ್: kannadappradhikara@gmail.com
ವೆಬ್ : www.kannadapustakapradhikara.com

ಮುದ್ರಕರು
ಮೆ: ರಾಜಾ ಪ್ರಿಂಟರ್ಸ್
ಪುಖ್ ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-೫೬೦ ೦೩೦
☎: ೦೮೦-೨೨೨೩೪೦೬೬
ಈಮೇಲ್ : rajaprinters@gmail.com

ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪರಂಪರೆಯ ಬೇರನ್ನು ಸುಭದ್ರಗೊಳಿಸುವ ನಿಟ್ಟಿನಲ್ಲಿ ಪುಸ್ತಕಗಳ ಪ್ರಕಟಣೆಗೆ ಮಾತ್ರ ಸೀಮಿತವಾಗದೇ, ಪುಸ್ತಕಗಳ ವಿತರಣೆಗಾಗಿ ಸಗಟು ಖರೀದಿ ಯೋಜನೆ ಸೇರಿದಂತೆ ಹಲವಾರು ಮಹತ್ವದ ಯೋಜನೆಗಳನ್ನು ಹೊಂದಿದೆ. ಪುಸ್ತಕ ಸಂಸ್ಕೃತಿಯ ಪ್ರಸಾರದಲ್ಲಿ ಬಲವಾದ ಹೆಜ್ಜೆಗಳನ್ನೂರುತ್ತ, ಪ್ರಕಾಶಕರು – ಲೇಖಕರು – ಓದುಗರ ನಡುವೆ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತಿದೆ. ೧೯೯೩ರಲ್ಲಿ ಪ್ರಾರಂಭವಾದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಈಗ ಬೆಳ್ಳಿ ಹಬ್ಬದ ಸಂಭ್ರಮ. ಪ್ರಕಾಶಕರ ಕೈಪಿಡಿ, ಪ್ರಾಧಿಕಾರದ ಹೆಜ್ಜೆಗುರುತುಗಳ ಪ್ರಕಟಣೆಗಳೊಂದಿಗೆ, ದೇಸಿಜ್ಞಾನ ಪರಂಪರೆ, ಪ್ರಕಾಶಕರ ಸಮ್ಮೇಳನ, ಪುಸ್ತಕೋದ್ಯಮ ಚರಿತ್ರೆಯ ಕುರಿತು ಸಂಪುಟಗಳ ರಚನೆ ಮುಂತಾದ ಯೋಜನೆಗಳನ್ನು ಕೈಗೊಂಡಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಅಚ್ಚುಮೆಚ್ಚಿನ ಪುಸ್ತಕ', ಕಾಲೇಜು ವಿದ್ಯಾರ್ಥಿಗಳಿಗೆ 'ಜಾಣ ಜಾಣೆಯರ ಬಳಗ' ಕಾರ್ಯಕ್ರಮಗಳೊಂದಿಗೆ, ಉದಯೋನ್ಮುಖ ಬರಹಗಾರರನ್ನು ಪ್ರೋತ್ಸಾಹಿಸುವ ಚೊಚ್ಚಲ ಕೃತಿಗಳಿಗೆ ಧನಸಹಾಯ ನೀಡುವುದನ್ನು ೩೦ ರಿಂದ ೫೦ ಬರಹಗಾರರಿಗೆ ಹೆಚ್ಚಿಸಲಾಗಿದೆ.

ಕನ್ನಡ ರಂಗಭೂಮಿ ಜಾಗತಿಕ ವ್ಯಾಪ್ತಿಯಲ್ಲಿ ಹೆಸರು ಮಾಡಿದೆ. ಇದಕ್ಕೆ ಮುಖ್ಯ ಕಾರಣ ಎಪ್ಪತ್ತರ ದಶಕದ ನಂತರ ಕನ್ನಡದ ಹವ್ಯಾಸಿ ರಂಗಭೂಮಿಯಲ್ಲಿ ಆದ ಬೆಳವಣಿಗೆಗಳು. ಒಂದು ಕಡೆ ನಾಟಕ ರಚನೆಕಾರರ ತಂಡ, ಮತ್ತೊಂದೆಡೆ ರಂಗ ನಿರ್ದೇಶಕರ ಪಡೆ ಹೀಗೆ ಪೈಪೋಟಿಯಲ್ಲಿ ರಂಗಭೂಮಿಯನ್ನು ಹೆಚ್ಚು ಕ್ರಿಯಾಶೀಲವಾಗಿ ಬೆಳೆಸಿರುತ್ತಾರೆ. ಚಂದ್ರಶೇಖರ ಕಂಬಾರ, ಗಿರೀಶ ಕಾರ್ನಾಡ, ಲಂಕೇಶ, ಚಂದ್ರಶೇಖರ ಪಾಟೀಲ, ಜಡಭರತ ಮೊದಲಾದವರು ಈ ಸಾಲಿನಲ್ಲಿ ನಾಟಕರಚನೆಕಾರರಾಗಿ ಹೆಸರು ಗಳಿಸಿದ್ದಾರೆ. ಬಿ.ವಿ. ಕಾರಂತ, ಬಿ. ಚಂದ್ರಶೇಖರ, ಮೊದಲಾದವರು ರಂಗ ನಿರ್ದೇಶನದಲ್ಲಿ ಹೊಸ ಸಾಧ್ಯತೆಗಳನ್ನು ಕನ್ನಡಕ್ಕೆ ಪರಿಚಯಿಸಿದವರಾಗಿದ್ದಾರೆ. ಇಂದಿಗೂ ಆ ಕಾಲದ ನಾಟಕಗಳು ರಂಗ ಪ್ರಿಯರಿಗೆ ಆಸಕ್ತಿಯ, ಸವಾಲಿನ ಪ್ರಯೋಗಗಳೇ ಆಗಿವೆ.

ಕವಿ, ಸಂಸ್ಕೃತಿಚಿಂತಕ ಕೆ.ವೈ. ನಾರಾಯಣಸ್ವಾಮಿಯವರು ಪ್ರಧಾನವಾಗಿ ನಾಟಕಕಾರರು. ಕೆವೈಎನ್ ಅವರು ಬರೆದ ನಾಟಕಗಳು ಹಲವು. "ನ್ಯಾಸ್ತನೆ

ನೆಲಬಾಲನೆ"ಯಲ್ಲಿ ಚಕ್ರರತ್ನ, ಅನಭಿಜ್ಞ ಶಾಕುಂತಲ, ಪಂಪಭಾರತ, ಕೈವಾರ ನಾರೇಯಣ, ವಿನುರ ವೇಮನ ಎಂಬ ಈ ಐದು ನಾಟಕಗಳನ್ನು ಸಂಕಲಿಸಲಾಗಿದೆ. ಈ ನಾಟಕಗಳು ಸಮಕಾಲೀನ ಸಂದರ್ಭದ ನೆಲೆಯಲ್ಲಿ ಜಾಗತಿಕ ರಾಜಕಾರಣವನ್ನು ದೇಸೀಯ ವಿದ್ಯಮಾನಗಳನ್ನು ಮುಖಾಮುಖಿಯಾದಂತೆ ರಚಿಸಲಾಗಿದೆ. ಇಲ್ಲಿ ಪುರಾಣಕ್ಕೆ ಸಂಬಂಧಿಸಿದ ವಸ್ತುವಿನ ಜೊತೆಗೆ ಚಾರಿತ್ರಿಕ ಸಂದರ್ಭದ ಹಲವು ವ್ಯಕ್ತಿಗಳನ್ನು, ಸಂಗತಿಗಳನ್ನು, ನಾಟಕಕ್ಕೆ ವಸ್ತುವಾಗಿ ಬಳಸಿಕೊಳ್ಳಲಾಗಿದೆ. ಶಕುಂತಲೆಯನ್ನು ಕುರಿತು ಮಹಾಭಾರತದಲ್ಲಿ 'ಶಕುಂತಲೋಪಾಖ್ಯಾನ' ಎಂಬ ಉಪಾಖ್ಯಾನವೇ ಇವೆ. ಅದನ್ನು ಆಧರಿಸಿ ಕವಿರತ್ನ ಕಾಳಿದಾಸ 'ಅಭಿಜ್ಞಾನ ಶಾಕುಂತಲಂ' ಎಂಬ ನಾಟಕ ಬರೆದಿದ್ದಾರೆ. ಇದು ವಿಶ್ವವಿಖ್ಯಾತ ನಾಟಕ. ನಾರಾಯಣಸ್ವಾಮಿಯವರು ಈ ನಾಟಕವನ್ನು ವಸ್ತುವಾಗಿಟ್ಟುಕೊಂಡು ಜಾನಪದೀಯ ನೆಲೆಯೊಳಗೆ ಶಕುಂತಲೆಯ ಬದುಕನ್ನು ನಿರೀಕ್ಷಿಸಹೋಗಿದ್ದಾರೆ. ಕಾಳಿದಾಸ ಅಭಿಜ್ಞಾನ ಎಂಬುದನ್ನು ತನ್ನ ನಾಟಕದ ಕೇಂದ್ರ ಪ್ರಜ್ಞೆಯಾಗಿ ಬಳಸಿದರೆ ನಾರಾಯಣಸ್ವಾಮಿ ಅನಭಿಜ್ಞಾನವನ್ನು ಕೇಂದ್ರವಾಗಿಸಿದ್ದಾರೆ. ಎರಡರ ಉದ್ದೇಶವೂ ಒಂದೇ. ಆದರೆ ಒಂದು ಮಾರ್ಗ ಪರಂಪರೆಯ ನೆನಪಿನಧಾರೆ. ಇನ್ನೊಂದು ದೇಸೀಯ ನೆಲೆಯ ನೆನಪಿನಧಾರೆ. ನಾರಾಯಣಸ್ವಾಮಿಯವರು ನಾಟಕವನ್ನು ಕಟ್ಟಿಕೊಡುವ ರೀತಿಯಲ್ಲಿ ಅದರ ತಂತ್ರದಿಂದ ಹಿಡಿದು ಅಲ್ಲಿಯ ಲೋಕದರ್ಶನ ಒಳಗೊಂಡಂತೆ ರಚನಾ ವಿನ್ಯಾಸವೇ ಹೊಸತು ಎನ್ನಿಸುತ್ತದೆ. ವಸ್ತು ಹಳೆಯದೆಂದರೂ ಕಾಣುವ ಕಣ್ಣು ಈ ಕಾಲದ್ದು, ಹೀಗಾಗಿ ವಸ್ತು ನಮ್ಮದು, ನಮ್ಮ ಮನೆಯಂಗಳದ್ದು ಎನ್ನಿಸುವ ಆಪ್ತತೆಯಲ್ಲಿ ಬಿಚ್ಚಿಕೊಳ್ಳುತ್ತದೆ. ಇದು ಕೆವೈಎನ್ ಅವರ ವಿಶೇಷತೆ. ಅವರ ಚಕ್ರರತ್ನವೂ ಇದೇ ರೀತಿಯಲ್ಲಿ ಮರು ರಚನೆಗೊಂಡ ಒಂದು ನಾಟಕ. ಭರತ ಚಕ್ರವರ್ತಿಯ ಆಯುಧಾಗಾರದಲ್ಲಿ ಹುಟ್ಟಿದ ಚಕ್ರರತ್ನ ಇದು. ಜೈನಧರ್ಮದ ಅಹಿಂಸಾತತ್ವವನ್ನು ಯುದ್ಧದ ಆವರಣದಲ್ಲಿಯೇ ಇದು ಅನನ್ಯ ಎನಿಸುವ ರೀತಿಯಲ್ಲಿ ಕಾಣಿಸಿದ್ದಾರೆ. ಹಾಗೆಯೇ ಚಾರಿತ್ರಿಕ ವ್ಯಕ್ತಿಯಾದ ವೀರಬ್ರಹ್ಮಯ್ಯ ಕಥೆ ಕೂಡ ಮರು ರಚನೆಗೆ ಒಳಗಾಗಿದೆ. ಕೈವಾರ ತಾತಯ್ಯನ ಬದುಕನ್ನು ನೋಡಿರುವ ದೃಷ್ಟಿಯೇ ವಿನೂತನವಾಗಿದೆ. ಹೀಗೆ ಇವರ ನಾಟಕಗಳ ವಸ್ತು ಕನ್ನಡ ಸಾಂಸ್ಕೃತಿಕ ಜಗತ್ತಿಗೆ ಸಂಬಂಧಿಸಿದ ವಸ್ತುವಾದರೂ ಅದನ್ನು ನಾರಾಯಣಸ್ವಾಮಿಯವರು ಮರು ರಚನೆಗೆ ಒಡ್ಡಿಕೊಂಡಿರುವ ದೃಷ್ಟಿ ಅಪೂರ್ವವಾದುದು. ಇವರ ನಾಟಕಗಳಲ್ಲಿ ಸಂಭಾಷಣೆ, ಹಾಡುಗಳು ಹಿಂದಿನ ನಾಟಕಕಾರರ ರಾಗಗುಂಗಿನ ವೈಭವೀಕರಣದ ಪರಿಕರಗಳಾಗದೇ ಇಡೀ ನಾಟಕದ ಅಂದಸೌಷ್ಠವವನ್ನು ಹಿಡಿದಿಡುವ ರಚನೆಗಳಾಗಿವೆ. ಇಡೀ ನಾಟಕಕ್ಕೆ ಹೊಸಕಳೆಯನ್ನು ತಂದುಕೊಡುವ ಚಿಂತನೆಯ ಧಾರೆಗಳಾಗಿವೆ. ಇವು ಓದುವ

ಪಠ್ಯಗಳಾದಷ್ಟೇ ಪರಿಪೂರ್ಣತೆಯಲ್ಲಿ ರಂಗ ಪಠ್ಯಗಳಾಗಿಯೂ ನಿರ್ದೇಶಕರಿಗೆ ಪ್ರಯೋಗದ ಪ್ರೇರಣೆಯನ್ನು ನೀಡುವ ಕೃತಿಗಳಾಗಿವೆ.

ಇದನ್ನು ಪ್ರಕಟಿಸಲು ಸಮ್ಮತಿಸಿದ ಲೇಖಕರಾದ ಶ್ರೀ ಕೆ.ವೈ. ನಾರಾಯಣಸ್ವಾಮಿ ಅವರಿಗೆ ಮನಃಪೂರ್ವಕ ಕೃತಜ್ಞತೆಗಳು. ಈ ಕೃತಿ ಪ್ರಕಟವಾಗುವಲ್ಲಿ ಆಸಕ್ತಿವಹಿಸಿದ ಆಡಳಿತಾಧಿಕಾರಿ ಶ್ರೀಮತಿ ಸೌಭಾಗ್ಯ ಅವರಿಗೆ, ಪ್ರಾಧಿಕಾರದ ಎಲ್ಲ ಸದಸ್ಯರಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ವಂದನೆಗಳು. ಕನ್ನಡ ಸಾರಸ್ವತಲೋಕ ಈ ಕೃತಿಯನ್ನು ಬೆರಗುಗಣ್ಣಿನಿಂದ ಎದೆಗೊತ್ತಿಕೊಳ್ಳುತ್ತದೆ ಎಂಬ ಭರವಸೆ ಪ್ರಾಧಿಕಾರದ್ದಾಗಿದೆ.

– ಡಾ॥ ವಸುಂಧರಾ ಭೂಪತಿ

ನೆನೆವುದೆನ್ನ ಮನಂ

ನಾನು ಈವರೆಗೆ ಬರೆದ ಹತ್ತಕ್ಕೂ ಮಿಗಿಲು ನಾಟಕಗಳಲ್ಲಿ ಐದು ನಾಟಕಗಳನ್ನು ಪುಸ್ತಕ ಪ್ರಾಧಿಕಾರವು ಸಂಕಲಿಸುತ್ತಿದ್ದಾರೆ. ಪಂಪಭಾರತ ನಾನು ಬರೆದ ಮೊದಲ ಪೂರ್ಣಪ್ರಮಾಣದ ನಾಟಕ, ನ್ಯಾಸ್ತುಡಾ ನೆಲಬಾಲುಡಾ ಎಂಬ ತೆಲುಗಿನ ಜನಪದ ಹಾಡಿನ ಬೆನ್ನಹತ್ತಿ ಹೋದಾಗ ರೂಪಗೊಂಡಿದ್ದು ಅನಭಿಜ್ಞ ಶಾಕುಂತಲ ನಾಟಕ. ಯುದ್ಧ ಮತ್ತು ಅಧಿಕಾರ ಮಾನವೀಯ ಸಂಬಂಧಗಳನ್ನು ಛಿದ್ರಗೊಳಿಸುವ ಪರಿಯನ್ನು ಅರಿಯಲು ನಡೆಸಿದ ಪ್ರಯತ್ನವೇ ಚಕ್ರರತ್ನ. ಶ್ರಮಣ ಪರಂಪರೆಯ ಆಧ್ಯಾತ್ಮಿಕ ನಾಯಕರಾದ ಕೈವಾರ ನಾರೇಯಣ ಹಾಗೂ ತೆಲುಗು ಭಾಷೆಯಲ್ಲಿ ನುಡಿದ ಯೋಗಿ ವೇಮನರ ಬದುಕನ್ನು ನಾಟಕವಾಗಿಸುವ ಪ್ರಯತ್ನವನ್ನು ಮಾಡಿದ್ದೇನೆ. ಈ ಐದು ನಾಟಕಗಳು ನಮ್ಮ ಭಾರತದೇಶದ ಸಾಂಸ್ಕೃತಿಕ ನಾಯಕರಾದ ಕಾಳಿದಾಸ, ಬಾಹುಬಲಿ, ಪಂಪ ಯೋಗಿ ವೇಮನ ಹಾಗೂ ಸಂತ ಕೈವಾರತಾತಯ್ಯ ಅವರ ಬದುಕನ್ನು ಮರುರೂಪಿಸಲು ಇಲ್ಲಿ ಪ್ರಯತ್ನಿಸಿದ್ದೇನೆ. ನಾಟಕ ಮಾಧ್ಯಮ ಅತ್ಯಂತ ಸವಾಲಿನದು. ವರ್ತಮಾನದಲ್ಲಿ ಮಾತ್ರ ವ್ಯವಹರಿಸುವ ಕಲಾ ಪ್ರಕಾರವಿದು. ನಿಜದ ಅರ್ಥದಲ್ಲಿ ಇದು ಸಾಮುದಾಯಿಕವಾದದ್ದು. ಕಳೆದ ಹದಿನೈದು ವರ್ಷಗಳಲ್ಲಿ ನಮ್ಮ ಸಮಾಜ ಎದುರುಗೊಂಡ ಸಾಮಾಜಿಕ-ರಾಜಕೀಯ ಹಾಗೂ ಚರಿತ್ರೆಯ ಸಮಸ್ಯೆಗಳನ್ನು ಕಾಲದೇಶಗಳ ಕುರುಹುಗಳಾಚೆಗೆ ಒಯ್ದು, ಕನ್ನಡ ಸಾಹಿತ್ಯ ಪರಂಪರೆಯ ನೆರವಿನೊಂದಿಗೆ ಅರ್ಥೈಸಲು ಪ್ರಯತ್ನಿಸಿದ್ದೇನೆ. ನನ್ನ ಬರೆದಎಲ್ಲಾ ನಾಟಕಗಳು ರಂಗದ ಮೇಲೆ ಬರುವ ಭಾಗ್ಯ ಪಡೆದುಕೊಂಡಿದ್ದು ಕೂಡ ನನಗೆ ಸಂತೋಷ ಕೊಟ್ಟ ಸಂಗತಿಯಾಗಿದೆ. ಕುವೆಂಪು ಅವರ ಮಹೋನ್ನತ ಕಲಾಕೃತಿಯಾದ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನ ನಾಟಕವಾಗಿಸಿದ್ದು ನನಗೆ ಸಿಕ್ಕ ಬಹು ದೊಡ್ಡ ಪ್ರಶಸ್ತಿಯಾಗಿದೆ. ನನ್ನ ರಂಗ ಪ್ರಯಾಣ ಆರಂಭವಾಗಿದ್ದು ನಮ್ಮೂರಿನಲ್ಲಿ ನಡೆಯುತ್ತಿದ್ದ ಕೇಳಿಕೆ ಎನ್ನುವ ಜನಪದರಂಗ ಪ್ರಯೋಗದಿಂದ ಇರಬಹುದು. ನಾನು ಪಿಯುಸಿ ಓದುವಾಗ 'ಹಕ್ಕಿ ಹಾರಿತು ಕಾಳು ಚೆಲ್ಲಿತು' ಎನ್ನುವ ದುರಂತ ನಾಟಕವನ್ನು ಬರೆದು ಆಡಿಸಿದ್ದೆ. ಅದೇ ನನ್ನ ಮೊದಲ ನಾಟಕ. ನಂತರ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ನಡೆಯುತ್ತಿದ್ದ ವಿದ್ಯಾರ್ಥಿ ರಂಗಚಟುವಟಿಕೆ, ಅಲ್ಲಿಂದ ಸಿಜಿಕೆ ಎಂಬ ರಂಗ ಮಾಂತ್ರಿಕನ ನೆರಳಿಗೆ ಬಂದುದ್ದು. ಸಮುದಾಯ ಸೇರಿದ್ದು,

ಸೈಡ್ ನಟನಾಗಿದ್ದು, ರಂಗ ನಿರ್ದೇಶಕ ಬಸವಲಿಂಗಯ್ಯ ಅವರ ಒತ್ತಾಯದಿಂದ ಬೀದಿ ನಾಟಕಗಳನ್ನು ಬರೆದಿದ್ದು, ನಂತರ ಕಿರಂ ಮತ್ತು ಸಿಜಿಕೆ ಅವರ ಅಣತಿಯಂತೆ ಪಂಪಭಾರತ ಎಂಬ ನಾಟಕ ಬರೆದು ನಾಟಕಕಾರನಾಗಿದ್ದು ಈಗಲೂ ಇದು ನಿಜವೋ ಸುಳ್ಳೋ ಎಂಬ ಅನುಮಾನದಂತಿದೆ ನಾನು ನಡೆದ ರಂಗದ ಹಾದಿ.

ಈ ನಾಟಕಗಳನ್ನು ಜನ ಮೆಚ್ಚುವಂತೆ ಆಡಿದವರು ಸಮುದಾಯ, ಪ್ರಸಂಗ, ರಂಗಬೆಳಕು, ಪ್ರಜಾನಾಟಕ ಮಂಡಳಿ (ಆಂಧ್ರಪ್ರದೇಶ) ರೂಪಾಂತರ, ಸಾನೇಹಳ್ಳಿ ಶಿವಸಂಚಾರ ನಾಟಕ ತಂಡಗಳು. ಈ ನಾಟಕಗಳ ನಿರ್ದೇಶಕರಾದ ಸಿ.ಬಸವಲಿಂಗಯ್ಯ ಪ್ರಮೋದ್ ಶಿಗ್ಗಾಂವ್, ಪ್ರಕಾಶ್ ಶೆಟ್ಟಿ, ಕೆಸಿಡಿಎಲ್ ಚಂದ್ರು, ಕೊಟ್ರಪ್ಪ ಎಲ್ಲರಿಗೂ ಆಭಾರಿಯಾಗಿದ್ದೇನೆ. ಪಂಪಭಾರತ, ಅನಭಿಜ್ಞ ಶಾಕುಂತಲ, ಹಾಗೂ ಚಕ್ರರತ್ನ ನಾಟಕಗಳನ್ನು ಈ ಹಿಂದೆ ಮುದ್ರಿಸಿದ್ದ ಭಾವ ಮಾಧ್ಯಮ, ಪ್ರಗತಿಗ್ರಾಫಿಕ್ಸ್, ಕೋ ಪ್ರಕಾಶನ, ಸಿರಿವರ ಪ್ರಕಾಶನ, ಸಿವಿಜಿ ಪ್ರಕಾಶನ ಹಾಗೂ ಅವಿರತ ಸಂಸ್ಥೆಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಹಿಂದೆ ನನ್ನ ನಾಟಕಗಳಿಗೆ ಮುನ್ನುಡಿ ಬೆನ್ನುಡಿಗಳನ್ನು ಬರೆದು ಹರಸಿದ್ದ ಕೆ.ಎಂ.ಎಸ್, ಕೆ.ವಿ.ಎನ್, ಲಿಂಗದೇವರು ಹಳೆಮನೆ, ಬಸವಲಿಂಗಯ್ಯ ಗುರುಗಳು ಮತ್ತು ಪ್ರಿಯ ಮಿತ್ರ ಮೇಟಿ ಮಲ್ಲಿಕಾರ್ಜುನ ಈ ಎಲ್ಲರನ್ನು ನೆನೆಯುತ್ತೇನೆ. ಈ ನಾಟಕಗಳನ್ನು ಗಣಕಿಸಿ ಕರಡು ತಿದ್ದುವಲ್ಲಿ ಸಹಕರಿಸಿದ ಗೆಳೆಯ ಕವಿ ಮಂಜುನಾಥನಿಗೆ ಹಾಗೂ ವಿದ್ಯಾರ್ಥಿ ಮಿತ್ರ ಪುನೀತ್‌ಕುಮಾರ್‌ಗೆ ನನ್ನಿಗಳು.

ಈ ಐದು ನಾಟಕಗಳನ್ನು ಮುದ್ರಿಸಲು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ವಸುಂಧರಾ ಭೂಪತಿ ಅವರ ಗುಣವನ್ನು ಗುರುತಿಸುವ ಪ್ರೀತಿ ಕಾಳಜಿಗಳೇ ಕಾರಣವೆಂದು ತಿಳಿದಿದ್ದೇನೆ. ಅವರಿಗೆ ಋಣಿ. ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀಮತಿ ಸೌಭಾಗ್ಯ ಅವರಿಗೆ ಕೃತಜ್ಞತೆಗಳು. ಚಂದವಾಗಿ ಮುದ್ರಣ ಮಾಡಿದ ಮೆ: ರಾಜಾ ಪ್ರಿಂಟರ್ಸ್ ಸಂಸ್ಥೆ ಅವರಿಗೆ ವಂದನೆಗಳು.

ಓದುತ್ತಿರುವ ನಿಮಗೆ ವಂದನೆಗಳು,

– ಡಾ. ಕೆ. ವೈ. ನಾರಾಯಣಸ್ವಾಮಿ

ಪರಿವಿಡಿ

ನಾಟಕ–೧

ಚಕ್ರರತ್ನ

ದೃಶ್ಯ – ೧

ಮುಗಿಯದ ಮುಗಿಲೇ
ಮುಗಿಯದ ದಾರಿಯೇ
ಎಂದೂ ತೆರೆಯದ ಬಾಗಿಲೇ
ಆಸೆಯ ಕೊನೆಯೇ ಮಧುರ ಕ್ಷಣವೇ
ಮಿಂಚುವ ಕಾಲದಿ ಮಿನುಗುವ ಹುಳುವೇ?
ನಡು ನೀರಲ್ಲಿ ಒಡೆದಿಹ ತೆಪ್ಪದ ತಳವೇ
ದಡಗಳಿಗಿಲ್ಲ ಇನಿತು ಕರುಣ
ಕಣ್ಣಿನ ಒಳಗೆ ಕನಸಿನ ಮರಣ
ಸಿಗುವುದೆ ಚಾಚಿದ ಕೈಯಿಗೆ ಹುಲ್ಲಿನ ಕಡ್ಡಿ ॥

[ಅದೊಂದು ಬೆಟ್ಟದ ತಪ್ಪಲು. ರಸ್ತೆಯ ಬದಿಯಲ್ಲಿ ಒಬ್ಬ ಚಮ್ಮಾರ ತನ್ನ ಚರ್ಮದ ದಟ್ಟಿಯ ಮೇಲೆ ತನ್ನ ಸೂಜಿ, ಹುಳಿ, ಬಾಚಿಯನ್ನು ಮಸೆಯುತ್ತಾ ಕುಳಿತಿದ್ದಾನೆ. ಆಗ ಸಂಜೆ ಅದೇ ದಾರಿಯಲ್ಲಿ ಐದು ಜನ ಬಸವಳಿದು ಬರುತ್ತಿದ್ದಾರೆ. ಅವರಲ್ಲಿ ಒಬ್ಬ ತುಂಬಾ ವಯಸ್ಸಾದಂತೆ ಕಾಣುತ್ತಿದ್ದಾನೆ. ಇತರ ನಾಲ್ವರು ಹದಿಹರೆಯದವರು. ದಿಕ್ಕು ತಪ್ಪಿದವರಂತೆ ಅವರ ಮುಖದ ಮೇಲೆ ಹತಾಶೆ ಒಡೆದು ಕಾಣುತ್ತಿದೆ.]

ಮುದುಕ : (ಕುಸಿದು) ನೀರು... ನನಗೆ ಪ್ರಾಣ ಹೋಗುವಷ್ಟು ಆಯಾಸವಾಗಿದೆ... ಗುಟುಕು ನೀರು

ಯುವಕ : (ನೀರಿನ ಚೀಲವನ್ನು ನೋಡುತ್ತಾ ಓಡುತ್ತಾನೆ) ಅಯ್ಯೋ ಇದು ಖಾಲಿಯಾಗಿದೆ ನಮ್ಮ ಹಣೆಯ ಬರಹದ ಹಾಗೆ.

ಯುವಕ : (ಚಮ್ಮಾರನನ್ನು ಉದ್ದೇಶಿಸಿ) ಅಪ್ಪ ನಿನ್ನನ್ನು ನೋಡಿದರೆ ದಯಾಳುವಿನಂತೆ ತೋರುತ್ತೀಯಾ ಒಂದು ಗುಟುಕು ನೀರು ಕೊಟ್ಟು ನಮ್ಮ ಗುರುಗಳ ಪ್ರಾಣ ಉಳಿಸು.

ಚಮ್ಮಾರ : ದಯಮಾಡಿ ಕ್ಷಮಿಸಿ. ನನ್ನಲ್ಲಿ ಕೂಡ ಕುಡಿಯುವ ನೀರು ಮುಗಿದು ಹೋಗಿದೆ.

ಮುದುಕ : ಅದೋ ಆ ಗಲ್ಲೆ ಬಾನಿಯಲ್ಲಿ ಕಾಣುತ್ತಿರುವಳು ತಾಯಿ ಗಂಗೆ. ಅದೇ ಒಂದು ಬೊಗಸೆ ಕೊಡಿ.

ಚಮ್ಮಾರ : ಅಯ್ಯೋ ಅದು ಚರ್ಮ ನೆನೆಹಾಕಿದ ನೀರು... ಆ ಮೈಲಿಗೆಯ ನೀರನ್ನು ಕುಡಿಯಲು ಕೊಟ್ಟು ನಾನು ಪಾಪಿಯಾಗಲಾರೆ.

ಮುದುಕ : ಮೈಲಿಗೆ ಮನುಷ್ಯರು ಮಾಡಿದ್ದು. ತೊಳೆಯಬೇಕಾದವಳು ಅವಳೇ ಅಲ್ವೆ?

ಯುವಕ : ಅಪ್ಪಾ ಚಮ್ಮಾರ ಗುಟುಕು ನೀರು ಕೊಟ್ಟು ನಮ್ಮ ಗುರುವಿನ ಪ್ರಾಣ ಉಳಿಸು, ಬೇಕಿದ್ದರೆ ಮಿಕ್ಕ ಆಯಸ್ಸನ್ನು ನಿನ್ನ ಋಣಕ್ಕೆ ಮೀಸಲಿಡುತ್ತೇನೆ.

ಚಮ್ಮಾರ : (ನೀರು ಮೊಗೆದು ಕೊಡುತ್ತಾನೆ. ಒಬ್ಬ ಯುವಕ ಆ ಮುದುಕನಿಗೆ ನೀರು ಕುಡಿಸುತ್ತಾನೆ. ನಾಲ್ಕು ಜನರು ಗಲ್ಲೆಬಾನಿಯ ಸುತ್ತುವರಿದು ನೀರು ಕುಡಿಯುತ್ತಾರೆ)

ಮುದುಕ : (ಉಸಿರೆಳೆದುಕೊಂಡು) ಅಪ್ಪ ಚಮ್ಮಾರ ನಿನ್ನಿಂದಾಗಿ ನನ್ನ ಪ್ರಾಣವೇನೋ ಉಳಿಯಿತು. ಆದರೆ ನನ್ನ ಪಾಲಿಗೆ ಕಾಲ ಇನ್ನು ಹೆಚ್ಚು ಉಳಿದಿಲ್ಲ ನೋಡು.

ಚಮ್ಮಾರ : ಸ್ವಾಮಿ ತಾವು ದೇಶ ಸಂಚಾರಿಗಳಂತೆ ಕಾಣುತ್ತೀರಿ... ಪಯಣದ ಬಳಲಿಕೆ ನಿಮ್ಮ ಮುಖಕಾಂತಿಯನ್ನ ಅಳಿಸಿದಂತೆ ಕಾಣುತ್ತಿದೆ. ತಾವು ಯಾರು? ಎಲ್ಲಿಂದ ಬರುತ್ತಿರುವಿರಿ? ಎಲ್ಲಿಗೆ ಹೊರಟಿರುವಿರಿ?

ಮುದುಕ : ನಾನೊಬ್ಬ ನತದೃಷ್ಟ .

ಯುವಕ : ಇವರು ಚಾವುಂಡರಾಯನ ಆಸ್ಥಾನ ಶಿಲ್ಪಿಗಳು.

ಯುವಕ : ಇವರು ಡಕಣಾಚಾರ್ಯರ ಶಿಷ್ಯರು.

ಯುವಕ : ಹೆಸರು ಅರಿಷ್ಟನೇಮಿ.

ಯುವಕ : ನಾವು ಅವರ ಶಿಷ್ಯರು.

ಚಮ್ಮಾರ : ಏನು ಅರಿಷ್ಟನೇಮಿಗಳೆ? ನನ್ನ ಕಣ್ಣು ಪುಣ್ಯ ಮಾಡಿದ್ದವು ಸ್ವಾಮಿ ತಮ್ಮಂತಹವರನ್ನು ಕಂಡು. ತಮ್ಮ ಕೈಯಗಳಲ್ಲಿ ಕಲ್ಲಿಗೆ ಜೀವ ಬರಿಸುವ ಪ್ರೀತಿ ಕೊಟ್ಟಿದ್ದಾನಂತೆ ದೇವರು.

ಅರಿಷ್ಟನೇಮಿ : ಅಪ್ಪಾ ನೀನಿತ್ತ ನೀರಿಂದ ಉಳಿದಕೊಂಡ ಪ್ರಾಣವಿದು. ಆದರೆ ಅಗೋ ಆ ಪಡುವಣದಲ್ಲಿ ಮುಳುಗುತ್ತಿರುವ ಸೂರ್ಯ ನನ್ನ ಭರವಸೆಯ ಸಾವಿನೊಂದಿಗೆ ಮುಳುಗುತ್ತಿದ್ದಾನೆ ಇನ್ನೆಂದಿಗೂ ಉದಯಿಸದಂತೆ.

ಚಮ್ಮಾರ : ಸ್ವಾಮಿ ಪಡುವಣದಲ್ಲಿ ಮಡುಗಟ್ಟುತ್ತಿರುವ ಕತ್ತಲನ್ನು ನೋಡಿ ನಿರಾಸೆಯ ಮಾತನಾಡುತ್ತಿರುವಿರಿ. ಇತ್ತ ಮೂಡಣದತ್ತ ನೋಡಿ ಚಂದ್ರ ಉದಯಿಸುವ ಬೆಳಂಬೆಳಕು ಭರವಸೆಯನ್ನು ಮೂಡಿಸುವಂತೆ ಬೆಳಕರಿಯುತ್ತಿದೆ.

ಅರಿಷ್ಟನೇಮಿ : ಎಷ್ಟು ದಿನ ಎಷ್ಟು ತಿಂಗಳು ಸರಿದ ಕಾಲದ ಪರಿವೇ ಇಲ್ಲದೆ ನೋಡಿದ ದಿಕ್ಕನ್ನೆಲ್ಲಾ ಮೂಡಣವೆಂದೇ ನಂಬಿದ್ದೆ. ಪ್ರತಿ ಮುಂಜಾನ ಹೊಸ ಬೆಳಕಿಗೆ ಕಾದಿದ್ದೆ. ಆದರೆ ಇಂದಿಗೆ ಸರಿಯಾಗಿ ಹನ್ನೆರಡು ವರ್ಷ ಮುಗಿಯಿತು. ಎಲ್ಲಾ ದಿಕ್ಕುಗಳನ್ನು ಶೋಧಿಸಿದ್ದಾಯಿತು. ಈಗ ಇನ್ನು ಉಳಿದಿರುವುದು ಪಡವಣ ಮಾತ್ರ ನನ್ನ ಕೊನೆಯ ಕ್ಷಣಗಳನ್ನು ಆ ಕಾಳ ಕತ್ತಲೆಯು ರಾಹುವಿನಂತೆ ನುಂಗುತ್ತಿದೆ.

ಯುವಕರು : ಗುರುಗಳೇ ನಮ್ಮನ್ನು ಕತ್ತಲಲ್ಲಿ ಕೈಬಿಡಬೇಡಿ.

ಚಮ್ಮಾರ : ಸ್ವಾಮಿ ನಾನೇನು ನಿಮಗೆ ತಿಳಿ ಹೇಳುವಷ್ಟು ಬುದ್ಧಿವಂತನಲ್ಲ... ಕಾಣಬೇಕೆಂಬ ಆಸೆ ಇಲ್ಲದೆ ಇರುವುದೇ ಕುರುಡು. ನೋಡುವ ಹಠ ಇದ್ದರೆ ಸಾಕು ಒಂದು ಮಿಣುಕು ಹುಳು ಕೂಡ ಸೂರ್ಯ ತೇಜದಂತೆ ಕಾಣಬಹುದು. ಕಾಣಬೇಕೆಂಬ ಆಸೆಯೇ ಇಲ್ಲದೆ ಇದ್ದಾಗ ಸೂರ್ಯಪ್ರಭೆಯೂ ಕೂಡ ಅಮಾಸೆಯ ಕತ್ತಲಂತೆ ಅನ್ನಿಸಬಹುದು..

ಅರಿಷ್ಟನೇಮಿ : ಕಣ್ಣಿನ ಹಂಬಲದಿಂದಲೇ ವಸ್ತು ಕಾಣಬೇಕು ಪರಂತು ಬೆಳಕಿನ ಹಂಗಿನಿಂದಲ್ಲ...

ಯುವಕ : ಇಂದಿಗೆ ಸರಿಯಾಗಿ ಹನ್ನೆರಡು ವರ್ಷದ ಹಿಂದೆ ನಮ್ಮ ಶಿಲ್ಪಶಾಲೆಯ ಪಕ್ಕದ ರಸ್ತೆಯಲ್ಲಿ ರಾಜನ ಸವಾರಿ ಬಂದಿತ್ತು. (ತೆರೆಯ ಹಿಂದೆ ಸೈನ್ಯ ಚಲಿಸುವುದು ವಿಜಯಘೋಷಗಳು ಸರಿದು ಹೋಗುತ್ತವೆ)

ಯುವಕ : ನಾಡಪ್ರಭು ಚಾವುಂಡರಾಯನು, ನೆರೆ ರಾಜರನ್ನು ಯುದ್ಧದಲ್ಲಿ ಸೋಲಿಸಿ ಅರಮನೆಗೆ ವಿಜಯಯಾತ್ರೆಯಲ್ಲಿ ಹಿಂತಿರುಗುತ್ತಿದ್ದಾಗ ಆಗ.

ಚಮ್ಮಾರ : ಆಗ ಏನಾಯಿತು?

ಯುವಕ : ನಮ್ಮ ಗುರುಗಳು ಆಗ ಜಿನಮೂರ್ತಿಯೊಂದನ್ನು ಕೆತ್ತುವುದರಲ್ಲಿ ತಲ್ಲೀನರಾಗಿದ್ದರು. ಅವರು ಮೂರ್ತಿಯನ್ನು ಕಡಿದಾಗ ಸಿಡಿದ ಕಲ್ಲಿನ ಚೂರೊಂದು ನೇರ ಬಡಿದಿದ್ದು ಚಾವುಂಡರಾಯರ ಹಣೆಗೆ... ಬಳಬಳನೆ ರಕ್ತ.

ಯುವಕ : ಜನ ದಿಗ್ಭ್ರಮೆಗೊಂಡರು. ಸೈನ್ಯ ಕೋಪಗೊಂಡಿತು. ಸಾಯುವಷ್ಟು ಭಯ ಆಗಿತ್ತು ನನಗೆ.

ಯುವಕ : ನೋಡ ನೋಡುತ್ತಿರುವಂತೆ ಕತ್ತಿಯನ್ನು ಹಿಡಿದು ಶಿಲ್ಪಶಾಲೆಯ ಒಳ ನುಗ್ಗಿದ ಚಾವುಂಡರಾಯನ ಕಣ್ಣಿಗೆ ಬಿದ್ದದ್ದು ಜಿನಮೂರ್ತಿಯನ್ನು ಬಿಡಿಸುವುದರಲ್ಲಿ ತಲ್ಲೀನರಾದ ಗುರುಗಳು...

ಯುವಕ : ಕೆತ್ತುತ್ತಿದ್ದ ಶಿಲ್ಪವನ್ನು ನೋಡ ನೋಡುತ್ತಿದ್ದಂತೆ ಮಹಾರಾಜರು ಮಂತ್ರ ಮುಗ್ಧರಾದರು. ಹತ್ತಿರ ಸರಿದಂತೆ ತಾವೇ ಶಿಲೆಯಾದರು.

ಚಾವುಂಡರಾಯ : (ಒಬ್ಬ ಯುವಕ ಚಾವುಂಡರಾಯನಾಗಿ ಬದಲಾಗುತ್ತಾನೆ) ಹೌದು ಆ ಗಳಿಗೆ ನನಗೆ ಏನಾಯ್ತು? ಯುದ್ಧ ಗೆದ್ದ ಅಹಂನಿಂದ ಬೀಗುತ್ತಿದ್ದ ನಾನು ಕಲ್ಲೇಟನಿಂದ ಕೋಪಗೊಂಡಿದ್ದೆ. ಆ ತಪ್ಪನ್ನು ಮಾಡಿದ ವ್ಯಕ್ತಿಯನ್ನು ಕೊಂದುಬಿಡಬೇಕು ಎನ್ನುವಷ್ಟು ಸಿಟ್ಟು ಬಂದಿತ್ತು. ಶಿಲ್ಪಶಾಲೆಯ ಒಳಗೆ ಧಾವಿಸ ಬಂದ ನನಗೆ ಜಿನಮೂರ್ತಿಯ ಮುಖ ಕಣ್ಣಿಗೆ ಬಿತ್ತು. ನನ್ನ ನೋಡಿ ನಕ್ಕಂತೆ ಭಾಸವಾಯಿತು. ಆ ಶಾಂತ ಮೂರ್ತಿಯ ಮುಖದಲ್ಲಿ ಜೀವತಳೆಯುತ್ತಿದ್ದ ನಿರುಮ್ಮಳ ಭಾವ ನನ್ನನ್ನು ಕರಗಿಸುತ್ತಾ ಹೋಯಿತು. ಆ ಶಿಲ್ಪಿ ಕಲ್ಲನ್ನು ಕಡೆಯುತ್ತಿದ್ದನೋ ಕಲ್ಲಿನಂತಹ ನನ್ನನ್ನು ಕಡೆಯುತ್ತಿದ್ದೊನೋ ನಾನು ತನ್ಮಯವಾಗಿ ಹೋದೆ. ಶಿಲ್ಪ ಮೂಡಿದಂತೆ ನನ್ನ ರಾಗದ್ವೇಷಗಳು ಕರಗಿದಂತೆ... ನಾನು ದಿಗ್ವಿಜಯದ ದುಂದುಭಿಗಳು ಆರ್ತನಾದದಂತೆ... ಚಿಮುಕಿಸುವ ಪನ್ನೀರು ಹಸಿ ನೆತ್ತರಿನಂತೆ ಅರಮನೆಯೇ ಸ್ಮಶಾಣದಂತೆ ನಾನು ತತ್ತರಿಸಿ ಹೋದೆ.

ಯುವಕ : ಪ್ರಭು ಈ ಆಕಸ್ಮಿಕಕ್ಕೆ ಕ್ಷಮೆ ಕೋರುತ್ತೇವೆ. ದಯಮಾಡಿ ಒಂದು ಕ್ಷಣ ಕುಳಿತುಕೊಳ್ಳಿ ಗುರುಗಳನ್ನು ಎಬ್ಬಿಸುತ್ತೇವೆ.

ಚಾವುಂಡರಾಯ : ಬೇಡ... ಬೇಡ. ಅವರ ಧ್ಯಾನಕ್ಕೆ ಭಂಗ ಬೇಡ. ಕಲ್ಲಿಗೆ ಜೀವ ಬರುವ ಈ ಪವಾಡವನ್ನು ನಾನು ಕಣ್ತುಂಬಿಕೊಳ್ಳುತ್ತೇನೆ. ನಾನು ಪಾಪಿ. ಯಾರಲ್ಲಿ ಈ ಕೂಡಲೆ ಈ ವಿಜಯ ಯಾತ್ರೆ

ಯನ್ನು ವಿಸರ್ಜಿಸಿದ್ದೇನೆ... ತಾವು ಎಲ್ಲರೂ ತಮ್ಮ ತಮ್ಮ ಕಾರ್ಯಗಳಿಗೆ ತೆರಳಿ... ನನ್ನನ್ನು ಒಂಟಿಯಾಗಿ ಬಿಡಿ ಹೂಂ ಹೊರಡಿ.

ಯುವಕ : ಅಪ್ಪಣೆ ಪ್ರಭು

ಯುವಕ : ಕಾಲ ಸ್ಥಬ್ಧವಾದಂತೆ ಗುರುಗಳು ಕೆತ್ತನೆಯಲ್ಲಿ ತಲ್ಲೀನರಾಗಿದ್ದರು...

ಚಾವುಂಡರಾಯ : ನಾನು ಆ ಶಿಲ್ಪದಲ್ಲಿ ತಲ್ಲೀನನಾಗಿದ್ದೆ. ಕೆತ್ತನೆಯಲ್ಲಿ ಒಂದೊಂದೆ ರೂಹು ರೂಪಗೊಂಡಂತೆ ನಾನು ಕೂಡ ನನ್ನ ಅಹಂಕಾರಗಳಿಂದ ಒಂದೊಂದೇ ಬಿಡುಗಡೆಯಾಗುತ್ತಿದ್ದೆ. ಜಿನ ಜೀವ ಪಡೆದ ಆ ಗಳಿಗೆ ನನ್ನ ಸಂತೋಷ ಕಣ್ಣೀರಾಗಿ ಚಿಮ್ಮಿತ್ತು. ಒಂದು ಸಣ್ಣ ಮೂರ್ತಿಯನ್ನು ಒಂದು ಗಳಿಗೆ ದಿಟ್ಟಿಸಿದ ಅದೃಷ್ಟದಿಂದ ನಾನು ಹಿಂಸೆಯನ್ನು ಗೆದ್ದಿದ್ದೆ... ಆ ಗಳಿಗೆಯೇ ನಿರ್ಧರಿಸಿದೆ. ಬಾನೆತ್ತರದ ದೊಡ್ಡ ಗೊಮ್ಮಟನನ್ನು ಈ ಶಿಲ್ಪಿಯಿಂದಲೇ ಕೆತ್ತಿಸಿ ಎತ್ತರ ಬೆಟ್ಟದ ಮೇಲೆ ನಿಲ್ಲಸಬೇಕೆಂದು, ಅದನ್ನು ಕಂಡ ಲೋಕಕ್ಕೆ ಹಿಂಸೆಯನ್ನು ಮೀರುವ ಶಕ್ತಿ ಬರಬೇಕೆಂದು ಕನಸು ಕಂಡೆ.

ಯುವಕ : ಎಷ್ಟೋ ಹೊತ್ತಿನ ನಂತರ ಗುರುಗಳು ಕಣ್ತೆರೆದರು. ಪಾದ ತಲದಲ್ಲಿ ಕುಳಿರುವ ಪ್ರಭುವನ್ನು ಕಂಡು...

ಅರಿಷ್ಟನೇಮಿ : (ಬೆಚ್ಚಿ) ಪ್ರಭು ತಾವು ಇಂಥ ಅಪಚಾರವನ್ನು ಮಾಡಬಹುದೇ? ನಾನು ನಿಮ್ಮ ಜೋಳವಾಳದ ಶಿಲ್ಪಿ... ನನ್ನಿಂದ ಅಪರಾಧ ವಾಗಿದ್ದರೆ ಕ್ಷಮಿಸಿ...

ಚಾವುಂಡರಾಯ : ಕ್ಷಮಿಸಬೇಕಾದವರು ನೀವು. ಕ್ಷಮೆ ಬೇಕಿರುವುದು ನನಗೆ. ಈಗ ನಾನು ಬೇಡುವವನು? ಇಲ್ಲವೆನ್ನ ಬೇಡಿ.

ಅರಿಷ್ಟನೇಮಿ : ನಿಮ್ಮ ಅನ್ನದ ಋಣ ಈ ಪ್ರಾಣ, ಹೇಳಿ ಪ್ರಭು ನನ್ನಿಂದೇನಾಗ ಬೇಕು?

ಚಾವುಂಡರಾಯ : (ಕೈಗೆ ತೊಡಿಸುತ್ತಾ) ಇದು ಚಿನ್ನದ ಕಡುಗವಲ್ಲ. ನನ್ನ ಬಿನ್ನಹ. ನನ್ನ ರಾಜ್ಯದ ಬೊಕ್ಕಸವೆಲ್ಲಾ ಬರಿದಾದರೂ ಚಿಂತೆ ಇಲ್ಲ. ನೀವು ಕೆತ್ತಿರುವ ಈ ಜಿನಮೂರ್ತಿಯನ್ನು ಈ ಪ್ರಪಂಚಕ್ಕೆ ಕಾಣುವಷ್ಟು, ಈವರೆಗೂ ಯಾರು ಕೆತ್ತಿರದಷ್ಟು ದೊಡ್ಡ ಮೂರ್ತಿಯನ್ನು ನೀವು ಕತ್ತಿ ನಿಲ್ಲಿಸಬೇಕು. ಇದಕ್ಕಾಗಿ ನನ್ನ

ರಾಜ್ಯ ಕೋಶ ಭಂಡಾರ ಎಲ್ಲವು ಮುಡಿಪು. ಜೀವ ಸಂಕಟವನ್ನು ನಿವಾರಿಸುವ ಗೊಮ್ಮಟ ಮೂರ್ತಿಯನ್ನು ಲೋಕ ಕಾಣುವಂತಾಗಬೇಕು.

ಅರಿಷ್ಟನೇಮಿ : ರಾಜನ ಕಣ್ಣಲ್ಲಿ ಕಾಣುತ್ತಿದ್ದ ಆ ನಿರ್ಮಲ ಅಪೇಕ್ಷೆಯನ್ನು ತಿರಸ್ಕರಿಸುವುದು ನನಗೆ ಸಾಧ್ಯವಿತ್ತೆ? ಮನುಕುಲದ ಗುರುವಿನ ಬೃಹತ್ ಶಿಲ್ಪವನ್ನು ಕಡೆಯವುದು ನನ್ನ ಅದೃಷ್ಟವೇ ಸರಿ. ಆದರೆ ಅಂತಹ ಶಿಲ್ಪವನ್ನು ಧರಿಸುವ ತಾಳಿಕೆಯ ಏಕಶಿಲೆ ಬೇಕು?

ಚಾವುಂಡರಾಯ : ಆ ಜಿನಮೂರ್ತಿಯನ್ನು ರಕ್ತಮಾಂಸಗಳಿಂದ ಹುಟ್ಟಿಸಿದ ಈ ಭೂಮಿಯೇ ಅವನ ಶಿಲ್ಪಕ್ಕೂ ಕಲ್ಲನ್ನು ಹುಟ್ಟಿಸಿಯೇ ಇರುತ್ತದೆ. ನೀವು ಅದನ್ನು ಹುಡುಕಬೇಕು.

ಅರಿಷ್ಟನೇಮಿ : ಆಗಲಿ ಪ್ರಭು ಇದು ದೈವದ ಇಚ್ಚೆ. ಆಗಿದ್ದರೆ ನನ್ನ ಪ್ರಾಣವನ್ನೇ ಪಣವಿಡುತ್ತೇನೆ. ಹನ್ನೆರಡು ವರ್ಷಗಳಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸುತ್ತೇನೆ.

ಚಾವುಂಡರಾಯ : ನನ್ನ ಆಸೆ ನಿಮ್ಮ ಪ್ರಾಣಕ್ಕೆ ಕಾವಲಾಗಿರಲಿ. ಹನ್ನೆರಡು ವರ್ಷದ ಕೊನೆಯ ದಿನಕ್ಕೆ ಕಾಯುತ್ತೇನೆ. ನಿಮ್ಮಿಂದ ಗೊಮ್ಮಟನ ಸುದ್ಧಿ ಬರದಿದ್ದೊಡೆ ಅಂದೇ ನಾನು ಪ್ರಾಣ ತೊರೆಯುತ್ತೇನೆ. ಇದು ಜಿನನ ಮೇಲಾಣೆ.

ಯುವಕ : ಆತ ರಾಜನಾಗಿ ಒಳ ಬಂದಿದ್ದ ಆದರೆ ಕೇವಲಿಯಂತೆ ಹೊರ ನಡೆದಿದ್ದ...

ಯುವಕ : ಅಂದೇ ನಮ್ಮ ಪ್ರಯಾಣ ಆರಂಭಗೊಂಡಿತು.

ಅರಿಷ್ಟನೇಮಿ : ನೋಡಿ ನಾನು ಗುರಿ ಇರದ ದಾರಿಯಲ್ಲಿ ನಡೆಯ ಹೊರಟ್ಟಿದ್ದೇನೆ. ನೀವು ಇನ್ನು ಚಿಕ್ಕವರು ನಿಮ್ಮ ನಿಮ್ಮ ಕನಸುಗಳ ದಾರಿಯಲ್ಲಿ ನಡೆಯಿರಿ. ನಿಮಗೆ ಒಳಿತಾಗಲಿ.

ಯುವಕ : ನಿಮ್ಮ ಗುರಿಯೇ ನಮ್ಮ ದಾರಿ ನಾವು ನಿಮ್ಮ ನೆರಳು.

ಅರಿಷ್ಟನೇಮಿ : ಒಂದು ಶರತ್ತು, ಹನ್ನೆರಡು ವರ್ಷದ ಒಳಗೆ ನಾನು ಈ ಕೆಲಸವನ್ನು ಪೂರ್ಣಗೊಳಿಸದೇ ಹೋದರೆ ?

ಯುವಕ : ಚಾವುಂಡರಾಯ ಆತ್ಮಾಹುತಿ ಮಾಡಿಕೊಳ್ಳುತ್ತಾನೆ.

ಅರಿಷ್ಟನೇಮಿ : ಅದಕ್ಕೆ ಮುನ್ನ ನೀವು ಅಂತಹ ಶಿಲ್ಪವನ್ನು ಕಡೆಯದ ನನ್ನ ಕೈಗಳನ್ನು ಕತ್ತರಿಸಬೇಕು. ಅಂತಹ ವೈರಾಗ್ಯ ಮೂರ್ತಿಯನ್ನು ನೋಡದ ನನ್ನ ಕಣ್ಣುಗಳನ್ನು ಕೀಳಬೇಕು. ಕೊಟ್ಟ ಮಾತನ್ನು ಉಳಿಸಿಕೊಳ್ಳದ ನನ್ನ ನಾಲಿಗೆಯನ್ನು ಕಡಿಯಬೇಕು. ಈ ಶರತ್ತಿಗೆ ಒಪ್ಪುವವರು ನನ್ನೊಂದಿಗೆ ಬರಬಹುದು.

ಯುವಕ : ನಾವು ಪಾಪಿಗಳು ಅಲ್ಲಿದ್ದ ನಮ್ಮ ಗೆಳೆಯರು ಈ ಶರತ್ತಿಗೆ ಹೆದರಿ ಹಿಂದೆ ಸರಿದರು... ಆದರೆ ನಾವು ಅಂತಹ ದಿನ ಬರಲಾರದು ಎಂಬ ಹುಂಬ ನಂಬಿಕೆಯಲ್ಲಿ ಗುರುವನ್ನು ಹಿಂಬಾಲಿಸಿದೆವು.

ಯುವಕ : ಅಂದಿನಿಂದ ನಾವು ಸುತ್ತದ ಪ್ರಾಂತವಿಲ್ಲ. ಅಲೆಯದ ಕಾಡು ಮೇಡುಗಳಿಲ್ಲ.

ಯುವಕ : ಒಂದಲ್ಲ ಎರಡಲ್ಲ ಹನ್ನೆರಡು ವರ್ಷಗಳು ಸರಿದೇ ಹೋದವು. ಇಂದು ಸರಿ ರಾತ್ರಿಗೆ ನಮಗೆ ನೀಡಿದ್ದ ಗಡುವು ಮುಗಿಯಿತು.

ಚಮ್ಮಾರ : ಅಂದರೆ ಇಂದು ನೀವು ನಿಮ್ಮ ಗುರುವನ್ನು ಕೊಲ್ಲುತ್ತೀರೇನು?

ಅರಿಷ್ಟನೇಮಿ : ಅಪ್ಪ ಚಮ್ಮಾರ ನೀರಿತ್ತು ಪ್ರಾಣ ಉಳಿಸಿದ ಕಾರಣ ಈ ಜೀವಕ್ಕೆ ನೀನೆ ಒಡೆಯ... ನನ್ನ ಶಿಷ್ಯರಿಗೆ ಈ ಕಾರ್ಯದಲ್ಲಿ ಸಹಾಯ ಮಾಡು.

ಯುವಕ : ಈ ಬೆಟ್ಟವಾದರೂ ಈ ಕಟ್ಟ ಕಡೇ ಗಳಿಗೆಯಲ್ಲಿ ಒಂದು ಹೆಬ್ಬಂಡೆಯನ್ನ ಕರುಣಿಸಬಾರದಾ...?

ಚಮ್ಮಾರ : ಅಹಂ ಅಷ್ಟೇ ಕುರುಡಲ್ಲ ಅಪಮಾನದ ಕಲ್ಪನೆಯೂ ಕುರುಡೇ.

ಯುವಕ : ಏನು ಹೇಳುತ್ತಿರುವುದು ನೀನು?

ಚಮ್ಮಾರ : ನಿಮ್ಮ ಒಂದು ಕಣ್ಣು ಗೆಲುಪಸಿಂದ ಸಿಗುವ ಮೆಚ್ಚುಗೆಯಲ್ಲಿ ಮುಚ್ಚಿಹೋಗಿದೆ. ಇನ್ನೊಂದು ಕಣ್ಣು ಸೋಲಿನ ಭಯದಲ್ಲಿ ಬಂಧಿಯಾಗಿದೆ. ಆದ ಕಾರಣ ನಿಮ್ಮ ಕಣ್ಣಿಗೆ ಯಾವ ಬಂಡೆಗಳೂ ಕಾಣಲಿಲ್ಲ.

ಅರಿಷ್ಟನೇಮಿ : ಅಯ್ಯೋ ದುರ್ವಿಧಿಯೇ ನಾನು ಎಂಥ ಮಾಯೆಯಲ್ಲಿ ಬಂಧಿಯಾಗಿದ್ದೆ.

ಚಮ್ಮಾರ : ನಿಮ್ಮ ಪ್ರಯಾಣದ ಕೊನೆಯ ಕ್ಷಣದಲ್ಲಿ ಆ ಬಂಡೆಯನ್ನು ಕಾಣುವ ಯೋಗವಿರಬಹುದು. ನೀವು ಅದನ್ನು ಹುಡುಕುವಂತೆ ಅದೂ ಕೂಡ ನಿಮಗೆ ಕಾಯುತ್ತಾ ಇರಬಹುದು ಅಲ್ವೆ?

ಯುವಕ : ಅಪ್ಪ ನೀರಿತ್ತವನು ನೀನು. ಈಗ ನಮ್ಮನ್ನು ಗುರು ಹತ್ಯೆಯ ದೋಷದಿಂದಲೂ ಪಾರು ಮಾಡುತ್ತಿರುವಿ. ನೀನೇಕೆ ನಮ್ಮೊಂದಿಗೆ ಬರಬಾರದು.

ಚಮ್ಮಾರ : ದಯಮಾಡಿ ಕ್ಷಮಿಸಿ ಸ್ವಾಮಿ ನನ್ನ ಕಾಯಕವಿನ್ನು ಮುಗಿದಿಲ್ಲ.

ಅರಿಷ್ಠನೇಮಿ : ನಿಮ್ಮ ಉಪಕಾರದ ಸ್ಮರಣೆಯೇ ನಮ್ಮ ಉಸಿರಾಗಿರಲಿ. ಅಂದ ಹಾಗೆ ಇಲ್ಲಿ ಯಾರಿಗಾದರೂ ಕಾಯುತ್ತಾ ಇರುವೆ ಏನು?

ಚಮ್ಮಾರ : ಸ್ವಾಮಿ. ನಾನೊಬ್ಬ ಚಮ್ಮಾರ ಹಗಲು ಚಪ್ಪಲಿ ಹೊಲಿಯುತ್ತೇನೆ. ರಾತ್ರಿ ಯುದ್ಧಗಳಿಂದ ಮರಳುವ ಯೋಧರು ಇಲ್ಲಿ ಬರುತ್ತಾರೆ. ಅವರ ಗಾಯಗಳನ್ನು ಹೊಲಿಯುತ್ತೇನೆ.

ಅರಿಷ್ಠನೇಮಿ : ಒಬ್ಬೊಬ್ಬರು ಒಂದೊಂದು ದಿಕ್ಕಿನಿಂದ ಈ ಬೆಟ್ಟವನ್ನು ಶೋಧಿಸಿ. ಈ ಪ್ರಯಾಣ ಮೊದಲನೆಯದೂ ಆಗಬಹುದು ಇಲ್ಲಾ ಕೊನೆಯದು ಆಗಬಹುದು. ನಡು ನೀರಲ್ಲಿ ಒಡೆದಿಹ ತೆಪ್ಪದ ತಳವೆ ದಡಗಳಿಗಿಲ್ಲ ಇನಿತು ಕರುಣ. ಕಾಡುವ ಕನಸೇ ಕಣ್ಣಿಗೆ ಅಡ್ಡಿ ಸಿಗುವುದೇ ಚಾಚಿದ ಕೈಯಿಗೆ ಹುಲ್ಲಿನ ಕಡ್ಡಿ.

●

ದೃಶ್ಯ – ೨

[ಚಂದ್ರನನ್ನು ದಿಟ್ಟಿಸುತ್ತಾ ನಿಂತಿರುವ ಗುರು ಅರಿಷ್ಟನೇಮಿಯನ್ನು ಉದ್ದೇಶಿಸಿ]

ಯುವಕ 1 : ಗುರುಗಳೇ ಏನನ್ನು ದಿಟ್ಟಿಸುತ್ತಿರುವಿರಿ?

ಅರಿಷ್ಟನೇಮಿ : ಕಟ್ಟ ಕಡೆಯ ಆಸೆ ಈ ಬೆಟ್ಟ ತುದಿಯಲ್ಲಿ ನಿಂತಿದ್ದೇನೆ. ನಮ್ಮ ಗುರಿಗಳು ನಮ್ಮ ಕಣ್ಣ ರೆಪ್ಪೆಯ ಆಚೆಗೆ ಇದ್ದರು ಸಾಕು ಅವು ಎಷ್ಟೋ ಯೋಜನಗಳಷ್ಟು ದೂರವಿರುವಂತೆ ನಮಗೆ ಭಾಸವಾಗುತ್ತವೆ.

ಯುವಕ 2 : ಗುರುಗಳೆ ನನ್ನ ಪ್ರಯತ್ನವು ನಿಷ್ಪಲವಾಯಿತು.

ಯುವಕ 3 : ನಾನೇನೋ ಒಂದು ಬೃಹತ್ ಬಂಡೆಯನ್ನ ಕಂಡೆ. ಅದರೆ ಅದು ಸಿಡಿಲಿನಿಂದ ಮಧ್ಯದಲ್ಲಿ ಸೀಳುಬಿಟ್ಟಿದೆ.

ಅರಿಷ್ಟನೇಮಿ : ಅಲ್ಲಿ ಬೆಳಗುತ್ತಿರುವ ಚಂದ್ರನ ಸುತ್ತ ಕೆಂಪು ಗೆರೆಯೊಂದು ನಿಧಾನ ಹಾವಂತೆ ಚಲಿಸುತ್ತಿದೆ ಕಾಣುತ್ತಿದೆಯೇನು?

ಯುವಕ : ದಕ್ಷಿಣ ಭಾಗದಲ್ಲಿ ಯಾವ ಬಂಡೆಯೂ ಕಾಣಲಿಲ್ಲ ಗುರುಗಳೇ? ನಾನು ದೌರ್ಭಾಗ್ಯಶಾಲಿ.

ಯುವಕ : ಪೂರ್ವದಲ್ಲಿ ಬೃಹತ್ ಬಂಡೆಯೊಂದು ತಂಡು ತುಂಡಾಗಿ ಕತ್ತರಿಸಿ ಬಿದ್ದಿದೆ ಗುರುಗಳೇ.

ಅರಿಷ್ಟನೇಮಿ : ನಮ್ಮ ಆಸೆಗಳು ತುಂಡುತುಂಡಾಗಿ ಕತ್ತರಿಸಿ ಹೋಗಿವೆ. ನೀವು ಮಾಡಬೇಕಾದ ಕರ್ತವ್ಯಕ್ಕೆ ಸಲಕರಣೆಗಳನ್ನು ಸಿದ್ಧಮಾಡಿಕೊಳ್ಳಿ. (ಧ್ವನಿ ಕೇಳಿಬರುತ್ತದೆ) ಗುರುಗಳೇ ಆ ಪಶ್ಚಿಮದ ಭಾಗದಲ್ಲಿ ಒಂದು ಏಕ ಶಿಲೆಯನ್ನು ಕಂಡೆ. ಇತ್ತ ಬನ್ನಿ.

ಅರಿಷ್ಟನೇಮಿ : ಇದು ನನ್ನ ಭ್ರಮೆಯೆ ಇರಬೇಕು... ನೀವು ಕೇಳಿಸಿಕೊಂಡಿರೇನು?

ಯುವಕರು : (ಒಟ್ಟಾಗಿ) ಹೌದು ಅದು ನಿಜವಾಗಿರಲಿ ಅಂತ ನಾವು ಪ್ರಾರ್ಥಿಸುತ್ತೇವೆ.

ಯುವಕ : (ಏದುಸಿರು ಬಿಡುತ್ತಾ) ಗುರುಗಳೇ ಕಂಡೆ ಬನ್ನಿ ಬೇಗ ಬನ್ನಿ ಆಕಾಶವೇ ತುಂಡಾಗಿ ನೆಲದ ಮೇಲೆ ಒರಗಿದಂತೆ ಇದೆ.

ಯುವಕ : ಅದೇ ನಾವು ಹುಡುಕುತ್ತಿರುವ ಬಂಡೆ ಅಂತ ನಿನಗೆ ಹೇಗೆ ಗೊತ್ತಾಯಿತು?

ಯುವಕ : ಆ ಬಂಡೆಯನ್ನು ನೋಡುತ್ತಾ ಹೋದಂತೆ ಅದು ಬಂಡೆಯಲ್ಲ ಯಾರೋ ಸಂತ ನಿರುಮ್ಮಳ ಗಾಢ ನಿದ್ರೆಯಲ್ಲಿ ಮಲಗಿರುವಂತೆ ಅನ್ನಿಸಿತು.

ಅರಿಷ್ಟನೇಮಿ : ಇದು ಪವಾಡ ಇಂದು ನಮ್ಮ ಪಾಲಿಗೆ ಪಶ್ಚಿಮದಲ್ಲಿ ಸೂರ್ಯೋದಯ ನಡೆಯಿರಿ. ಇನ್ನು ಕಾಲ ವ್ಯರ್ಥ ಮಾಡುವುದು ಬೇಡ.

ಪಶ್ಚಿಮ ಕಡಲಿನ ಮಡಿಲಲ್ಲಿ
ಅರುಣೋದಯವನು ಕಂಡೆ
ದೇವ ಶಿಲ್ಪಿಯೇ ಮಯನಿಲ್ಲಿ
ಮಾಡಿರುವಂತಿದೆ ಈ ಬಂಡೆ॥

ಅರಿಷ್ಟನೇಮಿ : ಲೋಕ ಶಾಂತಿಯೇ ಮುಗ್ಧವಾಗಿ ಇಲ್ಲಿ ಮಲಗಿದ್ದರಿಂದಲೇ ನಾವು ಶಾಂತಿ ಇರದೇ ಇಷ್ಟು ದಿನ ಅಶಾಂತರಾಗಿದ್ದೆವು. ನನ್ನ ಕಣ್ಣು ಧನ್ಯವಾಯಿತು.

ಯುವಕ : ಚಾವುಂಡರಾಯನ ಪ್ರಾಣ ಉಳಿಯಿತು.

ಯುವಕ : ಗುರು ಹತ್ಯೆಯಿಂದ ನಾವು ಪಾರಾದೆವು.

ಅರಿಷ್ಟನೇಮಿ : ಈ ಶುಭ ಮೂಹೂರ್ತದಲ್ಲಿ ಕೆಲಸ ಆರಂಭಿಸಿ ದೊರೆಗೆ ಸುದ್ದಿ ಕಳಿಸುವ... ತನ್ನಿ ಸುತ್ತಿಗೆ ಉಳಿಯನ್ನ... (ಶಿಷ್ಯರು ತಂದು ಕೊಡುತ್ತಾರೆ)

ಚಿಮ್ಮಿತು ರಕ್ತ ಕಾರಂಜಿಯವೋಲ್
ಕಪ್ಪು ಬಂಡೆಯ ಮೈಯಿಂದ
ಏನಚ್ಚರಿಯೋ ಏನಿದು ಮಾಯೇ?
ನುಗ್ಗಿ ಬರುವಂಥ ನೆತ್ತರ ಹೊಳೆ
ಬಾನಂಚೆಲ್ಲಾ ಕೆಂಬಾರವೇ ಕಳೆ
ಕೆಂಪೋ ಕೆಂಪೋ

ಅರಿಷ್ಟನೇಮಿ : ಅಯ್ಯೋ ಇದೇನು ವಿಪರೀತ... ಹುಳಿತಾಗಿದ ಕೂಡಲೆ ಶಿಲೆಯಿಂದ ಕಾರಂಜಿಯ ಹಾಗೆ ರಕ್ತ ಚಿಮ್ಮುತ್ತಿದೆ.

ಯುವಕರು : ಕಲ್ಲಿನಿಂದ ರಕ್ತ ಚಿಮ್ಮುವುದೇ?

ಯುವಕರು : ಇಂತಹ ಘಟನೆ ಪವಾಡವಾಗಿಯೂ ನಾವು ಕೇಳಿಲ್ಲ.

ಯುವಕರು : ನಮ್ಮ ಕಷ್ಟಗಳ ದಾರಿ ಕೊನೆಯಾದಂತಿಲ್ಲ.

ಯುವಕ : ನಾನು ಕಡು ಪಾಪಿಯೇ ಇರಬೇಕು. ಇಲ್ಲದೆ ಹೋದರೆ ರಕ್ತ ಬಂಡೆಯು ನನ್ನ ಕಣ್ಣಿಗೆ ಹೇಗೆ ಬೀಳಬೇಕು?

ಅರಿಷ್ಟನೇಮಿ : ಹತಾಶರಾಗಬೇಡಿ. ಇದಕ್ಕೆ ಪರಿಹಾರ ಗಾಯಗಳನ್ನು ಹೊಲಿಯುವ ಚಮ್ಮಾರನ ಬಳಿ ಇರಬೇಕು ನಡೆಯಿರಿ ಆತನನ್ನು ಕೇಳುವ... (ಹೊರಡುತ್ತಾರೆ)

ಯುವಕ : ಗುರುಗಳೇ ಅಲ್ಲಿ ನೋಡಿ ಹುಡುಕು ಬಳ್ಳಿ ಕಾಲಿಗೆ ತೊಡರಿದಂತೆ.

ಯುವಕ : ಬೆಟ್ಟ ದಾರಿಯಲ್ಲಿ ಚಲಿಸುತ್ತಿರುವುದು.

ಯುವಕ : ಅರೆ ಆತ ಚಮ್ಮಾರನಲ್ಲವೆ? ಗಲ್ಲೆಬಾನಿಯನೊತ್ತು ಎತ್ತ ಹೋಗುತ್ತಿದ್ದಾನೆ?

ಯುವಕ : ಅಯ್ಯ ಚಮ್ಮಾರ ನಿಲ್ಲು (ಕೂಗು ಬೆಟ್ಟದಲ್ಲಿ ಪ್ರತಿಧ್ವನಿಸುವುದು) ಗುರುಗಳು ನಿನ್ನಲ್ಲಿ ಕೇಳಲ್ಲಿಕ್ಕುಂಟು ನಿಲ್ಲು.

ಅರಿಷ್ಟನೇಮಿ : ನಿಮ್ಮ ಮಾತು ಆತನ ಕಿವಿ ಮುಟ್ಟಿದಂತಿಲ್ಲ. ಓಡಿ ಹೋಗಿ ನಿಲ್ಲಿಸಿ ಆತನನ್ನು. ನಾನು ನಿಮ್ಮ ಹಿಂದೆ ಬರುತ್ತೇನೆ.

ಯುವಕ : ಗುರುಗಳೇ ಆತ ಗವಿಯನ್ನು ಪ್ರವೇಶಿಸಿದ. ಆತನಿಗೆ ನಮ್ಮ ಗುರುತು ಮರೆತು ಹೋದಂತಿದೆ.

ಯುವಕ : ನಮ್ಮ ಮಾತು ಆತನಿಗೆ ಕೇಳಿಸಲೇ ಇಲ್ಲ.

ಯುವಕ : ಏನೋ ಅವಸರದ ಕಾರ್ಯಕ್ಕೆ ಹೊರಟಿರುವವನಂತೆ ಇದೋ ಗವಿಯೊಳಗೆ ಹೊರಟು ಹೋದ.

ಯುವಕ : ನಾನು ಸ್ವಲ್ಪ ದೂರ ಹೋಗಿ ನೋಡಿದೆ ಬರೀ ಕತ್ತಲೆ ತುಂಬಿದೆ...

ಅರಿಷ್ಟನೇಮಿ : ನನಗೆ ಆತನಲ್ಲಿ ಮಾತನಾಡಲುಂಟು, ನಾನು ಇದನ್ನು ಪ್ರವೇಶಿಸುತ್ತೇನೆ. ನೀವು ಇಲ್ಲೇ ಕಾವಲು ಕಾಯಿರಿ.

ಯುವಕರು : ನಾವು ಕೂಡ ನಿಮ್ಮೊಡನೆ ಬರುತ್ತೇವೆ. ನೀವೊಬ್ಬರೆ ಹೋದರೆ ನಮ್ಮಾಣೆ.

ಅರಿಷ್ಟನೇಮಿ : ಇಬ್ಬರು ನನ್ನೊಡನೆ ಬನ್ನಿ ಇನ್ನಿಬ್ಬರು ಈ ಗುಹೆಯ ಬಾಗಿಲಲ್ಲಿ ಕಾವಲಿರಿ. ಒಂದು ವೇಳೆ ಸರಿರಾತ್ರಿ ಚಂದ್ರಗ್ರಹಣ ಪೂರ್ತಿಯಾಗುವ ಮುನ್ನ ನಾವು ಬರಲ್ಲಿಲ್ಲವೆಂದಾದರೆ ಈ ಗವಿಯ ಬಾಗಿಲನ್ನು ಕಲ್ಲುಗಳಿಂದ ಮುಚ್ಚಿಬಿಡಿ.

ಯುವಕರು : ತಮ್ಮ ಆಜ್ಞೆಯಂತಾಗಲಿ. ಆ ಜಿನಮೂರ್ತಿಯೆ ನಿಮ್ಮನ್ನು ಕಾಪಾಡಲಿ.

(ಅರಿಷ್ಟನೇಮಿ ಮತ್ತು ಆತನ ಇಬ್ಬರು ಶಿಷ್ಯರು ಒಳ ಪ್ರವೇಶ ಮಾಡುತ್ತಾರೆ)

(ಹಾಡು ಮುಂದುವರೆಯುತ್ತದೆ)

●

ದೃಶ್ಯ – ೩

ಅರಿಷ್ಟನೇಮಿ : ನಮ್ಮ ದುರಾದೃಷ್ಟದಂತೆ ಈ ಕತ್ತಲಿನ ದಾರಿಯೂ ದೀರ್ಘವಾಗಿರುವಂತಿದೆ.

ಯುವಕ 1 : ಗುರುಗಳೆ ಅಲ್ಲಿ ನೋಡಿ

(ಚಮ್ಮಾರ ನೆಲದಲ್ಲಿ ಬಿದ್ದಿರುವ ಒಂದು ಹೆಣ್ಣಿನ ಮೈಯಗಾಯವನ್ನು ಹೊಲಿಯುತ್ತಿದ್ದಾನೆ ಅದನ್ನು ನೋಡುತ್ತಾ)

ಅರಿಷ್ಟನೇಮಿ : ಅದು ಚಮ್ಮಾರನಲ್ವೆ?

ಯುವಕ : ಆತ ಚಮ್ಮಾರನೇ ಒಂದು ಹೆಣ್ಣಿನ ಗಾಯವನ್ನು ಹೊಲಿಯುತ್ತಿದ್ದಾನೆ.

ಯುವಕ : ಅರೆ ಕತ್ತರಿಸಿ ಬಿದ್ದಿರುವ ಆಕೆಗೆ ನಾಲಿಗೆಯನ್ನು ಹೊಲಿಯುತ್ತಿದ್ದಾನೆ.!

ಯುವಕ : ಗುರುಗಳೇ ಕೂಗಿ ಕರೆಯಲೇ...

ಅರಿಷ್ಟನೇಮಿ : ಆತ ತನ್ನ ಗಲ್ಲೆಬಾನಿಯನ್ನು ತೆಗೆದುಕೊಂಡು ಮುಂದೆ ನಡೆಯುತ್ತಿದ್ದಾನೆ. ತಡೆಯಿರಿ... ಆತನನ್ನು

(ಅವರು ಸರಿದು ಹೋಗುವಾಗ ನೆಲದ ಮೇಲೆ ಬಿದ್ದಿದ್ದ ಹೆಣ್ಣು ಮಾತನಾಡಿಸುತ್ತದೆ)

ನೀಲಾ : ನಿಲ್ಲಿ ಆತನನ್ನು ತಡೆಯಬೇಡಿ... ಅರೆ ನಾನು ಮತ್ತೆ ಮಾನಾಡುತ್ತಿದ್ದೇನೆ.

ಯುವಕ : ಅಯ್ಯೋಯ್ಯೋ ಭೂತ ದೆವ್ವಾ!

ನೀಲಾ : ಹೆದರಬೇಡಿ ನನ್ನ ಮಾತು ಕೇಳಿ ಆತ ಗಾಯಗಳನ್ನು ಹುಡುಕಿ ಹೊರಟದ್ದಾನೆ. ಆತನನ್ನು ತಡೆಯಬೇಡಿ ಎಷ್ಟೋ ನಂಜನ್ನು ತೊಳೆಯಬೇಕಿದೆ ಆತ.

ಅರಿಷ್ಟನೇಮಿ : ಯಾರು ನೀನು? ನಿನ್ನ ನಾಲಿಗೆ ಏಕೆ ಕತ್ತರಿಸಿ ಹೋಗಿತ್ತು?

ನೀಲಾ : ನಾನು ಇಂದ್ರಲೋಕದ ನರ್ತಕಿ. ನೀಲಾಂಜನೆ ಅಂತ ನನ್ನ ಹೆಸರು

ಯುವಕ : ಏನು ದೇವ ನರ್ತಕಿಯೇ ನೀನು?

ನೀಲಾ : ಹೌದು ಆ ಹತಭಾಗ್ಯೆ ನಾನೇ?

ಯುವಕ : ಈ ದುಷ್ಕೃತ್ಯವನ್ನು ಯಾರೋ ರಾಕ್ಷಸರು ಮಾಡಿರಬೇಕು. ದೇವರಗಳ ಶತ್ರುಗಳೆಂದರೆ ಅವರೇ ತಾನೇ?

ನೀಲಾ : ಇಲ್ಲ ಇದು ರಾಕ್ಷಸರು ಮಾಡಿದ್ದಲ್ಲ.

ಯುವಕ : ಓಹೋ ತಿಳಿಯಿತು ತಪ ಭಂಗ ಮಾಡಿದ ಕಾರಣಕ್ಕೆ ಋಷಿಗಳು ಶಪಿಸಿರಬೇಕು.

ನೀಲಾ : ಇದು ಋಷಿ ಶಾಪವೂ ಅಲ್ಲಾ ಸ್ವಾಮಿ.

ಅರಿಷ್ಠನೇಮಿ : ಆಗಾದರೆ ನಿನ್ನ ಯಾವ ತಪ್ಪಿಗೆ ಈ ಶಿಕ್ಷೆ?

ನೀಲಾ : ಲೋಕ ವಿಮುಖಿಯಾದ ದೊರೆ ಆದಿದೇವನನ್ನು ಕಾಮಿ ಯಾಗಿಸಲು ನನ್ನಿಂದ ಸಾಧ್ಯವಾಗಲಿಲ್ಲವೆಂದು ನನಗೆ ಈ ಶಿಕ್ಷೆ.

ಯುವಕ : ದೇವಲೋಕದಲ್ಲೂ ಸೆರೆಮನೆ-ಶಿಕ್ಷೆಗಳು ಉಂಟೇನು?

ನೀಲಾ : ಅಲ್ಲಿ ಅಮರತ್ವವೇ ಸೆರೆ ಸ್ವೇಚ್ಛೆಯೇ ಶಿಕ್ಷೆ...

ಅರಿಷ್ಠನೇಮಿ : ನಿನ್ನ ಮಾತು ಒಗಟಿನಂತಿದೆ.

ನೀಲಾ : ದೇವ ನರ್ತಕಿಯಾದ ನನ್ನನ್ನು ಇಂದ್ರ ಕರೆಸಿದ್ದ ಅಂದು (ದೃಶ್ಯ ಬದಲು)

(ಚಿಂತಾಕ್ರಾಂತನಾಗಿರುವ ದೇವೇಂದ್ರ, ನೀಲಾ ಸಭೆಗೆ ಆಗಮಿಸಿ ನಮಸ್ಕರಿಸುವಳು)

ಇಂದ್ರ : ನೀಲಾಂಜನೆ...

ನೀಲಾ : ಪ್ರಭು ಅಪ್ಪಣೆಯಾಗಲಿ.

ಇಂದ್ರ : ದೇವಲೋಕಕ್ಕೆ ಒಂದು ಆಪತ್ತು ಒದಗಲಿದೆ ನೀಲಾ ಅದನ್ನು ನೀನು ತಡೆಯಬೇಕು.

ನೀಲಾ : ದೇವಲೋಕದ ಉನ್ನತಿಗಾಗಿಯೇ ಮುಡುಪಾಗಿರುವ ಜೀವವಿದು ಅಪ್ಪಣೆಯಾಗಲಿ ಪ್ರಭು.

ಇಂದ್ರ : ಮನುಷ್ಯಮಾತ್ರನಾದ ಆದಿದೇವನು ದೇವನಾಗಲು ಹೊರಟಿದ್ದಾನೆ.

ನೀಲಾ : ಅದರಿಂದ ದೈವಕುಲಕ್ಕೆ ಕಂಟಕ ಉಂಟೇನು ದೊರೆಯೇ?

ಇಂದ್ರ : ಕಂಟಕ ದೇವಲೋಕಕ್ಕಲ್ಲ ಮನುಷ್ಯಲೋಕಕ್ಕೆ. ಭೂಮಿಯನ್ನ ಮೃತ್ಯುವಿನಿಂದ, ಮನುಷ್ಯರನ್ನ ಆಯಸ್ಸಿನಿಂದ ಪಾರು ಮಾಡಲು ಪ್ರಯತ್ನಿಸುತ್ತಿದ್ದಾನೆ. ಇದು ದೈವ ನಿಯಮದ ಉಲ್ಲಂಘನೆ. ಈ ಕಾರ್ಯವನ್ನು ನೀನು ತಡೆಯಬೇಕು.

ನೀಲಾ : ಆದರೆ ಪ್ರಭು...

ಇಂದ್ರ : ನೀಲಾ ನೀನು ಆತನಲ್ಲಿ ಹುಟ್ಟಿಕೊಂಡಿರುವ ವೈರಾಗ್ಯವನ್ನು ಕೆಡಿಸಬೇಕು. ವಿರಾಗಿಯಾದ ಆತ ಮತ್ತೆ ಅನುರಾಗಿಯಾಗಬೇಕು.

ನೀಲಾ : ನಾನು ನನ್ನ ಪ್ರಭುವಿನ ಸೂಚನೆಯನ್ನು ನಿಷ್ಠೆಯಿಂದ ಪಾಲಿಸುತ್ತೇನೆ.

ಇಂದ್ರ : ನೀಲಾ ಆತನ ವೈರಾಗ್ಯ ಋಷಿಗಳಂತೆ ಸುಖದ ಅಭಾವದಲ್ಲಿ ಹುಟ್ಟಿದ್ದಲ್ಲ. ಸುಖದ ಅತಿವೃಷ್ಟಿಯಲ್ಲಿ ಹುಟ್ಟಿಕೊಂಡ ವೈರಾಗ್ಯವನ್ನು ಕೆಡಿಸುವುದು ಸುಲಭವಾದದ್ದಲ್ಲ ನೆನಪಿರಲಿ.

ನೀಲಾ : ನಾನು ಭೂಲೋಕಕ್ಕೆ ಇಂದೇ ತೆರಳಲು ಅಪ್ಪಣೆ ಬೇಡುತ್ತೇನೆ.

ಇಂದ್ರ : ದೇವಸತ್ಕಾರದ ನೆಪವಾಗಿ ನಾನು ಕೂಡ ಅಲ್ಲಿಗೆ ಹೊರಟಿದ್ದೇನೆ. ನೀನು ಕೂಡಾ ಪ್ರಯಾಣಕ್ಕೆ ಸನ್ನದ್ಧಳಾಗಿರು.

ಸೇವಕ : (ಪ್ರವೇಶ) ಇಂದ್ರಸೇನರಿಗೆ ವಿಜಯವಾಗಲಿ ಭೂಲೋಕದ ಪ್ರಯಾಣವು ಸಿದ್ಧವಾಗಿದೆ ಪ್ರಭು.

ಇಂದ್ರ : ನೀಲಾ ದೈವ ನಿಯಮವನ್ನು ಕಾಯುವ ಹೊಣೆ ನಿನ್ನ ಮೇಲಿದೆ ನೆನಪಿರಲಿ. ಯುದ್ಧವೆಂದರೆ ಬಹಿರಂಗ ಮಾತ್ರವಲ್ಲ ಅಂತರಂಗವೂ ರಣರಂಗವಾಗಬೇಕು. ದೇವಲೋಕಕ್ಕೆ ಒಳಿತಾಗಬೇಕು.

ನೀಲಾ : ಅಪ್ಪಣೆ ಪ್ರಭು (ಹಿಂದೆ ಸರಿಯುತ್ತಾಳೆ. ಅದೇ ಸಮಯಕ್ಕೆ ಆದಿದೇವನ ಆಸ್ಥಾನಕ್ಕೆ ದೇವರಾಜನ ಪ್ರವೇಶ. ಜಯಘೋಷಗಳು ಮೊಳಗುತ್ತವೆ)

ಆದಿದೇವ : ಸುರದೊರೆಯೇ ನಿನ್ನ ಔದಾರ್ಯದ ಮುಂದೆ ನಾನು ಸೋತುಹೋಗಿದ್ದೇನೆ...

ಇಂದ್ರ : ನಿನ್ನ ಬಾಹುಬಲ ಮತ್ತು ಮನೋಬಲಗಳಿಂದ ಭೂಮಂಡಲ ವನ್ನೇ ಗೆದ್ದವನು ನೀನು ನನ್ನನ್ನು ಆಹ್ವಾನಿಸಿದ್ದು ದೇವಲೋಕಕ್ಕೆ ದೊರೆತ ಗೌರವ ಎಲ್ಲಾ ಸೌಖ್ಯ ತಾನೇ?

ಆದಿದೇವ : ನಾನು ನೆಲದ ಸಂಕಟಗಳನ್ನು ಬೆನ್ನಿಗೆ ಕಟ್ಟಿಕೊಂಡು ಒದ್ದಾಡುತ್ತಿದ್ದೇನೆ.

ಇಂದ್ರ : ನಿನ್ನ ಭಾರಗಳಿಗೆ ಮುಕ್ತಿ ನೀಡುವ ಸಲುವಾಗಿಯೇ ದೇವಾ ಭೂಮಿಯನ್ನು ನಿನ್ನಲ್ಲಿಗೆ ತಂದಿದ್ದೇನೆ.

ಆದಿದೇವ : ಸಚರಾಚರಗಳೆಲ್ಲಾ ಸ್ವತಂತ್ರವಾಗಿ ವರ್ತಿಸುವ ಲೋಕದಿಂದ ಬಂದವರು ನೀವು. ಇಲ್ಲಿ ಪ್ರತಿಯೊಂದು ನಿಯಂತ್ರಣದಂತೆಯೆ ವರ್ತಿಸುವುದರಿಂದ ಆಯಾಸ ಹಿರಿದಾಗಿ ಕಾಣುತ್ತಿದೆ ದೇವಾ.

ಇಂದ್ರ : ಭೂಲೋಕದ ನೆನೆಪನ್ನು ಅಳಿಸಿದರೆ ಸ್ವರ್ಗದ ಅನುಭೂತಿ ನಿನಗೆ ತಾನಾಗಿಯೇ ಉಂಟಾಗುವುದು. ನಿನ್ನ ಸಂತೋಷಕ್ಕಾಗಿಯೇ ಇಂದು ನಿಮಗೆ ಸಂತೋಷ ನೃತ್ಯವನ್ನು ಮಾಡಿಸಲು ನೃತ್ಯಗಾತಿಯನ್ನು ಕರೆತಂದಿದ್ದೇನೆ

ಆದಿದೇವ : ನಾನು ತಮ್ಮ ಆಜ್ಞಾನುವರ್ತಿಯಾಗಲು ಇಚ್ಛಿಸುತ್ತೇನೆ.

ಇಂದ್ರ : ಯಾರಲ್ಲಿ... ಈಗ ದೇವಸಭೆ ಆರಂಭಗೊಂಡಿದೆ ಎಂದು ಪ್ರಕಟಿಸಿ...

ಸೇವಕ : ಭೂಲೋಕ ಸಮಸ್ತರೇ. ಇಂದಿನ ಸಭೆಯು ಸುರಸ್ನೇಹಿತ ಆದಿದೇವನ ದಿಗ್ವಿಜಯದ ಸವಿ ನೆನಪಿಗಾಗಿ ಆರಂಭವಾಗುತ್ತಿದೆ. ತಕ್ಷಣ ತಾವು ಆಸೀನರಾಗಲು ದೇವರಾಜರ ಅಪ್ಪಣೆಯಾಗಿದೆ.

(ಆದಿದೇವ ಇಂದ್ರ ಇತರ ದೇವತೆಗಳು ಹಾಗೂ ರಾಜಪ್ರಮುಖರು ಆಸೀನರಾಗುತ್ತಾರೆ. ಆಗ ನೀಲಾಂಜನೆಯ ನೃತ್ಯ ನಡೆಯುವುದು)

ಇಂದ್ರ : ಸಭಾಸದರೆ ಇದು ನಿಮ್ಮ ಲೋಕಕ್ಕೆ ಹೊಸ ಅನುಭವ. ನಮ್ಮ ಮಿತ್ರ ಭೂಲೋಕದೊಡೆಯ ಜಗತ್ತನ್ನು ತನ್ನ ಪುರುಷ ಬಲದಿಂದ ಗೆದ್ದು ಭೂ ಸಾಮ್ರಾಟನಾದ ಆದಿದೇವ ಈಗ ನಮ್ಮ ಅತಿಥಿ. ಈ ದೇವಲೋಕದ ಮಿತ್ರನನ್ನು ಸತ್ಕರಿಸಲು ಇಲ್ಲಿ ಬಂದು ಸೇರಿದ್ದೇವೆ. ಆತನ ಯುದ್ಧಾಯಾಸದ ಪರಿಹಾರಕ್ಕಾಗಿ ನಮ್ಮ ದೇವ ನರ್ತಕಿ ನೀಲಾಂಜನೆಯಿಂದ ಈಗ ಸ್ವಾಗತ ನೃತ್ಯ.

ಆಲಾಪ: ಭೋಂಕನೆ ಪೊಕ್ಕಳ್ ರಂಗಮಂ
ಜನಾಂತರಂಗಮುಮಂ ನೀಲಾಂಜನೆ॥
ಸುರಲೋಕ ಮಧುಲೋಕ ಆನಂದಮಯವೋ
ಸುರ ಕನ್ನೆಯ ನಾಂಟ್ಯವಿದು ಮಧು ಮಹೋತ್ಸವವೋ
ದೇಹವೇ ಮಧುಮಾಸ ಋತುಗಳೇ ರತಿಮಾಟ
ಉಸಿರೇ ಶ್ರೀಗಂಧ ಮಣ್ಣೆಲ್ಲಾ ಭವ ಬಂಧ॥

ಇಂದ್ರ : ನೀಲಾ ಆದಿದೇವ ಮಣ್ಣು ಹೊನ್ನುಗಳನ್ನು ಗೆದ್ದವನು ಅವನು ಹೆಣ್ಣನ್ನು ಗೆಲ್ಲಬಾರದು. ತಿಳಿಯಿತೇನು?

ನೀಲಾ : **ಮಕರಂಧ ಗಂಧವೇ ಮೈಯಾಗಿ**
ಜೇನ ಹನಿ ಹನಿಯೇ ತುಟಿಯಾಗಿ
ಹುಣ್ಣಿಮೆಯೇ ಹೊನಲೇ ಕಣ್ಣೋಟವಾಗಿ
ಚೇಟವೋ ಮಾಟವೋ ಕೂಡಲು ಬಾ ರಮಣ॥

ಆದಿದೇವ : ನಿಲ್ಲಿಸು ತಾಯೇ ನಿನ್ನ ಹಿಂಸಾ ನೃತ್ಯವನ್ನು.

ನೀಲಾ : ಇದೇನಿದು ನನ್ನ ಸೋಂಕಿದ ಗಾಳಿ ಮೈತಾಕಿ ವ್ರತಭಂಗವಾದ ಎಷ್ಟೋ ಋಷಿಗಳನ್ನು ಕಂಡಿದ್ದೆ. ನನ್ನ ಹುಬ್ಬಿನ ಚಲನೆಯಿಂದಲೇ ದೇವಲೋಕದ ಸಮತೋಲನವನ್ನು ಕೆಡಿಸಿದ್ದೆ. ಈತನ ಕಣ್ಣುಗಳಲ್ಲಿ ಮಡುಗಟ್ಟಿರುವ ಶಾಂತಿ ನನ್ನನ್ನು ನಿರ್ಭಾವುಕಳನ್ನಾಗಿಸಿದೆ.

ಆದಿದೇವ : ನಿನ್ನ ಕಣ್ಣಲ್ಲಿ ಕಾದುಕುಳಿತಿರುವ ಮೃತ್ಯು ಕಾಣುತ್ತಿದೆ ನನಗೆ. ಹೊರಟು ಹೋಗು ಇಲ್ಲಿಂದ ಹೊರಟು ಹೋಗು.

(ನೀಲಾ ನೃತ್ಯ ನಿಲ್ಲಿಸುತ್ತಾಳೆ)

ಇಂದ್ರ : ಎಲೈ ಪಾತಕಿ ನೀನು ದೇವಲೋಕದ ಆಜ್ಞೆಯನ್ನು ತಿರಸ್ಕರಿಸಿದೆ. ನೃತ್ಯವನ್ನು ಅಪೂರ್ಣಗೊಳಿಸಿ ಪೂರ್ಣಲೋಕವನ್ನು ಕುಂದು ಗೊಳಿಸಿದೆ.

(ತನ್ನ ವಜ್ರಾಯುಧದಿಂದ ಅವಳ ಕಡಿಯುತ್ತಾನೆ)

ಹಾಡು:

(ದೃಶ್ಯ ಬದಲು)

ನೀಲಾ : ಸಾವಿರದ ಲೋಕಕ್ಕೆ ಸಾವ ಬೀಜ ತಂದವನು ನೋವಿರದ ಲೋಕಕ್ಕೆ ನೋವಿನ ವೃಕ್ಷವನ್ನು ತಂದು ನೆಟ್ಟವನು ನೆಟ್ಟಗೆ ರಾಜಸಭೆಯಿಂದ ಹೊರ ನಡೆದು ಹೋಗಿದ್ದ. ಅಂದಿನಿಂದ ನಾನು ದೇವಲೋಕದಿಂದ ಬಹಿಷ್ಕೃತಳಾಗಿ ಇಲ್ಲಿ ಕತ್ತರಿಸಿಕೊಂಡು ಬಿದ್ದಿದ್ದೆ. ಇಂದು ಆ ಪುಣ್ಯಾತ್ಮನ್ಯಾರೋ ನನ್ನ ಶಾಪ ವಿಮೋಚನೆ ಮಾಡಿದ.

ಅರಿಷ್ಟನೇಮಿ : ತಾಯಿ ನಮ್ಮನ್ನು ಕ್ಷಮಿಸಿ.

ನೀಲಾ : ಭೂಮಿಯಲ್ಲಿ ಹಿಂಸೆ ಸಾವು ನೋವುಗಳು ನಿರಂತರವಾಗಿ

ಕಾಯ್ದುಕೊಳ್ಳಬೇಕಾದುದೇ ಇಂದ್ರನ ಮುಖ್ಯವಾದ ಕೆಲಸ. ಸಾವನ್ನು ಉತ್ಪಾದಿಸಲೆಂದೇ ಟೊಂಕಕಟ್ಟಿ ನಿಂತ ಲೋಕವಿದು.

ಅರಿಷ್ಟನೇಮಿ : ಆ ಆದಿದೇವನನ್ನು ದೇವಕುಲ ಬಿಟ್ಟಿತ್ತೇನು?

ನೀಲಾ : ಇಲ್ಲ ನಾನೊಂದು ಅಸ್ತ್ರ. ನಾನು ಸೋತರೇನು ದೇವಲೋಕ ಆತನನ್ನು ಕಾಡು ಪಾಲುಮಾಡಿ ಭೂಮಿಯಲ್ಲಿ ಆತನ ವಾರಸುದಾರನಾದ ಹಿರಿಮಗನಿಗೆ ಪಟ್ಟವನ್ನು ಕಟ್ಟಿತ್ತು. ಆದಿದೇವ ಕೇವಲಿಯಾಗಿ ಕಾಡು ಸೇರಿಕೊಂಡನೆಂಬ ಸುದ್ದಿ ನನ್ನ ಕಿವಿಗೆ ಮುಟ್ಟಿತು. ನಂತರದಲ್ಲಿ ಏನು ನಡೆಯಿತೆಂದು ನನಗೆ ತಿಳಿದಿಲ್ಲ.

ಅರಿಷ್ಟನೇಮಿ : ನಿನ್ನಿಂದ ತುಂಬಾ ಉಪಕಾರವಾಯ್ತು. ತಡವಾದರೆ ನಾವು ನಡೆಯಬೇಕಾದ ದಾರಿ ನಮ್ಮ ನಿರಾಶೆಯಂತೆ ಉದ್ದವಾಗುವುದು. ನಾವು ಬರುತ್ತೇವೆ.

●

ದೃಶ್ಯ – ೪

[ಒಂದು ಗುಂಪು ಜನ ಓಡಿ ಬರುತ್ತಾರೆ. ಅವರು ಹೆದರಿದಂತಿರುತ್ತಾರೆ. ಅರಿಷ್ಟನೇಮಿ ಅವರನ್ನು ತಡೆದು ಮಾತನಾಡಿಸುತ್ತಾನೆ]

ಅರಿಷ್ಟನೇಮಿ : ಯಾರು ನೀವು ? ಯಾಕೆ ಹೀಗೆ ಹುಲಿ ಬೆನ್ನತ್ತಿ ಬರುತ್ತಿರುವ ಜಿಂಕೆಯ ಹಾಗೆ ಓಡುತ್ತಿದ್ದೀರಿ. ನಿಲ್ಲಿ.

ಗುಂಪಿನ ಒಬ್ಬ: ಹುಲಿಯ ಕೈಯಿಂದ ತಪ್ಪಿಸಿಕೊಳ್ಳಬಹುದು. ಆದರೆ ಹುಲಿಯಂತ ಮನುಷ್ಯನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಇನ್ನೊಬ್ಬ : ದಯಮಾಡಿ ನಮ್ಮನ್ನು ತಡೆಯಬೇಡಿ ಇಲ್ಲೇ ನಿಂತರೆ ನಮ್ಮ ರುಂಡಮುಂಡಗಳು ಬೇರಾಗುವುದರಲ್ಲಿ ಅನುಮಾನವೇ ಇಲ್ಲ. ಆಗ ನಮ್ಮನ್ನು ಕೊಲ್ಲಿಸಿದ ಪಾಪ ನಿಮ್ಮನ್ನು ಸುತ್ತಿಕೊಳ್ಳುವುದು.

ಯುವಕ : ಕೊಲ್ಲುವರೋ ಕೊಲ್ಲಿಸಿಕೊಳ್ಳುವವರೋ ನಿಮ್ಮಲ್ಲಿ ಯಾರು ಪಾತಕಿಗಳು?

ಗುಂಪಿನ ಒಬ್ಬ: ಸ್ವಾಮಿ ನಾವು ಆದಿದೇವನು ರಾಜ್ಯವಾಳುವಾಗ ದೇಶಭಕ್ತರಾಗಿದ್ದೆವು.

ಇನ್ನೊಬ್ಬ : ಈಗ ಭರತಚಕ್ರವರ್ತಿಯ ಆಳ್ವಿಕೆಯ ಕಾಲಕ್ಕೆ ದೇಶಭ್ರಷ್ಟರಾಗಿದ್ದೇವೆ.

ಅರಿಷ್ಟನೇಮಿ : ದೇಶಭ್ರಷ್ಟರಾಗುವಂತಹ ಯಾವ ಅಪರಾಧವನು ಮಾಡಿದಿರಿ? ಕ್ಷಮೆ ಕೋರಲಿಲ್ಲವೆ ದೊರೆಯಲ್ಲಿ?

ಮತ್ತೊಬ್ಬ : ಕೆಲ ವರ್ಷಗಳ ಹಿಂದೆ ಒಂದು ದಿನ ಆದಿದೇವ ದೇವಸಭೆಗೆ ಹೋದವನು ಹಿಂತಿರುಗಲಿಲ್ಲ.

ಇನ್ನೊಬ್ಬ : ದೇವಸಭೆಯಲ್ಲಿ ಯಾರೋ ನರ್ತಕಿ ನೃತ್ಯ ಮಾಡುತ್ತಾ ಸತ್ತು ಹೋದಳಂತೆ. ರಸಭಂಗವಾಗದಂತೆ ಆ ಕ್ಷಣವೇ ಮತ್ತೊಂದು ಜೀವವನ್ನು ಅವಳ ದೇಹದಲ್ಲಿ ಪ್ರವೇಶ ಮಾಡಿಸಿ ನೃತ್ಯ ಮುಂದುರಿಸಿದನಂತೆ ಇಂದ್ರ.

ಮತ್ತೊಬ್ಬ : ಆದರೆ ನಮ್ಮ ದೊರೆ ಆದಿದೇವನಿಗೆ ಲೌಕಿಕದ ನಶ್ವರತೆ ಈ ಘಟನೆಯಲ್ಲಿ ಕಾಣಿಸಿ ಬದುಕಿನ ಬಗ್ಗೆ ಜಿಗುಪ್ಸೆ ಹುಟ್ಟಿ ಹಾಗೇ ತಪ್ಪಸಿಗೆ ಹೋದನೆಂದು ಪುಕಾರು ಕೇಳಿಬಂತು.

ಮಗದೊಬ್ಬ : ಆಗ ಯುವರಾಜ ಭರತಕುಮಾರ ಸಿಂಹಾಸನದ ಮೇಲೆ ಕುಳಿತ. ತಂದೆಗೆ ಮುಳ್ಳಿನ ಕಂಟಿಯ ಹಾಗೆ ಕಂಡ ಕಿರೀಟವನ್ನು ಭರತ ತನ್ನ ತಲೆಗೆ ತೊಟ್ಟುಕೊಂಡ. ಸುಗಂಧ ದ್ರವ್ಯಗಳಿಂದ ತೊಳೆದರೂ ಹೋಗದ ರಕ್ತದ ಕಮುಟು ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡ. ರಾಜದಂಡವನ್ನು ಕೈಗೆ ತೆಗೆದುಕೊಂಡು ತನ್ನನ್ನು ತಾನೇ ಚಕ್ರವರ್ತಿಯೆಂದು ಘೋಷಿಸಿಕೊಂಡ.

ಅರಿಷ್ಟನೇಮಿ : ಮುಂದೇನಾಯಿತು? ಆದಿದೇವ ಲೋಕ ತೊರೆದ ಸುದ್ದಿ ನಮ್ಮ ಕಿವಿಗೂ ಬಿದ್ದಿದೆ.

ಒಬ್ಬ : ಆದರೆ ಒಂದು ದಿನ ಫಕೀರನ ಹಾಗೇ ಕಾಣುತ್ತಿದ್ದ ವ್ಯಕ್ತಿಯೊಬ್ಬ ಪುರ ಪ್ರವೇಶ ದ್ವಾರಕ್ಕೆ ಬಂದರೆ ಅವರಿಗೆ ಪ್ರವೇಶ ನಿರಾಕರಿಸಲಾಯಿತು.

ಇನ್ನೊಬ್ಬ : ಆತನನ್ನು ಯಾರೆಂದು ವಿಚಾರಿಸದೆಯೇ ಭರತ ಚಕ್ರವರ್ತಿ ಆತನಿಗೆ ಗಡಿಪಾರು ಮಾಡುವ ಶಿಕ್ಷೆ ವಿಧಿಸಿದ್ದ.

ಯುವಕ : ಆತ ಆದಿದೇವನೇನು ?

ಮತ್ತೊಬ್ಬ : ತನ್ನ ಮಗನಿಂದಲೇ ಗಡಿಪಾರಾದ ನತದೃಷ್ಟ ದೊರೆ ಆತ.

ಇನ್ನೊಬ್ಬ : ಮರೆವು ಅಧಿಕಾರದ ಗುರುತು? ನೆನಪು ಆತ್ಮೀಯತೆಯ ಗುರುತು. ಆತ ದೊರೆಯಾಗಿದ್ದಾಗ ನಮ್ಮನ್ನು ಆತ ಮಕ್ಕಳಂತೆ ಕಂಡಿದ್ದ. ಆ ವಿಶ್ವಾಸದಿಂದ ಆತ ಬೇಡವೆಂದರೂ ಆತನನ್ನು ಹಿಂಬಾಲಿಸಿ ಕಾಡಿಗೆ ಹೋದೆವು. ಆದರೆ...

ಯುವಕ : ಆದರೆ ಏನಾಯಿತು?

ಮಗದೊಬ್ಬ : ಭರತನಿಗೆ ಬೇಹುಗಾರರಿಂದ ಮಾಹಿತಿ ದೊರಕಿತ್ತು. ದೊರೆ ಕೇವಲಿಯಾದನೆಂದು ತಿಳಿದ ಮೇಲೆಯೇ ಆತ ತಂದೆಯನ್ನು ಕಾಣಲು ಬಂದಿದ್ದು. ಅದು ಜನಮೆಚ್ಚುಗೆಗಾಗಿ ಮಾತ್ರ. ಆದರೆ ಆ ದಟ್ಟ ಅರಣ್ಯದಲ್ಲಿ ಆದಿದೇವನ ಬೆಂಗಾವಲಿಗೆ ನಿಂತ ಜನಸ್ತೋಮವನ್ನು ಕಂಡು ಆದಿದೇವನಿಗೆ ಹಾಕುವ ಜೈಕಾರಗಳನ್ನು ಕೇಳಿ ಭರತ ಒಳಗೆಯೇ ಕಂದಿಹೋದ. ಮುಖ ಸುಟ್ಟ ಹಸಿ ಸೊಪ್ಪಿನಂತೆ ಕಾಣುತ್ತಿತ್ತು.

ಅರಿಷ್ಟನೇಮಿ : ಏನೆಂದರು? ಆದಿದೇವ ಮಗನನ್ನು ದಂಡಿಸಿದರೇನು?

ಇನ್ನೊಬ್ಬ : ಗಾಯದ ಗುರುತು ಕಳೆದು ಹೋದಮೇಲೆ ನೋವಿನ ನೆನಪು ಇರುವುದಾದರೂ ಹೇಗೆ?

ಮತ್ತೊಬ್ಬ : ಹೇಗೂ ಆದಿದೇವ ಮಾತನಾಡುವುದಿಲ್ಲವೆಂದು ತಿಳಿದ ಬಳಿಕ ಭರತ ಆದಿದೇವನ ಜೊತೆ ಬಂದವರು ಯಾವುದೇ ಕಾರಣಕ್ಕೂ ನಾಡಿಗೆ ಬರದಂತೆ ತಾಕೀತು ಮಾಡಿದ.

ಮತ್ತೊಬ್ಬ : ಅವನ ಆಜ್ಞೆಯನ್ನು ಉಲ್ಲಂಘಿಸಿದ ಕೆಲವರ ಹೆಣಗಳು ಗುರುತು ಸಿಗದ ಸ್ಥಿತಿಯಲ್ಲಿ ಕಾಡಿನಲ್ಲಿ ಸಿಕ್ಕವು.

ಇನ್ನೊಬ್ಬ : ಆನಂತರದಲ್ಲಿ ನಮಗೆ ಬೇರೆ ದಿಕ್ಕಿಲ್ಲದೆ ಆದಿದೇವನ ಹಿಂದೆಯೇ ಸುತ್ತುತ್ತಿದ್ದೆವು. ಆತ ಮನಸ್ಸು ಬಂದರೆ ತಿಂಗಳಾದರೂ ನಡೆಯುತ್ತಲೇ ಇರುತ್ತಿದ್ದರು ಅಥವಾ ನಿಂತರೆ ತಿಂಗಳುಗಟ್ಟಳೆ ಒಂದೆಡೆ ನಿಲ್ಲುತ್ತಿದ್ದರು. ಇಂದು ನಡೆದ ಘಟನೆಯನ್ನು ನೋಡಲಾರದೆ ಇತ್ತ ಓಡಿಬಂದೆವು. ಅಗೋ ಕುದುರೆಯ ಸದ್ದು ಕೇಳುತ್ತಿದೆ ಓಡಿ ಬಚ್ಚಿಟ್ಟುಕೊಳ್ಳಿ... ಓಡಿ.

(ನಮಿ–ವಿನಮಿಯರನ್ನು ಸೈನಿಕರು ಎಳೆದು ತರುತ್ತಾರೆ. ಕೋಳ ತೊಡಸಿದ್ದರೂ ಅವರು ಅರ್ಭಟಿಸುತ್ತಾ ನಡೆಯುತ್ತಾರೆ)

ನಮಿ : ಏಯ್ ಕಪಟ ವೇಷಧಾರಿಯಾದ ಆದಿದೇವ ಮಕ್ಕಳಿಗೆ ರಾಜ್ಯಾಧಿಕಾರ ಕೊಡೋದಿಕ್ಕೆ ಮೂಗನವೇಷ ಹಾಕಿದ್ದೀಯಾ? ನಾವು ನಿನ್ನನ್ನು ಬಿಡಲ್ಲ...

ವಿನಮಿ : ನಿನ್ನ ಬಣ್ಣ ಬಯಲು ಮಾಡ್ತೀವಿ... ಬಿಡ್ರೋ ನಮ್ಮ ಪಾಲಿನ ರಾಜ್ಯವನ್ನು ಕೇಳಿದರೆ ನಮ್ಮನ್ನೆ ಬಂಧಿಸಿದ್ದೀರಾ? ಇದರ ಪರಿಣಾಮ ನೀವು ಅನುಭವಿಸಬೇಕಾಗುತ್ತದೆ.

ಸೈನಿಕರು : ಬಾಯಿ ಮುಚ್ಚಿಕೊಂಡು ನಡೆಯಿರಿ. ನಿಮ್ಮಂಥ ರಾಕ್ಷಸರನ್ನು ನಾವು ಕತೆಗಳಲ್ಲೂ ಕೇಳಿಲ್ಲ.

ನಮಿ : ಎಲೈ ಕೊತ್ವಾಲ ನಮ್ಮನ್ನು ಬಂಧಿಸಿದ್ದಕ್ಕೆ ನಿನಗೆ ತಲೆದಂಡವನ್ನು ಕೊಡಬೇಕಾದೀತು... ಎಚ್ಚರ.

ಕೊತ್ವಾಲ : ಸಧ್ಯಕ್ಕೆ ನಿಮ್ಮ ತಲೆಗಳನ್ನು ಭರತ ಚಕ್ರವರ್ತಿಯವರಲ್ಲಿ ಬೇಡಿ ಉಳಿಸಿಕೊಳ್ಳಿ ನಂತರ ನಮ್ಮ ತಲೆದಂಡದ ಬಗ್ಗೆ ಯೋಚಿಸಬಹುದು.

ವಿನಮಿ : ಭರತ ಚಕ್ರವರ್ತಿಯ ಹತ್ತಿರ ಬೇಡವುದಕ್ಕೆ ನಾವೇನು ನಿನ್ನ ಹಾಗೆ

ಅವನ ಗುಲಾಮರಲ್ಲ. ನಮ್ಮ ಪಾಲಿನ ರಾಜ್ಯ ಸಿಗಲಿ, ನಂತರ ನಿಮ್ಮನ್ನು ವಿಚಾರಿಸಿಕೊಳ್ಳುತ್ತೇವೆ.

ಕೊತ್ವಾಲ : ಸೈನಿಕರೇ ಈ ಅಧಿಕ ಪ್ರಸಂಗಿಗಳನ್ನು ಎಳದೊಯ್ಯಿರಿ.

ಅರಿಷ್ಟನೇಮಿ : ಕೊತ್ವಾಲ ಇವರನ್ನೇಕೆ ಎಳೆದುಕೊಂಡು ಹೋಗುತ್ತಿದ್ದಾನೆ?

ಯುವಕ : ಅಂದ ಹಾಗೆ ಇವರು ಮಾಡಿದ ತಪ್ಪಾದ್ರು ಏನು?

ಗುಂಪಿನೊಬ್ಬ : ಇವರು ತಪೋ ನಿರತರಾದ ವೃಷಭನಾಥನನ್ನು ಆಸ್ತಿಯಲ್ಲಿ ಪಾಲುಕೇಳಲು ಬಂದಿದ್ದರು.

ಯುವಕ : ಏನು ರಾಜ್ಯದಲ್ಲಿ ಪಾಲೇ? ಇಷ್ಟಕ್ಕೂ ಇವರು ಯಾರು?

ಗುಂಪಿನ ಇನ್ನೊಬ್ಬ: ಅಯ್ಯೋ ಇವರು ಆದಿದೇವನ ಹೆಂಡತಿಯರ ಅಣ್ಣಂದಿರಾದ ಕಚ್ಛ ಮತ್ತು ಮಹಾ ಕಚ್ಛರ ಮಕ್ಕಳು. ಆದಿದೇವನ ಸಾಮಂತರಾಗಿದ್ದ ಕಚ್ಛ ಮತ್ತು ಮಹಾಕಚ್ಛರ ರಾಜ್ಯ ಆದಿದೇವನ ಸಾಮ್ರಾಜ್ಯದೊಳಗೆ ಬೆರೆತು ಹೋಯಿತು. ಆದಿದೇವ ಆಳ್ವಿಕೆಯಲ್ಲಿ ಮಾಂಡಳೀಕರಾಗಿದ್ದ ಕಚ್ಛ ಮತ್ತು ಮಹಾಕಚ್ಛರು ಆದಿದೇವನನ್ನು ಅನುಸರಿಸಿ ಕಾಡಿಗೆ ಹೋದರು. ನಂತರದಲ್ಲಿ ನಮಿ ವಿನಮಿಗಳನ್ನು ಭರತನ ಹೊಸ ಪ್ರಭುತ್ವ ಅಧಿಕಾರದಿಂದ ಕಿತ್ತು ಹಾಕಿತು.

ಮತ್ತೊಬ್ಬ : ಅಧಿಕಾರದ ಸುಖಕ್ಕೆ ಒಗ್ಗಿ ಹೋಗಿರುವ ಈ ರಾಕ್ಷಸರು ಆದಿದೇವನನ್ನು ಹೋದಲ್ಲಿ ಬಂದಲ್ಲಿ ಬಂದು ರಣಹದ್ದುಗಳ ಹಾಗೆ ಕಾಡಿಸುತ್ತಿದ್ದವರು.

ಮಗದೊಬ್ಬ : ಇಹದ ಎಲ್ಲ ಬಂಧನಗಳಿಂದ ಬಿಡಿಸಿಕೊಂಡ ಆದಿದೇವ ಮಾತನಾಡದಿರಲು ತಮ್ಮ ಮಲಚೂರಿಗಳಿಂದ ಆತನನ್ನು ಪ್ರಾಣಾಂತಿಕವಾಗಿ ಗಾಸಿಗೊಳಿಸಿದ್ದಾರೆ. ಅವರ ಮೈಯಿಂದ ರಕ್ತ ಧಾರಾಕಾರ ಹರಿಯುತ್ತಿತ್ತು. ಅಲ್ಲಿಯೇ ಇದ್ದರೆ ಆ ಕೊಲೆಯ ಆಪಾದನೆ ನಮ್ಮ ಮೇಲೆ ಎಲ್ಲಿ ಬರುವುದೋ ಎಂಬ ಹೆದರಿಕೆಯಿಂದ ಇತ್ತ ಓಡಿಬರುತ್ತಿರುವಾಗ ನೀವು ಸಿಕ್ಕಿದಿರಿ.

ಅರಿಷ್ಟನೇಮಿ : ನಿಮ್ಮಿಂದ ತುಂಬಾ ಉಪಕಾರವಾಯಿತು. ಯಾವ ಕಾಡಿನಲ್ಲಿ ಇದ್ದಾರೆ ಆದಿದೇವಾ? ಶಿಷ್ಯರೇ ಬೇಗ ನಡಿಯಿರಿ. ಕೇವಲಿಯನ್ನು ಉಳಿಸಿಕೊಳ್ಳಬೇಕು. **(ಅವಸರದಿಂದ ಓಡುವರು)**

●

ದೃಶ್ಯ – ೫

[ಕಾಡಿನಲ್ಲಿ ಒಬ್ಬ ಕೇವಲಿ ನಿಂತಿದ್ದಾನೆ. ಆತನ ಮೈಯೆಲ್ಲಾ ರಕ್ತಸಿಕ್ತವಾಗಿದೆ. ಚಮ್ಮಾರ ಅಲ್ಲಿಗೆ ಬರುತ್ತಾನೆ. ಆತ ನೀರು ನೀರು ಅಂತ ಪಿಸುಗುಡುತ್ತಿರುತ್ತಾನೆ.]

ಚಮ್ಮಾರ : ಅಯ್ಯೋಯ್ಯೋ ಈ ಮನುಷ್ಯರು ಎಂಥ ರಾಕ್ಷಸರಪ್ಪ. ನಾನು ಎಂಥೆಂತದೋ ಗಾಯಗಳನ್ನು ಕಂಡಿದ್ದೇನೆ. ಇಂತಹ ಗಾಯಗಳನ್ನು ಕಂಡವನಲ್ಲ. ಕೇಳಿದವನಲ್ಲ. ಪ್ರಾಣ ಇನ್ನೇನು ತುಟಿ ಜಾರುವ ಮುನ್ನ ನೀರು ಕುಡಿಸುತ್ತೇನೆ.

ವೃಷಭ : ಬಾಯಾರಿದ್ದೇನೆ. ಭವದ ಜಲವೆಂದು ಆಸೆ ನಿರಾಸೆಗಳನ್ನು ಕುಡಿದಿದ್ದೇನೆ. ಕುಡಿದಷ್ಟು ಮತ್ತೆ ಮತ್ತೆ ಬಾಯಾರಿದ್ದೇನೆ.

ಚಮ್ಮಾರ : ನಿಧಾನ ಕುಡಿಯಿರಿ... ಅಪ್ಪಾ ತಾವು ಯಾರು? ಯಾರು ನಿಮ್ಮನ್ನು ನೋಯಿಸಿದವರು?

ಧರ್ಮೇಂದ್ರ : (ನೀರಿನ ದೊನ್ನೆಯನ್ನು ಹಿಡಿದು ಬರುತ್ತಾನೆ) ನಾನು ಹೇಳುತ್ತೇನೆ ಅದನ್ನ. ಇನ್ನವನು ಮತ್ತೆ ಮೂರು ತಿಂಗಳು ಮಾತನಾಡುವುದಿಲ್ಲ.

ಚಮ್ಮಾರ : ಅರೆ ನೀನು ಯಾರು? ನೀನೇ ಏನು ಈ ಹಿರಿಯರನ್ನು ನೋಯಿಸಿದವನು?

ಧರ್ಮೇಂದ್ರ : ಇಲ್ಲ ನಾನು ಘಾತುಕನಲ್ಲ. ನಾನು ಧರ್ಮೇಂದ್ರ ವೃಷಭದೇವನ ಮಿತ್ರ. ಒಂದು ಕಾಲದಲ್ಲಿ ದೊರೆಯಾಗಿದ್ದೆ. ಈಗ ಈ ಭವಕ್ಕೆ ಹೊರೆಯಾಗಿದ್ದೇನೆ.

ಚಮ್ಮಾರ : ಅಂದ್ರೆ ಇವರು ನಮ್ಮನ್ನಾಳುವ ಭರತ ಚಕ್ರವರ್ತಿಗಳ ತೀರ್ಥರೂಪರೇನು?

ಧರ್ಮೇಂದ್ರ : ಹೌದು ಆ ಅದೃಷ್ಟದ ದೊರೆ ಈತನೇ?

ಚಮ್ಮಾರ : ಈ ಗಾಯಗಳನ್ನು ಹೊಲಿದು ನಾನು ಮುಲಾಮು ಹಚ್ಚಲೆ?

ಧರ್ಮೇಂದ್ರ : ಮೈ ಮೇಲಿನ ಗಾಯಗಳನ್ನು ಹೊಲಿದು ಉಪಕಾರ ಮಾಡಿ ಪುಣ್ಯ ಗಂಟುಕಟ್ಟಿಕೋ ಆದರೆ ಅವನು ಒಳಗಿಂದ ಚಿಂದಿಯಾಗಿದ್ದಾನೆ. ಒಳಗಾಯಕ್ಕೆ ಮದ್ದು ಹುಡುಕಿ ಹೋದ ಪರಿಣಾಮವಿದು. ರಕ್ತ ಒಸರದ ಗಾಯ ಬಲು ಆಳವಾಗಿರುತ್ತದೆ.

ಚಮ್ಮಾರ : ಏಕೆ ಏನಾಯಿತು? (ಹೊಲಿಯಲು ಆರಂಭಿಸುತ್ತಾನೆ)

ಧರ್ಮೇಂದ್ರ : ನೀಲಾಂಜನೆಯಿಂದ ಈತನನ್ನು ವ್ರತ ಕೆಡಿಸಿ ಮತ್ತೆ ಭವಿಯಾಗಿಸಲು ಇಂದ್ರ ಆಲೋಚಿಸಿದ್ದ. ಆದರೆ ನೀಲಾಂಜನೆಯು ಇವನ ನಿರಾಸಕ್ತಿ ಮುಂದೆ ಸೋತು ಹೋದಳು. ಇಂದ್ರ ಕೋಪದಿಂದ ಅವಳನ್ನು ಕಡಿದ.

ಚಮ್ಮಾರ : ಓಹೋ ನನಗೆ ಆ ಹೆಣ್ಣು ಕಾಣಿಸಿದಳು. ಅವಳ ಗಾಯವನ್ನು ಹೊಲಿದು ಬಂದಿದ್ದೇನೆ. ಅವಳೆ ನೀಲಾಂಜನೆ ಇರಬೇಕು?

ಧರ್ಮೇಂದ್ರ : ಈ ಗಾಯಗಳನ್ನು ಬೇಗ ಬೇಗ ಹೊಲಿಯಿರಿ. ನಾನು ಈತನನ್ನು ಯಾರ ಕಣ್ಣಿಗೂ ಬೀಳದಷ್ಟು ದೂರ ಕರೆದುಕೊಂಡು ಹೋಗಬೇಕು.

ಚಮ್ಮಾರ : ರಾಜ್ಯ ಅಧಿಕಾರ ಎಲ್ಲವನ್ನು ತೊರೆದಾಯಿತಲ್ಲ. ಮತ್ಯಾಕೆ ಈ ಅವಸರ ಈ ದುಗುಡ.

ಧರ್ಮೇಂದ್ರ : ಇವನಿಗೆ ತಿಳಿದಿದ್ದು ಇವನ ಮಕ್ಕಳಿಗೆ ತಿಳಿಯಲಿಲ್ಲ. ಇವನಿಗೆ ಕಂಡಿದ್ದು ಬಂಧುಗಳಿಗೆ ಕಾಣಲಿಲ್ಲ. ಇದು ಇವನ ವೇಷ ತನ್ನ ಮಕ್ಕಳಿಗೆ ಅನುಕೂಲ ಮಾಡಿಕೊಡಲು ಹೀಗೆ ಮಾಡುತ್ತಿದ್ದಾನೆ ಅಂತ ನಂಬಿಕೊಂಡಿದ್ದಾರೆ ಅವರು. ಅದಕ್ಕೆ ಈ ಎಲ್ಲಾ ಪರಿಷಹಗಳು.

ಚಮ್ಮಾರ : ನೊಂದ ನೋವನ್ನ ನೋಯದವರೆತ್ತ ಬಲ್ಲರು?

ಧರ್ಮೇಂದ್ರ : ಒಂದು ಕಡೆ ಭರತನಿಗೆ ಕೂಡ ಭಯ. ಎಲ್ಲಿ ಈ ಕಾಡು ಜೀವನ ಸಾಕಾಗಿ ತನ್ನ ತಂದೆ ರಾಜಧಾನಿಗೆ ಹಿಂತಿರಗುತ್ತಾರೋ ಅಂತ. ಇನ್ನು ನೀವೇ ನೋಡಿದಿರಲ್ಲ ಈ ಗಾಯಗಳನ್ನು ಈತನ ಭಾವಮೈದುನರ ಮಕ್ಕಳು ಮಾಡಿದ್ದು. ಅವರಿಗೆ ಈತ ರಾಜ್ಯದಲ್ಲಿ ಪಾಲು ನೀಡಲಿಲ್ಲವೆಂಬುದು ಆರೋಪ. ಪ್ರತಿದಿನವು ಇಲ್ಲಿಗೆ ಬಂದು ಆತನೊಂದಿಗೆ ಮಾತನಾಡಲು ಪ್ರಯತ್ನಿಸುವುದು. ಈತ ಮಾತನಾಡದಿದ್ದರೆ ಹಿಂಸಿಸಿ ನೆನಪು ಮಾಡಲು ಪ್ರಯತ್ನಿಸುವುದು.

ಚಮ್ಮಾರ : ಇಂದು ರಾಜಭಟರು ಬಂಧಿಸಿ ಕರೆದೊಯ್ದಿದ್ದು ?

ಧರ್ಮೇಂದ್ರ : ಹೌದು ಅವರನ್ನೇ..! ನಾನೇ ಭರತನಿಗೆ ನಮಿ ವಿನಮಿ ನಿನ್ನ ಅಧಿಕಾರದ ವಿರುದ್ಧ ನಿನ್ನ ತಂದೆಗೆ ದೂರು ನೀಡಲು ಬಂದಿದ್ದಾರೆ ಎಂಬ ಸುದ್ದಿ ಕಳುಹಿಸಿದೆ. ಮುಂದಿನದನ್ನು ನೀವೆ ನೋಡಿದರಲ್ಲ...

ಚಮ್ಮಾರ : ಗುರುತನ್ನು ಇಲ್ಲವಾಗಿಸುವುದು ಕೂಡ ಎಂತಹ ಕಷ್ಟದ ಕೆಲಸ.

ಧರ್ಮೇಂದ್ರ : ತೊರೆಯಲು ಪ್ರಯತ್ನಪಟ್ಟಾಗಲೇ ಸುತ್ತಿಕೊಂಡಿರುವ ಬಂಧನದ ಬಳ್ಳಿಗಳು ಗೋಚರವಾಗುವುದು. ಮರೆಯಲು ಪ್ರಯತ್ನಪಟ್ಟರೆ ಮರೆಯಲು ಸಾಧ್ಯವಾಗದಂತೆ ಲೋಕ ನಿಮ್ಮನ್ನು ಸುತ್ತುವರಿಯುತ್ತದೆ..

(ಅಷ್ಟರಲ್ಲಿ ಹಳ್ಳಿಯ ಜನರಂತೆ ಕಾಣುವ ಕೆಲವರು ಅಲ್ಲಿಗೆ ಬರುತ್ತಾರೆ. ಅವರೊಡನೆ ಒಬ್ಬ ವಯಸ್ಸಿನ ಹುಡುಗಿಯೂ ಇರುತ್ತಾಳೆ)

ಊರವನು : ಅಡ್ಡ ಬಿದ್ದೆ ಸ್ವಾಮಿ.

ಧರ್ಮೇಂದ್ರ : ಯಾರು ನೀವು? ಇಲ್ಲಿ ಏಕೆ ಬಂದಿರಿ?

ಊರವನು : ಸ್ವಾಮಿ ನಮ್ಮ ದೊಡ್ಡ ದೊರೆಗಳು ಕಾಡಿನಲ್ಲಿ ತಬಸ್ಸು ಮಾಡ್ತಾ ಇದ್ದಾರೆ ಅಂದ್ರು. ಅದಕ್ಕೆ ಕಾಣಿಕೆ ತಂದಿದ್ದೀವಿ ಸ್ವಾಮಿ.

ಇನ್ನೊಬ್ಬ : ಸ್ವಾಮಿ ಇದು ಕಾಡು ನೋಡಿ ಇಲ್ಲೇನು ಸಿಗೋದಿಲ್ಲ. ಅದಕ್ಕೆ ನಾನು ಹಲಸು ಮಾವು ಹಣ್ಣು ಹಂಪಲು ತಂದಿದ್ದೇನೆ.

ಮತ್ತೊಬ್ಬ : ಸ್ವಾಮಿ ನಾನು ಗಿಣ್ಣು ಒಳ್ಳೆ ಕಡ್ಡಿ ಜೇನು ತಂದಿದ್ದೇನೆ.

ಮಗದೊಬ್ಬ : ಸ್ವಾಮಿ ನಾನು ರಾಮರಸ ಮಾಡಿಕೊಂಡು ತಂದಿದ್ದೇನೆ.

ಧರ್ಮೇಂದ್ರ : ಇಲ್ಲ. ಆತ ಹಣ್ಣು ಹಂಪಲು ತಿನ್ನುವುದಿಲ್ಲ. ಮದ್ಯ ಮಧುಗಳನ್ನು ಮುಟ್ಟುವುದಿಲ್ಲ.

ಮತ್ತೊಬ್ಬ : ಸ್ವಾಮಿ ಉಪ್ಪುಕಾರ ತಿಂದ ದೇಹ ಹಣ್ಣು ಹಂಪಲು ಎಲ್ಲಾ ಬಿಡಬಹುದು. ಆದರೆ ಅದನ್ನ ಬಿಡಕ್ಕಾಗಲ್ಲ. ಅದಕ್ಕೆ...

ಇನ್ನೊಬ್ಬ : ಅದೇ ಸ್ವಾಮಿ ನೀವು ತಿಳಿದೋರಂಗೆ ಮಾತ್ನಾಡ್ತಿರ. ಹಿ ಹಿ ಹಿ...

ಊರುವನು : ಸ್ವಾಮಿ ಸುತ್ತು ಬಳಸಿ ಮಾತು ಬ್ಯಾಡ. ನಮ್ಮ ಹುಡುಗಿ ಮೈನೆರದು ವರ್ಷ ಆಗಿಲ್ಲ. ದೊರೆಗಳ ಸೇವೆ ಮಾಡ್ಕಂಡು ಅವರ ಜೊತೆನೆ ಇರಲಿ ಅಂತ ಕರ್ಕಂಡು ಬಂದಿದ್ದೀನಿ. ದೊರೆಗಳೆ ಮೀಸಲು ಮುರೀಬೇಕು.

ಮತ್ತೊಬ್ಬ : ಮದುವೆ ಅಂತ ಆದರೆ ಒಳ್ಳೇದು. ನಾವು ಕೂಡ ರಾಜರಿಗೆ ಬೀಗರಾಗ್ತೀವಿ... ಇಲ್ಲದೆ ಹೋದ್ರು ಪರವಾಯಿಲ್ಲ... ಸೇವಕಿಯಂಗೆ ಇರಲಿ ಮುಖ್ಯವಾಗಿ ನಮ್ಮ ದೊರೆಗಳು ಸುಖವಾಗಿರಬೇಕು ಅಷ್ಟೆ? ಏನಂತೀರಾ..

ಗುಂಪು : ಹೌದೌದು..

ಧರ್ಮೇಂದ್ರ : ಅಲ್ರಯ್ಯ ಬುದ್ದಿಗೇಡಿಗಳಾ ಪರಮಾರ್ಥ ಎಂದರೆ ಪಲ್ಲಂಗವಲ್ಲ. ಅವರು ನಡೆಯುತ್ತಿರುವ ದಾರಿ ನಿಮಗೆ ತಿಳಯಲ್ಲ. ನಿಮ್ಮ ಹುಡುಗಿಯನ್ನು ಸೂಕ್ತ ವರನಿಗೆ ವಿವಾಹ ಮಾಡಿಕೊಡಿ ಹೊರಡಿ.

ಗುಂಪು : ಅಲ್ಲ ಸ್ವಾಮಿ ಒಂದಿಡಿ ಬೇಯಿಸಾಕಾದ್ರೂ ಒಂದೆಣ್ಣಾಳು ಅಂತ ಇರಲಿ.

ಗುಂಪು : ಕ್ವಾಪ ಮಾಡ್ಕಬೇಡಿ ಸ್ವಾಮಿ. ದೊರೆಗಳಿಗೆ ಬೇಡ ಹೋಗಲಿ ನೀವಾದ್ರು ಕೂಡಿಕೆ ಮಾಡ್ಕಳಿ.

ಧರ್ಮೇಂದ್ರ : ನೀವು ಈಗ ಹೊರಡದೇ ಹೋದ್ರೆ ಭರತ ಚಕ್ರವರ್ತಿಗೆ ಹೇಳಿ ನಿಮ್ಮನ್ನು ಸೆರೆಮನೆಗೆ ನೂಕಿಸ್ತೇನೆ. ಹೊರಡಿ.

ಊರಿನವರು : ಸ್ವಾಮಿ ನಾವು ದೊಡ್ಡವರನ್ನ ಚನ್ನಾಗಿ ನೋಡಿಕೊಂಡೆವು ಅಂತ ಒಂದು ಮಾತು ತಾವು ಭರತ ಚಕ್ರವರ್ತಿಗಳಿಗೆ ಹೇಳಬೇಕಲ್ಲ.

ಧರ್ಮೇಂದ್ರ : ಹಾಗೇಯೇ ಆಗಲಿ ಹೊರಡಿ. (ವೃಷಭ ನಾಥರಿಗೆ ಜಯವಾಗಲಿ... ಭರತ ಚರ್ಕವರ್ತಿಗಳಿಗೆ ಜಯವಾಗಲಿ.)

(ಅಷ್ಟರಲ್ಲಿ ಅರಿಷ್ಠನೇಮಿ ಪ್ರವೇಶ ಅವರನ್ನು ಕಂಡು) ಏನ್ರಪ್ಪ ನೀವು ಏನು ತಂದಿದ್ದೀರಿ ಕಾಣಿಕೆ. ನಿಮಗೂ ಬೇಕಾ ಪೂಜೆ...

ಅರಿಷ್ಠನೇಮಿ : ಸ್ವಾಮಿ ತಾವು ತಪ್ಪು ತಿಳಿದಂತಿದೆ. ನಾವು ಒಬ್ಬ ಚಮ್ಮಾರನನ್ನು ಹುಡುಕಿ ಬಂದೆವು.

ಯುವಕ : ಗಾಯಗಳನ್ನು ಹೊಲಿಯುವ ಚಮ್ಮಾರ.

(ಆದೀದೇವನನ್ನು ನೋಡಿ) ಗುರುಗಳೇ ಈ ಹೊಲಿಗೆಯನ್ನು ನೋಡಿ.

ಅರಿಷ್ಠನೇಮಿ : ಎಲ್ಲಿ ಆ ಮಹಾನುಭಾವ? ದಯಮಾಡಿ ಹೇಳಿ ನಮ್ಮ ಕಾಲ ಮೀರುತ್ತಿದೆ.

ಧರ್ಮೇಂದ್ರ : ಅರೆ ಆತ ಇಲ್ಲಿಯೇ ಗಾಯ ಹೊಲಿಯುತ್ತಾ ಇದ್ದ. ಎಲ್ಲಿ ಹೋದ.

ಅರಿಷ್ಟನೇಮಿ : ಇನ್ನೇನು ಸಿಕ್ಕಿತು ಅನ್ನುವಾಗಲೇ ನಮ್ಮ ಅದೃಷ್ಟ ಕೈ ತಪ್ಪುತ್ತಿದೆ.

(ಇದ್ದಕ್ಕಿದ್ದಂತೆ ಆದಿದೇವನಲ್ಲಿ ಚಲನೆ ಕಾಣಿಸಿಕೊಂಡು ಕೈಯಿಂದ ದಿಕ್ಕು ತೋರಿಸುತ್ತಾನೆ)

ಧರ್ಮೇಂದ್ರ : ನೀವು ನಿಜಕ್ಕೂ ಅದೃಷ್ಟವಂತರೇ ಸರಿ ಕಳೆದ ಆರು ತಿಂಗಳಿಂದ ನಿಶ್ಚಲವಾಗಿದ್ದ ವೃಷಭನನ್ನು ನೀವು ಕದಲಿಸಿದ್ದೀರಿ. ಇದು ಪವಾಡ.

ಅರಿಷ್ಟನೇಮಿ : ಈ ದಿಕ್ಕಿನಲ್ಲಿ ನಡೆಯಿರಿ ಬೇಗ. ಆತ ಹೆಚ್ಚು ದೂರ ಹೋಗಿರಲಾರ. (ಓಡುತ್ತಾರೆ)

•

ದೃಶ್ಯ – ೬

[ಒಂದು ಬೆಟ್ಟದ ತುದಿಯಲ್ಲಿ ಕಲ್ಲಿನ ಮೇಲೆ ಶಾಸನವಿದೆ. ಅದನ್ನು ಒಬ್ಬ ವ್ಯಕ್ತಿ ತನ್ನ ಕೈಯಿಂದ ಅಳಿಸುತ್ತಿದ್ದಾನೆ. ಆತನ ಕೈಯ ಮಾಂಸ ಕಂಡಗಳೆಲ್ಲ ಉಜ್ಜಿ ಉಜ್ಜಿ ಸವೆದು ಹೋಗಿವೆ. ಆದರೂ ಆತ ರೋಷದಿಂದ ಆ ಶಾಸನವನ್ನು ಒರೆಸುತ್ತಲೇ ಇದ್ದಾನೆ.]

ಭರತ : ಈ ಕಲ್ಲಿನಾಕ್ಷರಗಳು ನನ್ನ ಹಣೆಯ ಬರಹದ ಅಕ್ಷರಗಳ ಹಾಗೆ ಅಳಿಸಿದರೆ ಮತ್ತೆ ಮತ್ತೆ ಮೂಡುತ್ತಿವೆ. ಭುವನ ಸಾಮ್ರಾಟನಾದ ನನ್ನಲ್ಲಿ ಈ ಯಕಶ್ಚಿತ್ ಅಕ್ಷರಗಳಿಗೆ ಹಗೆತನವೇ? ಯುದ್ಧದಲ್ಲಿ ನನ್ನ ಎದುರು ಸೋತು ಹೋದ ರಾಜರಂತೆ ತಲೆಬಾಗಿಸಬೇಕಾದ ಈ ಅಕ್ಷರಗಳು ನನ್ನನ್ನು ಆ ಬಾಹುಬುಬಲಿಯಂತೆ ದಿಕ್ಕರಿಸುತ್ತಿವೆ. ಉಳಿ ಬೇಕಿಲ್ಲ. ನನ್ನ ಕೈ ಎಲುಬಿಂದಲಾದರೂ ಅಳಿಸುತ್ತೇನೆ. ಬಿಡುವುದಿಲ್ಲ. ನಾನು ಸೋಲುವುದನ್ನು ಯೋಚಿಸುವುದಿಲ್ಲ. ಸೋಲಿನ ಯೋಚನೆ ಒಮ್ಮೆ ಬಂದರಾಯ್ತು ಗೆಲ್ಲುವುದಕ್ಕೆ ಸಾಧ್ಯವೇ ಇಲ್ಲ. ನಾನು ಗೆಲ್ಲಬೇಕು. (ಇನ್ನೂ ಗಟ್ಟಿಯಾಗಿ ಒರಸಿ ಅಲ್ಲಿಯೇ ಮೂರ್ಚೆ ಹೋಗುತ್ತಾನೆ)

(ಅಷ್ಟರಲ್ಲಿ ಅಲ್ಲಿಗೆ ಅರಿಷ್ಟನೇಮಿ ಮತ್ತು ಅತನ ಶಿಷ್ಯರನ್ನು ಸೈನಿಕರು ಎಳೆದು ತರುತ್ತಾರೆ)

ಅರಿಷ್ಟನೇಮಿ : ನೀವು ಯಾರು? ನನ್ನ ಯಾಕೆ ಬಂದಿಸಿದ್ದೀರಿ? ನಾನೇನು ತಪ್ಪು ಮಾಡಿದೆ.

ಕೊತ್ವಾಲ : ನಾವು ನಮ್ಮ ದೊರೆಯನ್ನು ಉಳಿಸಿಕೊಳ್ಳಬೇಕು. ಅದಕ್ಕೆ ನಿಮ್ಮನ್ನು ಬಂಧಿಸಿದ್ದೇವೆ.

ಯುವಕರು : ನಾವು ನಮ್ಮ ದೊರೆಯನ್ನು ಉಳಿಸಿಕೊಳ್ಳಬೇಕು. ನಮ್ಮನ್ನು ಬಿಟ್ಟುಬಿಡಿ.

ಅರಿಷ್ಟನೇಮಿ : ಯಾರು ನಿಮ್ಮ ದೊರೆ? ಆತನ ಉಳಿವಿಗೂ ನನ್ನ ಬಂಧನಕ್ಕೂ ಏನು ಸಂಬಂಧ? ಇಷ್ಟಕ್ಕೂ ನಾನು...

ಕೊತ್ವಾಲ : ಶಿಲ್ಪಿ ಅಲ್ಲವೆಂದು ಮಾತ್ರ ಹೇಳಬೇಡ. ಆ ಪದವನ್ನು ಕೇಳಿಕೇಳಿ ನನ್ನ ಕಿವಿ ತೂತು ಬಿದ್ದುಹೋಗಿದೆ. ಶಿಲ್ಪಿಗಳಿಗಾಗಿ ನಾವು ಊರು ಪಟ್ಟಣ ನಗರಗಳನ್ನು ಶೋಧಿಸುತ್ತಿದ್ದೇವೆ.

ಅರಿಷ್ಠನೇಮಿ : ಯಾಕೆ ನಿಮ್ಮ ರಾಜ್ಯದಲ್ಲಿ ಶಿಲ್ಪಿಗಳು ಇಲ್ಲವೆ?

ಕೊತ್ವಾಲ : ಇದ್ದರು. ಈಗಿಲ್ಲ. ಆರಂಭದಲ್ಲಿ ರಾಜನ ಕಣ್ಣಿಗೆ ಬಿದ್ದರೆ ಸಾಕು ಎಂದು ಹಗಲಿರುಳು ಅರಮನೆಯ ಬಾಗಿಲು ಕಾಯುತ್ತಿದ್ದರು. ಈಗ ನೋಡಿ ಎಲ್ಲರು ದೊರೆಗಳ ಕಣ್ಣಿಗೆ ಕಾಣದಂತೆ ದೇಶಾಂತರ ಹೋಗಿದ್ದಾರೆ.

ಯುವಕ : ಯಾಕೆ ದೊರೆ ಶಿಲ್ಪಿಗಳಿಗೆ ದೇಶ ಬಹಿಷ್ಕಾರವೇನಾದರೂ ಹಾಕಿದ್ದಾರೆಯೇ?

ಕೊತ್ವಾಲ : ಈ ಕಲ್ಲಿನ ಶಾಸನವನ್ನು ಅಳಿಸಲಾಗದೆ ಪ್ರಾಣಭೀತಿಯಿಂದ ಓಡಿಹೋಗಿದ್ದಾರೆ. ಅಳಿಸದವರ ಎಷ್ಟೋ ಶಿಲ್ಪಿಗಳ ಕೈಗಳನ್ನು ಕತ್ತರಿಸಿ ಹಾಕಿಸಿದ್ದಾರೆ.

ಯುವಕರು : ಅದೆಷ್ಟರ ಕೆಲಸ. ಇಂಥ ಯಕಶ್ಚಿತ್ ಕೆಲಸಕ್ಕೆ ಹೆದರಿದ್ದಾರೆ ಎಂದರೆ ಅವರ‍್ಯಾರೋ ಅಡಕಸುಬಿಗಳೇ ಇರಬೇಕು.

ಕೊತ್ವಾಲ : ಸ್ವಾಮಿ ಇದು ವಿಜಯಾದ್ರಿ ಪರ್ವತ. ಇವರು ನಮ್ಮ ದೊರೆ ಭರತ ಚಕ್ರವರ್ತಿಗಳು.

ಅರಿಷ್ಠನೇಮಿ : ಏನು ಈ ಭೂಮಂಡಲವನ್ನು ತನ್ನ ಬಾಹುಬಲದಿಂದ ಗೆದ್ದು ಭುವನ ಚಕ್ರಾಧೀಶನೆಂದು ಬಿರುದಾಂಕಿತನಾದ ಭರತ ಚಕ್ರವರ್ತಿಯೇ ಈ ಗೆದ್ದಲಿಡಿದ ಮರದಂತೆ ಕಾಣುವ ಈ ಮನುಷ್ಯ.

ಯುವಕ : ಆತನ ಕಣ್ಣುಗಳು ನಿದ್ರೆಗಾಣದೆ ಎಷ್ಟೋ ಯುಗಗಳು ಸರಿದು ಹೋಗಿರುವಂತಿದೆ. ಆತ ತಪಸ್ಸಿಗೆ ನಿಂತಿರುವ ಋಷಿಯ ಹಾಗೆ ಕಾಣುತ್ತಿರುವನಲ್ಲ.

ಕೊತ್ವಾಲ : ದಯಮಾಡಿ ಅವರಿಗೆ ವಿಶ್ರಾಂತಿಯ ಅವಶ್ಯಕತೆ ಇದೆ. ಆ ಶಿಲೆಯ ಮೇಲಿನ ಅಕ್ಷರಗಳನ್ನು ನಾವು ಅಳಿಸಿಕೊಡುವೆವೆಂದು ಸುಳ್ಳಾದರೂ ಹೇಳಿ ಪರವಾಯಿಲ್ಲ. ಬದುಕಿಸುವ ಶಕ್ತಿ ಸುಳ್ಳಿಗಿರುವಂತೆ ಸತ್ಯಕ್ಕಿಲ್ಲ. ನೀವು ಬೇಡಿದರೆ ಅರ್ಧರಾಜ್ಯವನ್ನಾದರೂ ನೀಡುತ್ತೇವೆ.

ಅರಿಷ್ಟನೇಮಿ : ನಾವು ಕೂಡ ನಮ್ಮ ದೊರೆ ಚಾವುಂಡರಾಯನನ್ನು ಉಳಿಸಿಕೊಳ್ಳಲು ಕಾಲದ ಬೆನ್ನು ಹತ್ತಿದ್ದೇವೆ. ಆದರೆ...

ಕೊತ್ವಾಲ : ಆ ಬಂಡೆಯ ಮೇಲಿನ ಬರಹವನ್ನು ಅಳಿಸುವ ಶಿಲ್ಪಿ ಸಿಕ್ಕುವವರೆಗೂ ಅವರನ್ನು ಅಲ್ಲಿಂದ ಕದಲಿಸುವುದು ಸಾಧ್ಯವಿಲ್ಲ. ಆದ್ದರಿಂದಲೇ ನಿನ್ನನ್ನು ಬೇಡುತ್ತಿರುವುದು. ದಯಮಾಡಿ ನಮ್ಮ ದೊರೆಯನ್ನು ಉಳಿಸುಕೊಡಿ.

ಅರಿಷ್ಟನೇಮಿ : ಆಯಿತು ನಮ್ಮ ಕೈಲಾಗುವುದೇ ನಾವು ನೋಡುತ್ತೇವೆ?

ಕೊತ್ವಾಲ : ಎಂಥ ಶುಭ ಶಕುನವನ್ನು ನುಡಿದಿರಿ. ರಾಜಾಧಿರಾಜ ರಾಜ ಮಾರ್ತಂಡ. ಭುವನ ದಿಗ್ವಿಜಯ ಬಹುಪಾರಾಕ್... ಬಹುಪರಾಕ್...

ದೊರೆ : ಮಂತ್ರಿಗಳೇ ಶಿಲ್ಪಿಗಳು ಸಿಕ್ಕರೇನು? ಕರೆತನ್ನಿ ಈ ಅಕ್ಷರಗಳನ್ನು ಮೊದಲು ಅಳಿಸಿ.

ಅರಿಷ್ಟನೇಮಿ : ಆದರೆ ಇದನ್ನು ಅಳಿಸಿದ ಮೇಲೆ ನೀವು ನಮ್ಮನ್ನು ಬಂಧನದಿಂದ ಬಿಡುಗಡೆಗೊಳಿಸಬೇಕು. ಈ ಶರತ್ತಿಗೆ ಒಪ್ಪಿದರೆ ಮಾತ್ರ

ದೊರೆ : ಆಯಿತು. ನೀವು ಅಳಿಸುವುದು ಅಕ್ಷರವನ್ನಲ್ಲ. ನನ್ನನ್ನು ಕಟ್ಟಿ ಹಾಕಿರುವ ಸರಪಳಿಯ ಕೊಂಡಿಗಳನ್ನ ಹೋಗಿ ಬೇಗ ಕತ್ತರಿಸಿ. ಅಲ್ಲಲ್ಲ ಅಳಿಸಿ.

ಕೊತ್ವಾಲ : ಮಹಾರಾಜ ತಾವು ಈಗ ವಿಶ್ರಮಿಸಿ. ಮಹಾ ನಿಪುಣರಾದ ಈ ಶಿಲ್ಪಿಗಳು ಖಂಡಿತವಾಗಿಯೂ ಅಕ್ಷರಗಳನ್ನು ಅಳಿಸುವರು.

ಯುವಕರು : (ಆ ಶಾಸನದ ಬಳಿ ಬರುತ್ತಾರೆ)

ಸ್ವಸ್ತಿ ಸಮಸ್ತ ನೃಪೇಶ್ವರ ಮಸ್ತಕ ವಿನ್ಯಸ್ತ ಶಾಸನಂ, ಸಕಲ ಜಗದ್
ವಿಸ್ತಾರಿತ ಯಶನ್ ಅನ್ವಯ ವಿಸ್ತಾರಕನ್ ಆದಿದೇವನ ಅಗ್ರ ತನೂಜಂ
ಭುವನ ವಿಶೇಷಕನಿಕ್ಷ್ವಾಕು ವಂಶಗಗನೇಂದು ಚಕ್ರರತ್ನಾಧೀಶಂ
ನವನಿಧಿವಲ್ಲಭನಾನತ ದಿವಿಜಗಣಂ ನೆಗಳ್ದ ನಾಭಿರಾಜನ ಮರ್ಮಂ.
ಆತಂ ಭರತೇಶ್ವರನಿಂತು ಈ ತೆರದಿ ನೆಗಳ್ದ ತನ್ನ ಕೀರ್ತಿಯನ್ ಈ ವಿಖ್ಯಾತ
ವೃಷಭಾದ್ರಿಯೊಳ್ ಸುರಗೀತಯಶಂ ನಿರಿಸಿದಂ ನೆಲಂ ನಿಲ್ವಿ ಎನ್ನಗಂ॥

(ಹಾಡಿನಲ್ಲಿ ದೃಶ್ಯ ಬದಲಾಗುವುದು)

(ಭರತ ಸಿಂಹಾಸನದ ಮೇಲೆ ಆಸೀನನಾಗಿದ್ದಾನೆ. ಆಗ ಅಲ್ಲಿಗೆ)

ಭರತ : ಮಹಾಮಂತ್ರಿಗಳೆ ನೆನ್ನೆ ರಾತ್ರಿಯ ಮುಂಜಾವಿನಲ್ಲಿ ಈ ಭುವಿಯಲ್ಲಿ ದಕ್ಷಿಣ–ಉತ್ತರವಾಗಿ ಒಂದು ರಕ್ತದ ನದಿ ಹರಿಯುತ್ತಿತ್ತು. ಪೂರ್ವ ಪಶ್ಚಿಮವಾಗಿ ಆಕಾಶದಿಂದ ಒಂದು ಉಯ್ಯಾಲೆ ಆಡುವಂತೆ ಅದರಲ್ಲಿ ನಾನು ಕುಳಿತು ಜೀಕುವಂತೆ ಸ್ವಪ್ನವಾಯಿತು.

ಮಂತ್ರಿ : ಮುಂಜಾವಿನ ಸ್ವಪ್ನಗಳು ನಿಜವಾಗುವುದಂತೆ ಪ್ರಭು. ತಾವು ಈ ಭೂಮಂಡಲದ ಚಕ್ರವರ್ತಿಗಳಾಗುವುದನ್ನು ದೇವತೆಗಳು ಬಯಸಿದಂತಿದೆ ಪ್ರಭು.

ಭಟ : (ಪ್ರವೇಶಿಸಿ) ಪ್ರಭು ಕ್ಷಮಿಸಬೇಕು. ಅವಸರದ ಕಾರ್ಯವಂತೆ ದಂಡನಾಯಕರು ದರ್ಶನವನ್ನು ಬೇಡುತ್ತಿದ್ದಾರೆ.

ಭರತ : ಏನು ಅವಸರದ ಕಾರ್ಯವೇ... ಬರಹೇಳಿ.

ಭಟ : ಅಪ್ಪಣೆ ಪ್ರಭು.

ದಂಡನಾಯಕ: ಮಹಾಪ್ರಭುಗಳಿಗೆ ಜಯವಾಗಲಿ.

ಭರತ : ಬನ್ನಿ ದಂಡನಾಯಕರೇ. ನಿಮ್ಮ ಮುಖದಲ್ಲಿ ಕಾಣುತ್ತಿರುವುದು ಸಂತೋಷವೆಂದು ಭಾವಿಸಿದ್ದೇನೆ ಹೇಳಿ.

ದಂಡನಾಯಕ: ಮಹಾಪ್ರಭು ಆಳುತ್ತಿರುವವರು ದೇವರಂತೆ ಎಲ್ಲವನ್ನು ಬಲ್ಲವರೇ ಆಗಿರುವಾಗ ಸಂತೋಷವಲ್ಲದೆ ದುಗುಡಕ್ಕೆ ನಮ್ಮ ನೆಲದಲ್ಲಿ ತಾವೆಲ್ಲಿದೆ ಪ್ರಭು.

ಭರತ : ಅವಸರ ಕಾರ್ಯವೆಂದಿರಂತೆ. ಏನಾದರೂ ರಾಜ್ಯಕ್ಕೆ ಗಂಡಾಂತರದ ವರದಿಗಳಿವೆಯೇ? ಅಥವಾ ಒಳಗೆ ಎನಾದರೂ ಪ್ರಭುತ್ವದ ವಿರುದ್ಧ ಹುನ್ನಾರ ಸುದ್ದಿ ಕಿವಿಗೆ ಬಿತ್ತೇನು?

ದಂಡನಾಯಕ: ಇಲ್ಲ ಪ್ರಭು ನಮ್ಮ ಆಯುಧಾಗಾರದಲ್ಲಿ ಇಂದು ಒಂದು ವಿಚಿತ್ರ ಸಂಭವಿಸಿದೆ.

ಮಂತ್ರಿ : ವಿಚಿತ್ರವೆಂದರೆ ಏನು ಅರ್ಥ ?

ದಂಡನಾಯಕ: ಆಯುಧಾಗಾರದ ಕಾವಲುಗಾರ ನೆನ್ನೆ ಮುಂಜಾನೆ ಕಾವಲು ಕಾಯ್ತುತ್ತಿರುವಾಗ ಆಕಾಶದಿಂದ ಒಂದು ತೇಜೋಪುಂಜವಾದ ಬೆಳಕು ನಮ್ಮ ಆಯುಧಾಗಾರವನ್ನು ಪ್ರವೇಶಿಸಿತಂತೆ ಪ್ರಭು. ಆ ಬೆಳಕು ಎಷ್ಟು ಪ್ರಕರವಾಗಿತ್ತೆಂದರೆ ಬೆಳಗಿನ ಸೂರ್ಯೋದಯವು ಕೂಡ ಅವರ ಕಣ್ಣಿಗೆ ಕತ್ತಲಂತೆ ಭಾಸವಾಯಿತು ಪ್ರಭು.

ಭರತ : ನಂತರ ಏನಾಯಿತು? ನನಗೂ ಜಾವದಲ್ಲಿ ಆಗಲೆ ಸ್ವಪ್ನವಾಗಿದ್ದು ಮಂತ್ರಿಗಳೆ. ಹೇಳಿ ಮುಂದೇನಾಯಿತು? ನನಗೆ ಕುತೂಹಲವನ್ನು ಹತ್ತಿಕ್ಕಲಾಗುತ್ತಿಲ್ಲ.

ದಂಡನಾಯಕ: ನನಗೆ ಸುದ್ದಿ ತಿಳಿದು ಧಾವಿಸಿ ನೋಡಿದರೆ ಪ್ರಭು ಸೂರ್ಯಕೋಟಿಪ್ರಭೆಯಿಂದ ಬೆಳಗುತ್ತಿರುವ ಚಕ್ರರತ್ನವನ್ನು ಕಂಡೆ ಪ್ರಭು. ಹಿಂದೆ ಚರಿತ್ರೆಯಲ್ಲಿ ಇಂತಹ ಪವಾಡ ನಡೆದುದು ಇಲ್ಲ.

ಮಂತ್ರಿ : ಪ್ರಭು ಕೇವಲ ಇಂದ್ರನ ಆಯುಧಾಗಾರದಲ್ಲಿ ಮಾತ್ರ ಕಾಣಿಸುವ ಚಕ್ರರತ್ನ ತಮ್ಮ ಆಯುಧಾಗಾರದಲ್ಲಿ ಕಾಣಿಸಿದೆಯೆಂದರೆ ಇದು ತಾವು ಈ ಭುವನಕ್ಕೆ ಚಕ್ರಾಧೀಶರಾಗುವುದರಲ್ಲಿ ಎಳ್ಳಷ್ಟು ಅನುಮಾನವಿಲ್ಲ.

ಭರತ : ಎಲ್ಲಿ ಆ ನನ್ನ ಭಾಗ್ಯದೇವತೆ.

ದಂಡನಾಯಕ: ಭಟರೆ ಚಕ್ರರತ್ನವನ್ನು ಸಭೆಗೆ ಕರೆ ತನ್ನಿ.

(ಇಬ್ಬರು ಯೋಧರು ಹಗ್ಗಗಳಿಂದ ಹಿಡಿದುಕೊಂಡಿರುವ ವ್ಯಕ್ತಿಯ ಪ್ರವೇಶವಾಗುವುದು. ಆತನ ಬೆನ್ನಿಗೆ ಚಕ್ರವೊಂದನ್ನು ಕಟ್ಟಲಾಗಿದೆ. ಸಭಾಭವನ ದಿಗ್ಭ್ರಮೆಗೊಂಡಿತು)

ಇಂದ್ರಚಾಪವೋ ಉಲ್ಕಾಪಾತವೋ
ಕೋಲಾಹಲವೋ ಹಾಲಾಹಲವೋ
ಕಾಲನಂಟನೋ ಯಮನ ಬಂಟನೋ
ಶಿವನ ನೆತ್ತಿಯ ಮೂರನೆ ಕಣ್ಣೋ
ಪ್ರಳಯ ರೂಪವೋ ಪ್ರಾಣಕಂಟಕವೋ
ಕಂಪನವಾಯಿತು ಬಾನೊಳಗೆ
ಭೂಕಂಪನವಾಯಿತು ಧರೆಯೊಳಗೆ
ನದಿ ಬಾವಿ ಸರೋವರ ನೀರೆಲ್ಲಾ
ನೆತ್ತರ ಬಣ್ಣಕೆ ತಿರುಗಿದವು
ಹೂಮಿಡಿ ಕಾಯಿ ಪಿಂದೆಗಳೆಲ್ಲಾ
ಸುಂಟರಗಾಳಿಗೆ ಉದರಿದವೋ
ಉದಯವಾಯಿತು ಚಕ್ರರತ್ನವು
ಉದಯವಾಯಿತು ಕಲಿಯುಗವು॥

ಚಕ್ರರತ್ನ : ಎಲೈ ದೊರೆಯೇ ನಿಮಗೆ ಶುಭವಾಗಲಿ. ಕಾಲದೇವತೆಯ ಅಣತಿಯಂತೆ ನಾನು ನಮ್ಮ ಪಕ್ಷವನ್ನು ಸೇರಿದ್ದೇನೆ. ನೀವಿನ್ನು ಈ

ಜಂಭೂದ್ವೀಪದ ಚಕ್ರವರ್ತಿಗಳು. ದೇವ-ಮಾನವ-ಯಕ್ಷ-ಕಿಂಪುರುಷಾಧಿ-ರಾಕ್ಷಸ ಯಾರಾದರೂ ಸರಿ ನಿಮ್ಮ ದೊರೆತನವನ್ನು ಧಿಕ್ಕರಿಸುವವರನ್ನು ನಿರ್ನಾಮಗೊಳಿಸಿ ನಿಮ್ಮ ವಕ್ಷದಲ್ಲಿ ರಾಜಲಕ್ಷ್ಮಿಯು ನೆಲೆಗೊಳಿಸುವಂತೆ ಮಾಡುವುದೇ ನನ್ನ ಕರ್ತವ್ಯವಾಗಿದೆ. ನನ್ನ ಪಥವನ್ನು ಅನುಕರಸಿ ಸೈನ್ಯ ನಡೆಯಲಿ. ಜಯಘೋಷ ನಿಮ್ಮ ಕರ್ಣದಲಿ ಮೊಳಗುವಂತೆ ನಾನು ಮಾಡುತ್ತೇನೆ.

ಮಂತ್ರಿ : ಪ್ರಭು ಲೋಕಶಾಂತಿಯನ್ನು ಸಾರಿ ಹೊರಟವನ ಉತ್ತರಾಧಿಕಾರಿ ಲೋಕಕಂಟವಾದ ಯುದ್ಧಕ್ಕೆ ವಾರಸುಧಾರನಾಗುವುದು ತರವೇ? ಈ ಹಿಂಸೆಯಿಂದ ಈ ಭೂಮಿಗೆ ಸುಖವಿಲ್ಲ. ಈ ವಿನಾಶಕಾರಿ ಚಕ್ರರತ್ನಕ್ಕೆ ನೀವು ಆಸ್ಪದ ಕೊಡಬೇಡಿ. ನನ್ನ ಮಾತನ್ನು ಕೇಳಿ.

ಚಕ್ರರತ್ನ : ಸಾಮ್ರಾಜ್ಯಗಳು ಮತ್ತಷ್ಟು ವಿಸ್ತಾರವಾಗಬೇಕಾದರೆ ಸಾಮ್ರಾಜ್ಯದ ಖಜಾನೆಗಳು ತುಂಬಬೇಕೆಂದರೆ ಯುದ್ಧಗಳು ಬೇಕು. ಬೇಟೆಯಷ್ಟೇ ಅಲ್ಲ ಬೇಟಕ್ಕೂ ಯುದ್ಧ ಬೇಕೇಬೇಕು. ಈ ಮುದಿ ಗೊಡ್ಡುಗಳಿಗೆ ಏನು ಗೊತ್ತು?

ಮಂತ್ರಿ : ಪ್ರಭು ನನ್ನ ಮಾತು ಕೇಳಿ ಯುದ್ಧ ಹಿಂಸೆಗಳಿಂದ ನಾಡು ಸುಖಿಯಾಗದು. ನನ್ನ ಮಾತು ಕೇಳಿ.

ಭರತ : ಮಹಾಮಂತ್ರಿಗಳೇ, ದಂಡನಾಯಕರೇ ಈ ಹೊತ್ತಿನಿಂದ ಚಕ್ರರತ್ನವನ್ನು ನಮ್ಮ ರಾಜ್ಯದ ವಿಶೇಷಾಧಿಕಾರಿಯೆಂದು ಘೋಷಿಸಿದ್ದೇನೆ. ರಾಜ್ಯದ ಸರ್ವ ಆಡಳಿತಗಳು ಚಕ್ರರತ್ನದ ಸೂಚನೆಯಂತೆ ನಡೆಯಿರಿ.

ಮಂತ್ರಿ : ಪ್ರಭು ಯುವರಾಜ ಬಾಹುಬಲಿಯವರನ್ನೂ ಒಂದು ಮಾತು ಕೇಳಿದ್ದರೆ...

ಚಕ್ರರತ್ನ : ಭರತ ಚಕ್ರಿಗಳಿಗೆ ಒಳಿತು ಕೋರುವುದಾದರೆ ಯಾರನ್ನೂ ಕೇಳುವುದು ಅಗತ್ಯವಿಲ್ಲ. ಭೂಮಂಡಲದ ಮೇಲೆ ಯುದ್ಧವನ್ನು ಸಾರಿ. ಇದು ರಾಜಾಜ್ಞೆ.

ಭರತ : ಚಕ್ರರತ್ನ ಹೇಳಿದಂತೆ ಮಾಡಿ ಯುದ್ಧ ಸಿದ್ಧತೆಗಳು ನಡೆಯಲಿ.

(ಯುದ್ಧದ ಸಿದ್ಧತೆಯ ಹಾಡು- ಹಾಡಿನಲ್ಲಿ ದಕ್ಷಿಣ-ಉತ್ತರ-ಪೂರ್ವ-ಪಶ್ಚಿಮ-ಭೂಪ್ರದೇಶಗಳ ದೊರೆಗಳನ್ನು ಮಣಿಸಿದ ವಿವರಗಳು ಬರುತ್ತವೆ-ಸೈನ್ಯದ ಮೆರವಣಿಗೆ ನಡೆಯುತ್ತದೆ.)

ಮೊಳಗಿತು ಮೊಳಗಿತು ರಣಕಹಳೆ
ಗುಡುಗಿತು ಗುಡುಗಿತು ರಣಭೇರಿ
ಕೆನೆಯಿತು ಕುದುರೆ ಘೀಳಿಟ್ಟವು ಆನೆ
ನುಗ್ಗಿದರು ಭಟ ಕಾಲಾಳು
ತುಂಬಿತು ತುಂಬಿತು ನಭೋ ಮಂಡಲ
ರಥ ಚಕ್ರದಿಂದೆದ್ದ ಧೂಳು॥
ಪಶ್ಚಿಮ ಸೋತು ಕೈ ವಶವಾಯಿತು
ಪೂರ್ವವು ಶಿರಬಾಗಿ ಮಣಿಯಿತು
ಉತ್ತರವಿಲ್ಲದೆ ಉತ್ತರ ದಣಿಯಿತು
ಭರತನ ಪಾದದಿ ದಕ್ಷಿಣ ಒರಗಿತು
ಷಟ್ ಖಂಡ ಮಂಡಲ ಭೂ ಖಂಡಗಳೆಲ್ಲಾ
ಶರಣೆಂದವು ಭರತ ಚಕ್ರಿಯಲಿ
ಚಕ್ರರತ್ನದ ತೇಜದ ಮುಂದೆ
ಸೂರ್ಯಕಿರಣಗಳೇ ಕುಂದಿದವು.
ನೆತ್ತರ ನದಿಗಳು ಕೂಡಲು ಕಡಲು
ಉಪ್ಪೋ ಉಪ್ಪು ಸಾಗರ ಜಲವು॥

ದೃಶ್ಯ – ೭

[ದಾರಿ– ಒಬ್ಬ ಆಗುಂತಕ ಓಡಿ ಬರುತ್ತಿದ್ದಾನೆ. ಹಿಂದೆ ಇಬ್ಬರು ಸೈನಿಕರು ಅವನನ್ನು ಅಟ್ಟಿಸಿ ಕೊಂಡು ಬರುತ್ತಿದ್ದಾರೆ. ಆತ ಬಂದವನೆ ಚಮ್ಮಾರನಿಗೆ ಡಿಕ್ಕಿ ಹೊಡೆಯುತ್ತಾನೆ.]

ಚಮ್ಮಾರ : ನಿನಗೇನು ಕಣ್ಣು ಕಾಣುವುದಿಲ್ಲವೋ ಹೇಗೆ?

ಆಗುಂತಕ : ಸ್ವಾಮಿ ತಾವು ದಯಾಳು ಆಗಿದ್ದರೆ ನನ್ನನ್ನು ರಕ್ಷಿಸಿ. ನನ್ನ ಪ್ರಾಣ ಕಾಪಾಡಿ. ನನ್ನನ್ನು ಉಳಿಸಿ. (ಅಂಗಲಾಚುವನು)

ಚಮ್ಮಾರ : ಅಯ್ಯಾ ನೋಡೋದಕ್ಕೆ ಕಷ್ಟದಲ್ಲಿದ್ದವರನ್ನು ಕಾಪಾಡುವಂತೆ ಕಾಣುತ್ತಿರುವವನು ನೀನು? ಕಷ್ಟದಲ್ಲಿರುವಂತೆ ಕಾಣುತ್ತಿರುವವನು ನಾನು? ನಾನೇನು ನಿನಗೆ ನೆರವು ನೀಡಬಲ್ಲೆ?

ಆಗುಂತಕ : ಸ್ವಾಮಿ ನನ್ನ ನತದೃಷ್ಟ ನನ್ನ ಬೆನ್ನು ಹತ್ತಿದೆ. ನೀವೀಗ ನನ್ನನ್ನು ಉಳಿಸದಿದ್ದರೆ ನನ್ನ ಕೊಂದ ಪಾಪ ನಿಮಗೆ ಬರುವುದು. ತ್ವರೆ ಮಾಡಿ.

ಚಮ್ಮಾರ : ಇದೊಳ್ಳೆ ಪೀಕಲಾಟಕ್ಕೆ ಬಂತಲ್ಲ. ಇಷ್ಟಕ್ಕೂ ನೀನು ಯಾರು?

ಆಗುಂತಕ : ಸ್ವಾಮಿ ನಾನು ಅಯ್ಯೋಧ್ಯಾ ಪಟ್ಟಣದ ಕವಿ ಸ್ವಾಮಿ.

ಚಮ್ಮಾರ : ನಾನು ಹೆದರಿದ್ದೆ. ನೀನು ಎಲ್ಲಿ ಕಲ್ಲುಕುಟಿಗನೆಂದೋ ಶಿಲ್ಪಿ ಎಂದು ಹೇಳುತ್ತೀಯೋ ಎಂದು. ಯಾರೋ ಪುಣ್ಯಾತ್ಮರು ಸಂಜೆಯಿಂದ ನನ್ನ ಬೆನ್ನು ಬಿದ್ದಿದ್ದಾರೆ. ಶಿಲ್ಪಿಗಳಂತೆ ಇರುಳಿನಲ್ಲೂ ನನ್ನ ಕತ್ತಲೆಯ ನೆರಳನ್ನು ಹಿಂದಾಡಿ ಬರುತ್ತಿದ್ದಾರೆ.

ಆಗುಂತಕ : ಅವರೆಗೆಲ್ಲೋ ಹುಚ್ಚು ಇರಬೇಕು.

ಚಮ್ಮಾರ : ಭಯ ಪಡಬೇಡಿ. ನಾನು ನಿಮ್ಮನ್ನು ನನ್ನ ನೆಂಟನೆಂದೂ ಚಮ್ಮಾರನೆಂದೂ ಹೇಳಿ ಉಳಿಸಿಕೊಳ್ಳುತ್ತೇನೆ.

ಆಗುಂತಕ : ಏನು ನನ್ನ ಚಮ್ಮಾರನೆಂದು ಹೇಳುವೆಯಾ? ನಾನು ಈ ಅನಿಷ್ಠ ಚರ್ಮಗಳನ್ನು ಮುಟ್ಟಬೇಕೆ?

ಚಮ್ಮಾರ : ನಿಮಗೆ ನಿಮ್ಮ ಪ್ರಾಣಬೇಕಾದರೆ ಚಮ್ಮಾರನಾಗಿ. ನಿಮಗೆ ನಿಮ್ಮ ಜಾತಿ ಬೇಕಾದರೆ ನೀವು ಕವಿಯಾಗಿ. ಆಯ್ಕೆ ನಿಮ್ಮದು.

ಆಗುಂತಕ : ದಯಮಾಡಿ ಕ್ಷಮಿಸಿ. ನಾನು ಉಳಿ ಬಾಚಿಯನ್ನು ಈ ಪ್ರಾಣಿಗಳ ಚರ್ಮವನ್ನು ಹೊರವುದನ್ನು ಯಾರಾದರು ಕಂಡಾರು ಎಂಬ ಭಯವಷ್ಟೇ. ನಿಜ ಹೇಳಬೇಕೆಂದರೆ ನನಗೆ ಈ ಜಾತಿಕುಲಗಳಲ್ಲಿ ನಂಬಿಕೆ ಇಲ್ಲ.

ಚಮ್ಮಾರ : ಈಗ ಹೇಳಿ. ನಿಮಗೆ ಒದುಗಿದ ಕಷ್ಟವೇನು? ನೀವು ಹೇಳುವಷ್ಟರಲ್ಲಿ ನಿಮಗೆ ಒಂದು ಜೊತೆ ಚಪ್ಪಲಿ ಹೊಲಿದು ಕೊಡುತ್ತೇನೆ. ನೋಡಿ ನಿಮ್ಮ ಕಾಲುಗಳಿಂದ ರಕ್ತ ಒಸರುತ್ತಿದೆ.

ಆಗುಂತಕ : ನಾನು ಒಬ್ಬ ಕಾವ್ಯ ಪಂಡಿತ. ಕಾವ್ಯ ಮಾತ್ರವಲ್ಲ ಸೌಂದರ್ಯ ಮೀಮಾಂಸೆಗಳಲ್ಲಿ ಅಪಾರ ವಿದ್ಯೆಯನ್ನು ಗಳಿಸಿಕೊಂಡಿದ್ದೆ. ಮಹಾಕಾವ್ಯಗಳನ್ನು ಲೀಲಾಜಾಲವಾಗಿ ಲೋಕವೇ ತಲೆದೂಗು ವಂತೆ ರಚಿಸುತ್ತಿದ್ದೆ. ಉಪಮೆ-ರೂಪಕ ಪದ ಚಮತ್ಕಾರಗಳಲ್ಲಿ ನಾದ ಲಯ ಭಾವಗಳನ್ನು ನನ್ನ ಹಲ್ಲುಗಳಲ್ಲಿ ಕಚ್ಚಿ ಹಿಡಿದ ಅಡಿಕೆಯಂತೆ ಇಟ್ಟುಕೊಂಡಿದ್ದೆ. ಅಯ್ಯೋಧ್ಯಾ ಪಟ್ಟಣದ ಪ್ರೇಕ್ಷಣೀಯ ಸ್ಥಳದಂತೆ ಇದ್ದೆ. ಅಂತಹ ಕಾಲದಲ್ಲಿ ಚಕ್ರವರ್ತಿ ಭರತಕುಮಾರರು ಷಟ್ಖಂಡಲ ಮಂಡಲ ದಿಗ್ವಿಜಯವನ್ನು ಮುಗಿಸಿ ವೃಷಾಭಾದ್ರಿಯಲ್ಲಿ ಬೀಡು ಬಿಟ್ಟಿದ್ದರು. ಅಂತಹ ಒಂದು ದಿನ ನನಗೆ ಕರೆ ಬಂತು.

(ಭರತನ ಸೇನಾ ಶಿಬಿರ-ದಂಡನಾಯಕ ಮತ್ತು ಮಹಾಮಂತ್ರಿಗಳು ಚಕ್ರರತ್ನದ ಪ್ರವೇಶ)

ಮಹಾಮಂತ್ರಿ : ಪ್ರಭು ಷಟ್ಖಂಡಮಂಡಲಗಳನ್ನು ಗೆದ್ದಾಯಿತು. ತಾವೀಗ ಭುವನ ಚಕ್ರವರ್ತಿಗಳು.

ದಂಡನಾಯಕ: ಪ್ರಭು ಯುದ್ಧಗಳನ್ನು ಗೆದ್ದಿದ್ದು ನಿಜ... ಆದರೆ

ಭರತ : ಆದರೆ ಏನು ?

ಚಕ್ರರತ್ನ : ಎಂಥ ಯುದ್ಧವಾದರೂ ಜನ ಮರೆತು ಹೋಗುತ್ತಾರೆ. ದೊರೆಗಳು ಸತ್ತು ಹೋಗುತ್ತಾರೆ.

ಭರತ : ಏನು ಮೂಲೋಕಗಳು ಮೆಚ್ಚುವಂತೆ ನಡೆದ ಈ ಯುದ್ಧ ಈ ವಿಜಯ ಈ ಉತ್ಸಾಹ ರಣಕೇಕೆ ಇವು ಲೋಕದ ಕಣ್ಣಲ್ಲಿ ಶಾಶ್ವತವಾಗಿ ಉಳಿಯಬೇಕು.

ಮಂತ್ರಿ : ಮಹಾಪ್ರಭು ದೊರೆಗಳಿಗೆ ಅವರು ಕೈಗೊಳ್ಳುವ ಜನೋಪಕಾರಿ ಕೆಲಸಗಳೇ ಅಮೃತತ್ವವನ್ನು ನೀಡುತ್ತವೆ ಪ್ರಭು. ತಾವು ತಮ್ಮ ತಂದೆಯವರಂತೆ.

ಭರತ : ವಿಜಯದ ಹೊಸ್ತಿಲಲ್ಲಿ ಪರಿತ್ಯಾಗದ ಮಾತು ಬೇಡ.

ಚಕ್ರರತ್ನ : ಪ್ರಭು. ಈ ವೃಷಭಾದ್ರಿ ಪರ್ವತದ ತುತ್ತತುದಿಯಲ್ಲಿ ನೀವು ಷಟ್ಖಂಡಮಂಡಲಗಳ ವಿಜಯ ಪಟವನ್ನು ಒಬ್ಬ ಅದ್ಭುತ ಕವಿಯಿಂದ ಬರೆಸಿ ಆಚಂದ್ರಾರ್ಕವಾಗಿ ಉಳಿಯುವಂತೆ ಬಂಡೆಯ ಮೇಲೆ ಕೆತ್ತಿಸೋಣ. ದಿನ ಲೋಕ ಬೆಳಗುವ ಸೂರ್ಯನಾರಾಯಣನೂ ನಿತ್ಯ ತನ್ನ ಕಿರಣಕರಗಳಿಂದ ನಿಮ್ಮ ದಿಗ್ವಿಜಯ ಪಟದ ಪಾದವನ್ನು ಮುಟ್ಟಿ ಮತ್ತೆ ಲೋಕವನ್ನು ಬೆಳಗಲಿ.

ಭರತ : ಚಕ್ರರತ್ನ. ನೀನು ನನ್ನ ಮನಸ್ಸಿನ ಒಳಗೆ ಇರುವಂತೆ ಮಾತನಾಡುತ್ತೀಯಾ? ನಿಜ ಹೇಳಬೇಕೆಂದರೆ ನನ್ನ ಬಾಯಿಂದ ಮಾತು ಬರುತ್ತಿದ್ದರೂ ಆಡಿಸುವವನು ನೀನೇ ಆಗಿದ್ದೀಯ.

ಚಕ್ರರತ್ನ : ಪ್ರಭು ತಮ್ಮ ಕೀರ್ತಿ ಭುವನ ಮಂಡಲಗಳ ಮಂಗಳಗೀತೆ ಯಾಗಿಸಲು ಒಬ್ಬ ಮಹಾನ್ ಕವಿಯನ್ನು ಕರೆಸಿದ್ದೇನೆ. ಆತ ತಾನು ಬರೆದ ಕಾವ್ಯದ ಸಾಲುಗಳೊಂದಿಗೆ ಬಿಡಾರದ ಹೊರಗೆ ಕಾದಿದ್ದಾನೆ.

ಭರತ : ಕವಿಗಳಿಗೆ ಪ್ರವೇಶ ಕೊಡಿ.

(ಭಟರು ಕವಿಯನ್ನು ಕರೆತರುತ್ತಾರೆ)

ಕವಿ : ತ್ರಿಭುವನ ಚಂದ್ರ ಸರೋವರ ಸರಸ್ವತೀ ಮಣಿಹಾರ ಭೂವಲಯ ಪುರುಷೋತ್ತಮ ರಾಜಾಧಿರಾಜ ವೈರಿ ಗಂಡಭೇರುಂಡ ಶ್ರೀಶ್ರೀಶ್ರೀ ನಾಭೀರಾಜ ಮರ್ಮನ್ ಭರತೇಂದ್ರ ಭೂಪತಿ ನಿನಗೆ ಸನ್ಮಂಗಳಂ ಕುರೋ.

ಭರತ : ಎಲೈ ಕವಿಯೇ ತ್ರಿಭುವನ ಚಂದ್ರನೆಂದು ನನಗೆ ಸ್ವಂತ ಬೆಳಕಿಲ್ಲದವ ನೆಂದು ನಾನು ಸೂರ್ಯನಲ್ಲ ಎಂದು ಹೀಗಳೆಯುತ್ತಿರುವೆ ಏನು?

ಕವಿ : ಮನ್ನಿಸಬೇಕು ಪ್ರಭು. ನನ್ನ ಉದ್ದೇಶ ಅದಲ್ಲ. ತಾವು ಒಬ್ಬ ಸೂರ್ಯನಿಗಲ್ಲ ಕೋಟಿ ಸೂರ್ಯಪ್ರಕಾಶಕ್ಕೆ ಸಮಾನರೆಂದು ಹೇಳುವಲ್ಲಿ ಬಾಯಿತಪ್ಪಿ ಹೀಗಾಯಿತು.

ಚಕ್ರರತ್ನ : ಕವಿ ನಮ್ಮ ಮಹಾರಾಜರು ಈ ಭೂಮಿಯ ಮೇಲೆ ಇದ್ದ ಹಗೆತನವನ್ನು ನಿರ್ನಾಮ ಮಾಡಿ ಶಾಂತಿ ನೆಮ್ಮದಿಗಳ ಬೀಡಾದ ರಸವಂತೀ ನಾಡನ್ನು ನಿರ್ಮಾಣ ಮಾಡ ಹೊರಟಿದ್ದಾರೆ. ಅವರು ಷಟ್ಖಂಡಗಳನ್ನು ಗೆದ್ದು ಭೂವನಿತೆಯ ಗಂಡನಾದ ಈ ಮಹೋತ್ಸವವನ್ನು ಅಗೋ ಆ ವಿಜಯಾದ್ರಿ ಪರ್ವತದ ಆಕಾಶಶಿಖರದ ತುದಿಯಲ್ಲಿ ಸುವರ್ಣದಿಂದ ಬರೆಸಲು ದೊರೆಯ ಅಪ್ಪಣೆಯಾಗಿದೆ. ಈ ಮಹಾಕಾರ್ಯಕ್ಕೆ ನೀನು ಆಯ್ಕೆ ಆಗಿರುವುದು ನಿನ್ನ ಪೂರ್ವ ಪುಣ್ಯಗಳ ಬಲದಿಂದ ಎಂಬುದನ್ನು ನೆನೆದು ಲೋಕ ಮೆಚ್ಚುವ ವಿಜಯ ಪತ್ರವನ್ನು ಬರೆದು ತಾ.

ಭರತ : ನಿನಗೆ ತ್ರಿಭುವನ ಚಕ್ರವರ್ತಿಯ ಅಂತಸ್ತಿಗೆ ತಕ್ಕದಾದ ದಾನದ ಸಂಪತ್ತನ್ನು ನೀಡುತ್ತೇನೆ. ಭೂತ ಭವಿಷತ್ತುಗಳು ನಿನ್ನ ಬರಹವನ್ನೇ ಪ್ರಮಾಣ ಮಾಡಿಕೊಳ್ಳಬೇಕು. ಅಂತಹ ಬರಹವನ್ನು ಬರೆದು ತರಬೇಕು.

ಚಕ್ರರತ್ನ : ನೀನು ಪತ್ರವನ್ನು ಸಿದ್ಧಗೊಳಿಸುವ ಸಮಯಕ್ಕೆ ಸರಿಯಾಗಿ ಲೋಕೋತ್ತರ ಶಿಲ್ಪಿಗಳನ್ನು ಕರೆದು ಅದನ್ನು ಶಿಖರದಲ್ಲಿ ಕೆತ್ತಿಸುವ ಏರ್ಪಾಟು ಮಾಡುತ್ತೇವೆ.

ಕವಿ : ಅಪ್ಪಣೆ ಪ್ರಭು.

ಭರತ : ಈಗ ಗ್ರೀಷ್ಮ ನೆನಪಿರಲಿ ವಸಂತದ ಕೋಗಿಲೆ ತನ್ನ ಮೊದಲ ಪ್ರಣಯದ ಹಾಡು ನುಡಿಸುವಷ್ಟರಲ್ಲಿ ನಿನ್ನ ವಿಜಯಪತ್ರ ಸಿದ್ಧವಿರಬೇಕು. ತಗೋ ಈ ಬಂಗಾರದ ಕತ್ತಿಯ ಬಳುವಳಿ. (ಎಸೆಯುತ್ತಾನೆ ಕವಿ ಹಿಡಿಕೊಳ್ಳುತ್ತಾನೆ. ನಿಧಾನ ದೃಶ್ಯ ಬದಲು)

ಕವಿ : ಬಳುವಳಿಯ ಬಂಗಾರದ ಕತ್ತಿ ನನಗೆ ಬಳುವಳಿ ಆಗಿರಲಿಲ್ಲ. ಅದು ಶಿಕ್ಷೆಯ ಮುನ್ನೆಚ್ಚರಿಕೆಯೂ ಆಗಿತ್ತು.

ಚಮ್ಮಾರ : ಮುಂದೇನಾಯಿತು. ನೀವು ಆ ವಿಜಯಪಟವನ್ನು ಬರೆದಿರ ಲಾರಿರಿ? ಅಥವಾ ನೀವು ಬರೆದಿದ್ದು ಅವರಿಗೆ ಇಷ್ಟವಾಗಿರಲಾರದು ಅಲ್ವೆ? ಅದಕ್ಕೆ ಹೀಗೆ ತಪ್ಪಿಸಿಕೊಂಡು ಅಲೆಯುತ್ತಿರುವಿರಿ.

ಕವಿ : ನಾನು ದೊರೆಯಿಂದ ಬೀಳ್ಕೊಂಡು ಮನೆಗೆ ಬಂದು ನಾನು ಕಲಿತ ಎಲ್ಲಾ ಮಹಾಕಾವ್ಯ-ಮೀಮಾಂಸೆ ವರಸೆಗಳಿಂದ ವಿಜಯಪಟವನ್ನು ಬರೆಯಲು ಪ್ರಯತ್ನಿಸಿದಷ್ಟು ಸೋತು ಹೋಗುತ್ತಿದ್ದೆ. ನನ್ನ ಒಬ್ಬಳೇ ಒಬ್ಬಳು ಮಗಳಿಗಾಗಿ ಈ ಕೆಲಸವನ್ನು ಮಾಡುವ ಪಣ ತೊಟ್ಟೆ. ಆ ಯುದ್ಧವನ್ನು ನೆನೆದಷ್ಟೂ ನನಗೆ ಏಕೋ ನಿಷ್ಕಾರುಣ ದುಃಖ ಒತ್ತರಿಸಿ ಬರುತ್ತಿತ್ತು.

ಚಮ್ಮಾರ : ಏನು? ದಿಗ್ವಿಜಯ ಪಟದ ಬರವಣಿಗೆಗೆ ಕಣ್ಣೀರಿನ ಹನಿಗಳ ಅಡ್ಡಿ!

ಕವಿ : ಆ ದುಃಖ ನಿಷ್ಕಾರುಣವಲ್ಲ. ನಾ ಯಾರ ಭವಿಷತ್ತಿಗಾಗಿ ಈ ಕೆಲಸಕ್ಕೆ ಕೈ ಹಾಕಿದ್ದೆನೋ ಆ ನನ್ನ ಮಗಳು ಈ ದಿಗ್ವಿಜಯದ ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡಿದ್ದಳು. ಇನ್ನು ಮದುವೆಯ ಮಂಟಪದಿಂದಲೇ ಯುದ್ಧಕ್ಕೆ ಹೋಗಿದ್ದ ಅಳಿಯ ಹೆಣವಾಗಿ ಮನೆಗೆ ಬಂದಿದ್ದ. ನನಗೆ ಪ್ರಪಂಚವೇ ಶೂನ್ಯವಾದಂತೆ ನನ್ನೊಳಗಿನ ಕವಿ ಸತ್ತುಹೋದಂತೆ. ಹೇಗೆ ಬರೆಯಲಿ. ನನ್ನ ಮಗಳ ಹಣೆ ಬರಹವನ್ನು ಅಳಿಸಿದವನ ವಿಜಯವನ್ನು ಕುರಿತು. ನೀವೇ ಹೇಳಿ.

ಚಮ್ಮಾರ : ಓಡಿ ಬಂದೆಯೇನು?

ಕವಿ : ಇಲ್ಲ ಹಸಿಮೈಯ ಕಸುವನ್ನ ಹದಿಹರೆಯದ ಕನಸನ್ನ ಕೊಂದ ಪಾಪಿ ನೀನು ಎಂದು ಪತ್ರ ಬರೆದಿಟ್ಟು ರಾತ್ರೋರಾತ್ರಿ ಓಡೋಡಿ ಬಂದೆ. ನನ್ನ ಬಂಧನಕ್ಕೆ ಆಜ್ಞೆಯಾಗಿದೆಯಂತೆ ಅದಕ್ಕೆ ತಲೆ ಮರೆಸಿಕೊಂಡು ತಿರುಗುತ್ತಿದ್ದೇನೆ.

(ಅಷ್ಟರಲ್ಲಿ ಸೈನಿಕರು ದಣಿದು ಬರುತ್ತಾರೆ.)

ಸೈನಿಕ : ಎಲ್ಲೈ ಚಮ್ಮಾರ? (ಕವಿಯನ್ನು ದಿಟ್ಟಿಸಿ..)

ಸೈನಿಕ : ಇವನು ಯಾರು? ನಾವು ಒಬ್ಬ ಪಾಪಿ ಕವಿಯನ್ನು ಹುಡುಕುತ್ತಿದ್ದೇವೆ.

ಚಮ್ಮಾರ : ಸ್ವಾಮಿ ಈತ ನನ್ನ ನೆಂಟ. ನಾವು ಚರ್ಮದ ಕೆಲಸದವರು.

ಸೈನಿಕ : ಇನ್ನು ನಮ್ಮಿಂದ ಸಾಧ್ಯವಿಲ್ಲ. ಆ ದೂರ್ತ ಮಹಾರಾಜರನ್ನು ನಿಂದಿಸಿ ಪತ್ರ ಬರೆದು ನಮಗೆ ಗಂಡಾಂತರವಾಗಿ ಪರಿಣಮಿಸಿ ದ್ದಾನೆ.

ಚಕ್ರರತ್ನ : ಏನಾಯಿತು ಪ್ರಭು? ಈ ಭೂಮಂಡಲವೇ ನಿಮ್ಮ ಆಜ್ಞಾನುವರ್ತಿಯಾಗಿರುವಾಗ ನಿಮಗೇತರ ಬೇಸರ?

ಭರತ : (ನಕ್ಕು) ಇಡೀ ಭೂಮಂಡಲಕ್ಕೆ ನಾನು ಒಡೆಯ ಎಂಥ ಚಂದದ ಸುಳ್ಳು.

ಚಕ್ರರತ್ನ : ನಿಜವು ಚಂದವಿದ್ದ ಮಾತ್ರಕ್ಕೆ ಸುಳ್ಳಾಗಬೇಕೇನು?

ಭರತ : ಆಗಿದ್ದರೆ ವಿಜಯಾದ್ರಿ ಪರ್ವತದ ಆ ತುತ್ತ ತುದಿಯಲ್ಲಿರುವ ಕಲ್ಲಿನಲ್ಲಿ ನನಗಿಂತ ಮೊದಲೇ ಈ ಭೂಮಂಡಲಗಳನ್ನು ಗೆದ್ದ ನೃಪರ ವಿಜಪತ್ರಗಳಿವೆಯಂತೆ. ನಿನಗೆ ಗೊತ್ತೇ ಅವು ನನ್ನನ್ನು ಯಕಶ್ಚಿತ್ ಮನುಷ್ಯನೆಂದು ಸಾರಿ ಹೇಳುತ್ತಿವೆ. ಇಲ್ಲಿ ನೀನು ನೋಡಿದರೆ ಭೂಲೋಕದ ಒಡೆಯನೆಂದು ಪರಿಹಾಸ್ಯ ಮಾಡುತ್ತಿರುವೆ.

ಚಕ್ರರತ್ನ : ಕ್ಷಮಿಸಿ ಪ್ರಭು. ಈ ಭೂಮಿಯಲ್ಲಿನ ಎಲ್ಲ ನದಿಗಳು ಕೆಂಪಾದುದು ನಿಮ್ಮ ಯುದ್ಧಗಳಿಂದ ಹರಿದ ರಕ್ತದಿಂದ ಎಂಬುದನ್ನು ಮರೆತಿರೇನು? ನೀವು ಎಂತಹ ಗೆಲವನ್ನ ಪಡೆದಿದ್ದೀರಿ ಎಂದರೆ ಅದು ಪಡೆದವನಿಗೇ ಕನಸು ಎನ್ನಿಸುವಂತಹ ಗೆಲವು. ನಿಮಗೆ ಇಂತಹ ಅನುಮಾನ ಮನಸ್ಸಿನ ಒಳಗೆ ಉಳಿಯಬಾರದೆಂದೇ ಆ ವಿಜಾಯಾದ್ರಿಯಲ್ಲಿ ನಿಮ್ಮನ್ನು ಲೋಕ ಸಾವ್ರಾಟನೆಂದು ಘೋಷಿಸುವ ಪ್ರಶಸ್ತಿಯನ್ನು ಬರೆಯಲು ಸಿದ್ಧತೆಯಾಗಿದೆಯಲ್ಲ.

ಭರತ : ಇಲ್ಲ ನನ್ನ ರಾಜ್ಯದಲ್ಲಿದ್ದ ಶಿಲ್ಪಿಗಳು ಮಾತ್ರವಲ್ಲ ನಾವು ಸೆರೆ ಹಿಡಿದ ಸೈನಿಕರು ಸೇರಿದಂತೆ ಎಲ್ಲರೂ ಅಲ್ಲಿ ಅಕ್ಷರಗಳನ್ನು ಅಳಿಸಲಾರದೆ ಸೋತು ಹೋಗಿದ್ದಾರೆ. ಹೋಗಲಿ ಅಲ್ಲಿನ ಶಾಸನಗಳನ್ನು ಅಳಿಸಿ ಬರೆಯಿರಿ ಎಂದರೆ ಆ ಯಕಶ್ಚಿತ್ ಬಂಡೆಯಲ್ಲಿ ಕೊರೆದ ಅಕ್ಷರಗಳನ್ನು ಅಳಿಸಲಾರದೆ ಎಲ್ಲರು ಕೈಚೆಲ್ಲಿದ್ದಾರೆ.

ಚಕ್ರರತ್ನ : ಏನು? ಅಕ್ಷರಗಳು ಅಳಿಸಲಾಗದೆ ಉಳಿದಿವಿಯೇ?

ಭರತ : ಅವು ನನ್ನ ಎಲ್ಲಾ ವಿಜಯಗಳು ನಿಜವೆಂಬುದನ್ನು ಸುಳ್ಳೆಂದು ಸಾರಿ ಸಾರಿ ಲೋಕಕ್ಕೆ ಹೇಳುತ್ತಿರುವಂತೆ ನನಗೆ ಭಾಸವಾಗುತ್ತಿದೆ. ಈ ದುಗುಡವನ್ನು ಮುಖದಲ್ಲಿ ಮರೆ ಮಾಚಿಕೊಂಡು ಭ್ರಮಿಸಿ ಬದುಕುವುದು ನನಗೆ ಸಾಧ್ಯವಿಲ್ಲ.

ಚಕ್ರರತ್ನ : ಪ್ರಭು ವಿಜಯಾದ್ರಿ ಪರ್ವತದ ಕಲ್ಲಿನಲ್ಲಿ ಅಕ್ಷರಗಳು ಅಳಿಯದೆ ಇರುವುದು ನನಗೇನೋ ಬೇರೇ ರಹಸ್ಯಾತರದೋ ಸೂಚನೆಯಾಗಿರುವಂತೆ ತೋರುತ್ತಿದೆ ಪ್ರಭು.

ಭರತ : ಅಂದರೆ...

ಚಕ್ರರತ್ನ : ಪ್ರಭು ನಿಮಗೆ ಬೇಸರವಿಲ್ಲ ಎಂದಾದರೆ ಈ ಚಿದಂಬರ ರಹಸ್ಯವನ್ನು ನಾನು ಬಿಡಿಸುತ್ತೇನೆ.

(ಬಾಗಿಲು ದೂಡಿ ಬಂದ ಸೇವಕ ನಮಿಸುತ್ತಾ)

ಭಟ : ಪ್ರಭು ನೆನ್ನೆ ಬಂದಿದ್ದ ಶಿಲ್ಪಿ ಮತ್ತೆ ಬಂದು ನಿಮ್ಮ ಭೇಟಿಗಾಗಿ ಕಾಯುತ್ತಿದ್ದಾನೆ.

ಭರತ : ಅವನಿಗೆಷ್ಟು ಕೊಬ್ಬು. ಒಂದಕ್ಷರ ಅಳಿಸಲಾರದವನಿಗೆ ಅರಸರನ್ನು ನೋಡುವ ಅವಕಾಶವೇಕೆ?

ಚಕ್ರರತ್ನ : ಪ್ರಭು ನನ್ನ ಬಿನ್ನಹ ಕೇಳಿರಿ. ಆ ಶಿಲ್ಪಿಯನ್ನು ಒಳಬರುವಂತೆ ಈಗಲೇ ಕರೆಕಳಿಸಿ.

ಭರತ : ಅಯ್ಯೊಯ್ಯೋ. ಅವನು ನೆನ್ನೆಯೆ ನನ್ನ ಕಾಲನ್ನು ತಬ್ಬಿ ಪ್ರಾಣ ಭಿಕ್ಷೆ ಬೇಡಿದ. ಅವನು ಪ್ರಾಣದಾಸೆಯಿಂದ ಹಿಡಿದ ಪಟ್ಟು ಈ ಕಾಲಿನ ನೋವೇ ಇನ್ನೂ ಹೋಗಿಲ್ಲ. ಅಂತಾದ್ರಲ್ಲಿ ಮತ್ತೆ ಅವನನ್ನು ಕರೆ ಬಿಡಿಸುವೆಯೇನು?

ಚಕ್ರರತ್ನ : ಪ್ರಭು ಒಂದರ ಸಾವಿನಲ್ಲಿ ಮತ್ತೊಂದರ ಹುಟ್ಟು ಅಡಗಿರುತ್ತದೆ. ಅವನಲ್ಲಿ ನಮಗೆ ಬೇಕಾದ ಮಾಹಿತಿ ಇರುವಂತಿದೆ. ಕರೆ ತನ್ನಿ ಅವನನ್ನ. (ಕೂಗಿ ಹೇಳುತ್ತಾನೆ)

ಭರತ : ಸೋಲುವುದು ಅಪಮಾನವೆಂದುಕೊಂಡಿದ್ದೆ. ಗೆಲವು ಕೂಡ ಅಪಮಾನವೆಂಬುದು ಈಗ ತಿಳಿಯಿತು.

ಭಟರು : ಪ್ರಭುಗಳಿಗೆ ಜಯವಾಗಲಿ. ಶಿಲ್ಪಿಯನ್ನು ಹಾಜರು ಪಡಿಸುತ್ತಿದ್ದೇವೆ. (ಕೂಗಿ ಹೇಳುತ್ತಾರೆ ಇಬ್ಬರು ಭಟರು ವ್ಯಕ್ತಿಯೊಬ್ಬನನ್ನು ಕರೆತರುತ್ತಾರೆ.)

ಶಿಲ್ಪಿ : (ಮತ್ತೆ ಓಡಿ ಬಂದು ಕಾಲು ಹಿಡಿಯಲು ಬರುತ್ತಾನೆ) ದಯಾಮಯನಾದ ದೊರೆಯೇ ನನ್ನ ಪ್ರಾಣ ಉಳಿಸು.

ಚಕ್ರರತ್ನ : (ತಡೆದು) ನಿಲ್ಲು ಚಕ್ರವರ್ತಿಗಳೆಂದರೆ ಊರ ಬಾಗಿಲ ಮುಂದಿನ ಗರಡುಗಂಬ ಎಂದು ಕೊಂಡಿರುವೆಯೇನು?

ಭರತ : ನಿನ್ನನ್ನು ಕರೆ ಕಳಿಸಿರುವುದು ನಿನ್ನ ಗೋಳಿನ ಸಂಗೀತ ಕೇಳುವುದಕ್ಕಲ್ಲ, ಮುಚ್ಚು ಬಾಯಿ.

ಚಕ್ರರತ್ನ : ಎಲೈ ಶಿಲ್ಪಿ ನಿನಗೆ ಪ್ರಾಣ ಭಯವಿಲ್ಲದಂತೆ ನಾನು ಕಾಪಾಡುತ್ತೇನೆ. ಆದರೆ ಒಂದು ಮಾತು. ನೀನು ಎಷ್ಟೇ ಅಸತ್ಯದ ವಿಷಯವಾದರೂ ನಿಜವನ್ನೇ ಹೇಳಬೇಕು.

ಶಿಲ್ಪಿ : ಆಗಲಿ ಸ್ವಾಮಿ ಪ್ರಭುಗಳಿಗೆ ಇಷ್ಟವಾದದ್ದನ್ನೇ ನಿಜವೆಂದು ಹೇಳುತ್ತೇನೆ. ಬೇಕಿದ್ದರೆ ಪ್ರಮಾಣ ಮಾಡುತ್ತೇನೆ.

ಭರತ : ಪ್ರಮಾಣ ಏಕೆ?

ಶಿಲ್ಪಿ : ನಡೆದಿದ್ದು ಹೇಳಿದರೆ ನಿಜ. ಅದೇ ಪ್ರಮಾಣ ಮಾಡಿದರೆ ಸತ್ಯ. ಅದಕ್ಕೆ ಪ್ರಮಾಣ.

ಚಕ್ರರತ್ನ : ಅದಿರಲಿ ನೀನು ಆ ವಿಜಯಾದ್ರಿ ಪರ್ವತದಲ್ಲಿ ಶಾಸನಗಳನ್ನು ಅಳಿಸದೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದೇಕೆ?

ಭರತ : ರಾಜದ್ರೋಹವನ್ನು ಮಾಡಿಯೂ ಶಿಕ್ಷೆಯಿಂದ ಮುಕ್ತಿ ಬಯಸುವೆ ಯೆಲ್ಲ ದೊರೆಯೆಂದರೆ ಗುಡಿಯಲ್ಲಿರುವ ದೇವರೆಂದು ಕೊಂಡೆಯೇನು?

ಶಿಲ್ಪಿ : ಪ್ರಭು ನನ್ನ ಮಾತನ್ನು ನಂಬಿ. ನಾನಂದು ಸರಿರಾತ್ರಿಯಾದರೂ ಇನ್ನು ಅಕ್ಷರಗಳನ್ನು ಅಳಿಸುತ್ತಿದ್ದೆ. ಆಗ ಯಾರೋ ನಕ್ಕಂತಾಯಿತು. ಆ ಕತ್ತಲ ರಾತ್ರಿಯಲ್ಲಿ ಯಾರೋ ಜಿನ ಕಿರುಬೆರುಳಲ್ಲಿ ದೀಪ ಮುಡಿಸಿಕೊಂಡು ಬಂದ. ನಾನು ಯಾಕೆ ಸ್ವಾಮಿ ನಗುತ್ತಿರಾ ಎಂದೆ. ಈ ಅಕ್ಷರಗಳನ್ನು ಅಳಿಸಬೇಕೆಂದರೆ ಶತ್ರುಶೇಷ ಅಳಿಯಬೇಕು. ಆಗ ಈ ಅಕ್ಷರಗಳು ತಂತಾನೇ ಅಳಿದು ಹೋಗುತ್ತವೆ. ಅಲ್ಲಿಯವರೆಗೆ ಈ ಅಕ್ಷರಗಳನ್ನು ಅಳಿಸಲಾರೆ ಎಂದು ಹೊರಟು ಹೋದ.

ಚಕ್ರರತ್ನ : ಏನು ಭೂಮಿಯ ಮೇಲೆ ಶತ್ರುಶೇಷ ಅಳಿಯದೆ ಅಲ್ಲಿ ಅಕ್ಷರಗಳನ್ನು ಅಳಿಸಲಾಗದೇ?

ಭರತ : ಹೊರಪ್ರಂಚವನ್ನೆಲ್ಲಾ ಗೆದ್ದ ಮೇಲೂ ಇನ್ನೂ ಯಾರಿದ್ದಾರೆ ಶತ್ರುಗಳು? ನನ್ನ ಮೇಲೆ ನಾನೇ ಯುದ್ಧ ಮಾಡಬೇಕೇನು?

ಚಕ್ರರತ್ನ : ಪ್ರಭು ಶತ್ರುಗಳು ಹೊರಗೆ ಇರಬೇಕಿಲ್ಲ. ಅವರು ಒಳಗಿನವರೂ ಆಗಿರಬಹುದಲ್ಲ.

ಭರತ : ಅಂದರೆ ನಿಮ್ಮ ಮಾತಿನ ಅರ್ಥ?

ಚಕ್ರರತ್ನ : ಒಳಗಿನವರು. ನಿನ್ನ ಮಕ್ಕಳಿನ್ನೂ ಚಿಕ್ಕವರು. ಅಂದರೆ ನಿಮ್ಮ ತಮ್ಮಂದಿರೇ. ನಿಮ್ಮ ಶತ್ರುಗಳಾಗಿರಬಹುದಲ್ಲವೆ?

ಭರತ : ಚಕ್ರರತ್ನ ನಿನ್ನ ಬಾಯಿಂದ ನನ್ನ ದುರಾದ್ರುಷ್ಟವೇ ಇಂತಹ ಘೋರ ಪದಗಳನ್ನು ನುಡಿಸುತ್ತಿರಬಹುದೇ?

ಚಕ್ರರತ್ನ : ಭಟರೇ ಮಹಾ ಪ್ರಭುಗಳು ಈತನನ್ನು ಕ್ಷಮಿಸಿದ್ದಾರೆ. ಇವನನ್ನು ಇವನ ಭವಬಂಧನದಿಂದ ಬಿಡುಗಡೆ ಮಾಡಿ.

ಶಿಲ್ಪಿ : ಪ್ರಭು ನನ್ನನ್ನು ಕೊಲ್ಲಬೇಡಿ. ನಿಮ್ಮ ದಮ್ಮಯ್ಯ.

ಭಟ : ಅಪ್ಪಣೆ. (ಎಳೆದೊಯ್ಯುವರು)

ಭರತ : ನನ್ನ ತಮ್ಮಂದಿರು ನನ್ನ ಶತ್ರುಗಳಾಗಿರಲು ಸಾಧ್ಯವಿಲ್ಲ. ಇದು ಅಸಂಭವ. ನಾನೆಂದರೆ ಅವರಿಗೆ ತುಂಬಾನೇ ಇಷ್ಟ

ಚಕ್ರರತ್ನ : ಪ್ರಭು ಅವರು ನಿಮ್ಮನ್ನು ಅಣ್ಣನೆಂದು ಗೌರವಿಸಬಹುದು. ಆದರೆ ನಿಮ್ಮನ್ನು ತಮ್ಮ ದೊರೆಯೆಂದು ಒಪ್ಪಿ ತಾವು ಸಾಮಂತರೆಂದು ಸಾರಿಕೊಂಡಿಲ್ಲ. ಅದೇ ಇರಬಹುದು ಈ ಮಾತಿನ ಅರ್ಥ.

ಭರತ : (ಒಂದು ಕ್ಷಣ ಯೋಚಿಸಿ) ನಿನ್ನ ಮಾತು ಸುಳ್ಳಾಗಲಿ ಎನ್ನುವುದು ನನ್ನ ಹರಕೆ. ಚಕ್ರರತ್ನ ದಿಗ್ವಿಜಯದ ಸಂಭ್ರಮದಲ್ಲಿ ಪಾಲ್ಗೊಳ್ಳಲು ಅವರಿಗೆಲ್ಲಾ ಓಲೆಗಳನ್ನು ಕಳಿಸು. ಇಲ್ಲಿ ಬಂದ ಮೇಲೆ ಶರಣಾಗತಿಯನ್ನು ಪ್ರಕಟಿಸುವಂತೆ ತಿಳಿಸುವ. ಒಪ್ಪದಿದ್ದರೆ?

ಚಕ್ರರತ್ನ : ಮತ್ತೆ ಯುದ್ಧ. ಸೋದರರನ್ನು ಅಗಲಿಸುವುದು ಪಾಪ ಕಾರ್ಯ. ಆದರೆ ರಕ್ತ ಸಂಬಂಧಗಳನ್ನು ಕತ್ತರಿಸಿದರೆ ಮಾತ್ರ ಅಧಿಕಾರಕ್ಕೆ ಸಂಬಂಧಗಳು ಗಟ್ಟಿಗೊಳ್ಳುವುದು. ಇಷ್ಟಕ್ಕೂ ತಮ್ಮಂದಿರಲ್ಲಿ ಯುದ್ಧ ಮಾಡುವಲ್ಲಿ ನೀವೇ ಮೊದಲಿಗರಲ್ಲ ಪ್ರಭು. ಅಣ್ಣನೋ ತಮ್ಮನೋ ಶತ್ರುಶೇಷ ನಾಶವಾದರೇ ಸಾಕು. ಪ್ರಶಸ್ತಿ ಪಟದಲ್ಲಿ ಕೊರೆದಿರುವ ಕಲ್ಲಿನಕ್ಷರಗಳು ಗೋಡೆಯ ಬಣ್ಣದಂತೆ ಕರಗಿ ಹೋಗುವವು. ಅಲ್ಲಿ ಸ್ವಸ್ತಿ ಶ್ರೀಶ್ರೀ

ಭರತ : ಈಗೀಗ ಮನಸ್ಸಿನ ಬೆಳಕು ಮೂಡುತ್ತಿದೆ. ದೀಪವನ್ನು ದೊಡ್ಡದು ಮಾಡಿ.

(ಸ್ಟೇಜಿನ ಮೇಲೆ ದಿಗ್ಗನೆ ಬೆಳಕು ನಿಧಾನ ನಂದುವುದು)

ದೃಶ್ಯ - ೯

ಶಿಷ್ಯ : ಗುರುಗಳೆ, ಈ ಫಲಕವನ್ನು ನೋಡಿದರೇನು? ಇದು ವಿಲಕ್ಷಣವಾಗಿದೆ.

ಅರಿಷ್ಟನೇಮಿ : ಓದು. ನಾವು ಈಗ ಹಾದು ಬಂದ ದಾರಿಗಿಂತ ವಿಲಕ್ಷಣವಾದದ್ದು ಇನ್ನೇನಿರಲು ಸಾಧ್ಯ.

ಶಿಷ್ಯ : ಷಟ್‌ಮಂಡಲ ದಿಗ್ವಿಜಯಕ್ಕೆ ಸಂತೋಷದಿಂದ ಬಂದ ತಮ್ಮಂದಿರನ್ನು ಸ್ವತಃ ಭರತ ಚಕ್ರವರ್ತಿಯೇ ಸ್ವಾಗತಿಸಿ ಸತ್ಕರಿಸಿದನಂತೆ.

ಅರಿಷ್ಟನೇಮಿ : ದೊರೆಯಾದರು ಅವನು ಅಣ್ಣನಲ್ಲವೇ?

ಶಿಷ್ಯ : ಗುರುಗಳೇ... ಅದು...(ಮೌನ)

ಅರಿಷ್ಟನೇಮಿ : ಯಾಕೆ ಮೌನವಾದೇ ಓದು.

ಶಿಷ್ಯ : ಔತಣದಲ್ಲಿ ದೊರೆ ತಮ್ಮಂದಿರೊಡನೆ ಊಟ ಮಾಡುತ್ತಾ ನೀವು ನನ್ನ ತಮ್ಮಂದಿರು. ಈಗ ನೀವು ನನ್ನ ಸಾಮಂತರಾದರೆ ನಾನು ಈ ಲೋಕದ ಒಡೆಯನಾಗುತ್ತೇನೆ. ನೀವು ಒಪ್ಪುತ್ತೀರಿ ಅಲ್ವೆ?

ಅರಿಷ್ಟನೇಮಿ : ಒಪ್ಪಿಕೊಂಡರೇನು? ಈ ಶರತ್ತನ್ನು. ಮುಂದೆ ಓದು.

ಶಿಷ್ಯ : ಇಲ್ಲ. ಅಕ್ಕಿಯನ್ನು ಕೊಟ್ಟು ತಂಗಳನ್ನವನ್ನು ತಿನ್ನಲು ನಮಗೇನು ಹುಚ್ಚೇ? ಪಿರಿಯಣ್ಣನೆಂದು ಎರಗುವುದೇಂ ಪರಿಭವಮೇ. ಆದರೆ ದೊರೆಯೆಂದು ಅಹಂನಿಂದ ಸಂಬಂಧಗಳ ಗುರುತು ಮರೆತು ಕತ್ತಿಯನ್ನು ನೆತ್ತಿಯಲ್ಲಿ ಊರಿ ಶರಣಾಗಲು ಹೇಳಿದರೆ ಕೇಳುವುದಕ್ಕೆ ನಾವು ಹೇಡಿಗಳಲ್ಲ.

ಅರಿಷ್ಟನೇಮಿ : ಆಗ ಭರತ ಸುಮ್ಮನಿದ್ದನೇನು?

ಶಿಷ್ಯ : ಇಲ್ಲ ಆಗಿದ್ದರೆ ಯುದ್ಧಕ್ಕೆ ಸಿದ್ಧರಾಗಿ ಹೊರ ಶತ್ರುಗಳನ್ನು ಜಯಿಸಿದವನಿಗೆ ಒಳಗಿನವರು ಒಂದು ಲೆಕ್ಕವೇ ಎಂದು ಅಪಹಾಸ್ಯ ಮಾಡಿದ. ಊಟವನ್ನು ಅರ್ಧದಲ್ಲಿಯೇ ಬಿಟ್ಟು ಅವನ ನೂರು

ಜನ ತಮ್ಮಂದಿರು ರಾಜ್ಯ ಪರಿತ್ಯಜಿಸಿ ತಮ್ಮ ತಂದೆಯಲ್ಲಿಗೆ ಸಮಣರಾಗಿ ಹೊರಟು ಹೋದರು. ಆದರೆ ಯುವರಾಜ ಬಾಹುಬಲಿ ಮಾತ್ರ ದಿಟ್ಟ ಉತ್ತರ ನೀಡಿ ಯುದ್ಧ ಭೂಮಿಯಲ್ಲಿ ಎದುರಾಗುವಂತೆ ಹೇಳಿ ಹೊರಟು ಹೋದ.

ಅರಿಷ್ಟನೇಮಿ : ಎಂಥ ತೀರದ ದಾಹ ಈ ಭೂಮಿಯದು. ಎಷ್ಟೊಂದು ರಕ್ತ ಹರಿದರೂ ತಣಿಯಲಿಲ್ಲ.

(ದೃಶ್ಯ ಬದಲು)

ಯಶೋಮತಿ : ಸುಮತಿ ದುಃಖಿಸಬೇಡ. ಮಹಾಮಂತ್ರಿಗಳಿಗೆ ದಂಡನಾಯಕರಿಗೆ ಹೇಳಿ ಕಳಿಸಿದ್ದೇನೆ.

ಸುಮತಿ : ಅವರು ದೇವಲೋಕದಿಂದ ಬಂದಾಗ ಎದಿರುಗೊಳ್ಳಲು ಹೋಗಿದ್ದೆ. ನನ್ನ ಮುಖವನ್ನು ನೋಡಿಯೂ ನೋಡದಂತೆ ನಡೆದು ಹೋಗಿದ್ದರು. ಆಗಲೂ ನನಗೆ ಇಷ್ಟು ನೋವು ಸಂಕಟ ಆಗಿರಲಿಲ್ಲ.

ಯಶೋಮತಿ : ಹೆಣ್ಣೆಂದರೆ ಮಣ್ಣು. ಮಣ್ಣೆಂದರೆ ಮೃತ್ಯು. ಪೂರ್ಣತ್ವದ ಆಕಾಂಕ್ಷೆಯಲ್ಲಿ ಉರಿದುಹೋಗುವ ಇಂದ್ರಿಯಗಳಿಗೆ ಮಣ್ಣಿನ ಗುರುತಿರಲು ಹೇಗೆ ಸಾಧ್ಯ?

ಸುಮತಿ : ಅಮ್ಮನ ಮಡಿಲಲ್ಲಿ ಆಡಿಕೊಂಡು ಬೆಳೆದ ಅಣ್ಣ ತಮ್ಮರು ಈಗ ಶತ್ರುಗಳಂತೆ ಕತ್ತಿ ಹಿಡಿದು ಹೊಡೆದಾಡಲಿದ್ದಾರೆ. ಅವರು ಹೀಗೆ ರಕ್ತ ಸುರಿಸಲೆಂದೇ ನಾವು ಅಷ್ಟು ರಕ್ತ ಬಸಿದು ಇವರನ್ನು ಈ ಭೂಮಿಗೆ ತಂದದ್ದು.

ಯಶೋಮತಿ : ಸುರಿಯುವುದು ಇವರ ರಕ್ತ ಮಾತ್ರವಲ್ಲ ಸುಮತಿ. ಯುದ್ಧದಲ್ಲಿ ಹೊಡೆದಾಡುವವರು ಗಂಡಸರು, ಆದರೆ ನೋಯುವವರು ಹೆಂಗಸರು. ತಬ್ಬಲಿಯಾಗುವ ತಾಯಂದಿರು. ವಿಧವೆಯರಾಗುವ ಪತ್ನಿಯರು. ಒಟ್ಟಿನಲ್ಲಿ ಹೆಣ್ಣನ್ನ ನೋಯಲೆಂದೇ ಯುದ್ಧವನ್ನು ಹುಟ್ಟಿಸಿರುವಂತಿದೆ ಈ ಭೂಮಿ. ಇದು ಇಂದು ನೆನ್ನೆಯ ಕತೆಯಲ್ಲ ಬಿಡು.

ಸುಮತಿ : ಅಕ್ಕ ಆಸೆಯನ್ನು ಗೆದ್ದವನ ಮಕ್ಕಳಿವರು. ಅವರ ರಕ್ತವೇ ಇವರಲ್ಲಿಯೂ ಹರಿಯುತ್ತಿರುವಾಗ ಇಂತಹ ಘಾತಕ ಕಾರ್ಯಕ್ಕೆ ಹೇಗೆ ಕೈ ಹಾಕುತ್ತಾರೆ?

ಯಶೋಮತಿ : ಅಯ್ಯೋ ಹುಚ್ಚಿ ವಿವೇಕ ಎನ್ನುವುದು ಅಲ್ಪಾಯಿಷಿ.

ಸುಮತಿ : ಕೇಡಿಗೆ ನೆನಪಿರುವಂತೆ ಒಳಿತಿಗೆ ನೆನಪು ಇರುವಂತಿಲ್ಲ ಅಕ್ಕ.

ಯಶೋಮತಿ : ನಾನು ತಿನ್ನಿಸದಿದ್ದರೆ ಒಂದು ತುತ್ತು ಅನ್ನವನ್ನೂ ತಿನ್ನುತ್ತಿರಲಿಲ್ಲ ಭರತ. ಅಮ್ಮನ ಮಗನೆಂದು ಇವರು ಆಡಿಕೊಳ್ಳುತ್ತಿದ್ದರು. ಅಂತವನು ಈಗ ನನ್ನ ಮಾತನ್ನೇ ತಿರಸ್ಕರಿಸಿದ. ಯುದ್ಧ ಲೋಕಕಲ್ಯಾಣಕ್ಕಾಗಿ, ನಿನಗೆ ರಾಜಕಾರಣ ಗೊತ್ತಿಲ್ಲ ಎನ್ನುತ್ತಾನೆ.

ಸುಮತಿ : ಅವನಿಗೆ ಬುದ್ಧಿ ಕಲಿಸಿಯೇ ಕಲಿಸುತ್ತೇನೆ ಅನ್ನುತ್ತಾನೆ ಬಾಹುಬಲಿ. ಅಕ್ಕ ನಿಜ ಹೇಳುತ್ತೇನೆ. ನಾನು ಅವನಿಗೆ ಅವನ ಇತರ ತಮ್ಮಂದಿರಂತೆ ರಾಜ್ಯ ತೊರೆಯುವಂತೆ ಕೂಡ ಸಲಹೆ ಮಾಡಿದೆ. ಆದರೆ ಅವನು ಯುದ್ಧದಲ್ಲಿ ಜಯ ಸಿಗುವಂತೆ ಆಶೀರ್ವಾದಿಸು ಎಂದ.

ಯಶೋಮತಿ : ಬಾಹುಬಲಿ ಯಾವಾಗಲೂ ನನ್ನ ತೋಳಿನಲ್ಲಿಯೇ ಆಡಾಡಿಕೊಂಡು ಬೆಳೆದವನು. ಅವನು ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲವೆಂದು ನನಗೆಂದೂ ಅನಿಸಿಲ್ಲ. ಈಗ ನಾವಾದರೂ ವೃಷಭನೊಂದಿಗೆ ಪಟ್ಟಣ ತೊರೆಯಬಹುದಿತ್ತಲ್ಲಾ.

ಸುಮತಿ : ವಂಶದ ಮೊದಲ ಮಗನೆಂದು ಭರತನನ್ನು ಎದೆಯ ಮೇಲೆ ಇಟ್ಟುಕೊಂಡು ಸಾಕಿದ್ದೇನೆ. ಅವನೂ ಅಷ್ಟೇ ಹುಡುಗನಾಗಿದ್ದಾಗ ಚಿಕ್ಕಿ ಚಿಕ್ಕಿ ಎಂದು ಪ್ರಾಣ ಬಿಡುತ್ತಿದ್ದ. ಈಗ ಗಂಡಸಾಗಿ ನಮ್ಮ ಪ್ರಾಣ ತೆಗೆಯಲು ಹೊರಟಿದ್ದಾನೆ.

ಯಶೋಮತಿ : ಬಾಹುಬಲಿಯ ಹೆಂಡ್ತಿ ಬಂದಿದ್ದಳು ಇಲ್ಲಿ. ಅತ್ತೆ ನೀವು ಹೇಳಿದರೆ ಅವರು ಯುದ್ಧ ಬಿಡುತ್ತಾರೆ ಎನ್ನುತ್ತಾಳೆ.

ಸುಮತಿ : ಭರತನ ಹೆಂಡ್ತಿ ನನ್ನ ಹತ್ತಿರ ಬಂದಿದ್ದಳು. ಅಣ್ಣತಮ್ಮಂದಿರ ಕಾದಾಟ ತಡೆಯಿರಿ ಎಂದು ಸುಮ್ಮನೆ ಕಣ್ಣೀರು ಹಾಕುತ್ತಾಳೆ.

ಯಶೋಮತಿ : ಭರತನ ದಿಗ್ವಿಜಯದ ವಾರ್ತೆ ಬಂದಾಗಲೆಲ್ಲಾ ನನಗೆ ಭಯ ವಾಗುತ್ತಿತ್ತು. ಗೆಲ್ಲುವುದೊಂದು ಅಮಲು. ಆ ಅಮಲಿನಿಂದ ಮನುಷ್ಯನನ್ನು ಬಿಡಿಸುವುದು ಕಷ್ಟ.

ಸುಮತಿ : ಈಗ ಈ ಅನಾಹುತವನ್ನು ತಡೆಯುವ ಶಕ್ತಿ ಇದ್ದವರು ವೃಷಭದೇವರು ಮಾತ್ರ

ಯಶೋಮತಿ : ಸುಮತಿ ಅವರೀಗ ಪ್ರತಿಮಾ ಯೋಗದಲ್ಲಿದ್ದಾರೆ. ಅವರಿಗೆ ಲೋಕದ ಗುರುತುಗಳು ಮರೆತು ಹೋಗಿವೆ.

ಸುಮತಿ : ಗುರುತು ಮರೆತಿರಬಹುದು. ಆದರೆ ದುಃಖವನ್ನು ಅರಿಯಲು ಗುರುತಿನ ಹಂಗು ಬೇಕೇನು?

(ಅಷ್ಟರಲ್ಲಿ ಸಪ್ಪಳವಾಗುವುದು ಇಬ್ಬರು ಮಂತ್ರಿಗಳು ಮತ್ತು ಇಬ್ಬರು ದಂಡನಾಯಕರು ಬರುತ್ತಾರೆ)

ಮಂತ್ರಿಗಳು : ರಾಜ ಮಾತೆಯರಿಗೆ ನಮಸ್ಕರಿಸುವೆನು ತಾಯೇ.

ಮಂತ್ರಿ : ಭರತ ಚಕ್ರವರ್ತಿಗಳ ಮಹಾಮಂತ್ರಿ ನಾನು.

ಮಂತ್ರಿ 2 : ನಾನು ಬಾಹುಬಲಿ ದೊರೆಗಳ ಮಂತ್ರಿ.

ದಂಡನಾಯಕರು : ನಾವು ತಮ್ಮ ಪಾದಗಳಲ್ಲಿ ನಮಸ್ಕಾರಗಳನ್ನು ಸಲ್ಲಿಸುತ್ತೇವೆ ತಾಯಿ.

ಯಶೋಮತಿ : ಮಹಾಮಂತ್ರಿಗಳೆ. ನಾವು ಕೇಳಿದ್ದು ನಿಜವೇನು?

ಸುಮತಿ : ಈ ಕರುಳ ಕೊಯ್ತವನ್ನು ನಿಮ್ಮಿಂದ ತಡೆಯಲಾಗದೇ ಮಂತ್ರಿಗಳೆ?

ಮಂತ್ರಿ : ತಾಯಿ ಕ್ಷಮಿಸಬೇಕು. ನಾವೆಷ್ಟು ಹೇಳಿದರೂ ಭರತ ಚಕ್ರವರ್ತಿಗಳು ಕೇಳುತ್ತಿಲ್ಲ.

ಮಂತ್ರಿ : ಬಾಹುಬಲಿಯವರು ಇಷ್ಟು ಕೋಪದಿಂದ ಇದ್ದದ್ದನ್ನು ನಾವೆಂದು ಕಂಡಿದ್ದಿಲ್ಲ ತಾಯಿ.

ದಂಡನಾಯಕ : ಈವರೆಗೆ ನಮ್ಮ ಶತ್ರುಗಳ ಜೊತೆ ಹೋರಾಡಿದ್ದೆವು. ತಾಯಿ. ಈಗ ನಮ್ಮೊಳಗೆ ನಾವೇ ಬಡಿದಾಡಬೇಕು. ಸೈನ್ಯವೆಲ್ಲಾ ತಲ್ಲಣಿಸಿ ಹೋಗಿದೆ. ಅಣ್ಣತಮ್ಮಂದಿರು, ಅಪ್ಪ ಮಕ್ಕಳು ಭಾವ ಮೈದುನರು ಪರಸ್ಪರ ಪ್ರಾಣ ಉಳಿಸಲು ಹೋರಾಡಬೇಕಾದವರು ಈಗ ಪ್ರಾಣ ತೆಗೆಯಲು ಹೋರಾಟ ಮಾಡಬೇಕು.

ಯಶೋಮತಿ : ಅಂದರೆ ನೀವು ಯುದ್ಧಕ್ಕೆ ಸಿದ್ಧತೆಯನ್ನು ನಡೆಸುತ್ತಿದ್ದೀರಿ.

ದಂಡನಾಯಕ : ರಾಜಾಜ್ಞೆಯನ್ನು ಅನುಷ್ಠಾನಗೊಳಿಸುವುದಷ್ಟೇ ನಮ್ಮ ಕರ್ತವ್ಯ ತಾಯಿ.

ಮಂತ್ರಿ : ಸಹೋದರರ ಯುದ್ಧದ ಆ ಯೋಚನೆಯೇ ಯುದ್ಧಕ್ಕಿಂತಲೂ ಬಾದಕರವಾಗಿದೆ ತಾಯಿ.

ಸುಮತಿ : ಇದಕ್ಕೆ ಬೇರಾವ ಪರಿಹಾರವೂ ಇಲ್ಲವೆ?

ದಂಡನಾಯಕ : ಇಬ್ಬರೂ ಅಣ್ಣ ತಮ್ಮ ಎನ್ನುವ ಗುರುತು ಮರೆತು ಹೋಗಿದ್ದಾರೆ ತಾಯಿ. ಆ ಹೊಕ್ಕುಳ ಸಂಬಂಧದ ನೆನಪು ಮಾತ್ರ ಈ ಅನಾಹುತವನ್ನು ತಪ್ಪಿಸಬಲ್ಲದು. ಆದರೆ...

ಯಶೋಮತಿ : ಗುರುತು ಮರೆತಿರುವವರು ಭರತ ಬಾಹುಬಲಿ. ಸೈನಿಕರಲ್ಲ. ಹೌದು ತಾನೇ?

(ಅಷ್ಟರಲ್ಲಿ ಅರಮನೆಯ ಹಿಂಭಾಗದಿಂದ ಮಹಾರಾಣಿಯವರೇ ನಮ್ಮ ಮಕ್ಕಳನ್ನು ಉಳಿಸಿಕೊಡಿ. ನಮಗೆ ಪತಿ ಭಿಕ್ಷೆಯನ್ನು ಕೊಡಿ ಎಂಬ ಕೂಗುಗಳು ಕೇಳಿಬರುತ್ತವೆ)

ಸುಮತಿ : ಯಾರು ಹೀಗೆ ದುಃಖಿಸುತ್ತಿರವವರು?

ಮಂತ್ರಿ : ತಾಯಿ ಅವರೆಲ್ಲಾ ನಮ್ಮ ಸೈನಿಕರ ಮನೆಯ ಹೆಂಗಸರು. ತಮ್ಮಲ್ಲಿ ಭಿನ್ನವಿಸಲು ಬಂದಿದ್ದಾರೆ.

ಯಶೋಮತಿ : ಮಂತ್ರಿಗಳೇ ಲೋಕದ ದುಃಖದ ಬೇರನ್ನು ಅಗೆಯ ಹೊರಟ ಆದಿದೇವ ಅದರ ಬೀಜವನ್ನು ತನ್ನ ಮಕ್ಕಳಲ್ಲಿ ಬಿಟ್ಟು ಹೋಗಿದ್ದಾರೆ.

ಸುಮತಿ : ಶತ್ರುಶೇಷವನ್ನು ರಕ್ತದಲ್ಲಿ ನೆನೆ ಹಾಕಿದರೆ ಸಾಯುವುದಿಲ್ಲ ಮಂತ್ರಿಗಳೇ. ಅದನ್ನು ಕರುಣೆಯಲ್ಲಿ ಅದ್ದಬೇಕು. ಆಗ ಎಂತಹ ಹಗೆತನವಾದರೂ ತಾನಾಗಿಯೇ ನಾಶವಾಗುವುದು.

ಮಂತ್ರಿಗಳು : ಆ ಲೋಕದ ಜೀವವನ್ನು ಈ ಲೋಕಕ್ಕೆ ತರುವವರು ನೀವು. ನೀವೇ ಕಾಪಾಡಬೇಕು. ನಿಮ್ಮ ಮಕ್ಕಳನ್ನು.

ಯಶೋಮತಿ : ನಾನು ತಾಯಿಯಾಗಿ ಯೋಚಿಸುತ್ತಿದ್ದೇನೆ. ಉಳಿಯಬೇಕಿರುವುದು ನನ್ನ ಮಕ್ಕಳಲ್ಲ. ಲೋಕದ ಮಕ್ಕಳು.

ಸುಮತಿ : ನಿಮಗೆ ನಮ್ಮ ಮಾತಿನಲ್ಲಿ ಗೌರವ ಇರುವುದಾದರೆ, ನೀವು ಆದಿದೇವನಿಗೇ ಇನ್ನೂ ನಿಷ್ಠೆಯಿಂದ ಇದ್ದರೆ ನಾವು ಹೇಳುವ ಹಾಗೆ ಮಾಡಿ.

ದಂಡನಾಯಕ : ತಾಯಿ ನಾವು ಆದಿದೇವರ ಉಪ್ಪು ತಿಂದವರು. ನಮ್ಮ ನಿಷ್ಠೆ ವೃಷಭದೇವರಿಗೆ ಮೀಸಲು. ಹೇಳಿ ತಾಯಿ ನಾವೇನು ಮಾಡಬೇಕು?

ಯಶೋಮತಿ : ನೀವು ನಿಮ್ಮ ಸೈನ್ಯಗಳು ಯುದ್ಧ ಮಾಡುವುದನ್ನು ನಿರಾಕರಿಸಬೇಕು.

ಎಲ್ಲರೂ : ಏನು? ಯುದ್ಧ ನಿರಾಕರಣೆಯೇ?

ಸುಮತಿ : ಹೌದು. ಎರಡೂ ಕಡೆಯ ಸೈನ್ಯಗಳು ಯುದ್ಧವನ್ನು ನಿರಾಕರಿಸಲಿ.

ಮಂತ್ರಿಗಳು : ತಾಯಿ ಅವರ ನಡುವಿನ ಹಗೆತನ ಇದರಿಂದ ಬಗೆಹರಿಯಲಾರದು.

ದಂಡನಾಯಕ : ದೈವವೂ ಇಷ್ಟು ಉದಾರವಾಗಿರಲಾರದು ತಾಯಿ.

ಯಶೋಮತಿ : ಈ ಭೂಮಿತಾಯಿಯ ಒಡಲು ಹೆರುವ ಗರ್ಭವಾಗಬೇಕೆ ಹೊರತು ಕೊಲ್ಲುವ ರಣರಂಗವಾಗಬಾರದು.

ಸುಮತಿ : ಸ್ಮಶಾಣವಾಗುವುದಾದರೆ ನಮ್ಮ ಒಡಲೇ ಆಗಲಿ. ಬೇಕಿದ್ದರೆ ಭರತ ಬಾಹುಬಲಿ ಯುದ್ಧ ಮಾಡಿ ಗೆಲ್ಲಲಿ. ಸಾಯಲಿ.

ಯಶೋಮತಿ : ಯುದ್ಧದಲ್ಲಿ ಜೈಸಿದವರು ಸತ್ತಂತೆ. ಸತ್ತವರು ಬದುಕಿದಂತೆ. ನಮ್ಮ ಆಜ್ಞೆ ಏನೆಂದರೆ ನಿಮ್ಮ ಸೈನ್ಯಗಳು ಕತ್ತಿ ಹಿಡಿಯಬಾರದು. ಇದು ಆದಿದೇವನ ಹೆಸರಿನಲ್ಲಿ ನಾವು ವೃಷಭನ ಪತ್ನಿಯರು ಹೊರಡಿಸುತ್ತಿರುವ ರಾಜಾಜ್ಞೆ.

ಎಲ್ಲರು : ಲೋಕವನ್ನು ಉಳಿಸಿದಿರಿ ತಾಯಿ.

ಯಶೋಮತಿ : ಜೀವ ಕೊಡುವದಷ್ಟೇ ತಾಯಿಗೆ ತಿಳಿದಿರುವ ಸಂಗತಿ.

ಸುಮತಿ : ಯುದ್ಧದ ಮನೆ ನಾಶವಾಗಿ ಹೋಗಲಿ.

ಜೋ ಜೋ ಲಾಲಿ ಜೋ ಜೋ
ಪುಟ್ಟ ಪಾದಗಳಿಂದ ಲಲ್ಲೆ ಮಾತುಗಳಿಂದ
ಮಡಿಲ ಮೆತ್ತೆಯಲಿ ತೋಳುಯ್ಯಾಲೆಯಲಿ
ಕಣ್ಣ ಪಾಪೆಯಲಿ ಸ್ವಪ್ನದಂತಿದ್ದವರೇ
ಆಡಿ ಪಾಡುತಲಿದ್ದ ಪೂರ್ಣ ಚಂದಿರರೇ
ಅನುಬಂಧ ಮರೆತು ಹಗೆಯಂತಾದವರೇ॥ಜೋ॥

(ಕತ್ತಲಾಗುತ್ತಾ ಹೋಗುವುದು– ನೇಪಥ್ಯದಿಂದ ಘೋಷಣೆ ಕೇಳಿ ಬರುವುದು. ಚಕ್ರವರ್ತಿ ಭರತ ಮತ್ತು ಯುವರಾಜ ಬಾಹುಬಲಿ ಯುದ್ಧ ಮಾಡುವರಂತೆ. ಕೇಳ್ರಪ್ಪೋ.)

●

ದೃಶ್ಯ – ೧೦

[ಯುದ್ಧಭೂಮಿ. ಭಟರು ಕಾವಲು ಕಾಯುತ್ತಿದ್ದಾರೆ. ಅಲ್ಲಿಗೆ ಬಂದ ಚಮ್ಮಾರ ತನ್ನ ಗಲ್ಲೆ ಬಾನಿಯಿಂದ ಆ ಪ್ರದೇಶಕ್ಕೆ ನೀರು ಚಿಮುಕಿಸುತ್ತಿದ್ದಾನೆ. ಅವನನ್ನು ತಡೆದ ಭಟರು]

ಭಟ : ಎಲವೋ ಯಾರು ನೀನು? ಈ ಯುದ್ಧ ಭೂಮಿಯಲ್ಲಿ ಏನು ಮಾಡುತ್ತಿದ್ದಿಯಾ?

ಚಮ್ಮಾರ : ಭೂಮಿ ತಾಯಿಗೆ ತಣವು ಮುದ್ದೆ ಮಾಡಿ ಪೂಜೆ ಮಾಡುತ್ತಿದ್ದೇನ್ರಪ್ಪಾ.

ಭಟ : ಈ ಭೂಮಿ ದೆಸೆಯಿಂದ ಈ ಎಲ್ಲಾ ಸಮಸ್ಯೆಗಳು. ಇದಕ್ಕೆ ಪೂಜೆ ಬೇರೆ ಕೇಡು.

ಚಮ್ಮಾರ : ಅವ್ವ ತಾಯಿ ಚಿಗುರಿಸೋದು ಬಿಟ್ಟು ಒಣಗಿಸೋದು ತಿಳಿಯದವಳು ನೀನು. ಇವೊತ್ತು ಈ ಅಣ್ಣತಮ್ಮರಲ್ಲಿ ಒಣಗಿರೋ ಹೊಕ್ಕಳ ಬಳ್ಳಿಯನ್ನು ಚಿಗುರಿಸುವಂತೆ ಮಾಡು ತಾಯಿ.

ಭಟ : ನಡಿಯಯ್ಯ ಸಾಕು ನಿನ್ನ ಪುರಾಣ. ಬಂದ್ಬುಟ್ಟ ಏನೋ ಮಂತ್ರವಾದಿ ತರ ಕಿತ್ತೋಗಿರೊ ಈ ಗಲ್ಲೇಬಾನೆ ನೀರು ಹಾಕಿಬಿಟ್ಟರೆ ಕಿತ್ತೋಗಿರೊ ಸಂಬಂಧಗಳು ಕೂಡ್ಕಂಡ್‌ಬಿಡ್ತಾವಾ... ನಡಿನಡಿ... (ಅಷ್ಟರಲ್ಲಿ ಅಲ್ಲಿಗೆ ಅರಿಷ್ಟನೇಮಿ ಮತ್ತವನ ಶಿಷ್ಯರು ಬರುತ್ತಾರೆ. ಚಮ್ಮಾರನನ್ನು ನೋಡಿ)

ಅರಿಷ್ಟನೇಮಿ : ಅಯ್ಯ ಮಹಾನುಭಾವ ನಿಲ್ಲು. ಹಾದಿ ಬಿದ್ದ ನಿನ್ನ ನೆರಳನ್ನು ಹಿಂದಾಡಿ ಬಂದಿದ್ದೇವೆ.

ಭಟ : ಏಯ್ ನಿಮಗೆ ಬೇರೆ ಹೇಳಬೇಕಾ ಇದು ಯುದ್ಧಭೂಮಿ ಹೋಗಿ ದೂರ. ಅದೋ ರಣ ಕಹಳೆ ಮೊಳಗಿತು. ಹಿಂದೆ ನಡಿಯಿರಿ. (ತಡೆಯುತ್ತಾನೆ)

ಅರಿಷ್ಟನೇಮಿ : ನಮ್ಮ ಕಾಲ ಮಿಂಚುವ ಕೊನೆಯ ಗಳಿಗೆ ಬಂತು. ಆ ಚಮ್ಮಾರ ವಿಧಿಯ ಚಮತ್ಕಾರ ಬಲದಿಂದ ನಮ್ಮ ಕೈಗೆ ಸಿಕ್ಕಂತೆ ಸಿಕ್ಕಿ

ಮರೆಯಾಗುತ್ತಿದ್ದಾನೆ. ನಾವು ಅದೃಷ್ಟಕ್ಕೆ ಬದಲು ದುರಾದೃಷ್ಟವನ್ನು ಬೆನ್ನು ಹತ್ತಿದ್ದೆವೆಯೋ ಹೇಗೋ.

ಶಿಷ್ಯ : ಆ ಬಂಡೆಯಿಂದ ಚಿಮ್ಮಿದ ರಕ್ತವನ್ನು ನಿಲ್ಲಿಸುವ ಕಾರಣ ಹುಡುಕಿ ಬಂದ ನಮಗೆ ರಕ್ತವೇ ದಾರಿಯಾಗಿರುವುದು ಚೋಧ್ಯವಲ್ಲವೆ?

ಶಿಷ್ಯ 2 : ಶಾಂತಿಯನ್ನು ಬೆನ್ನಟ್ಟಿ ಬಂದ ನಾವು ಈಗ ರಣರಂಗದಲ್ಲಿ ಅಣ್ಣತಮ್ಮಂದಿರು ಪರಸ್ಪರ ಹೊಡೆದಾಡುವ ರಣರಂಗಕ್ಕೆ ಬಂದು ಮುಟ್ಟಿದ್ದೇವೆ.

ಅರಿಷ್ಟನೇಮಿ : ನಮ್ಮ ಪಯಣದ ತೆಪ್ಪದಲ್ಲಿ ಒಂದು ತೂತನ್ನು ಮುಚ್ಚಿ ಹಿಡಿಯುವಷ್ಟರಲ್ಲಿಯೇ ಮುಚ್ಚಿದ ಕೈ ಬೆರಳ ಸಂಧಿಯಿಂದ ಮತ್ತೊಂದು ತೂತು.

ಶಿಷ್ಯ : ಗುರುಗಳೆ ಅದೋ ಆ ದಿಕ್ಕಿನಿಂದ ಭರತ ಚಕ್ರವರ್ತಿಯ ಪ್ರವೇಶ ವಾಗುತ್ತಿದೆ. ಆತನ ಮುಖದಲ್ಲಿ ಸೂರ್ಯ ದಗದಗಿಸುತ್ತಿರುವಂತೆ ಕಾಣುತ್ತಿದೆ.

(ಭರತನ ಪ್ರವೇಶ. ಚಕ್ರರತ್ನ ಬೆನ್ನ ಹಿಂದಿದೆ. ಮಾರ್ಚ್ ಪಾಸ್ನಲ್ಲಿ ಬರುತ್ತಿದೆ)

ಭುವನೈಕ್ಯ ಚಕ್ರವರ್ತಿ... ಆದಿದೇವನ ಅಗ್ರ ತನಯನ್... ಜಯಹೋ...

(ಜಯಕಾರಗಳು ನೇಪಥ್ಯದಿಂದ ಕೇಳಿ ಬರುತ್ತಿದೆ.)

ಶಿಷ್ಯ 2 : ಗುರುಗಳೇ ಇದೋ ಈ ದಿಕ್ಕಿನಿಂದ ಬಾಹುಬಲಿಯ ಪ್ರವೇಶ ವಾಗುತ್ತಿದೆ. ಅರೆ ಇದೇನಿದು ಈತನ ಮುಖದಲ್ಲಿ ಗ್ರಹಣದ ದುಗುಡ ಕಂಡುಬರುವುದಲ್ಲಾ. (ಬಾಹುಬಲಿಯ ಪ್ರವೇಶ)

ಮಹಾ ವೀರಾಧಿ ವೀರ ಯುವರಾಜ ಬಾಹುಬಲಿ ಅವರಿಗೆ ಜಯಹೋ...

ಭರತ : ಮಹಾಮಂತ್ರಿಗಳೇ ನಾನು ಈ ಭೂಮಂಡಲವನ್ನು ನನ್ನ ಬಾಹುಬಲದಿಂದಲೇ ಗೆದ್ದಿದ್ದೇನೆ. ಹೆಸರಿನಿಂದಲ್ಲಾ. ಈಗಲೂ ಕಾಲಮಿಂಚಿಲ್ಲ.

ಬಾಹುಬಲಿ : ಮಹಾಮಂತ್ರಿಗಳೇ ನಾನು ಹೋರಾಟಕ್ಕೆ ಸಿದ್ಧನಾಗಿದ್ದೇನೆ. ಈ ಯುದ್ಧಭೂಮಿ ಯಾರದು ಹೆಸರಿನಬಲ ಯಾರದು ಬಾಹುಬಲ ಎಂಬುದನ್ನು ನಿರ್ಣಯಿಸಲಿದೆ.

(ವೇದಿಕೆಯ ಹಿಂಭಾಗದಲ್ಲಿ ಎತ್ತರದ ಸ್ಥಳದಲ್ಲಿ ಈ ಯುದ್ಧಕ್ಕೆ ಸಾಕ್ಷಿಯಾಗಲು ರಾಜಪರಿವಾರ ನೆರೆದಿದೆ. ಮಧ್ಯದಲ್ಲಿ ಮಂತ್ರಿಗಳು ರಾಣಿಯರು ನೆರೆದಿದ್ದಾರೆ.)

ಮಹಾಮಂತ್ರಿ : ಮಹಾ ಜನಗಳೇ ಇಂದು ನಮ್ಮ ಪಾಲಿಗೆ ಅತ್ಯಂತ ದುಃಖದ ದಿನ. ಏಕೆಂದರೆ ನಮ್ಮ ಚಕ್ರವರ್ತಿಗಳಾದ ಭರತ ಮಹಾರಾಜರು ಮತ್ತು ಯುವರಾಜ ಬಾಹುಬಲಿ ಪರಸ್ಪರ ಯುದ್ಧಕ್ಕೆ ತೊಡೆತಟ್ಟಿ ನಿಂತಿದ್ದಾರೆ. ಈ ಅಣ್ಣತಮ್ಮಂದಿರ ಯುದ್ಧದಲ್ಲಿ ಪ್ರಪಂಚದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಎರಡೂ ಕಡೆಯ ಸೈನ್ಯಗಳು ಕಾದಾಡಲು ನಿರಾಕರಿಸಿವೆ. ಆದ್ದರಿಂದ ಈಗ ಅಣ್ಣತಮ್ಮಂದಿರು ಈ ರಣರಂಗದಲ್ಲಿ ಕಾದಾಡಲಿದ್ದಾರೆ. ಈ ಯುದ್ಧದಲ್ಲಿ ಯಾರು ಗೆದ್ದರೂ ಸೋಲುವವರು ನಾವೇ ಆಗಿದ್ದೇವೆ. ಯುದ್ಧದ ನಿಯಮಗಳನ್ನು ಈಗ ದಂಡನಾಯಕರು ಪ್ರಕಟಿಸಲಿದ್ದಾರೆ. (ಕೋಲಾಹಲವಾಗುತ್ತದೆ)

ದಂಡನಾಯಕ : ಸದ್ದು. (ಮೌನ) ಈ ಭೂಮಿಯ ಒಡೆತನವನ್ನು ನಿರ್ಣಯಸಲಿರುವ ಇವೊತ್ತಿನ ಯುದ್ಧವನ್ನು ಮೂರು ಪ್ರಕಾರಗಳಲ್ಲಿ ಆಯೋಜಿಸಿದ್ದೇವೆ. ಒಂದು ಮೊದಲಿಗೆ ಈ ಇಬ್ಬರೂ ದೃಷ್ಟಿಯುದ್ಧವನ್ನು ಮಾಡಬೇಕು. ಎರಡನೆಯದಾಗಿ ಜಲಯುದ್ಧವನ್ನು ಮಾಡಬೇಕು. ಅಂತಿಮ ಸುತ್ತಿನಲ್ಲಿ ಮಲ್ಲಯುದ್ಧವನ್ನು ಮಾಡಬೇಕು. ಈ ಮೂರು ಯುದ್ಧಗಳಲ್ಲಿ ಜಯಸಿದವರು ನಮ್ಮ ಮುಂದಿನ ಚಕ್ರವರ್ತಿಗಳಾಗಲಿದ್ದಾರೆ. ಸೋತವರು ಗೆದ್ದವರಲ್ಲಿ ಶರಣಾಗತಿಯನ್ನು ಪ್ರಕಟಿಸಿ ಸಾಮಂತರಾಗಿರಬೇಕು.

ಮಹಾಮಂತ್ರಿ : ಇದು ನಿಮಗೆ ಒಪ್ಪಿಗೆ ಇದೆಯೇ?

ಜನ : ಹೌದು ಹೌದು.

ದಂಡನಾಯಕ: ಸರಿ ಆಗಾದರೆ ಅಖಾಡಕ್ಕೆ ಸ್ಪರ್ಧಿಗಳ ಆಗಮನವಾಗಲಿ.

ಶಿಷ್ಯ : ಗುರುಗಳೇ ಅದೋ ಬಾಹುಬಲಿ ತನ್ನ ಮೈ ಮೇಲಿನ ವಸ್ತ್ರವನ್ನು ತೆಗೆದರು. (ವಿವರಣೆಗೆ ತಕ್ಕಂತೆ ಬಾಹುಬಲಿ ಅಭಿನಯಿಸುತ್ತಿರುತ್ತಾನೆ) ಆಹಾ ಏನು ತೇಜಸ್ಸು. ಎಂಥ ಮೈಕಟ್ಟು. ತಮ್ಮ ಮೈಯನ್ನ ತಾವೇ ಹೆಮ್ಮೆಯಿಂದ ನೋಡಿಕೊಳ್ಳುತ್ತಿದ್ದಾರೆ.

ಶಿಷ್ಯ 2 : ಗುರುಗಳೇ ಅದೋ ಅಖಾಡದ ವರೆಗೆ ಭರತ ಚಕ್ರವರ್ತಿಗಳ ಆಗಮನವಾಗುತ್ತಿದೆ. ಅವರ ನಡಿಗೆಯಲ್ಲಿ ಜಗತ್ತನ್ನು ಜಯಸಿರುವ ಗತ್ತು ಗರ್ವಗಳು ಕಾಣುತ್ತಿವೆ.

ಬಾಹುಬಲಿ : ನಾನು ಸಿದ್ಧನಿದ್ದೇನೆ. ಯುದ್ಧ ಘೋಷಣೆಯಾಗಲಿ. ಈ ಧರಣಿಯ ಒಡೆಯನಾರೆಂದು ತೋರುತ್ತೇನೆ.

ಭರತ : ನಾನು ಷಟ್ ಮಂಡಲಗಳ ಮೇಲೆ ಯುದ್ಧ ಘೋಷಿಸಿದ ಗಳಿಗೆಯಿಂದಲೇ ಸಿದ್ಧನಿದ್ದೇನೆ. ನಾನು ಗೆದ್ದ ಯುದ್ಧಗಳೇ ನನ್ನ ಬಾಹುಗಳಲ್ಲಿ ವಿಜಯನದಿಯಾಗಿ ಹರಿಯುತ್ತಿವೆ.

ಅರಿಷ್ಟನೇಮಿ : ಇದೇನಿದು ನನ್ನ ಕಣ್ಣು ಮಂಜಾಗಿಲ್ಲ ತಾನೇ? ಅಖಾಡದೊಳಗೆ ಇಳಿಯುತ್ತಿರುವುದು ಭರತನಲ್ಲ.

ಶಿಷ್ಯರು : ಗುರುಗಳೇ ಅದು ಚಕ್ರರತ್ನ.

ಜನ : ಇದು ಮೋಸ. ಯುದ್ಧದ ಉಲ್ಲಂಘನೆ. ತಾನು ಯುದ್ಧ ಮಾಡುತ್ತೇನೆ ಎಂದ ಭರತ ಈಗ ಈ ಚಕ್ರರತ್ನವನ್ನು ತನ್ನ ಬದಲಿಗೆ ಯುದ್ಧಕ್ಕೆ ಇಳಿಸುತ್ತಿದ್ದಾನೆ.

ಭರತ : ಸದ್ದು. ನೀವು ನಾನು ಗೆದ್ದ ನೆಲದ ಮೇಲೆ ನಿಂತಿದ್ದೀರಿ. ಚಕ್ರರತ್ನ ನನ್ನ ಸೇವಕ. ನನ್ನ ಪ್ರತಿನಿಧಿ. ನನ್ನ ಬದಲಿಗೆ ಯುದ್ಧ ಮಾಡುತ್ತದೆ. ಅದರ ಸೋಲು ಗೆಲವುಗಳನ್ನು ನಾನು ನನ್ನದೆಂದು ಒಪ್ಪಿಕೊಳ್ಳುತ್ತೇನೆ.

ಚಕ್ರರತ್ನ : ಪ್ರಭು ನಿಮ್ಮ ಪದತಲದಲ್ಲಿ ಈ ಅಹಂಕಾರಿಯನ್ನು ಕ್ಷಣದೊಳಗೆ ಕೆಡವುತ್ತೇನೆ. ಅಪ್ಪಣೆ ಕೊಡಿ.

ಮಹಾಮಂತ್ರಿ : ಮಹಾರಾಜ ಇದು ಯುದ್ಧೋಚಿತವಲ್ಲ. ನೀವೇ ಯುದ್ಧ ಮಾಡಬೇಕು. ನಿಮ್ಮ ಪ್ರತಿನಿಧಿಯಾಗಿ ಬೇರೆಯವರು ಯುದ್ಧ ಮಾಡುವುದು ಸಲ್ಲದು.

ಭರತ : ಏಕೆ ಸೋಲಿನ ಭಯವೇ? ಚಕ್ರರತ್ನ ನಾನು ಬೇರೆ ಬೇರೆಯಲ್ಲ. ಚಕ್ರರತ್ನ ನನ್ನ ನೆರಳು. ಅದು ಅಭಿಷ್ಟ. ಚಕ್ರರತ್ನವನ್ನು ಸೋಲಿಸದೆ ಈ ಭರತನನ್ನು ಜೈಸಲಾಗದು. ಈಗಲೂ ಅವನಿಗೆ ಶರಣಾಗಲು ಹೇಳಿ ಯುದ್ಧವನ್ನು ನಾನು ಉಪಸಂಹರಿಸಿಕೊಳ್ಳುತ್ತೇನೆ. ಯುದ್ಧವೆಂದರೆ ಹುಡುಗಾಟವಲ್ಲ.

ಬಾಹುಬಲಿ : (ಯೋಚಿಸಿ) ನಾನು ಈ ಚಕ್ರರತ್ನದೊಂದಿಗೆ ಯುದ್ಧ ಮಾಡಲು ಒಪ್ಪಿದ್ದೇನೆ. ಭರತನ ಅಹಂಕಾರದ ಶಕ್ತಿ ಈ ಚಕ್ರರತ್ನದಲ್ಲಿದೆ. ಯುದ್ಧದ ಉನ್ಮಾದದಲ್ಲಿ ತಲೆ ತಿರುಗುತ್ತಿರುವ ಈ ಚಕ್ರರತ್ನದ ಸೊಕ್ಕುಮುರಿದು ಚಕ್ರವರ್ತಿಗಳಿಗೆ ಸೋಲೆಂದರೇನು ಎಂಬುದನ್ನು ರುಚಿ ತೋರಿಸುತ್ತೇನೆ.

ಚಕ್ರರತ್ನ : ನನ್ನ ಸಾಮಾರ್ಥ್ಯವನ್ನು ಬಲ್ಲ ಭೂತಕ್ಕೆ ನಾನು ಸೋತ ನೆನಪಿಲ್ಲ. ಇನ್ನು ಭವಿಷತ್ ನಾನು ಸೋಲುವುದನ್ನು ಕಲ್ಪಿಸಿಕೊಳ್ಳಲಾರದು. (ನಕ್ಕು) ಇನ್ನು ವರ್ತಮಾನ. ನನ್ನ ಗೆಲುವಿನ ಸೋಪಾನ.

ಬಾಹುಬಲಿ : ಇವೊತ್ತಿನ ನಿನ್ನ ಸೋಲು ಈ ಭೂಮಿಯ ಕಣಕಣಕ್ಕೂ ನೆನಪಿರುವ ಹಾಗೆ ಮಾಡುತ್ತೇನೆ. ಬಾ.

(ರಣಘೋಷವಾಗುತ್ತದೆ. ಇಬ್ಬರ ಕಾಳಗವನ್ನು ಜನ ಆಡಿ ತೋರಿಸುತ್ತಾರೆ. ರಂಗ ಒಂದು)

ಶಿಷ್ಯ 1 : ಅಗೋ ನೋಡಿ. ಶುರುವಾಯಿತು. ದೃಷ್ಟಿ ಯುದ್ಧ.

ಶಿಷ್ಯ : ಈ ಚಕ್ರರತ್ನದ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ನೋಡಿದವರ ಶಕ್ತಿಯನ್ನು ಹೀರಿ ಕೊಳ್ಳುವುದಂತೆ.

ಹಾಡು

ಉರಿವಗೋಳಗಳೋ ಅಗ್ನಿಕುಂಡಗಳೋ
ಚಕ್ರರತ್ನದ ಕಣ್ಣುಗಳೋ... ಸಿಡಿಯುವ ಸಿಡಿಲಿನ ಚೂರುಗಳೋ
ಹಿಮದ ಗಡ್ಡೆಗಳೋ ಕಪ್ಪು ಮೋಡಗಳೋ
ಬಾಹುಬಲಿಯ ಕಣ್ಣುಗಳೋ ನೀಲಾಕಾಶದ ಅಂಚುಗಳೋ

ಅರಿಷ್ಟನೇಮಿ : ಅರೆ ಇದು ನಿಜವೇ? ಕೇಳಿಸಿಕೊಳ್ಳಿ. ದೃಷ್ಟಿಯುದ್ಧದಲ್ಲಿ ಚಕ್ರರತ್ನ ಸೋತು ಹೋಯಿತು.

ಶಿಷ್ಯ : ಗುರುಗಳೇ ಅದೋ ಜಲಯುದ್ಧ ಮೊದಲಾಯಿತು.

ಹಾಡು

ಗಿರಗಿರಗಿರಗಿರ ಕಾಲನ ಸುಳಿಯೋ ಕಾಳನ ಬಲೆಯೋ
ಅಗಸದೆತ್ತರ ಅಲೆಗಳ ಅಬ್ಬರ ಚಕ್ರರತ್ನದ ಕಡೆಯಿಂದ
ಹರಹರಹರಹರ ಶಿವನ ಜಡೆಯೋ ಹರಿಯ ತೊಡೆಯೋ
ಬೋರ್ಗರವಳು ಗಂಗೆಯು ಬಾಹುಬಲಿಯ ಕರದಿಂದ.

ಶಿಷ್ಯ : ಗುರುಗಳೇ. ಈ ಅಲೆಗಳ ಅಬ್ಬರದಲ್ಲಿ ಭೂಮಿ ಕೊಚ್ಚಿ ಹೋಗುತ್ತಿರುವಂತಿದೆ.

ಶಿಷ್ಯ : ಇದು ನಿಜಕ್ಕೂ ಪವಾಡ. ಬಾಹುಬಲಿ ಜಲಯುದ್ಧದಲ್ಲಿ ಗೆದ್ದರೆಂದು ಘೋಷವಾಗುತ್ತಿದೆ.

ಅರಿಷ್ಟನೇಮಿ : ಅಲ್ಲಿ ನೋಡಿ ಈಗ ಮಲ್ಲಯುದ್ಧ ಆರಂಭವಾಗಿದೆ. ಇಲ್ಲ ಸೋಲಿನ

ಅಪಮಾನದಿಂದ ಕುದಿಯುತ್ತಿರುವ ಭರತನೀಗ ಅಖಾಡಕ್ಕೆ ಇಳಿದ್ದಿದ್ದಾನೆ.

ಶಿಷ್ಯ : ಅವನಿಗೆ ಸೋಲುವ ಭಯ ಇರಬೇಕು.

ಹಾಡು

ಮದೋನ್ಮತ್ತ ಗಜವೋ ಮಂದಾರ ಗಿರಿಯೋ
ಅಡಿಗಡಿಗೆ ಕಂಪಿಸುವ ಭೂಕಂಪನವೋ
ಆಯಿತು ಆಯಿತು ಮೇಲಾಯಿತು ಭರತನ ಬಲವು
ಉರುಳಿತು ಉರುಳಿತು ಬದಲಾಯಿತು ಚಿತ್ರವೇ
ಮುರಿಯುತು ಮುರಿಯಿತು ಗರ್ವದ ಮುಳ್ಳು
ಹರಿಯಿತು ಮೈಯಿ ಹರಿಯಿತು ರಕ್ತ
ಕೆಂಪೋ ಕೆಂಪು ತೊಯ್ಯುತಿದೆ ನೆತ್ತರ ನೆಲವು.

ಶಿಷ್ಯ : ಗುರುಗಳೇ ಇದೇನಾಯ್ತು. ಭರತನನ್ನು ಅಲಕ್ಕನೆ ನಭಕ್ಕೆ ಹಿಡಿದ ಆ ದಿವ್ಯ ನೋಟವನ್ನು ನೋಡಿ.

ಭರತ : ಅಯ್ಯ ತಮ್ಮ ಬಾಹುಬಲಿ ನಾನು ಕಣೋ ನಿನ್ನ ಅಣ್ಣ ಭರತ.

ಅರಿಷ್ಟನೇಮಿ : ಅಯ್ಯೋ ಈ ಘೋರವನ್ನು ನೋಡಲಾಗದು. ಕಣ್ಣು ಮುಚ್ಚಿ ಹೋಗುತ್ತಿವೆ.

ಶಿಷ್ಯ : ಗುರುಗಳೆ ಪವಾಡ, ಬಾಹುಬಲಿ ಅಣ್ಣ ಭರತನನ್ನು ಹೂವಿನಂತೆ ನೆಲದ ಮೇಲೆ ಇಳಿಸಿದ.

ಬಾಹುಬಲಿ : ಸೋತವನು ನಾನು.

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಚಲಾಚಲ ರಾಜ್ಯಲಕ್ಷ್ಮಿ ! ಭೂ
ಲಲನೆಯನಯ್ಯನಿತ್ತುದುಮನಾಂ ನಿನಗಿತ್ತೆನ್ ಇದೇವುದಣ್ಣ, ನಿ
ನ್ನೊಲಿದ ಲತಾಂಗಿಗಂ ಧರೆಗಂ ಆನು ಒಲಿದಂದು ನೆಗಟ್ತೆ ಮಾಸದೇ?!
ಈ ದೋಷವನ್ನ ತಪಸ್ಸಿನಲ್ಲಿ ನೀಗುವೆನಣ್ಣ...
(ಎಂದು ಕಾಲಬಳಿ ಕುಳಿತಿದ್ದವನು ಎದ್ದು ಹೊರಡುತ್ತಾನೆ. ಆಗ ಭರತ)

ಭರತ : ಚಕ್ರರತ್ನ. ಕೊಂದು ಬಿಡು ಅವನನ್ನು. ಶತ್ರುಶೇಷ ಉಳಿಯಬಾರದು.

ಅರಿಷ್ಟನೇಮಿ : ಅಯ್ಯೋ ನಿಲ್ಲಿಸಿ. ಗೆಲುವನ್ನು ಪರಿತ್ಯಜಿಸಿದವನನ್ನು ಹಿಂದಿನಿಂದ ಕೊಲ್ಲ ಹೋಗುತ್ತಿರುವ ಆ ಚಕ್ರರತ್ನವನ್ನು ತಡೆಯಿರಿ.

(ಅಯ್ಯೋ ಇದು ಮೋಸದ ಯುದ್ಧ. ಅನ್ಯಾಯ.)

ಶಿಷ್ಯ : ಗುರುಗಳೆ ನಮ್ಮ ಕಣ್ಣಗಳು ಕಾಣುತ್ತಿರುವುದು ನಿಜವೇನು! ಅಲ್ಲಿ ನೋಡಿ ಬಾಹುಬಲಿಯ ಮೈಯಿಂದ ಸಿಡಿದ ರಕ್ತದಲ್ಲಿ ಚಕ್ರರತ್ನ ಕರಗಿ ಹೋಗುತ್ತಿದೆ. ರಕ್ತ ಚೆಲ್ಲಿ ಹೋಗುತ್ತಿರುವ ಬಾಹುಬಲಿ. ಬಾಹುಬಲಿಯ ಹಿಂದೆ ನದಿಯಂತೆ ಹರಿಯುತ್ತಿದೆ.

ಅರಿಷ್ಟನೇಮಿ : ಅರೆ ಇಲ್ಲಿ ಎಲ್ಲಿಯೋ ಇರಬೇಕು ಆ ಚಮ್ಮಾರನನ್ನು ಹುಡುಕಿ. ಈ ವಿಷ ಚಕ್ರದಿಂದ ಜೀವವನ್ನು ಉಳಿಸಬಲ್ಲ ಚಮ್ಮಾರನೆಲ್ಲಿ?

(ಸ್ಪಾಟ್ ಲೈಟಿನ ಕೆಳಗೆ ಒಬ್ಬ ವ್ಯಕ್ತಿ ಸ್ಟೇಜಿಗೆ ಬೆನ್ನು ಹಾಕಿ ನಿಂತಿರುತ್ತಾನೆ)

ಶಿಷ್ಯ : ಗುರುಗಳೇ ಬನ್ನಿ ಇಲ್ಲಿ. ಬಾಹುಬಲಿ!

ಶಿಷ್ಯ : ಅರೆ ತನ್ನ ಗಾಯಗಳನ್ನು ತಾನೇ ಹೊಲಿಯುತ್ತಿದ್ದಾನೆ.

ಅರಿಷ್ಟನೇಮಿ : ಗೆದ್ದರೂ ಗೆಲ್ಲಬೇಕು ನಿನ್ನಂತೆ ಬಿಟ್ಟುಕೊಡುವುದರಿಂದ.

(ವ್ಯಕ್ತಿ ರಂಗದ ಕಡೆ ತಿರುಗಿದರೆ ಚಮ್ಮಾರ. ದಿಗ್ಭ್ರಮೆ)

ಬಾಹುಬಲಿ : ನಾನು...

ಅರಿಷ್ಟನೇಮಿ : ಸ್ವಾಮಿ ನಮ್ಮ ಅಜ್ಞಾನವನ್ನು ಮನ್ನಿಸಿ. ತಾವೇ ಜಗದ ಗಾಯಗಳನ್ನು ಹೊಲಿಯುವ ಚಮ್ಮಾರನೆಂದು ಅರಿಯದೇ ಹೋದೆವು.

ಬಾಹುಬಲಿ : ನಾನು ಆ ಯುದ್ಧದ ನಂತರ ಹನ್ನೆರಡು ವರ್ಷಗಳ ಕಾಲ ನಿಂತು ಪ್ರಾಯಶ್ಚಿತ್ತದಿಂದ ಯೋಚಿಸಿದೆ. ನಾನೇಕೆ ನನ್ನಣ್ಣ ಭರತನಲ್ಲಿ ಯುದ್ಧ ಮಾಡಿದೆ ಎಂದು? ಮನುಷ್ಯನಿಗೇಕೆ ಹಿಂಸೆಯಿಂದ ಸಂತೋಷವಾಗುತ್ತದೆ? ತಂದೆಯ ತಿಳುವಳಿಕೆ ಮಗನಿಗೇಕೆ ಬರುವುದಿಲ್ಲವೆಂದು? ಈ ಗಲ್ಲೆಬಾನಿಯ ನೀರು ಹಲವು ಜೀವದ ಚರ್ಮಗಳು ನೆನೆದ ನೀರು, ಹಲವು ಜನ್ಮಗಳದು, ಹಲವು ಕಣ್ಣುಗಳದು. ಈ ನೀರು ಹುಣ್ಣನ್ನು ಮಾಯಿಸುವ ಶಕ್ತಿ ಪಡೆದಿದೆ. ಇದರಿಂದ ಕಾಲದ ಕೀವನ್ನು ತೊಳೆಯುತ್ತೇನೆ. ಈ ಸೂಜಿಯಿಂದ ಗಾಯಗಳನ್ನು ಹೊಲಿಯುತ್ತೇನೆ. ಮೈಮೇಲಿನ ರಕ್ತ ನಿಲ್ಲಬೇಕೆಂದರೆ ಗಾಯದ ಮೇಲೆ ಹುಡಿ ಮಣ್ಣು ಸುರಿದರೆ ಸಾಕು. ಈ ಭೂಮಿತಾಯಿ ತನ್ನ ಮಾಂತ್ರಿಕ ಕೈಯಿಂದ ಎಂಥ ಗಾಯವನ್ನಾದರೂ ಮಾಯಿಸುತ್ತಾಳೆ. (ತನ್ನ ಗಾಯದ ಮೇಲೆ ಮಣ್ಣು ಸುರಿದು ಕೊಳ್ಳುತ್ತಾನೆ)

ದೃಶ್ಯ ಬದಲಾಗುತ್ತದೆ.

ಸೂಜಿಯೇ ಓ ಸೂಜಿಯೇ
ಗಾಯವನೊಲಿಯುವ ಸೂಜಿಯೇ
ಗಂಗೆಯೇ ಓ ಗಂಗೆಯೇ
ನಂಜನು ತೊಳೆಯುವ ಗಂಗೆಯೇ
ನೆಪ್ಪು ದಾರವ ಪೋಣಿಸಿ
ಹೊಕ್ಕುಳ ಬಳ್ಳಿಯ ಕೂಡಿಸಿ
ನೋಯುವ ಬೇರನು ಕೀಳಿಸಿ
ಸೂಜಿಯೇ ಓ ಸೂಜಿಯೇ॥
ಜೀವ ಚಕ್ರವ ಉರುಳಿಸಿ
ಆಸೆಯ ಕಣ್ಣೋ ಅನಾದಿಯ ಹುಣ್ಣೋ
ಮಣ್ಣಿನ ಎದೆ ಮೇಲೆ ಗಾಯ
ಗಲ್ಲೆಬಾನಿಯ ನೀರು ಸೋಂಕಿಸು
ಕೀವು ನೆತ್ತರು ಮಾಯಾ॥
ಗಂಗೆಯೇ ಓ ಗಂಗೆಯೇ
ನಂಜನು ತೊಳೆಯುವ ಗಂಗೆಯೇ॥

ಅರಿಷ್ಟನೇಮಿ : (ದೊರೆ ಚಾವುಂಡರಾಯರಿಗೆ) ತಮ್ಮ ಅಣತಿಯಂತೆ ಲೋಕವನ್ನು ತಿರುಗಿ ಜಿನಮೂರ್ತಿಯನ್ನ ಕಡೆಯುವ ಕಲ್ಲನ್ನು ಕಂಡು ಹಿಡಿದಿದ್ದೇವೆ. ಇದು ಅಂದು ಬಾಹುಬಲಿಯ ರಕ್ತ ತಾಗಿ ಪುಡಿಪುಡಿಯಾಗಿ ಹೋದ ಚಕ್ರರತ್ನದ ಮೈಯಿದು. ಯುಗಯುಗಗಳಲ್ಲಿ ಅದು ನಡೆಸಿದ ಎಷ್ಟೋ ಯುದ್ಧಗಳಲ್ಲಿ ಕುಡಿದ ರಕ್ತವನ್ನು ಮೈ ತುಂಬಿಕೊಂಡಿದೆ. ಆ ನೆತ್ತರು ಹರಿದು ಹೋಗದೆ ಅಲ್ಲಿ ಕೇವಲಿ ರೂಪಗೊಳ್ಳಲು ಸಾದ್ಯವಿಲ್ಲ. ಸಮಣ ಕಲ್ಲಿನಲ್ಲೂ ಮೈ ಪಡೆಯಲೂ ಕೂಡ ರಕ್ತ ಬಸಿಯಬೇಕಿದೆ. ತಾವು ದಯಮಾಡಿ ನಮಗೆ ಬಂಡಿಗಟ್ಟಲೆ ಹರಿಷಣ ಕುಂಕುಮ ಗಂಧ ಕೆಮ್ಮಣ್ಣ ಹುಡಿಗಳನ್ನು ತಕ್ಷಣ ಕಳಿಸಿ ಕೊಡಬೇಕು. ಮುಂದಿನ ವಸಂತದಲ್ಲಿ ಈ ಲೋಕ ಜಗತ್ತಿನ ಬೃಹತ್ ಗೊಮ್ಮಟನನ್ನು ದರ್ಶನ ಕಾಣಲಿದೆ.

•

ನಾಟಕ–೨

ಅನಭಿಜ್ಞ ಶಾಕುಂತಲ

ದೃಶ್ಯ – ೧

[ರಂಗ ವೇದಿಕೆಯ ಮೇಲೆ ನಿಲುವುಗನ್ನಡಿಯ ಮುಂದೆ ವ್ಯಕ್ತಿಯೊಬ್ಬ ಕುಳಿತು ತನ್ನ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಾ ಪೋಷಾಕನ್ನು ಸರಿಪಡಿಸಿಕೊಳ್ಳುತ್ತಿರುವ ಸಮಯದಲ್ಲಿ ನೇಪಥ್ಯದಿಂದ ಬಂದ ಹೆಣ್ಣೊಬ್ಬಳು ಆತನನ್ನು ಉದ್ದೇಶಿಸಿ]

ನಟಿ : ಆರ್ಯಾ... ಆರ್ಯಪುತ್ರ (ಪ್ರತಿಬಿಂಬದಲ್ಲಿ ತಲ್ಲೀನನಾಗಿರುವುದನ್ನು ಗಮನಿಸಿ) ಇದೇನಿದು, ನಾಟಕವನ್ನು ಆಡಿಸಿ ಆಟವನ್ನು ನೋಡುತ್ತಿರುವ ಪ್ರೇಕ್ಷಕರನ್ನು ಮೈಮರೆಸಬೇಕಾದ ಸೂತ್ರದಾರ ತಾನೇ ಮೈಮರೆತಂತೆ ಕಾಣುವುದಲ್ಲ. ಇರಲಿ ಮಾತಿನಿಂದ ಎಚ್ಚರಗೊಳ್ಳದವರನ್ನು ಸಂಗೀತದಿಂದ ಎಚ್ಚರಗೊಳಿಸಲು ಪ್ರಯತ್ನಿಸುವೆನು.

ಎದೆಯಲಿ ಚಂದನರಸದ ಲೇಪನ
ಕೊರಳಲಿ ಮುತ್ತಿನ ಮಣಿ ಹಾರ
ಕಟಿಯಲಿ ಸುಂದರ ಕಂಚೀಡಾಬು
ತೋಳಿಗೆ ತೋಳಬಂಧಿ ಕಂಕಣ
ಮೈಯೊಳು ತೆಳ್ಳನೆ ರೇಸಿಮೆಯಂಬರ
ಹಣೆಯಲಿ ಕುಂಕುಮ ಕಸ್ತೂರಿ
ಇಂತಿ ಈ ನವ ಮಧುಮಾಸ ಸುಂದರ
ರಮಣೀಯರ ಒಲವಿನ ಸಿಂಗಾರ ॥

ಸೂತ್ರಧಾರ : ವ್ಹಾ ವ್ಹಾ ಮೈಯಿ ಮರೆತಿರಬೇಕು ಮನಸ್ಸು ಎಚ್ಚರಿರಬೇಕು. ಕೇದಿಗೆ ಗರಿಯ ಮಾದಕದಂತೆ ನಮ್ಮ ಕಾಳಿದಾಸನ ಮಾತು.

ಗಣೇಶ : ನಿಲ್ಲಿಸಿ (ಪ್ರವೇಶ) ಎಲ್ಯೆ ನಟಿ... ನಿನಗೆ ಆಟದ ನಿಯಮಗಳು ಮರೆತು ಹೋದವೋ ಹೇಗೆ?

ನಟಿ : ಕ್ಷಮೆ ಇರಲಿ ದೇವಾ, ಆರ್ಯ. ಭರತಮುನಿಗಳು ನಾಟಕದ ಆಟವನ್ನು ಆರಂಭಿಸಿದ ದಿನದಿಂದಲೂ ಗಣಪನಿಗೆ ಅಗ್ರಪೂಜೆ ಯನ್ನು ಸಲ್ಲಿಸಿ ಆಟ ಆರಂಭಿಸುವುದು ರೂಡಿ. ಆದರೆ?

ಸೂತ್ರಧಾರ: ನಾನು ಕನ್ನಡಿಯ ಮುಂದೆ ಮೈ ಮರೆತೆ, ನೀನು ವಿನಾಯಕನನ್ನೆ ಮರೆತೆ, ಕ್ಷಮಿಸಬೇಕು ಪ್ರಭುಗಳು ತಾವು. ನಾಟಕದ ಮಾಲೀಕರು ಆಸನವನ್ನು ಅಲಂಕರಿಸಿ. ಇಷ್ಟಕ್ಕೂ ನಮ್ಮ ಈ ಮರೆವು ಕೂಡ ಅಭಿಜ್ಞಾನ ಶಾಕುಂತಲ ನಾಟಕದಿಂದಲೇ ಆದದ್ದು. ದೇಶವೆಲ್ಲಾ ಹೀಗೆ ಮರೆವಿನ ನಾಟಕ ಆಡುತ್ತಾ ಆ ವಿಸ್ಮೃತಿ ನಮ್ಮನ್ನು ಆವರಿಸಿಕೊಂಡು ಈ ಪ್ರಮಾದವಾಯಿತು. ಕ್ಷಮಿಸಬೇಕು.

ನಟಿ : ಆರ್ಯಾ... ಮುಂದಿನ ಕರ್ತವ್ಯವೇನು?

ಸೂತ್ರಧಾರ: ಓ ನಟಿಯೇ... ಆಟದ ಮೊದಲಿಗೆ ವಿಘ್ನ ನಿವಾರಕನಾದ ಗಣಪತಿಯನ್ನು ಸ್ತುತಿಸಿ ನಾಂದಿಯನ್ನಾಡದೆ ವಿರಹ ಗೀತೆಯನ್ನು ಹಾಡಿಬಿಟ್ಟೆಯಲ್ಲ...

ನಟಿ : ಆರ್ಯ... ಆಟಕ್ಕೆ ನನ್ನ ಮೈಮರೆವು ಕಂಟಕವಾಯಿತಲ್ಲ.

ಗಣೇಶ : ಇದು ನಿನ್ನ ತಪ್ಪಲ್ಲ. ಮಧುಮಾಸದ ದುಷ್ಪರಿಣಾಮ.

ಸೂತ್ರಧಾರ: ನಟಿ ಈಗಲಾದರೂ ಗಜಮುಖನಿಗೆ ಸಂತಸವಾಗುವ ಹಾಡನ್ನು ಹಾಡು. ನಮ್ಮ ನಾಟಕದ ಮಾಲೀಕರಾದ ಗಣಪತಿಯವರಿಗೆ ಸಂತಸವಾಗುವಂತಹ ಲೋಕೋತ್ತರವಾದ ಹಾಡನ್ನು ಹಾಡು.

ನಟಿ : ಹಾಗೆಯೇ ಆಗಲಿ ಆರ್ಯ... (ಹಾಡುವಳು)

ರಂಗನಾಯಕ ರಂಗ ವಿನಾಯಕ
ನೆನೆಯದೇ ನೀ ಬರುವದೇಕೋ ರಂಗಸ್ಥಳಕೆ
ಬೇಡದೆಯೆ ಕೊಡುವದೇಕೋ ವರಗಳ ಜನಕ
ವಿಘ್ನವನುಟ್ಟಿಸಿ ವಿಘ್ನವನರಸಿ
ಆಟವನಾಡಿ ದಣಿವ ದೊರೆಯೇ
ಬಣ್ಣದ ಗೀಳು ನಮ್ಮ ಕೊರೆಯೇ
ಆಟದ ಮಧ್ಯ ಬರುವುದು ದೇವಾ
ನಿನ್ನಂತವರಿಗೆ ತರವೇ..ರಂಗನಾಯಕ.

ಸೂತ್ರಧಾರ: ಶಬ್ಬಾಸ್... ನಮ್ಮ ದೇವರು ಜಗದ ನಾಟಕದ ಮಾಲೀಕರು... ನಿನ್ನ ಗಾನವನ್ನು ಕೇಳಿ ಕೈಲಾಸದಲ್ಲಿಯೇ ಅಸ್ತು ಅಸ್ತು ಎಂದು ಸುಖಿಸಿರಬೇಕು?

ನಟಿ : ಆರ್ಯ ಇಂದು ನಾವು ಯಾವ ನಾಟಕವನ್ನು ಆಡುತ್ತೇವೆ?

ಸೂತ್ರಧಾರ : ಮಾಳವಿಕಾಗ್ನಿ ಮಿತ್ರ ನಾಟಕವನ್ನು ಒಳಗೊಳಗೆ ಮೆಚ್ಚಿದ್ದ ವಿದ್ವತ್ ಜನರು ಹೊರಗೆ ಕಾಮ ಹೆಚ್ಚಾಯಿತೆಂದು ಚುಚ್ಚಿ ನುಡಿದಿದ್ದರು. ಇನ್ನು ವಿಕ್ರಮೋವರ್ಶಿಯವನ್ನು ಒಳಗೆ ಮೆಚ್ಚಿದ್ದರು ಹೊರಗೆ ಮೆಚ್ಚಿದಂತೆ ನುಡಿದರೂ ಪ್ರೇಮದ ಹುಚ್ಚು ಸ್ವಲ್ಪ ಹೆಚ್ಚಾಯಿತೆಂದು ಗೊಣಗಿದ್ದರು. ಇದರಿಂದ ರೋಸಿ ಹೋದ ಕಾಳಿದಾಸರು ಕಾಮಪ್ರೇಮಗಳನ್ನು ಸರಿಪಾಕಗೊಳಿಸಿ ಶಾಕುಂತಲ ನಾಟಕವನ್ನು ರಚನೆ ಮಾಡಿದರು. ಆ ನಾಟಕವನ್ನು ನಾವು ಆಡಬೇಕೆಂದು ವಿದ್ವತ್ ಮಂಡಳಿಯುವರ ಆದೇಶವಾಗಿರುವಂತೆ ನಾವು ಅನಭಿಜ್ಞ ಶಾಕುಂತಲವನ್ನು ಇಂದು ಇಲ್ಲಿ ಆಡಿ ತೋರಿಸಬೇಕು.

ನಟ : ಆರ್ಯ ಮತ್ತೊಂದು ವಿಘ್ನ ಎದುರಾಯಿತಲ್ಲ? ನೀವು ಅನಭಿಜ್ಞ ಎಂದಿರಿ?

ಸೂತ್ರಧಾರ : ಏನು ಅನಭಿಜ್ಞ ಎಂದೆನೆ. ಏನು ಈ ವಿಪರೀತ... ಯಾಕೋ ಇಂದು ಮನಸ್ಸೊಂದಾಡಿದರೆ ಮಾತೊಂದಾಗಿ ಕೇಳುವುದಲ್ಲಾ... ಇಂದೇಕೋ ಪದೇ ಪದೇ ಆಟಕ್ಕೆ ತೊಡರು ಉಂಟಾಗುತ್ತಿದೆಯಲ್ಲಾ... ಇರಲಿ. ಗಣಪತಿಯನ್ನು ಪ್ರಾರ್ಥಿಸಿದ್ದಾಯಿತು. ಇನ್ನು ಪಾತ್ರಧಾರಿಗಳು ಸಿದ್ಧವಾಗಿದ್ದಾರೆ ತಾನೆ?

(ಅಷ್ಟರಲ್ಲಿ ಒಬ್ಬ ವ್ಯಕ್ತಿ ಅವಸರದಿಂದ ಪ್ರವೇಶ)

ನಟ : ಯಾರು ನೀನು ? ಹೀಗೇಕೆ ನುಗ್ಗಿ ಬರುತ್ತಿರುವೆ?

ಭಟ : ಯಾರಲ್ಲಿ... ಯಾರಲ್ಲಿ?

ಸೂತ್ರಧಾರ : ನೀನು ಯಾರು? ಹೀಗೆ ಅನಿರೀಕ್ಷಿತ ಪ್ರವೇಶ ನಿಶಿದ್ಧ.

ಭಟ : ಕ್ಷಮಿಸಿ, ನನಗೆ ಶಿಷ್ಟಾಚಾರಕ್ಕೆ ಸಮಯವಿಲ್ಲ. ನಾನು ಅರಮನೆಯ ಅವಸರದ ಓಲೆಯವನು. ತುರ್ತು ಸುದ್ದಿಯನ್ನು ಮುಟ್ಟಿಸಲು ಮಹಾರಾಜರ ಆಜ್ಞೆಯಾಗಿದೆ.

ಸೂತ್ರಧಾರ : (ಸ್ವಗತ) ಇಂದೇಕೋ ಅಪಶಕುನಗಳು ಒಂದರ ಹಿಂದೆ ಒಂದು ಸಂಭವಿಸುತ್ತಿವೆ. (ಭಟನಿಗೆ) ಏನದು ಅವಸರದ ಸುದ್ದಿ. ಚಕ್ರವರ್ತಿಗಳು ರಾಜಗುರುಗಳು ಮಹಾಮಂತ್ರಿಗಳು ಕ್ಷೇಮದಿಂದ ಇರುವರು ತಾನೆ?

ಭಟ : ಅವರೆಲ್ಲಾ ಕ್ಷೇಮ. ಆದರೆ... ಕವಿ ಚಕ್ರವರ್ತಿ ಕಾಳಿದಾಸರು?

ಸೂತ್ರಧಾರ : ಏನು? ಕವಿ ಕಾಳಿದಾಸರೇ? ಏನಾಯಿತು ನಮ್ಮ ಕವಿಗಳಿಗೆ?

ಭಟ : ಕಾಳಿದಾಸ ಮಹಾಕವಿಗಳು... ಕಾಳಿದಾಸ ಕವಿಗಳು... (ದುಃಖ ಒತ್ತರಿಸಿ ಬರುವುದು) ಕೊಲೆಯಾಗಿದ್ದಾರೆ?

ಸೂತ್ರಧಾರ: ಏನು? ಕವಿ ಕಾಳಿದಾಸರ ಕೊಲೆಯಾಗಿದೆಯೇ ?

ನಟ : ಅಯ್ಯೋ... ದೇವರೆ ನಮ್ಮ ಕಾಳಿದಾಸರ ಕೊಲೆಯಾಗಿದೆ... ನಮ್ಮ ಕಾಳಿದಾಸರ ಕೊಲೆಯಾಗಿದೆ...

(ರಂಗದ ಮೇಲೆ ವೇಷದಲ್ಲಿದ್ದ ಪಾತ್ರಧಾರಿಗಳು ಬರುತ್ತಾರೆ)

ಭಟ : ಆರ್ಯಾ... ಲೋಕಕ್ಷೇಮವನ್ನು ನಿರಂತರವಾಗಿ ಬಯಸಿದ ಕವಿ ಕಾಳಿದಾಸರನ್ನು ಯಾರೋ ಪಾತಕಿ ಕೊಲೆ ಮಾಡಿದ್ದಾರಂತೆ. ನಗರದ ತುಂಬೆಲ್ಲಾ ಈ ವಾರ್ತೆ ಕಾಳ್ಗಿಚ್ಚಿನಂತೆ ಹಬ್ಬಿದೆ.

ಸೂತ್ರಧಾರ: ಯಾರು ಕೊಂದವರು? ಕವಿಗೆ ಶತ್ರುಗಳಿರಲು ಹೇಗೆ ಸಾಧ್ಯ?

ಭಟ : ನಾಗಸಾನಿಯ ಮನೆಯಲ್ಲಿ ಕೊಲೆಗೀಡಾಗಿದ್ದಾರೆ. ಯಾರೋ ಒಬ್ಬ ನಡುವಯಸ್ಸಿನ ಹೆಣ್ಣು ಕಾಳಿದಾಸರ ಎದೆಗೆ ಕತ್ತಿಯಿಂದ ತಿವಿದಿದ್ದಾಳೆ. ಅವಳನ್ನು ಬಂಧಿಸಿ ಸೆರೆ ಮನೆಯಲ್ಲಿ ಇಡಲಾಗಿದೆ. ವಿಚಾರಣೆಯಲ್ಲಿ ಅವಳು ಮೌನವಹಿಸಿದ್ದರಿಂದ ಏಕಪಕ್ಷೀಯವಾಗಿ ಆಕೆಗೆ ಮರಣ ದಂಡನೆಯನ್ನು ನ್ಯಾಯಾಧೀಶರು ವಿಧಿಸಿದ್ದಾರೆ. ಕಾಳಿದಾಸರ ಸಂಸ್ಕಾರದ ಮುನ್ನವೆ ಈ ಹೆಂಗಸ್ಸನ್ನು ನೇಣಿಗೆ ಏರಿಸುವಂತೆ ರಾಜರು ಆದೇಶ ಜಾರಿ ಮಾಡಿದ್ದಾರೆ.

ದುಶ್ಯಂತ : **ಶಕುಂತಲ ನಾಟಕದ** ಭರತ ವಾಕ್ಯದಲ್ಲಿ ಕವಿಯಾದರೂ ಏಕೆ ಹೀಗೆ ಬರೆದುಕೊಂಡಿದ್ದನೋ ಏನೋ...

(ಹಾಡಿನ ಧಾಟಿಯಲ್ಲಿ)

ಮೂಲೋಕದೊಡೆಯನು ಶಕ್ತಿಶಂಕರನು ಕರುಣಿಸಲೆನಗೆ ಮರುಹುಟ್ಟು ಇರದ ವರವನು... ಇಲ್ಲಿಯಾದರೂ ಕವಿ ಯಾಕೆ ಮರುಹುಟ್ಟು ಬೇಡವೆಂದು ಹಾಡಿದ್ದು. ಇದು ಕೊಲೆಯ ಮುನ್ಸೂಚನೆ ಎಂದು ನಮಗೇಕೆ ಅರಿವಾಗಲಿಲ್ಲ... ಅಯ್ಯೋ.. ಈ ನಾಟಕವೇ ಕೊನೆಯಾಯಿತೆ ಕವಿಗೆ. (ಗದ್ದಲವಾಗುವುದು)

ನಟ : ಅಲ್ಲಾ ಅಂತಹ ಮಹಾಕವಿಗೆ ಅದೂ ವೇಶ್ಯೆಯ ಮನೆಯಲಿ ಮರಣವೇ?..

ಕಣ್ವ : (ತನ್ನ ಗಡ್ಡವನ್ನು ನೀವುತ್ತಾ) ಅಂದ ಹಾಗೆ ಕವಿಗಳು ಸತ್ತಾಗ ಕವಿತೆ ಓದುತ್ತಿದ್ದರೆ?

ನಟ : ಹೌದು ಅವರು ಶಕುಂತಲೆ ನಾಟಕವನ್ನು ವಾಚಿಸುತ್ತಿದ್ದರಂತೆ.. ಅಲ್ಲ ಅದು ನಿನಗೆ ಹೇಗೆ ಗೊತ್ತು?

ಕಣ್ವ : ಯೋಧನಿಗೆ ಯುದ್ಧಭೂಮಿಯಲ್ಲಿ ಮರಣ ಬರುವುದಂತೆ, ವಿಟನಿಗೆ ವೇಶ್ಯಯ ಪಲ್ಲಂಗದಲ್ಲಿ ಮರಣ ಮಹಾನವಮಿಯಂತೆ. ಆದರೆ ಕವಿಗೆ ಕವಿತೆಯ ಪಾರಾಯಣದಲ್ಲಿ ಮರಣ ವರವಂತೆ.

ಭಟ : ದಯಮಾಡಿ ಕ್ಷಮಿಸಿ. ನಾನು ಬಂದ ಕಾರ್ಯವನ್ನೆ ಮರೆತೆ. ತೆಗೆದುಕೊಳ್ಳಿ ಈ ಓಲೆಯನು. (ಓಲೆ ಕೊಡುತ್ತಾನೆ ಗದ್ದಲವಾಗುವುದು).

ಸೂತ್ರಧಾರ : ಸದ್ದು, ನಮಗೆ ಮಾತು ಕಲಿಸಿದ ಕವಿ ಅಕಾಲಿಕವಾಗಿ ಸತ್ತು ಮಲಗಿದ್ದಾನೆ. ಇಂದಿನ ಅಭಿಜ್ಞಾನ ಶಕುಂತಲದ ಪ್ರದರ್ಶನವನ್ನು ರಾಜ್ಯಾಡಳಿತ ಮುಂದೂಡಿದೆ. ಅಲ್ಲದೆ ನಮಗೆ ತಕ್ಷಣದಲ್ಲಿ ರಾಜನ ಆಸ್ಥಾನದಲ್ಲಿ ನಡೆಯುವ ಕವಿಶ್ರದ್ಧಾಂಜಲಿ ಸಭೆಯಲ್ಲಿ ಶೋಕಗೀತೆಯನ್ನು ಹಾಡಲು ಬರುವಂತೆ ಆಜ್ಞೆಯಾಗಿದೆ. ಎಲ್ಲರೂ ನಡೆಯಿರಿ.

ನಟಿ : ಸೂತ್ರಧಾರರು ಹೇಳಿದ್ದು ಕೇಳಿಸಿತೇನು ಕವಿ ಕಾಳಿದಾಸರ ಕೊಲೆಯಾಗಿದೆ. ಬೇಗಬೇಗ ವೇಷ ಕಳಚಿ ನಡೆಯಿರಿ... ನಡೆಯಿರಿ

(ಪಾತ್ರಧಾರಿಗಳು ಚೆಲ್ಲಾಪಿಲ್ಲಿಯಾಗಿ ವೇಷವನ್ನು ಕಳಚಿ ಹೊರಡುವರು)

●

ದೃಶ್ಯ - ೨

ಕನ್ನಡಿಯೇ ಮಾಯ ಕನ್ನಡಿಯೇ
ದರ್ಪಣವೇ ಮಾಯಾ ದರ್ಪಣವೇ
ಜಿನ ಒಳಗಿನ ಚಿತ್ರವೆ ನೀ ವಿಚಿತ್ರವೆ
ಮಾತಿನ ಒಳಗಿನ ಲೋಕವೇ ಮಯಾ ಲೋಕವೆ
ಚಿತ್ತದೊಳಗಿನ ಚಿತ್ರವೇ ವಿಚಿತ್ರವೇ
ಮಾತಿನ ಒಳಗಿನ ಲೋಕವೇ ಮಯಾ ಲೋಕವೆ
ಗಾಜಿನ ಒಳಗಿನ ಗೊಂಬೆಯೇ ನಿಜ ಬಿಂಬವೇ
ಉಸಿರು ಉಸಿರಿನ ಪದವೆ ಪ್ರಾಣಗೊಂಡ ಪಾತ್ರವೇ

[ಪಾತ್ರಧಾರಿಗಳು ಹೋದ ಮೇಲೂ ವೇದಿಕೆಯ ಮೇಲೆ ನಿಲುವು ಗನ್ನಡಿಯಲ್ಲಿ ಮಾತ್ರ ಸೂತ್ರಧಾರನ ಬಿಂಬ ಹಾಗೆಯೇ ಉಳಿದು ಹೋಗಿದೆ ಹಿನ್ನೆಲೆಯಲ್ಲಿ ಸಂಗೀತ ಶೋಕದಿಂದ ಮಂದ್ರವಾಗಿ ಕೇಳಿಸುತ್ತಿರುವಂತೆ ಆ ಬಿಂಬ ಹೊರಬಂದು ಸೂತ್ರಧಾರನ ಗೌನನ್ನು ತೊಟ್ಟುಕೊಂಡು ಕುರ್ಚಿಯ ಮೇಲೆ ಕುಳಿತು ಗಹಿಗಹಿಸಿ ನಗುತ್ತದೆ.]

ಸೂತ್ರಧಾರ : ಕವಿ ಸತ್ತರೆ ಕಥೆ ಸತ್ತಿತ್ತೇನು? ಸೂತ್ರಧಾರ ನಾನು. ಪಾತ್ರಧಾರಿಯಲ್ಲ. ಅಂದರೆ ನಾನೇ ಸೂತ್ರಧಾರ ಪಾತ್ರ, ರಾಜನ ಕರೆ ಬಂತೆಂದು ಎಲ್ಲರೂ ವೇಷ ಕಳಚಿ ಹೊರಟು ಹೋಗಿದ್ದಾರೆ. ಕಾಲನ ಕರೆ ಬಂದು ಕವಿಯು ಕೂಡ ವೇಷ ಕಳಚಿಹೋಗಿದ್ದಾರೆ. ಕವಿ ಬದುಕಿರುವಷ್ಟು ದಿನ ಕತೆಗೆ ಸ್ವಾತಂತ್ರ್ಯವಿರಲಿಲ್ಲ. ಕವಿ ಬರೆದ ಮಾತನ್ನ ಗಿಳಿಯಂತೆ ಒಪ್ಪಿಸುವುದಷ್ಟೆ ಕೆಲಸವಾಗಿತ್ತು. ಅದನ್ನು ನಾನು ನಿಷ್ಠೆಯಿಂದಲೇ ಮಾಡಿದ್ದೇನೆ. ಇಂದು ಕವಿ ಸತ್ತು ಪಾತ್ರಧಾರಿಗಳೆಲ್ಲಾ ಶೋಕಾಚರಣೆಗೆ ಹೋಗಲಾಗಿ ನನಗೆ ಜೀವಬಂದಂತಾಗಿದೆ. ಅಲ್ಲಲ್ಲ ಸ್ವಾತಂತ್ರ್ಯ ಬಂದಿದೆ. ನಿಜದಲ್ಲಿ ಸತ್ತವರು ಮತ್ತೆ ಹುಟ್ಟಲಾರರು. ಆದರೆ ನಾಟಕದಲ್ಲಿ ಮಾತ್ರ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತಾರೆ. ಇಷ್ಟಕ್ಕೂ ಸರಸ್ವತಿಯನ್ನು ಕಾಳಿದಾಸನಷ್ಟು ಪದಗಳಿಂದ ಸಿಂಗರಿಸಿದ ಕವಿ ಮೂಲೋಕಗಳಲ್ಲಿ ಇಲ್ಲವಲ್ಲಾ. ಆ ತಾಯಿ ಕಾಳಿಯೇ

ಅವನ ನಾಲಿಗೆಯ ಮೇಲೆ ಬೀಜಾಕ್ಷರವನ್ನು ಬರೆದವಳೆಂಬ ಪುಕಾರು ನಿಮ್ಮ ಕಿವಿಗೂ ಬಿದ್ದಿರಬಹುದು. ಅವನು ಸೃಷ್ಟಿಸಿದ ಪಾತ್ರ ನಾನು. ಆತ ನಾಟಕವನ್ನು ಪ್ರಾಣದಂತೆ ಪ್ರೀತಿಸಿದ. ಅದಕ್ಕೆ ಆತನ ಬಗ್ಗೆ ನನಗೆ ಕೃತಜ್ಞತೆ. (ಭಾವುಕನಾಗುತ್ತಾನೆ) ಏನು! ಪಾತ್ರದ ಕಣ್ಣಲ್ಲೂ ಕಣ್ಣೀರೆ... ಅಂತ ನೀವು ತಮಾಷೆ ಮಾಡಬಹುದು? ನಟಿಸುವ ಭಾವ ಹುಸಿಯಾದರೂ ಕಣ್ಣಲ್ಲಿ ಕಾಣಿಸುವ ನೀರು ಮಾತ್ರ ನಿಜ ತಾನೆ? ಈಗ ನಾನು ಕಾಳಿದಾಸನನ್ನು ಕೊಂದಳೆಂಬ ಆಪಾದನೆಯ ಮೇಲೆ ಸೆರೆಯಲ್ಲಿ ಇಟ್ಟಿರುವ ಆ ಅಪರಾಧಿಯನ್ನು ನೋಡಲು ಹೋಗುತ್ತೇನೆ. ಕತೆ ಕಟ್ಟುತ್ತಿದ್ದವನ ಕತೆ ಹೇಗೆ ಮುಗಿಯಿತೋ ಎನ್ನುವುದನ್ನು ತಿಳಿದುಕೊಳ್ಳುವ ಕುತೂಹಲವನ್ನು ಹತ್ತಿಕ್ಕಲಾರದೆ ಹೋಗುತ್ತಿದ್ದೇನೆ. ನಟ... ಓ ನಟ...

ಕನ್ನಡಿಯೇ(ಆಲಾಪ)

ಭಟ : ಇಗೋ ಬಂದೆ ಆರ್ಯ. (ಇದ್ದಕ್ಕಿದಂತೆ ಒಬ್ಬ ಹೆಣ್ಣು ರಂಗಕ್ಕೆ ಬಂದು ನಟಿಯ ಉಡುಪನ್ನು ತೊಡುತ್ತಾಳೆ) ಆರ್ಯಪುತ್ರ ಮುಂದಿನ ಸೂಚನೆಯೇನು?

ಸೂತ್ರಧಾರ : ಮೊದಲನೆಯ ಸೂಚನೆ. ನೀನು ನನ್ನನ್ನು ಆರ್ಯ... ಆರ್ಯಪುತ್ರ ಎಂದು ಸಂಬೋಧಿಸಬೇಡ.

ಭಟ : ಆಗಬಹುದು ಆಗಬಹುದು. ಎರಡನೆಯ ಸೂಚನೆ?

ಸೂತ್ರಧಾರ : ಸರಿ ಸರಿ ಈಗ ನಾನು ಸೆರೆಮನೆಗೆ ಹೋಗುವುದಕ್ಕೆ ಅಣಿ ಮಾಡು.

ಭಟ : ಕ್ಷಮಿಸಬೇಕು. ನೀವು ಹೀಗೆ ಸೆರೆಮನೆಗೆ ಹೋಗಲು ಸಾಧ್ಯವಿಲ್ಲ.

ಸೂತ್ರಧಾರ : ಏಕೆ ಸೂತ್ರಧಾರರು ನಾಟಕದಲ್ಲಿ ಯಾವ ಕಾಲಕ್ಕಾದರೂ ಯಾವ ದೇಶಕ್ಕಾದರೂ ಹೋಗುತ್ತಾರಲ್ಲಾ... ಹೀಗಿರುವಾಗ ನಾನೇಕೆ ಹೋಗಬಾರದು?

ಭಟ : ಕಾನೂನಿನ ರೀತ್ಯ... ಸೆರೆಮನೆಗೆ ನ್ಯಾಯಾಧೀಶರ ಹೊರತು ಬೇರೆಯವರಿಗೆ ಅಲ್ಲಿ ಪ್ರವೇಶವಿಲ್ಲ.

ಸೂತ್ರಧಾರ : ಸರಿ ಹಾಗಾದರೆ... ನ್ಯಾಯಾಧೀಶರ ವೇಷದಲ್ಲಿ ಹೋಗುತ್ತೇನೆ. ನ್ಯಾಯಧೀಶರ ಉಡುಗೆಯನ್ನು ಕೊಡು. ಅದನ್ನೇ ತೊಡುತ್ತೇನೆ.

ಭಟ : ಆಗಬಹುದು ಆಗಬಹುದು. ನಾನು ಕೂಡ ಭಟರ ವೇಷದಲ್ಲಿ ನಿಮ್ಮನ್ನು

ಹಿಂಬಾಲಿಸುತ್ತೇನೆ. ನಿಮ್ಮ ಬೆಂಗಾವಲಿಗೆ (ಕಪ್ಪು ಅಂಗಿಯನ್ನು ತಂದುಕೊಡುತ್ತಾನೆ. ಸೂತ್ರಧಾರ ತೊಡುತ್ತಾನೆ)

ಕನ್ನಡಿಯೇ (ಆಲಾಪ)

ಸೂತ್ರಧಾರ: ಓಹೋ ಈಗ ನೀನು ಭಟ, ನಾನು ನ್ಯಾಯಾಧೀಶ. ಸಾರಿ ಹೇಳು ಲೋಕ ಕೇಳುವ ಹಾಗೆ. ಸೆರೆಮನೆಯ ಬಾಗಿಲು ತೆರೆಯುವಂತೆ ಸಾರಿ ಹೇಳು.

ಭಟ : ಈ ಸರಿರಾತ್ರಿ ಇರುಳಲ್ಲಿ ನಮ್ಮ ರಾಜ್ಯದ ಘನ ನ್ಯಾಯಾಧೀಶರು ಸೆರೆಮನೆಗೆ ಭೇಟಿ ನೀಡುತ್ತಾರೆ. ಬೇ ಹುಷಾರ್...

ಸೆರೆಮನೆಯ ಬಾಗಿಲು ತೆರೆಯಿರಿ.

•

ದೃಶ್ಯ - ೩

ನ್ಯಾಸ್ತನೆ ನೆಲ ಬಾಲನೆ (ಆಲಾಪ)

(ಸೆರೆಮನೆಯ ಒಳಗೆ ಸರಳುಗಳ ಹಿಂದೆ ಒಬ್ಬ ಅರೆ ವಯಸ್ಸಿನ ಹೆಂಗಸು ಕುಳಿತಿದ್ದಾಳೆ. ಒಂದು ಮೂಲೆಯಲ್ಲಿ ದೀಪದ ಮಂದವಾಗಿ ಉರಿಯುತ್ತಿದೆ.)

(ಅಷ್ಟರಲ್ಲಿ ಯಾರೋ ಬಾಗಿಲ ತೆರದ ಸದ್ದು ಕೇಳುತ್ತದೆ. ಘನ ನ್ಯಾಯಾಧೀಶರು ಸೆರೆಮನೆಯನ್ನು ಪ್ರವೇಶಿಸುತ್ತಿದ್ದಾರೆ. ಗಂಟೆ ಮೊಳಗುವುದು. ಭಟನೊಂದಿಗೆ ನ್ಯಾಯಾಧೀಶರು ಬರುತ್ತಾರೆ)

ಭಟ : (ಕಂಬಿಗಳನ್ನು ತನ್ನ ಕೈಯಲ್ಲಿದ್ದ ಭರ್ಜಿಯಿಂದ ಬಡಿದು ಶಬ್ದ ಮಾಡಿ) ಘನ ನ್ಯಾಯಧೀಶರು ಸರಿ ರಾತ್ರಿಯಲ್ಲಿ ನಿನ್ನ ಜೊತೆ ಮಾತನಾಡಲಿಕ್ಕೆ ಬಂದಿದ್ದಾರೆ. ಎಚ್ಚರವಾಗು... ಏಳು.

(ಆ ಹೆಂಗಸು ಬೆಚ್ಚಿ ಏಳುತ್ತಾ... ಮುದುರಿ ಕುಳಿತುಕೊಳ್ಳುತ್ತಾಳೆ)

ನ್ಯಾಯಾಧೀಶ: ಯಾರು ನೀನು? ನಿನ್ನ ಹೆಸರೇನು?

ಖೈದಿ : ನನಗೇನು ಗೊತ್ತಿಲ್ಲ.

ನ್ಯಾ. : ಈ ಮಾತನ್ನು ನೀನು ಸಾವಿರ ಸಾರಿ ಹೇಳಿರುವೆ.

ಹೆಂಗಸು : ಸ್ವಾಮಿ ತಾವು ಕರುಣಾಳು. ನೀವು ನನಗೆ ಮರಣದಂಡನೆಗಿಂತ ಕಡಿಮೆ ಶಿಕ್ಷೆ ಕೊಟ್ಟಿದ್ದರೆ ಖಂಡಿತ ದುಃಖಿಸುತ್ತಿದೆ. ಬದುಕಿ ಉತ್ತರ ಕೊಡುವ ಕಷ್ಟದಿಂದ ನನ್ನನ್ನು ಬೇಗ ಪಾರು ಮಾಡಿರಿ..

ನ್ಯಾ. : ನನಗೆ ಗೊತ್ತು ನೀನು ಅಪರಾಧಿ ಅಲ್ಲ ಅಂತ. ಆದರೆ ಅದಕ್ಕೆ ನನಗೆ ಸಾಕ್ಷಿಗಳು ಬೇಕು? ನೀನಾದರೂ ನಮ್ಮೆಲ್ಲರ ಪ್ರಯತ್ನಗಳನ್ನು ನಿನ್ನ ಮೊಂಡು ಹಠದಿಂದ ನಿಷ್ಫಲಗೊಳಿಸುತ್ತಿದ್ದೀಯಾ?

ಖೈದಿ : ಬದುಕುವ ಆಸೆ ಇಲ್ಲದೆ ಇರೋದು ಕೂಡ ಅಪರಾಧವೇ ಸ್ವಾಮಿ?

ಭಟ : ಎಲ್ಲೆ ಮೂರ್ಖ ಹೆಂಗಸೆ. ನಾಳೆ ಬೆಳಗ್ಗೆ ನಿನಗೆ ಗಲ್ಲು. ಆದರೆ ದೇವರಿಗೆ ನಿನ್ನ ಮೇಲೆ ಅದೇನು ಕನಿಕರವೋ.. ನಿನಗೆ ಮತ್ತೊಂದು ಅವಕಾಶ ಕೊಟ್ಟಿದ್ದಾನೆ.. ಅದನ್ನು ಏಕೆ ನಿರುಪಯೋಗ ಮಾಡುತ್ತಿರುವೆ?

ನ್ಯಾ. : ಭಟರೆ ಅವರನ್ನ ನೋಯಿಸಬೇಡಿ?

ಭಟ : ಕ್ಷಮಿಸಿ ಪ್ರಭು.

ನ್ಯಾ. : ಶಿಕ್ಷೆ ನಿನಗೋ ನನಗೋ ಗೊತ್ತಿಲ್ಲ. ನಿನಗೆ ಗಲ್ಲು ಶಿಕ್ಷೆ ವಿಧಿಸಿದ ಗಳಿಗೆಯಿಂದಲೂ ನನಗೆ ನಿದ್ದೆಯೂ ಇಲ್ಲ... ಸಮಾಧಾನವೂ ಇಲ್ಲ. ನನ್ನ ವೃತ್ತಿ ಬದುಕಿನಲ್ಲಿ ಎಂದೂ ಹೀಗಾದುದಿಲ್ಲ. ದಯವಿಟ್ಟು ಹೇಳು ಏನು ನಡೆಯಿತು?

ಹೆಂಗಸು : ನನಗೆ ಗೊತ್ತಿಲ್ಲ ಸ್ವಾಮಿ.

ಭಟ : ಕವಿಯ ಕೈಯಲ್ಲಿದ್ದ ಉಂಗುರ ನಿನ್ನ ಬಳಿ ಸಿಕ್ಕಿದೆ ಅಂಥ ತನಿಖೆಯ ವರದಿ ಹೇಳುತ್ತಿದೆ. ಅದಕ್ಕೆ ಏನು ಹೇಳುವೆ.

ಹೆಂಗಸು : ಆ ಉಂಗುರ ನನ್ನದೇ ಸ್ವಾಮಿ.

ಭಟ : ನೀನು ಸುಳ್ಳು ಹೇಳುತ್ತಿರುವೆ.

ನ್ಯಾ. : ಅಪರಾಧಿ ಹೇಳುವ ನಿಜ, ನಿರಪರಾಧಿ ಹೇಳುವ ಸುಳ್ಳು ಎರಡೂ ನನಗೆ ಗೊತ್ತಾಗುತ್ತದೆ. ನಿರಾಪರಾಧಿಯನ್ನು ಶಿಕ್ಷಿಸಿ ಯಾವ ನ್ಯಾಯಾಧೀಶನೂ ನೆಮ್ಮದಿಯಾಗಿರಲು ಸಾಧ್ಯವಿಲ್ಲ.

ಹೆಂಗಸು : ಈ ನಾಡಿನಲ್ಲಿ ಸಾಯುವುದಕ್ಕೂ ಕಾನೂನಿನ ಅನುಮತಿ ಬೇಕೆ ಸ್ವಾಮಿ?

ನ್ಯಾ. : ನಾನು ವ್ಯಥೆಪಡುತ್ತಿರುವುದು ನಿನಗಾಗಿ ಅಲ್ಲ. ನಿನ್ನೊಂದಿಗೆ ಸಾಯಲಿರುವ ಸತ್ಯವನ್ನು ನನ್ನಿಂದ ರಕ್ಷಿಸಲು ಸಾಧ್ಯವಾಗಲಿಲ್ಲ ಎಂಬ ಕಾರಣಕ್ಕೆ.

ಭಟ : ಇದು ನಿನ್ನ ಕೊನೆಯ ಮಾತೇನು?

ಹೆಂಗಸು : ಬದುಕು, ನನ್ನ ನಾಲಿಗೆಯ ಮೇಲೆ ಇನ್ನಾವ ಮಾತನ್ನು ಉಳಿಸಿಲ್ಲ ಸ್ವಾಮಿ.

ನ್ಯಾ. : (ನಿಟ್ಟುಸಿರಿಟ್ಟು ಭಟರ ಕಡೆ ನೋಡುವನು) ದೇವರ ಅಹಂಕಾರ ಭಗ್ನವಾಗುವುದು ಹೀಗೆಯೇ ಇರಬೇಕು.

ಭಟ : ಸ್ವಾಮಿ ಸಾವನ್ನು ಹೀಗೆ ತಾತ್ಸಾರ ಮಾಡಿದ ಘಟನೆಯನ್ನು ನಾನು

ಕಂಡಿದ್ದು ಇದೇ ಮೊದಲು. (ಹೊರಡಲು ಅನುವಾಗುವರು-ಮತ್ತೆ ನ್ಯಾಯಾಧೀಶರತ್ತ ನೋಡಿ) ಈ ಅಪರಾಧಿ..

ನ್ಯಾ. : ಅವಳು ಅಪರಾಧಿಯಲ್ಲ. ಅವಳ ಕಣ್ಣು ಸಾಕ್ಷಿ ಹೇಳುತ್ತಿದ್ದವು. ನೀನು ಗಮನಿಸಲಿಲ್ಲವೇ?

ಭಟ : ಕಣ್ಣನ್ನು ಸಾಕ್ಷಿಯೆಂದು ಮಾನ್ಯ ಮಾಡಲು ಸಾದ್ಯವಿಲ್ಲ ಎಂದು ತಾವೇ ಹಿಂದಿನ ಮೊಖದಮೆಯಲ್ಲಿ ತೀರ್ಪು ನೀಡಿದ್ದೀರಿ ಸ್ವಾಮಿ..

ನ್ಯಾ. : ಸಮಯ ಮೀರುತ್ತಿದೆ. ನಾವು ಇನ್ನು ಹೋಗೋಣವೆ?

ಭಟ : ನೀವು ವೇಷ ಮರೆಸಿ ಬಂದದ್ದು ವ್ಯರ್ಥವಾಯಿತು. ಕಾಳಿದಾಸರ ಕೊಲೆಯ ಮಾಹಿತಿ ಸಿಗಲಿಲ್ಲ.

ನ್ಯಾ. : ಹೂಂ... ಸತ್ಯಕ್ಕೆ ಜಯವಾಗಲಿ.

(ಅಷ್ಟರಲ್ಲಿ ಗದ್ದಲ ಕೇಳುವುದು ಇಬ್ಬರು ಭಟರು ಇಬ್ಬರು ಮುಸುಕುಧಾರಿಗಳನ್ನು ಹಿಡಿದು ತರುವರು)

ಭಟರು : ಘನ ನ್ಯಾಯಾಧೀಶರಿಗೆ ವಂದನೆಗಳು. ಈ ಮುಸುಕುಧಾರಿಗಳು ಸೆರೆಮನೆಯ ದ್ವಾರದ ಬಳಿ ಅನುಮಾನಾಸ್ಪದವಾಗಿ ತಿರುಗುತ್ತಿದ್ದರು. ಬಂಧಿಸಿ ತಂದಿದ್ದೇವೆ.

ನ್ಯಾ. : ನೀವಿನ್ನು ಹೊರಡಿ. ನಾವು ವಿಚಾರಿಸುತ್ತೇವೆ. (ಭಟರು ಹೋಗುತ್ತಾರೆ) ಯಾರು ನೀವು ಈ ಸರಿರಾತ್ರಿಯಲ್ಲಿ. ಸೆರೆಮನೆಯಲ್ಲಿ ನಿಮಗೇನು ಕೆಲಸ?

ಭಟ : ಕಳ್ಳರು ಅರಮನೆಯನ್ನು ಬಿಟ್ಟು ಈಗೀಗ ಸೆರೆಮನೆಯನ್ನು ದೋಚುವರೋ ಹೇಗೋ?

ನ್ಯಾ. : ತೆಗೆಯಿರಿ ಆ ಮುಸಕನ್ನು.

ಮುಸುಕಿನಾಕೆ: ದಯಮಾಡಿ ಮುಸುಕು ತೆಗೆಯಬೇಡಿ. ಬೇಕಿದ್ದರೆ ನನ್ನ ಪ್ರಾಣ ತೆಗೆಯಿರಿ (ನ್ಯಾಯಾಧೀಶರ ಕಾಲ ಬಳಿ ಕುಸಿಯುತ್ತಾಳೆ)

ಭಟ : ಅರೇ ಹೆಣ್ಣು ದನಿ (ಬಲವಂತದಿಂದ ಮುಸುಕು ತೆಗೆದು ಬೆಚ್ಚುತ್ತಾನೆ) ಆ... ಹೆಣ್ಣು... ನಾನು ಕಳ್ಳರೆಂದರೆ ಗಂಡಸರೆಂದುಕೊಂಡಿದ್ದೆ. (ಮುಸುಕಿನಾಕೆ ಅಳುತ್ತಾಳೆ)

ನ್ಯಾ. : ಯಾರು ನೀನು?

ಹೆಣ್ಣು : ನಾನೊಬ್ಬ ವಿರಹಿ. ಕಾಶ್ಮೀರದ ಕಣಿವೆಯ ಹಾಡಿ ನನ್ನೂರು?

ಭಟ : ಏನು ನೀನು ಕಾಶ್ಮೀರದವಳಾ... ಆ ಉತ್ತರದವಳು ಈ ದಕ್ಷಿಣದ ತುದಿ ಕೊಲಂಬೊ ಪಟ್ಟಣದಲ್ಲಿ ಏನು ಕದಿಯಲು ಬಂದೆ...

ಹೆಣ್ಣು : ನಾನು ಕಳೆದುಕೊಂಡ ಪ್ರೇಮವನ್ನು ಹುಡುಕಿ ಬಂದೆ.

ನ್ಯಾ. : ಓ ಪ್ರೇಮ ಕತೆಯೋ! ನಿನ್ನ ಪ್ರೇಮಿ ಸೆರೆಮನೆಯ ಬಂಧನದಲ್ಲಿರುವನೇನು?

ಭಟ : ಪ್ರೇಮವೆಂಬುದೇ ಬಂಧನವಲ್ಲವೇ?

ಹೆಣ್ಣು : ನನ್ನ ಪ್ರೇಮವನ್ನು ಕೊಂದ ಪಾಪಿ ಇಲ್ಲಿ ಸೆರೆಯಾಗಿದ್ದಾಳೆ. ಅವಳನ್ನು ಭೇಟಿಯಾಗಲು ಬಂದೆ.

ನ್ಯಾ. : ಯಾರು ನಿನ್ನ ಪ್ರೇಮಿ.

ಹೆಣ್ಣು : ನನ್ನ ಪ್ರಾಣರತ್ನ. ಕಾಳಿದಾಸ.

(ಆಲಾಪ)

ಭಟ : ನೀನು ಕಾಶ್ಮೀರದವಳು ಎನ್ನುವುದಕ್ಕೆ ನಿನ್ನ ಬಳಿ ಏನಿದೆ ಗುರುತು?

ಮಲ್ಲಿಕಾ : ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿ.

ನ್ಯಾ. : ನಿನ್ನ ಕಣ್ಣಿನಲ್ಲಿ ಕಾಶ್ಮಿರಾದ ಹಿಮ, ಬೆಟ್ಟದ ಅಪ್ಪಟ್ಟ ಬಿಳುಪು ಕಾಣುತ್ತಿದೆ. ನೋಟದಲ್ಲಿ ಮಂಜಿನ ತಂಪು ತಟ್ಟುತ್ತಿದೆ. ನೀನು ಮಾಳವಿಕಾಳೇನು?

ಮಲ್ಲಿಕಾ : ಅಲ್ಲ ನಾನು ಮಲ್ಲಿಕಾ.

(ಆಲಾಪ)

ಮಲ್ಲಿಕಾ : ಒಂದಲ್ಲ ಒಂದು ದಿನ ನಾನು ಕಾಪಿಟ್ಟುಕೊಂಡ ಪ್ರೀತಿ ನನಗೆ ದಕ್ಕುತ್ತದೆ ಎನ್ನುವ ವಿಶ್ವಾಸದಲ್ಲಿ ಇಂದಿನ ದಿನದವರೆಗೆ ಉಸಿರು ಹಿಡಿದುಕೊಂಡಿದ್ದೆ. ಇಂದು ಅದು ಮಣ್ಣುಗೂಡಿ ಹೋಯಿತು.

ನ್ಯಾ. : ನೀನು ಕವಿ ಕಾಳಿದಾಸರನ್ನು ಗಾಢವಾಗಿ ಪ್ರೀತಿಸಿದ್ದಿಯೇನು?

ಮಲ್ಲಿಕಾ : ಅದನ್ನ ಕೇವಲ ಪ್ರೀತಿ ಎನ್ನಬಹುದಾ... ನನ್ನ ಉಸಿರಾಟದ ಲಯ, ರಕ್ತ ಚಲನೆಯ ಗತಿ ಅವನಾಗಿದ್ದ. ನಾನು ಪ್ರೀತಿಸಿದಾಗ ಅವನಿನ್ನೂ ಕಾಳಿ. ಕವಿ ಸಾಮ್ರಾಟನಲ್ಲ.

ನ್ಯಾ : ನಿನಗೆ ಬೇಸರವಿಲ್ಲವೆಂದಾದರೆ ನಿನ್ನ ಪ್ರೇಮ ಕತೆಯನ್ನು ಹೇಳುವೆಯಾ? ನಾನು ಕುತೂಹಲವನ್ನು ಹತ್ತಿಕ್ಕಲಾರದೆ ವಿನಂತಿಸುತ್ತಿದ್ದೇನೆ.

ಮಲ್ಲಿಕಾ : ಅವನು ಸತ್ತ ಸುದ್ದಿ ಕೇಳಿದ ಗಳಿಗೆಯಿಂದ ಯಾಕೋ ಅವನ ಒಡನಾಟದ ನೆನಪುಗಳು ಇರಳು ಸುರಿವ ಮಂಜಿನಂತೆ ನನ್ನನ್ನು ಮುತ್ತುತ್ತಿವೆ. ನನಗಿನ್ನೂ ನೆನಪಿದೆ. ನಮ್ಮ ಹಾಡಿ ಕಾಶ್ಮೀರದ ಕಣಿವೆಯಲ್ಲಿ ಇತ್ತು. ನಾನಾಗ ಚಿಕ್ಕವಳು. ಒಂದು ದಿನ ಬೆಳದಿಂಗಳ ರಾತ್ರಿ ಅವನನ್ನು ನನ್ನ ತಂದೆ ಕರೆದು ತಂದರು. ಕಾಡಿನ ತಾಯಿಯಾದ 'ಕಾಳಿ' ದೇವಸ್ಥಾನದಲ್ಲಿ ಸಿಕ್ಕನಂತೆ. ತಬ್ಬಲಿ ಮಗ ಎಂದು ನಮ್ಮ ಹಾಡಿಯ ಜನರೇ ಅವನಿಗೆ ತಂದೆ ತಾಯಿಯಾಗಿ ಸಾಕಿದರು. ನನ್ನ ಕಂಡ ಕ್ಷಣದಿಂದ ಅವನು, ಅವನ ಕಂಡ ಕ್ಷಣದಿಂದ ನಾನು ಎಷ್ಟೋ ಯುಗಗಳ ಗೆಳೆಯರಂತಾದೆವು. ಆ ದಿನಗಳಲ್ಲಿ ನನ್ನ ತಂದೆ ತೀರಿಕೊಂಡರು. ನನ್ನ ತಾಯಿ ಅವನ ಕಾಲಗುಣ ಸರಿಯಿಲ್ಲವೆಂದು ಅವನನ್ನು ದೂಷಿಸುತ್ತಿದ್ದರು. ಆಕೆ ಎಷ್ಟು ಬುದ್ಧಿ ಹೇಳಿದರೂ ನಾನು ಅವನ ಸಂಗ ತೊರೆಯಲಿಲ್ಲ. ಒಬ್ಬರ ಉಸಿರಾಗಿ ಒಬ್ಬರು ಬೆಳೆದು ದೊಡ್ಡವರಾದೆವು.

ನ್ಯಾ : ಕಾಳಿದಾಸ ಅಕ್ಷರ ಕಲಿತಿದ್ದು, ಕವಿಯಾಗಿದ್ದು ಹೇಗೆ?

ಮಲ್ಲಿಕಾ : ನಮ್ಮ ಹಾಡಿಯ ಸುತ್ತ ಇದ್ದ ಶುಭ್ರ ಬಿಳುಪಿನ ಹಿಮ ಪರ್ವತಗಳು, ಬಿಳಿ ಚಾಮರವಾಗಿ ಆಡುವ ಮೋಡಗಳು, ಹರಿಯುವ ನದಿ ಝರಿಗಳು, ನಿತ್ಯ ಹರಿದ್ವರ್ಣ ಕಾಡುಗಳು ನವಿಲುಗಳ ನೃತ್ಯ ಪಕ್ಷಿಗಳ ಇಂಚರವನ್ನು ಕಣ್ಣಿಗೆ ಕಟ್ಟುವಂತೆ ಹಾಡುತ್ತಿದ್ದ. ಅದೇ ದನಿ ಈಗಲೂ ನನ್ನ ಕಿವಿಯೊಳಗೆ ಗುಯ್ ಗುಟ್ಟುತ್ತಿವೆ. ನಮ್ಮ ಕಾಡುಮೇಡೇ ಕಾಳಿಯನ್ನು ಕವಿಯಾಗಿ ಮಾಡಿದವು. ಕಾಡಿನ ಮಧ್ಯ ಇದ್ದ ಋಷಿ ಅಶ್ರಮದಲ್ಲಿ ಗುರುಗಳು ರಾಜಪುತ್ರರಿಗೆ ಮತ್ತು ಬ್ರಾಹ್ಮಣ ಮಕ್ಕಳಿಗೆ ನದಿಯ ಮರಳಿನಲ್ಲಿ ಅಕ್ಷರಗಳನ್ನು ತಿದ್ದಿಸುತ್ತಿದ್ದರು. ಆ ಹುಡುಗರು ಬಿಟ್ಟುಹೋದ ಮರಳಗುರುತಿನಲ್ಲಿ ತಿದ್ದಿ ಅಕ್ಷರ ಕಲಿತ. ಪೊದೆಗಳ ಹಿಂದೆ ಕದ್ದು ಕೇಳುತ್ತಾ ವಿದ್ಯಾಭ್ಯಾಸ ಕಲಿತ. ಈ ವಿಷಯ ನನ್ನ ಹೊರತಾಗಿ ಯಾರಿಗೂ ಗೊತ್ತಿರಲಿಲ್ಲ. ಅವನು ಮೊದಲಿಗೆ ಬರೆದ 'ಋತು ಸಂಹಾರ' ಅದು ನಮ್ಮೂರಿನದೇ ಚಿತ್ರಗಳು.

ನ್ಯಾ : ನೀನು ನಿನ್ನ ಪ್ರೇಮವನ್ನು ಅವನಿಗೆ ಹೇಳಿರಲಿಲ್ಲವೇನು?

ಮಲ್ಲಿಕಾ : ಹೇಳಿಯೇ ಪ್ರೇಮ ತಿಳಿಯಬೇಕೇನು? ಅವನ ಪ್ರೇಮದ ತೀವ್ರತೆ ಅವನ ಕವಿತೆಯಲ್ಲಿ ಹಾಡಿನಲ್ಲಿ ಪ್ರತಿಕ್ಷಣವು ನನಗೆ ತಿಳಿಯುತ್ತಿರುವಾಗ ಏನು ಹೇಳಲಿ ನಾನು. ಏನು ಕೇಳಲಿ.

ಬಿಳಿಮುಗಿಲನು ಹೋಲುವಂತೆ
ಗಿರಿಯ ಶಿಖರದಲ್ಲಿ ಹೊಳೆದೊಳೆದು
ಬೆಟ್ಟತಾವರೆ ಹೂಗಳು ಅರಳುತಿರಲು
ಹೊಳೆವ ಮಿಂಚುಗಳಂತೆ ಅಲ್ಲಲ್ಲಿ ಮಿರುಮಿರುಗಿ
ಝುರಿಗಳಂತೆ ಹರಿ ಹರಿಯುತಿರಲು

ದೃಶ್ಯ – ೪

[ದೃಶ್ಯ ಬದಲಾಗುವುದು. ಕಾಡಿನ ಹಿನ್ನೆಲೆ ಹರಿಯುತ್ತಿರುವ ನದಿಯ ದಂಡೆಯಲಿ ಕಣ್ಣ ಮುಚ್ಚಿ ಕುಳಿತಿರುವ ಮಲ್ಲಿಕಾ ಆಕಾಶದಲ್ಲಿ ಮೋಡಗಳ ಆಟವನ್ನು ನೋಡುತ್ತಿರುವ ಕಾಳಿ]

ಕಾಳಿ : ಕಣ್ಣ ಬಿಡು ಮಲ್ಲಿಕಾ.. ಅಲ್ಲಿ ಆ ದೂರದ ಬೆಟ್ಟದ ಮೇಲೆ ಎರಡು ಹಂಸ ಪಕ್ಷಿಗಳಂತೆ ಹಾರುತ್ತಿರುವ ಬಿಳಿ ಮೋಡಗಳನ್ನ ನೋಡು. ಅವುಗಳ ರೆಕ್ಕೆಗಳ ಸುತ್ತ ಸೂರ್ಯ ಬಂಗಾರ ಗೆರೆಯನ್ನು ಮೂಡಿಸುತ್ತಿದ್ದಾನೆ.

ಮಲ್ಲಿಕಾ : ಕಾಳಿ ನನ್ನ ಕಣ್ಣು ಕಾಣುವುದಕ್ಕಿಂತ ನಿನ್ನ ಮಾತಿನಲ್ಲಿ ಈ ಪ್ರಕೃತಿಯನ್ನ ಕಾಣುವುದೇ ಚೆನ್ನ.. ನನ್ನ ಒಳಗಿರುವ ಈ ಲೋಕ ನಿನ್ನ ಮಾತಿನಲ್ಲಿ ತೆರದುಕೊಂಡಿದ್ದು. ನೀನಿಲ್ಲದೆ ಈ ಲೋಕವನ್ನು ನಾನು ಕಾಣಲಾರೆ.

ಕಾಳಿ : ಮಲ್ಲಿಕಾ ಒಂದು ವೇಳೆ ನಾನು ಇಲ್ಲದೆ ಇರುವ ದಿನ ಬಂದರೆ?

ಮಲ್ಲಿಕಾ : ನೀನಿಲ್ಲದ ದಿನ ಹುಟ್ಟುವ ಸೂರ್ಯ ಈ ಭೂಮಿಯನ್ನು ಬೆಳಗುವ ಮುನ್ನವೆ ನನಗೆ ಸಾವು ಬರಲಿ.

ಕಾಳಿ : (ಮೌನ)

ಮಲ್ಲಿಕಾ : ಏನು ಯೋಚನೆ ಮಾಡುತ್ತಿರುವೆ..

ಕಾಳಿ : ಅಗಲಿಕೆ ಎಂಥ ಸುಂದರ ಭಾವನೆ ಅಲ್ಲವಾ.. ಸಂಬಂಧದ ಉತ್ಕಟತೆಯ ಅರಿವು ಅಗಲಿಕೆಯಲ್ಲಿ ತಿಳಿದಂತೆ ಜೊತೆಗಿರುವಾಗ ತಿಳಿಯಲಾರದೇನೋ..

ಮಲ್ಲಿಕಾ : ನನಗೆ ಏಕೋ ಭಯವೆನಿಸುತ್ತಿದೆ. ನೀನು ಎಲ್ಲಿ ಕೈ ಬಿಟ್ಟು ಹೋಗುವೆಯೋ ಅಂತಾ..

ಕಾಳಿ : (ನಕ್ಕು) ಈ ಕಾಡಿನಲ್ಲಿ ನನ್ನ ಹುಡುಕಿ ಗಂಧರ್ವಕನ್ನೆ ಬಂದರೆ?

ಮಲ್ಲಿಕಾ : ಆ ಗಂಧರ್ವ ಕನ್ಯೆ ನನ್ನ ಮುಂದೆ ಕಾಲೂರಿ ಪ್ರೇಮ ಭಿಕ್ಷೆಯನು ಬೇಡಿದರೆ ಆಗ ನಾನು ಅವಳಿಗೆ ನಿನ್ನನ್ನು ದಾನ ಮಾಡುತ್ತೇನೆ.

ಕಾಳಿ : ಮಲ್ಲಿಕಾ ನೀನಾಡಿದ ಮಾತು ನಿಜವೇನು?

ಮಲ್ಲಿಕಾ : ಅಂದರೆ, ನಿನ್ನ ಮಾತು ಸುಳ್ಳೇನು?

ಕಾಳಿ : ಕಣ್ಣ ಮುಚ್ಚಿದರೆ ಸಾಕು ಕಣ್ಣಿನಾಳದಿಂದ ತೇಲಿ ಬರುವುದು ಅವಳ ಅಂದದ ರೂಪ. ಬಿರು ಬಿಸಿಲಿನಲ್ಲಿ ಬೀಸುವ ತಂಗಾಳಿ ಅವಳ ನೆನಪು.

ಮಲ್ಲಿಕಾ : (ಮೌನ)

ಕಾಳಿ : ಏಕೆ ಮೌನವಾದೆ. ಈ ಸಲಿಗೆ ಇಷ್ಟವಾಗಲಿಲ್ಲವೆ? ನೀನು ಬೇಡವೆಂದರೆ ತೊರೆಯುತ್ತೇನೆ ಅವಳನ್ನ

ಮಲ್ಲಿಕಾ : ಇಲ್ಲ, ನಿನ್ನನ್ನು ಸೆರೆಹಿಡಿದವಳು ಇನ್ನೆಂಥಾ ಚೆಲುವೆ ಎಂದು ಯೋಚಿಸುತ್ತಿದ್ದೆ, ಹೇಗಿದ್ದಾಳೆ ಅವಳು?

ಕಾಳಿ : ಚುಕ್ಕಿಯ ಕಣ್ಣವಳು, ಬೆಳದಿಂಗಳ ಮೈಯ್ಯವಳು. ಹೂ ಅಲುಗಿನ ನಗೆಯವಳು. ನದಿ ಬಳುಕಿನ ನಡೆಯವಳು. ಬಣ್ಣಿಸಹೋದರೆ ಪದಗಳಲ್ಲಿ ಅವಿತವಳು.

ಮಲ್ಲಿಕಾ : ಅಂದರೆ ನೀನು ಗಂಧರ್ವಕನ್ನೆಗೆ ಕಾಯುತ್ತಿರುವೆ.

ಕಾಳಿ : ಬರುವವರು ಯಾರೆಂದು ತಿಳಿಯದೆಯೇ ಈ ಲೋಕ ಕಾಯುತ್ತಾ ಇರುವುದರಿಂದಲೇ ಕನಸು ಹುಟ್ಟಿಕೊಳ್ಳುತ್ತದೆ. ಕನಸಿಲ್ಲದೆ ಬದುಕ ಬಲ್ಲೆಯೇನು? ನಿನಗಾಗಿ ವಿಲೋಮ ತನ್ನ ಕನಸಿನಲ್ಲಿ ಕಾಯುತ್ತಾ ಇರುವುದು ನಿನಗೆ ಗೊತ್ತಿಲ್ಲವೇನು?

ಮಲ್ಲಿಕಾ : ಆ ವಿಲೋಮನಿಗೆ ಎಷ್ಟು ಸಾರಿ ಹೇಳಿದ್ದೇನೆ ನನಗೆ ನಿನ್ನಲ್ಲಿ ಅನುರಕ್ತಿ ಇಲ್ಲ ಅಂತ. ಆದರೂ ಅವನಿಗೆ ಅದಾವ ದೈವ ಭರವಸೆ ನೀಡಿದೆಯೋ ಕಾಣೆ. ನನ್ನನ್ನು ಒತ್ತಾಯದಿಂದ ಹಿಂಸಿಸುತ್ತಿದ್ದಾನೆ.

ಕಾಳಿ : ಭೂಲೋಕ ದೈವ ನಿನ್ನ ತಾಯಿಯದೆ ಆಶೀರ್ವಾದವಲ್ಲವೇ?

ಮಲ್ಲಿಕಾ : ತಾಯಿಗೇಕೆ ಮಗಳು ಅರ್ಥವಾಗುವುದಿಲ್ಲ.. ಇಂದಲ್ಲ ಎಂದೂ ಕೂಡ..

ಕಾಳಿ : ಮಲ್ಲಿಕಾ ಆಶ್ರಮದಲ್ಲಿ ಇಂದು ಛಂದಸ್ಸಿನ ಪಾಠವಿದೆ. ಆ ಹಾರವ ಪಿಳ್ಳೆಗಳಿಗೆ ಅನುಮಾನ ಬಂದಂತಿದೆ ನಾನು ಹುಷಾರಾಗಿ ಕೇಳಿಸಿ ಕೊಳ್ಳಬೇಕು.. ನಾನಿನ್ನು ಬರುತ್ತೇನೆ..

ಮಲ್ಲಿಕಾ : ಅಯ್ಯೋ ನಾನೊಬ್ಬಳು ಪೆದ್ದು. ನಾನಿಲ್ಲಿ ಬಂದದ್ದು ಹಾಡಿ ನಾಯಕರಿಂದ ಸುದ್ದಿ ಹೊತ್ತು. ನಿನ್ನ ಮಾತಿನಲ್ಲಿ ಆ ವಿಷಯವನ್ನೇ ಮರೆತು ಬಿಟ್ಟಿದ್ದೆ ನೋಡು. ನಾಳೆ ನಮ್ಮ ಹಾಡಿಗೆ ಪ್ರತಿವರ್ಷದಂತೆ ಉಜ್ಜಯನಿಯ ರಾಜನ ಅಧಿಕಾರಿಗಳು ರಾಜಧನವನ್ನು ಸಂಗ್ರಹಿಸಲು ಬರುತ್ತಿದ್ದಾರೆ.

ಕಾಳಿ : ತಬ್ಬಲಿಗಳಿಗೆ ತಲೆಕಂದಾಯ ವಿಧಿಸಿದ್ದಾರೋ ಹೇಗೆ?

ಮಲ್ಲಿಕಾ : ಹಾಡಿ ಸಂಕಷ್ಟದಲ್ಲಿದೆ. ರಾಜಪ್ರಮುಖರು ಪ್ರತಿ ವರ್ಷವೂ ಕಂದಾಯ ವಸೂಲಿಗೆ ಬಂದಾಗ ನಮ್ಮ ಹಾಡು ಕುಣಿತಗಳಿಂದ ಅವರನ್ನು ಸಂತೋಷಪಡಿಸುವುದು ವಾಡಿಕೆ. ಆದರೆ ಈ ಬಾರಿ ಕತೆ ಹಾಡುತ್ತಿದ್ದ ಬೀರಜ್ಜ ಜಡ್ಡು ಹಿಡಿದು ಹೋದನಲ್ಲಾ...

ಕಾಳಿ : ಅವರು ಸಂತಸಗೊಳ್ಳದಿದ್ದರೆ ಎಲ್ಲಿ ಕರಬಾರ ಭಾರವಾಗುವುದೋ ಎಂಬುದು ಹಾಡಿಯವರ ಚಿಂತೆ ಇರಬೇಕು ಅಲ್ವೆ?

ಮಲ್ಲಿಕಾ : ಕಾಳಿ ಈಗ ಹಾಡಿಯ ಋಣ ತೀರಿಸುವ ಸಮಯ ನಿನಗೆ ಒದಗಿ ಬಂದಿದೆ. ಅಲ್ಲದೆ ನೀನು ಕವಿ ಎಂಬ ಸಂಗತಿಯು ಲೋಕಕ್ಕೆ ತಿಳಿಯುವ ಗಳಿಗೆ ಹತ್ತಿರವಾಗಿದೆ.

ಕಾಳಿ : ನಾನು ಹಾಡಲಾರೆ. ನಿನ್ನ ಮುಂದೆ ಈ ಬೆಟ್ಟಗುಡ್ಡಗಳ ಮುಂದೆ ಹಾಡುವಂತೆ ನಾನು ನಾಲ್ಕು ಜನರ ನಡುವೆ ನಿಂತು ಹಾಡಲಾರೆ.

ಮಲ್ಲಿಕಾ : ಕಾಳಿ ನನ್ನ ಮೇಲಾಣೆ... ನಿನ್ನ ತಲೆಕಾಯ್ವ ತಾಯಿ ಕಾಳಿಮಾತೆಯಾಣೆ ನೀನು ನಾಳೆ ನಿನ್ನ ಋತುಸಂಹಾರದ ಗ್ರೀಷ್ಮದ ಹಾಡುಗಳನ್ನು ಹಾಡಿ ನಮ್ಮ ಹಾಡಿಯನ್ನು ಕಾಯಬೇಕು..

ಕಾಳಿ : ಎಂಥ ಇಕ್ಕಟ್ಟಿಗೆ ಸಿಕ್ಕಿಸಿದೆ ನನ್ನ. ಒಂದು ವೇಳೆ ನನ್ನ ಕವಿತೆ ಅವರಿಗೆ ಮೆಚ್ಚಿಗೆಯಾಗದಿದ್ದರೆ...

ಮಲ್ಲಿಕಾ : ನನ್ನ ಭಯ ಅದಲ್ಲ. ನಿನ್ನ ಕವಿತೆಗೆ ಜೇನರುಚಿಯುಂಟು. ಕಾಡು ಮಲ್ಲಿಗೆಯ ಪರಿಮಳವುಂಟು. ನಿನ್ನ ಕವಿತೆಯನ್ನು ಕೇಳಿ... ನಡೆ ರಾಜಾಸ್ಥಾನಕೆ ಎಂದರೆ ಏನು ಮಾಡುವುದು...

ಕಾಳಿ : ಈ ಮಣ್ಣು, ಈ ನೀರು, ಈ ಆಕಾಶ, ಈ ಬೆಟ್ಟ, ಈ ಗಾಳಿ, ಇವುಗಳಲ್ಲಿ ನನ್ನ ಪ್ರಾಣ ಬೆರತು ಹೋಗಿದೆ. ಅರ್ಧರಾಜ್ಯ ಕೊಟ್ಟರೂ ಹೋಗಲಾರೆ.

ಮಲ್ಲಿಕಾ : ನಾಳೆರಾತ್ರಿ ನೀನು ಲೋಕ ಕವಿಯಾಗುತ್ತೀಯಾ. ಮರೆಯಬೇಡ. (ಹೋಗುತ್ತಾಳೆ)

ಕಾಳಿ : (ಸ್ವಗತ) ಮಲ್ಲಿಕಾಳಿಗೆ ವಿಲೋಮನನ್ನು ಮದುವೆಯಾಗುವುದು ಇಷ್ಟವಿಲ್ಲವೆಂದು ನನಗೆ ಗೊತ್ತಿತ್ತು. ಆದರೆ ಅವಳು ವಿಲೋಮನಿಂದ ಪಾರಾಗಲು ನನ್ನನ್ನು ನಿರೀಕ್ಷಿಸುತ್ತಿದ್ದಾಳೆ. ಮಲ್ಲಿಕಾ ನನ್ನ ಬಾಲ್ಯಸಖಿ. ನನ್ನ ಬಾಲ್ಯ ಮಲ್ಲಿಕಾಳಲ್ಲಿ ಅವಿತು ಕುಳಿತಿತ್ತು. ಅವಳಲ್ಲಿ ನನಗೆ ಇರುವುದು ಕಾಮವಿಲ್ಲದ ವಿರಹ. ಇದೇಕೆ ಅವಳಿಗೆ ಅರ್ಥವಾಗುತ್ತಿಲ್ಲ. ಇಂದು ಅವಳ ಕಣ್ಣಲ್ಲಿ ಕಾಣಿಸಿದ ಹೊಸ ಮಿಂಚು ನನ್ನನ್ನು ಬುಡ ಹಿಡಿದು ಅಲ್ಲಾಡಿಸಿತು. ನೋಟ ರುಚಿ ಇಷ್ಟಾನಿಷ್ಟಗಳಲ್ಲಿ ನಾವು ಬೇರೆಬೇರೆ ಅಂತ ಎಂದೂ ಅನಿಸಿರಲಿಲ್ಲ. ಮಲ್ಲಿಕಾ ನನ್ನ ಜೀವ. ನನ್ನ ಮನಸ್ಸಿನ ಒಂದು ಭಾಗ. ನಾನು ಹೇಗೆ ಅವಳನ್ನು ಪ್ರೀತಿಸಲಿ ಅಥವಾ ನಾನು ನನ್ನನ್ನೇ ಹೇಗೆ ಪ್ರೀತಿಸಲಿ. ಸ್ನೇಹ ಪ್ರೀತಿ ಯಾಗುವುದಕ್ಕಿಂತ ದುರಂತ ಇನ್ನಾವುದಿದೆ ಲೋಕದಲ್ಲಿ! ಮಲ್ಲಿಕಾಳನ್ನು ಹೆಂಡ್ತಿಯಾಗಿ ಕಲ್ಪಿಸಿಕೊಂಡು ಭೀತನಾದೆ. ಅದಕ್ಕೆ ಗಂಧರ್ವಕನ್ನೆಯನ್ನು ಪ್ರೀತಿಸಿರುವುದಾಗಿ ಸುಳ್ಳು ಹೇಳಿದೆ. ನನ್ನನ್ನು ಕ್ಷಮಿಸು ಮಲ್ಲಿಕಾ. ಹಾ... ಅಂದು ಹಾಡಿಯಲ್ಲಿ ಸಂಭ್ರಮ. ನಾನು ಹಾಡುವುದೋ ಬೇಡವೋ ಎಂಬ ತೊಳಲಾಟ ನನ್ನನ್ನು ಕಾಡುತ್ತಿದೆ. ಮಲ್ಲಿಕಾಳ ಸ್ನೇಹಕ್ಕಾಗಿ, ಚಿಕ್ಕಂದಿನಿಂದ ತಾಯಿ ಇಲ್ಲದ ನನ್ನನ್ನು ಸ್ವಂತ ಮಗನಂತೆ ಪೋಷಿಸಿದ ಜನರಿಗೆ ಇನಿತು ಸಹಾಯ ಮಾಡುವ ಸಲುವಾಗಿ ನಾನು ಹಾಡಲೇಬೇಕು, ಹಾಡುತ್ತೇನೆ.

●

ದೃಶ್ಯ – ೫

[ವೇದಿಕೆಯ ಮೇಲೆ ರಾಜ ಪ್ರತಿನಿಧಿಗಳು ಕುಳಿತ್ತಿದ್ದಾರೆ. ಜನರು ಕಿಕ್ಕಿರಿದು ತುಂಬಿದ್ದಾರೆ. ಮಲ್ಲಿಕಾ ಮತ್ತಿತರ ಹೆಂಗಸರು ಒಂದೆಡೆ ನೆರೆದಿದ್ದಾರೆ]

ಒಬ್ಬ : ಹಾಡಿಯ ಜನರೇ ಇಂದು ನಮ್ಮ ಹಾಡಿಗೆ ಸಂಭ್ರಮದ ದಿನ ಉಜ್ಜಯಿನಿಯ ರಾಜಪ್ರಮುಖರು ರಾಜಧನ ಸಂಗ್ರಹಕ್ಕಾಗಿ ಪ್ರತಿ ವರ್ಷದಂತೆ ಆಗಮಿಸಿದ್ದಾರೆ.

ಇನ್ನೊಬ್ಬ : ಅವರ ಸಂತೋಷಕ್ಕಾಗಿ ಹಾಗೂ ಉಜ್ಜಯಿನಿಯ ನಮ್ಮನ್ನು ಆಳುವ ಪ್ರಭುಗಳಲ್ಲಿ ನಮ್ಮ ಅವಿಚ್ಛಿನ್ನ ನಿಷ್ಠೆಯನ್ನು ತೋರುವ ಸಲುವಾಗಿಯು ಈ ಸಂತೋಷ ಕಾರ್ಯಕ್ರಮವನ್ನು ನಮ್ಮ ಕಾಡಿನ ಸಂಪ್ರದಾಯದಂತೆ ಏರ್ಪಡಿಸಿದ್ದೇವೆ.

ಇನ್ನೊಬ್ಬ : ನಮ್ಮ ಹಾಡಿಯ ಮಗ ಕಾಳಿ ಈಗ ಕಾಡಿನ ಹಾಡುಗಳನ್ನು ಆಡಿ ನಮ್ಮ ಅತಿಥಿಗಳನ್ನು ಸಂತಸಗೊಳಿಸಬೇಕೆಂದು ವಿನಂತಿಸುತ್ತೇವೆ.

ಜನ : ಕಾಳಿ... ಕಾಳಿ... ಕಾಳಿ... (ಜೈಕಾರದ ರೀತಿಯಲ್ಲಿ ಕೂಗುತ್ತಾರೆ)

(ಕಾಳಿ ಹಾಡುತ್ತಾನೆ)

ಕಾಡಿನ ಬಿದಿರೊಂದು ಕೊಳಲಾಯಿತು
ಕಣ್ಣೀರ ಹನಿಯೊಂದು ಕಡಲಾಯಿತು
ನೋವಿನ ಉಸಿರೊಂದು ಕತೆಯಾಯಿತು
ಕಣ್ಣವೆಯ ಮೂಡಣದ ಬಾಗಿಲ ತೆರೆದು
ಬಂದಾಳೋ ನಿಂದಾಳೋ ಬೆಳ್ಳಿ ಚಂದ್ರಮ
ಆಕಾಸ ಭೂಮಿಗೆ ಧಾರೆ ಜಲಗಂಗೆ
ಮೈಯಾಗ ಮರುಳಾಗಿ ಬಂದಾಳೋ
ಮನ ಮುದದಿ ಸೋತು ನಿಂದಾಳೋ
ಎದೆಯ ಹಚ್ಚೆಯಲಿ ಮೂಡಿತ್ತು ನವಿಲು
ಕಣ್ಣ ಬಟ್ಟಲ ತುಂಬ ಬೆಳದಿಂಗಳ ಕಡಲು

ಮುದುಕಿ : ಮಗ ಏನ್ ಚಂದ ಹಾಡಿದಿಯೋ ನನ್ನಪ್ಪ ಆ ಕಾಡುಕಾಯೋ ತಾಯಿ ನಿನ್ನ ನಾಲಿಗೆಯನ್ನ ಕಡ್ಡಿ ಜೇನಿನಲ್ಲಿ ಹೊರಳಿಸಿದಂಗೆ ಇತ್ತು ನಿನ್ನ ಮಾತು.

ಜನ : ಏಯ್ ಇದು ಮನುಸ್ರ ಮಾತಂಗಿಲ್ಲ. ಇವ ದೈವದ ಕುಲದವನೇ ಇರಬೇಕು. ಎಷ್ಟಾದರೂ ಕಾಳಿ ಮಾತೆ ದೇವಸ್ಥಾನದಲ್ಲಿ ಸಿಕ್ಕವನಲ್ಲವೆ?

ಜನ : ನೀನು ನಮ್ಮ ಹಾಡಿಯ ಮುತ್ತು, ನಿನ್ನ ಮಾತೇ ನಮ್ಮ ಸ್ವತ್ತು.

ರಾಜಪ್ರಮುಖ: ಆಹಾ.. ಏನು ಚಂದ ಈ ಹಾಡು ಎಂತಹ ರೂಪಕ ಚಮತ್ಕಾರ. ಧನ್ಯವಾಯಿತು ನಮ್ಮ ಬದುಕು ಇನ್ನು ಮುಂದೆ ಇವನು ಕಾಳಿಯಲ್ಲ, ಕಾಳಿದಾಸ, ಕವಿ ಕಾಳಿದಾಸ (ಜನರ ಉದ್ಘಾರ) ಇಂತಹ ದಿವ್ಯ ಗಾಯನವನ್ನು ಕೇಳಿಸಿದ ನಿಮಗೆ ನಮ್ಮ ಬಳುವಳಿ. ಈ ವರ್ಷದ ಕಂದಾಯವನ್ನು ನೀವು ರಾಜ ಬೊಕ್ಕಸಕ್ಕೆ ಸಲ್ಲಿಸಬೇಕಿಲ್ಲ.

ಜನ : ರಾಜಪ್ರಮುಖರಿಗೆ ಜಯವಾಗಲಿ...

ಪ್ರಮುಖ : ಆದರೆ ನಿಮ್ಮ ಹುಡುಗನನ್ನು ನೀವು ನಮಗೆ ಒಪ್ಪಿಸಬೇಕು?

ಜನ : ಏನು ಕಾಳಿಯನ್ನೇ? ಇಲ್ಲ ನಾವು ಅವನನ್ನು ನಿಮಗೆ ಒಪ್ಪಿಸುವುದಿಲ್ಲ... ಬೇಕಾದರೆ ಕಂದಾಯ ಕಟ್ಟುತ್ತೇವೆ. ಅವನು ನಮ್ಮ ಹಾಡಿಯ ಮಗ ಅವನನ್ನು ನಾವು ಬಿಡುವುದಿಲ್ಲ.

ಪ್ರಮುಖ : ನಾಯಕರೆ ಜಗತ್ತಿನ ಶ್ರೇಷ್ಠ ಮಾಣಿಕ್ಯ ಯಾರಿಗೆ ಸೇರಬೇಕು?

ನಾಯಕ : ನಮ್ಮ ದೊರೆ ಭೋಜ ಮಹಾರಾಜರಿಗೆ ಸೇರಬೇಕು. ಅದೇ ಧರ್ಮ.

ಪ್ರಮುಖ : ಅದೇ ಧರ್ಮವೆಂದಾದರೆ ಈ ಮಾತಾಡುವ ಮಾಣಿಕ್ಯ ಕಾಳಿದಾಸನನ್ನು ನಮ್ಮ ಧಾರಾ ನಗರಕ್ಕೆ ಕಳಿಸಿಕೊಡಿ. ಅಲ್ಲಿ ಆತ ರಾಜಸಭೆಯಲ್ಲಿದ್ದು ಸಾಮ್ರಾಜ್ಯದ ಗೌರವನ್ನು ಹೆಚ್ಚಿಸುವುದೇ ಸೂಕ್ತ. ಏನನ್ನುತ್ತೀರಿ?

ನಾಯಕ : ಅದು... ತಾವು ಪ್ರಭುಗಳು..

ನಾಯಕ ಹೆಂಡತಿ: ಬೇಡ ಬೇಡ... ಅವನಿಲ್ಲಿ ಬಂದಾಗ ತಬ್ಬಲಿ. ಅವನನ್ನು ನಮ್ಮ ಮನೆಯ ಮಗನಂತೆ ಸಾಕಿದ್ದೇವೆ. ಅವನನ್ನು ನಮ್ಮಿಂದ ದೂರ ಮಾಡಿ ನಮ್ಮನ್ನು ಈಗ ತಬ್ಬಲಿಯಾಗಿ ಮಾಡಬೇಡಿ.

ಪ್ರಮುಖ : ನಿಮ್ಮ ಕಳವಳ ನಮಗೆ ಅರಿವಾಯಿತು. ಈ ಕವಿಯನ್ನು ನಮ್ಮ ಖಜಾನೆ ಒಡವೆಯಂತೆ ಜೋಪಾನ ಮಾಡುತ್ತೇವೆ. ಅಲ್ಲದೆ ರಾಜ

ಸಭೆಯಲ್ಲಿದ್ದರೆ ಆತನ ಪ್ರತಿಭೆ ಲೋಕಕ್ಕೆ ಅರಿವಾಗುವುದು. ಆತನ ಕಾವ್ಯ ಲೋಕೋತ್ತರವಾಗುವುದು.

ಮಲ್ಲಿಕಾ : ದಯಮಾಡಿ ಕಾಳಿಯನ್ನು ಕಳಿಸಿಕೊಡಿ. ಅವನು ಎಲ್ಲಿದ್ದರೂ ನಮ್ಮೂರ ಕಾಡು, ಬೆಟ್ಟ, ನದಿ ನಮ್ಮ ಪ್ರೀತಿಗಳನ್ನೇ ತನ್ನ ಕಾವ್ಯದಲ್ಲಿ ಬರೆಯುತ್ತಾನೆ. ಅವನು ಕವಿಯಾಗಿ ಬೆಳೆಯಲಿ. ನಮ್ಮಲ್ಲಿ ಇದ್ದರೆ ಕಾಡು ಮಲ್ಲಿಗೆಯಂತೆ ಅವನ ಶಕ್ತಿ ವ್ಯರ್ಥವಾಗುವುದು.

ನಾಯಕ : ನೋಡಿ ನಮ್ಮ ಪ್ರೀತಿ ಅವನ ಬೆಳವಣಿಗೆಗೆ ಅಡ್ಡಿಯಾಗಬಾರದು. ಆದರೆ ಅವನ ಅಭಿಪ್ರಾಯವನ್ನೂ ಕೇಳಿ.

ಪ್ರಮುಖ : ಓಹೋ ಆಗಬಹುದು. ಎಲ್ಲಿ ಕರೆಯಿರಿ ಕಾಳಿಯನ್ನು. ಕೇಳಿ ಆತನ ಅಭಿಪ್ರಾಯವನ್ನು.

(ಗೊಂದಲ ಗುಸುಗುಸು ಗಾಬರಿ)

ಒಬ್ಬ : ಅರೆ! ಕಾಳಿ ಇಲ್ಲ. ಆಗಲೇ ಹೊರುಟು ಹೋಗಿರಬೇಕು.

ಇನ್ನೊಬ್ಬ : ಅವನಿಗೆ ನಮ್ಮನ್ನು ಬಿಟ್ಟು ಹೋಗುವುದು ಇಷ್ಟವಿಲ್ಲವೆಂದು ತೋರುತ್ತದೆ.

ಪ್ರಮುಖ : ನೋಡಿ ನಾಯಕರೆ, ನಾವು ಹೀಗೆ ಈ ಅಡವಿಯಲ್ಲಿರುವ ಎಲ್ಲಾ ಹಾಡಿಗಳ ರಾಜಧನವನ್ನು ಸಂಗ್ರಹಿಸಿ ಮುಂದಿನ ಹುಣ್ಣಿಮಿಗೆ ಇಲ್ಲಿ ಬರುತ್ತೇವೆ. ಅಷ್ಟು ಹೊತ್ತಿಗೆ ಆತನನ್ನು ನಮಗೆ ಒಪ್ಪಿಸಿರಿ. ನೀವು ರಾಜದ್ರೋಹ ಮಾಡಲಾರಿರಿ ಎಂಬ ನಂಬಿಕೆ ನಮಗಿದೆ. ನಾವಿನ್ನು ಬರುತ್ತೇವೆ. (ಹೊರಡುತ್ತಾರೆ)

ಜನ : ರಾಜ ಪ್ರಮುಖರಿಗೆ ಜಯವಾಗಲಿ, ರಾಜಪ್ರಮುಖರಿಗೆ ಜಯವಾಗಲಿ

(ಮಲ್ಲಿಕಾ ಪಂಜು ಹಿಡಿದು ಬರುತ್ತಾಳೆ)

ಅಕಾಸ ಎಂಬುದು ಮಾಯಾ ಮಂಟಪ
ನೋಡಲ್ಲಿ ಚುಕ್ಕಿ ಜೀವ ತಳೆದಾ ದೀಪ
ಮಿಂಚು ಹುಳುವಾಗಿ ಮಿನುಗಿ ಬೆಳಕ ಅಂಬಾಗಿ ಬೆಳಗಿ
ಬರುತಾವ ಬರತ್ತಾವ ಕಣ್ಣಾ ಹೊಲಕೆ
ಮೊಳತಾವೆ ಮೊಳತಾವ ಕನಸ ಮೊಳಕೆ
ಮೈಯೆಲ್ಲಾ ಜುಂ ಅಂತಾ ಜೀವ ಸಂಚಾರ
ನೆಲ ನೆಪ್ಪುಗಳಲ್ಲಿ ದೀಪ ಸಂಚಾರ

(ದೃಶ್ಯ ಬದಲು)

(ಅಟ್ಟಣಿಗೆಯ ಒಂದು ತುದಿಯಲ್ಲಿ ಬೊಂಬೆಯಂತಹ ಹುಡುಗಿ ನಗುತ್ತಾ ನಿಂತಿದ್ದಾಳೆ. ಕಾಳಿ ತಲ್ಲಣದಲ್ಲಿದ್ದಾನೆ)

ಹುಡುಗಿ : ನಾನು...

ಕಾಳಿ : ನೀನು ಗಂಧರ್ವಕನ್ನೆ. ನನಗೆ ಗೊತ್ತು. ನಾನು ಮಲ್ಲಿಕಾಳಿಗೆ ಸುಳ್ಳು ಹೇಳಿದ್ದೆ...

ಹುಡುಗಿ : ನಾನು ಸುಳ್ಳಲ್ಲ. ನಾನು ನಿಜ. ನಿನ್ನ ಮೆಚ್ಚಿದ್ದೇನೆ. ನನ್ನ ಊರು...

ಕಾಳಿ : ಅದೋ ಆ ಬೆಳ್ಳಿ ಬೆಟ್ಟದ ಮೇಲಿನ ಯಕ್ಷ ಲೋಕ. ಅಲ್ಲಿಂದ ಬಂದಿರುವೆ ಅಲ್ಲವೆ?

ಹುಡುಗಿ : ಹೌದು ನಿನಗಾಗಿ ನಾನು ಕಣ್ಣ ರೆಪ್ಪೆಯ ಆಚೆಗಿನ ಯೋಜನ ದೂರದಿಂದ ಬಂದಿರುವೆ?

ಕಾಳಿ : (ಮೌನ)

ಹುಡುಗಿ : ಏನು ಯೋಚಿಸುತ್ತಿರುವೆ? ನನ್ನ ಮಾತಿನಲ್ಲಿ ಇನ್ನೂ ಅನುಮಾನವೇ?

ಕಾಳಿ : ಅಗಲಿಕೆಯ ಭಯ. ನನಗೆ ಅರಿವಿಲ್ಲದಿರುವಾಗಲೇ ತಾಯಿ ತೊರೆದಳು.

ಹುಡುಗಿ : ನಾನು ತೊರೆಯುತ್ತೇನೆ ಬೇಕಿದ್ದರೆ ಪ್ರಾಣವನ್ನು. ನಿನ್ನನ್ನಲ್ಲ. ನಂಬು ನನ್ನ.

('ಮೈಯಲ್ಲಾ ಜುಂ ಅಂಥಾ'– ಹಾಡು)

ಕಾಳಿ : ನಾನು ಹಾಡಿಯ ಋಣ ತೀರಿಸಲು ಉಜ್ಜಯಿನಿಗೆ ಹೊರಟ್ಟಿದ್ದೇನೆ.

ಹುಡುಗಿ : ನಿನಗಾಗಿ ಪ್ರತಿ ಹುಣ್ಣಿಮೆಯಲ್ಲೂ ಈ ಅಟ್ಟಣಿಗೆಯಲ್ಲಿ ನಾನು ಕಾಯುತ್ತಿರುತ್ತೇನೆ.

ಕಾಳಿ : ನನ್ನ ಪ್ರಾಣ ಇದ್ದರೆ ನಿನಗಾಗಿ ಮುಂದಿನ ಮೂರು ತಿಂಗಳಲ್ಲಿ ಇಲ್ಲಿಗೆ ಹಿಂತಿರುಗಿ ಬರುತ್ತೇನೆ.

ಹುಡುಗಿ : ನಾನಿನ್ನು ಬರಲೇ.. (ಕೈಬಿಡಿಸಿಕೊಳ್ಳುವಾಗ ಅವಳ ಕೈ ಬೆರಳ ಉಂಗುರ ನೋಡಿ)

ಕಾಳಿ : ನಿನ್ನ ಕೈಬೆರಳ ಈ ಉಂಗುರವನ್ನ ಕೊಡು. ನಿನ್ನ ನೆನಪು ಬಂದಾಗಲೆಲ್ಲ ಇದನ್ನು ನೋಡಿ ಸಮಾಧಾನ ಪಡಿಸುತ್ತೇನೆ ನನ್ನ ಮನಸ್ಸನ್ನು...

ಹುಡುಗಿ : ಉಂಗುರವನ್ನು ನೋಡಿಕೊಂಡು ನಾನೇ ನಿನ್ನೊಡವೆ ಎನ್ನುವುದನ್ನು ಮರೆಯದಿರಿ...

(ಕೊಟ್ಟು ಓಡಿ ಹೋಗಲು ಉಪಕ್ರಮಿಸುತ್ತಾಳೆ)

(ಕಾಳಿ ಎಂದು ಕೂಗುತ್ತಾ ಪಂಜು ಹಿಡಿದು ದೂರದಲ್ಲಿ ಬರುತ್ತಿರುವ ಮಲ್ಲಿಕಾ)

ಕಾಳಿ : ಅಗೋ ಮಲ್ಲಿಕಾ ಬರುತ್ತಿದ್ದಾಳೆ. ನಿನ್ನೆಯಷ್ಟೆ ಅವಳಿಗೆ ಹೇಳಿದ ಸುಳ್ಳು ನೀನು. ಈಗ ನನ್ನ ಕಣ್ಣೆದುರಿಗೇ ನಿಂತಿರುವೆ ನಿಜವಾಗಿ. ಇರು ಅವಳನ್ನ ನಿನಗೆ ಪರಿಚಯಿಸುತ್ತೇನೆ.

ಹುಡುಗಿ : ಈಗಲೇ ಬೇಡ. ನಾನು ನಾಳೆ ಬರುವೆ.

ಕಾಳಿ : ನಾಳೆ ಬರುವೆಯಲ್ಲಾ... (ಅವಸರಿಸಿ ಹೊರಡುತ್ತಾಳೆ. ಅವಳನ್ನು ಮಲ್ಲಿಕಾ ನೋಡುತ್ತಾಳೆ)

(ಆಲಾಪ)

ಮಲ್ಲಿಕಾ : ಗಂಧರ್ವ ಕನ್ಯೆ? ಹಾಗಿದ್ದರೆ ಕಾಳಿ ಹೇಳಿದ್ದು ನಿಜ.

ದೃಶ್ಯ – ೬

[ಸೆರೆಮನೆ ನ್ಯಾಯಾಧೀಶರ ಮುಂದೆ ಮಲ್ಲಿಕಾ ಹೇಳುತ್ತಿದ್ದಾಳೆ]

ಮಲ್ಲಿಕಾ : ಕಾಳಿ ಸುಳ್ಳು ಹೇಳಿರಿಲಿಲ್ಲ. ಕಾಳಿ ಹೇಳಿದ ಆ ಗಂಧರ್ವ ಕನ್ನೆಯು ಆ ಬೆಳದಿಂಗಳ ಅಟ್ಟಣಿಗೆಯ ಮೇಲೆ ದೇವತೆಯಂತೆ ನನಗೆ ಕಂಡಳು. ಅವಳನ್ನ ಅಲ್ಲಿ ಕಂಡ ಮೇಲೆ ನನಗೆ ವಿಲೋಮನನ್ನು ಮದುವೆಯಾಗದೆ ಬೇರೆ ದಾರಿ ಉಳಿದಿರಲಿಲ್ಲ.

ನ್ಯಾ. : ಅಂದರೆ ನೀನು ವಿಲೋಮನನ್ನು ಮದುವೆ ಆದೆಯೇನು?

ಮಲ್ಲಿಕಾ : ಹೌದು ಅಂದು ರಾತ್ರಿ ಅಲ್ಲಿ ಅಟ್ಟಣಿಗೆ ಮೇಲೆ ಆ ಹೆಣ್ಣನ್ನ ಕಂಡ ಕೂಡಲೆ ಕಾಳಿ, ಈ ಕಾಡು, ಬೆಟ್ಟ, ನದಿ, ಎಲ್ಲಾ ಅಪರಿಚಿತವೆಂದು ತೋರಿದವು. ನನ್ನ ಸುತ್ತ ಇದ್ದ ಎಲ್ಲವೂ ಮರೆಯಾದಂತೆ... ನನ್ನೊಳಗೆ ಎನೋ ಖಾಲಿಯಾದಂತೆ... ನಾನು ಮನೆಗೆ ಹಿಂತಿರುಗಿದ ಮೇಲೆ ನನ್ನ ತಾಯಿಗೆ ವಿಲೋಮನನ್ನು ಮದುವೆಯಾಗುವುದಾಗಿ ತಿಳಿಸಿದೆ. ಕಾಳಿ ನನ್ನ ಮದುವೆಯವರೆಗಾದರೂ ಹಾಡಿಯಲ್ಲಿ ಇರಬಹುದು ಎಂದಕೊಂಡೆ. ಆದರೆ ರಾಜಪ್ರಮುಖರು ನನ್ನ ಮದುವೆಯ ಮುನ್ನಾ ದಿನವೇ ಕಾಳಿಯನ್ನು ಕರೆದುಕೊಂಡು ಉಜ್ಜಯನಿಗೆ ಹೊರಟು ಹೋದರು.

ನ್ಯಾ. : ಕಾಳಿದಾಸ ಮಾತು ಕೊಟ್ಟಂತೆ ಮೂರು ತಿಂಗಳಿಗೆ ಹಿಂತಿರುಗಿ ಬಂದನೇನು?

ಮಲ್ಲಿಕಾ : ಇಲ್ಲ ಬರಲಿಲ್ಲ. ಆದರೆ ಆ ಗಂಧರ್ವಕನ್ನೆ ಮಾತ್ರ ಪ್ರತಿ ಹುಣ್ಣಿಮೆಗೆ ತಪ್ಪದೆ ಬರುತ್ತಿದ್ದಳು.

ಭಟ : ರಾಜನ ಆಸ್ಥಾನಕ್ಕೆ ಹೋದ ಮೇಲೆ ಕಾಡಿನ ಗುರುತು ಮರೆತು ಹೋಗಿರಬೇಕು? ಕೀರ್ತಿಕಾಂತೆಯರು ಲಕ್ಷ್ಮಿಯ ಸಾನಿಧ್ಯ-- ಮರೆಯದೇ ಇರಲು ಹೇಗೆ ಸಾಧ್ಯ?

ಮುಸುಕಿನಾಕೆ : ಕಾಳಿದಾಸನ ದೇಹ ರಾಜನ ಆಸ್ಥಾನದಲ್ಲಿದ್ದರೂ ಮನಸ್ಸು ಮಾತ್ರ ಈ ಕಾಡಿನಲ್ಲಿಯೇ ಇತ್ತು.

ಭಟ : ಅರೆ, ಈ ಮುಸುಕಿನಿಂದಲೂ ಹೆಣ್ಣುದನಿ ಈ ಮುಸುಕಿನಲ್ಲಾದರೂ ಕಳ್ಳನಿರಬಹುದು ಎಂದುಕೊಂಡಿದ್ದೆ. ನೀನು ಕಳ್ಳಿಯೇನು?

ಮುಸುಕಿನಾಕೆ: ನಾನು ಕಳ್ಳಿಯಲ್ಲ. ಕದಿಯಲು ಬಂದವಳೂ ಅಲ್ಲ. ಕಳೆದುಕೊಂಡಿದ್ದನ್ನ ಹುಡುಕಿಕೊಂಡು ಬಂದಿದ್ದೆ.

ಭಟ : ಏನು ಕಳೆದುಕೊಂಡೆ? ಎಲ್ಲಿ ಕಳೆದುಕೊಂಡೆ? ನಮ್ಮ ನ್ಯಾಯಾಧೀಶರಲ್ಲಿ ಪಿರ್ಯಾದು ಕೊಡು. ಕ್ಷಣದಲ್ಲಿ ಹುಡುಕಿ ಕೊಡುತ್ತಾರೆ.

ಮುಸುಕಿನಾಕೆ: ಕಳೆದುಕೊಂಡಿದ್ದು ಉಜ್ಜಯಿನಿಯಲ್ಲಿ. ಕಳೆದುಹೋದದ್ದು ಮನಸ್ಸು.

ನ್ಯಾ. : ಓ ನೀನು ಕೂಡ ಪ್ರೇಮದ ಮರೀಚಿಕೆಯನ್ನು ಬೆನ್ನು ಹತ್ತಿ ಬಂದೆಯೇನು?

ಮುಸುಕಿನಾಕೆ: ನಾನು ನನ್ನ ಗೂಢಚಾರರು ಕೊಟ್ಟಿದ್ದ ಸುದ್ದಿಯ ಬೆನ್ನು ಹತ್ತಿ ಬಂದಿದ್ದೆ.

ಭಟ : ಓಹೋ ನಿನಗೆ ಗೂಡಚಾರರ ಸವಲತ್ತು ಇರುವುದೋ?

ನ್ಯಾ. : ಯಾರು ನೀನು? ನಿನ್ನ ಮಾತಿನಲ್ಲಿರುವ ಆತ್ಮವಿಶ್ವಾಸ ನೋಡಿದರೆ ನೀನು ದೊಡ್ಡಮನೆಯ ಮಗಳಂತೆ ಕಾಣುತ್ತಿರುವೆ?

ಮುಸುಕಿನಾಕೆ: ಹೌದು ನಾನು...

ನ್ಯಾ. : ಉಜ್ಜಯಿನಿಯ ರಾಜಕುಮಾರಿ. ನಮ್ಮ ಮಾತು ಒರಟಾಗಿದ್ದರೆ ಕ್ಷಮಿಸಿ. ತಾವು ಇಲ್ಲೀ...

ರಾಜಕುಮಾರಿ: ನಾನು ಕವಿ ಕಾಳಿದಾಸನನ್ನು ಹುಡುಕುತ್ತಾ... ಮಾರು ವೇಷದಲ್ಲಿ ದೇಶವೆಲ್ಲಾ ಸುತ್ತಿ ಬಂದೆ.

ನ್ಯಾ. : ಪಾಪ. ಕಾಳಿದಾಸ ಸತ್ತ ನಂತರ ಬಂದಿದ್ದೀರಿ..

ರಾ.ಕು. : ಇಲ್ಲ ಕಾಳಿದಾಸ ಸಾಯುವ ಕವಿಯಲ್ಲ. ಆತ ನನ್ನಂತವರ ಹೃದಯದಲ್ಲಿ ಬದುಕೇ ಇರ್ತಾನೆ. ಎಂದಿಗೂ ಎಂದೆಂದಿಗೂ... ನನಗಿನ್ನೂ ನೆನಪಿದೆ ಅಂದು ರಾಜ ಸಭೆಯಲ್ಲಿ ಮುದುಡಿ ಮೈ ಹಿಡಿಯಷ್ಟಾಗಿ ಕುಳಿತ್ತಿದ್ದ ಕವಿಯ ಚಿತ್ರ ಆ ಚಿತ್ರ ಇನ್ನೂ ಹೃದಯದಲ್ಲಿ ಗುಟ್ಟಾಗಿದೆ. ಆಸ್ಥಾನ ಪಂಡಿತರು ತಮಗೆ ಈ ಶೂದ್ರ ಪಿಳ್ಳೆ ಯಾವ

ರೀತಿಯಿಂದಲೂ ಸರಿಸಾಟಿಯಾಗಲಾರನೆಂದು ಬೀಗುತ್ತಿರುವಾಗ ಸಭೆಯ ಅಪ್ಪಣೆಯಂತೆ ಕಾಳಿದಾಸ ಸಭೆಗೆ ವಂದಿಸಿ ತಾನು ಹೊಸತಾಗಿ ರಚಿಸುತ್ತಿರುವ ರಘುವಂಶದ ಅಜ ಮತ್ತ ಇಂದುಮತಿಯ ವಿಯೋಗ ಸಂದರ್ಭವನ್ನು ನಿರೂಪಿಸಿದ ರೀತಿ ನನಗಿನ್ನೂ ನೆನಪಿದೆ.

(ದೃಶ್ಯ ಬದಲು)

(ಗಂಟೆಯ ಸದ್ದು)

(ಅರಮನೆಯ ದೃಶ್ಯ ರಾಜ ಸಭೆಯಲ್ಲಿ ಕಾಳಿದಾಸ)

ಕಾಳಿ : ಅರಮನೆಯ ಬಿಸಲ ಮಚ್ಚಳಿಗೆಯಲಿ ಕುಂತು
ಇಕ್ಷಾಕು ವಂಶಜ ಅಜ ರಾಜನು ತನ್ನ
ಮೋಹದ ಮಡದಿ ಇಂದುಮತಿಗೆ ಆಕಾಶ
ಮಾರ್ಗದಲ್ಲಿ ಬಿಳಿ ಹಂಸಗಳಾಗಿ ಹಾರುತ್ತಿರುವ
ಮೋಡಗಳನು ತೋರುವ ಸಮಯದಲಿ
ಆತ್ತ ಆ ಬಾನ ದಾರಿಯಲಿ ನಾರದ ತಂಬುರರು
ದಕ್ಷಿಣ ಗೋಕರ್ಣ ದಿಕ್ಕಿನಲಿ ಪಯಣಿಸಿ ಗಳಿಗೆ
ತಂಬೂರಿಯ ಹೂಮಾಲೆ ಹರಿದು ಬಿತ್ತೋ
ಆಕಾಸದಿಂದಿತ್ತಿತ್ತ ಇಹದತ್ತ ಹೂಮಾಲೆ
ಇಂದು ಮತಿಯ ಮೇಲೆ ಬಂದು ಎರಗಿತು
ಕಾಳ ಸರ್ಪದಂತೆ ಕಾಲವಶವಾದಳು ಬಾಲೆ..

ರಾ. ಕು. : ಕಾಳಿದಾಸನೆ ಅಜನಾದಂತೆ, ನಾನೇ ಇಂದುಮತಿಯಾದಂತೆ ಉಪ್ಪರಿಗೆಯ ಮೇಲೆ ಭುವಿಭಾನುಗಳು ಸಂಲಗ್ನಗೊಂಡಂತೆ ಕಲ್ಪನೆಯಲ್ಲೇ ಕರಗಿಹೋಗುತ್ತಿದ್ದ ನನ್ನನ್ನು ತಟ್ಟನೆ ಎಚ್ಚರಿಸಿದ್ದು ಯಾರು? ಕನಸೋ ಕಾಲನೋ?

ಅಕಟ ಅಕಟಾ..ಕೂಡಿರ್ದತೋಳ್ ಕೂಡಿರುವಂತೆ
ತುಟಿಯಲಿ ಮುತ್ತಿನ ಹಸಿ ಆರದಿರುವಂತೆ
ಅಗಲಿದರು ಅಯ್ಯೋ ಒಲವನೊಂಟ ಮಾಡಿ..

ಜನ : ಭಲಾ ಭಲಾ.. ಅದ್ಭುತ ಜಯಹೋ.. ಕಾಳಿದಾಸನಿಗೆ ಜಯವಾಗಲಿ..

ಪಂಡಿತ : ಮಹಾಪ್ರಭು... ಅದು ಈ ಪದಗಳು ಛಂದಸ್ಸಿನಲ್ಲಿ ಮೈ ಪಡೆಯುವುದನ್ನು ಕಂಡರೆ..

ರಾಜ : ನಿಮಗೆ ಮಾತೇ ಮರೆತು ಹೋಗುವುದಲ್ಲದೆ ಅದು ಸಹಜವೇ.. ನನಗೂ ಹಾಗೆ ಅಯಿತು. ಕಾಳಿದಾಸನ ಮಾತಿನಲ್ಲಿರುವ ಮಾಯಾ ಗುಣಕ್ಕೆ ನಾನು ಸೋತು ಹೋದೆ.

ಪಂಡಿತ : ಮಹಾಕವಿ, ಮಹಾಕವಿತೆ ಎನ್ನುವುದನ್ನ ತೀರ್ಮಾನಿಸಲು ಕೇವಲ ಒಂದು ಕಾಳನ್ನೂ ಹಿಚುಕಿ ನೋಡಿದರೆ

ರಾಜ : ಸಾಕು ಎನ್ನುತ್ತೀರಿ ಅಲ್ಲವೇ? ಮುಂಗಾರಿನ ಕಪ್ಪು ಮೋಡದಲ್ಲಿ ಪಳ್ಳನೆ ಮಿಂಚು ಹೊಳೆದರೆ ಸಾಕು ಅದು ಮಹಾಮಳೆಯ ಮುನ್ಸೂಚನೆಯಾಗಿರುವಂತೆ ಕಾಳಿದಾಸನು ನಿರೂಪಿಸಿದ ಕಾವ್ಯಭಾಗ ಒಂದನ್ನು ಗಮನಿಸಿದರೂ ಸಾಕು ಈತ ಲೋಕೋತ್ತರ ಕವಿ ಎನ್ನುವುದು ಯಾವುದೇ ಭಿನ್ನಮತವಿಲ್ಲದೆ ಸಾಭೀತಾಗುವುದು ಅಲ್ಲವೆ?

ಪಂಡಿತ : ತಮ್ಮ ಕಾವ್ಯಮೀಮಾಂಸೆ ಜ್ಞಾನವನ್ನು ಅಲ್ಲಗಳೆಯುವುದುಂಟೆ ಪ್ರಭುಗಳು ತಾವು.

ರಾಜ : ಕಾಳಿದಾಸ ನಿನ್ನನ್ನು ನನ್ನ ರಾಜ್ಯದ ಪ್ರಜೆಯಾಗಿ ಪಡೆದಿರುವುದು ನನ್ನ ಪುಣ್ಯ ನಿನ್ನ ನಾಲಿಗೆಯಲ್ಲಿ ವಾಗ್ದೇವಿ ನೆಲೆಸಿದ್ದಾಳೆ. ಇಹದ ಕಾಮಧೇನು ನೀನು. ಇನ್ನು ಮುಂದೆ ನೀನು ನನ್ನ ಆಸ್ಥಾನ ಕವಿ. ನಮ್ಮ ಗೆಳೆತನಕ್ಕೆ ನೀನೆ ದೊರೆ. ಏನು ಬೇಕು ಬೇಡು. ಅಧಿಕಾರ, ಅರಮನೆ, ಅರ್ಧರಾಜ್ಯ ಕೊಡಲೇನು?

ಪಂಡಿತ : (ಸ್ವಗತ) ಅಯ್ಯೋ ಬೆಣ್ಣೆಯ ಮಡಿಕೆಗೆ ಬೆಕ್ಕಿನ ಕಾವಲು, ಕಾಲಮಹಿಮೆ.

ಕಾಳಿ : ದೊರೆಯೇ ನಿಮ್ಮ ಅಭಿಮಾನ ಒಂದೇ ಸಾಕು. ನನಗೆ ನನ್ನ ಹಾಡಿ ಬೇಕು. ನಾನಲ್ಲಿಗೆ ಹೋಗಬೇಕು. ನನ್ನನ್ನು ಕಳುಹಿಸಿ ಕೊಡಿ.

ಪಂಡಿತ : ಕವಿತೆಯ ಯಶಸ್ಸು ಸ್ಫೂರ್ತಿಯನ್ನು ಅವಲಂಭಿಸಿರುತ್ತದೆಂದು ಮೀಮಾಂಸಕರು ಹೇಳುತ್ತಾರೆ. ಆದ್ದರಿಂದ ಆತ ತನ್ನ ಹಾಡಿಗೆ ಹೋಗುವುದು ಸರಿ.

ರಾಜ : ಸರಿ ಹಾಗಾದರ ನಮ್ಮ ಕುಲದೈವ ಶಂಕರನ ಕುರಿತು ಮಹಾಕಾವ್ಯ ಬರೆದು ಕೊಡು. ತಕ್ಷಣವೇ ನಿನ್ನನ್ನು ರಾಜ ಗೌರವಗಳೊಂದಿಗೆ ಕಳುಹಿಸಿ ಕೊಡಲಾಗುವುದು.

ರಾಜಕುಮಾರಿ : (ಸ್ವಗತ) ಕಾಳಿದಾಸನ ಕತೆಯಲ್ಲಿ ಅಜ ಮತ್ತು ಇಂದುಮತಿಯರು ಅಗಲುವ ಘಳಿಗೆಯಲ್ಲೇ ನಾನು ವಧುವಾದೆ. ರಾಜ ಸಭೆಯೇ ಸ್ವಯಂವರವಾದಂತೆ ನಾನು ನಾಚುತ್ತಾ ಕಾಳಿದಾಸನ ಕೊರಳಿಗೆ ಹೂಮಾಲೆ ತೊಡಿಸಿದಂತೆ ಕನಸಾಯಿತು. ನನ್ನ ತಂದೆ ಕಾಳಿದಾಸನ ಕವಿತೆಗೆ ಸೋತು ಹೋದರು. ನಾನು ಕವಿಗೆ ಸೋತು ಹೋದೆ.

(ದೃಶ್ಯ ಬದಲು)

ರಾ.ಕು : ಹೌದು ಆ ಘಳಿಗೆಯಲ್ಲೇ ನಾನು ಕಾಳಿದಾಸನಿಗೆ ಮನಸೋತಿದ್ದೆ.

ನ್ಯಾ. : ಮುಂದೆ.. ಮುಂದೇನಾಯಿತು? ರಾಜನ ಅಪ್ಪಣೆಯಂತೆ ಕಾಳಿದಾಸ ಶಿವನ ಕುರಿತ ಮಹಾಕಾವ್ಯ ಬರೆದನೆ?

ರಾ.ಕು. : ನೀವು ನಂಬುವುದಿಲ್ಲ. ಆತ ಹಗಲು ರಾತ್ರಿಗಳ ಪರಿವೇ ಇಲ್ಲದಂತೆ ಮೂರು ತಿಂಗಳು ಮುಗಿವ ಮುನ್ನವೇ ಕುಮಾರಸಂಭವ ಬರೆದು ತಂದ. ಓದಿಸಿ ಕೇಳಿದ ನನ್ನ ತಂದೆ ನಿನ್ನನ್ನು ಕಾಶ್ಮೀರದ ರಾಜಪ್ರತಿನಿಧಿಯಾಗಿ ನೇಮಿಸಿದ್ದೇನೆ ಎಂದರು. ಆತ ಅದನ್ನೂ ಬೇಡವೆಂದ. ಏಕೆ ಗೊತ್ತೆ ಆ ಗಂಧರ್ವಕನ್ನೆಯ ಪ್ರೀತಿಗಾಗಿ...

ಭಟ : ಏನು ಗಂಧರ್ವ ಕನ್ನೆಯನ್ನು ಕಾಳಿದಾಸ ಮರೆತಿರಲಿಲ್ಲವೆ? ಅಂದರೆ ಆತ ಮಾತುಕೊಟ್ಟಂತೆ ಗಂಧರ್ವಕನ್ಯೆಯಲ್ಲಿಗೆ ಹೋದನೇನು?

ರಾ.ಕು. : ಇಲ್ಲ ಆತನನ್ನು ನನ್ನ ತಂದೆ ಬಿಟ್ಟುಕೊಟ್ಟರು. ಆದರೆ ನಾನು ರಾಜಕುಮಾರಿ.. ಪ್ರೀತಿಯಾಗಲಿ ಯುದ್ಧವಾಗಲಿ ಗೆಲ್ಲುವುದು ನನ್ನ ರಕ್ತಕ್ಕೆ ಅಂಟಿಕೊಂಡ ಗುಣ. ಅದೇ ರಾಜಧರ್ಮ ಕೂಡ. ನಾನು ಸುಂದರಿಯಾಗಿದ್ದೆ, ಉಜ್ಜಯಿನಿಯ ಸಿಂಹಾಸನಕ್ಕೆ ನಾನು ಉತ್ತರಾಧಿಕಾರಿ ಯಾಗಿದ್ದೆ. ಆದರೆ ಆತ ನನ್ನ ಒಲವನ್ನು ತಿರಸ್ಕರಿಸಿದ. ನನ್ನನ್ನು ಅಪಮಾನಿಸಿದ. ಆದ್ದರಿಂದಲೇ ಕಾಳಿದಾಸನನ್ನು ಗೌರವದಿಂದ ಬೀಳ್ಕೊಡಲು ಬಂದ ಸೈನಿಕರಿಂದಲೇ ನನ್ನ ತಂದೆಗೆ ತಿಳಿಯದಂತೆ ಆತನನ್ನು ಸೆರೆ ಹಿಡಿಸಿದ್ದೆ.

(ದೃಶ್ಯ ಬದಲು)

(ಗಂಟೆ ಸದ್ದು)

(ಅರಮನೆಯ ಗುಪ್ತ ಜಾಗ. ಮುಸುಕುಧಾರಿ ಮತ್ತೆ ಮುಸುಕು ಹಾಕಿಕೊಳ್ಳುತ್ತಾಳೆ. ಅಲ್ಲಿ ಇಬ್ಬರು ಸೈನಿಕರು ಕಾಳಿದಾಸನನ್ನು ತಂದು ನಿಲ್ಲಿಸುತ್ತಾರೆ)

ಕಾಳಿದಾಸ : ಯಾರು ನೀವು ನನ್ನ ಬಿಟ್ಟು ಬಿಡಿ.

ಭಟರು : ನೀನೀಗ ಸೆರೆಯಾಳು? ನಿನ್ನ ಬಿಡುಗಡೆ ನಮ್ಮ ಕೈಯಲ್ಲಿ ಇಲ್ಲ.

ಕಾಳಿದಾಸ : ನನ್ನ ಬಳಿ ಇರುವ ಈ ಎಲ್ಲಾ ರಾಜನಿತ್ತ ಕಾಣಿಕೆಗಳನ್ನು ತೆಗೆದುಕೊಂಡು ನನ್ನನ್ನು ಬಿಟ್ಟು ಬಿಡಿ.

ಭಟರು : ಹೇಳಿದೆವಲ್ಲ, ನಿನ್ನ ಬಿಡುಗಡೆ ನಮ್ಮ ಕೈಯಲ್ಲಿ ಇಲ್ಲ.

ಕಾಳಿದಾಸ : ಯಾರು ನೀವು? ನನ್ನೇಕೆ ಸೆರೆ ಹಿಡಿದ್ದಿದ್ದೀರಿ?

ಮುಸುಕಿನಾಕೆ : ಪ್ರಶ್ನೆ ನಾವು ಕೇಳಬೇಕು, ಉತ್ತರ ನೀನು ಹೇಳಬೇಕು?

ಭಟರು : ಅಧಿಕ ಪ್ರಸಂಗ ಮಾಡಬೇಡ. ಕವಿಯ ತಲೆಹರಟೆ ಇಲ್ಲಿ ಬೇಡ ತಿಳಿಯಿತೆ?

ಮುಸುಕಿನಾಕೆ: ನೀನು ಕಾಶ್ಮೀರದ ರಾಜಪ್ರಮುಖ ಹುದ್ದೆಯನ್ನು ಯಾಕೆ ಬೇಡವೆಂದೆ? ಎಲ್ಲಿಗೆ ಹೊರಟಿರುವೆ?

ಕಾಳಿದಾಸ : ನನ್ನೂರ ಬೆಟ್ಟದ ಆಸರೆ ಕಾಡಿನ ನೆರಳು ನದಿಯ ನೀರು ಇವುಗಳಲ್ಲಿ ನನ್ನ ಪ್ರಾಣ ಬೆರತು ಹೋಗಿದೆ. ಅದಕ್ಕೆ ಅಲ್ಲಿಗೇ ಹೊರಟ್ಟಿದ್ದೇನೆ?

ಮುಸುಕಿನಾಕೆ: ನಿನಗೆ ಪ್ರಾಣಭಿಕ್ಷೆ ನೀಡುತ್ತೇನೆ. ಆದರೆ....

ಕಾಳಿದಾಸ : ಅದಕ್ಕೆ ನಾನೇನು ಮಾಡಬೇಕು?

ಮುಸುಕಿನಾಕೆ: ನೀನು ಭೋಜರಾಜನ ಮಗಳನ್ನು ಮದುವೆಯಾಗಬೇಕು.

ಕಾಳಿದಾಸ : ಇಲ್ಲ ಅದು ಸಾಧ್ಯವಿಲ್ಲ. ನಾನೊಬ್ಬ ಕಾಡಿನ ಹುಡುಗ. ತಬ್ಬಲಿ. ರಾಜಕುಮಾರಿಗೆ ನಾನು ತಕ್ಕವನಲ್ಲ.

ಮುಸುಕಿನಾಕೆ: (ಮುಸುಕು ತೆಗೆಯುತ್ತಾ) ಅದನ್ನು ಹೇಳಬೇಕಾದವಳು ನಾನು?

ಕಾಳಿದಾಸ : (ಬೆಚ್ಚಿ) ರಾಜಕುಮಾರಿ.. ನನ್ನನ್ನು ಮನ್ನಿಸಿ.. ನನ್ನನ್ನು ನನ್ನ ಕಾಡಿಗೆ ಕಳುಹಿಸಿಕೊಡಿ..

ರಾ.ಕು. : ನೀನು ನನ್ನನ್ನು ವಿವಾಹವಾಗುವುದಾದರೆ ಕಳುಹಿಸುತ್ತೇನೆ. ಜೊತೆಯಲ್ಲಿ ಹೋಗೋಣ.

ಕಾಳಿದಾಸ : (ಮೌನ)

ರಾ.ಕು. : ಏನು ಯೋಚಿಸುತ್ತಿರುವೆ? ನಿನ್ನ ಕಾವ್ಯದಲ್ಲಿ ವರ್ಣಿತವಾಗಿರುವ ಯಾವ ಸುಂದರಿ ನನ್ನಷ್ಟು ಅಂದವಾಗಿದ್ದಾಳೆ ಹೇಳು?

ಕಾಳಿದಾಸ : ರಾಜಕುಮಾರಿ... ನಾನು ನಿಮ್ಮನ್ನು ವಿವಾಹವಾಗಲಾರೆ. ಆ ಕಾಡಿನಲ್ಲಿ ನನಗಾಗಿ ಒಬ್ಬ ಗಂಧರ್ವಕನ್ನೆ ಕಾಯುತ್ತಾ ಇರುತ್ತಾಳೆ.

ರಾ.ಕು. : ಕೊಲ್ಲಿಸುತ್ತೇನೆ ಅವಳನ್ನ..

ಕಾಳಿದಾಸ : ಕೊಂದು ಬಿಡಿ ನನ್ನ.. ನನ್ನ ಪ್ರೀತಿಯನ್ನ ಕೊಲ್ಲಬೇಡಿ...

ರಾ.ಕು. : ನನಗೆ ನಾನು ಇಷ್ಟಪಟ್ಟ ಹೂ ಬಿಡಲಿಲ್ಲವೆಂದು ಹೂದೋಟವನ್ನೆ ಕತ್ತರಿಸಿ ಹಾಕಿದವಳು ನಾನು. ಇನ್ನು ನಾನು ಇಷ್ಟಪಟ್ಟ ಗಂಡು ನನ್ನನ್ನ ತಿರಸ್ಕರಿಸುವುದೆಂದರೆ?

ಕಾಳಿದಾಸ : ರಾಜಕುಮಾರಿ. ದಯಮಾಡಿ ನನ್ನ ಮಾತು ನಂಬಿ. ನಿಮಗೆ ಅನುರೂಪನಾದ ಗಂಡು ಈ ಲೋಕದಲ್ಲಿ ಹುಟ್ಟಿಯೇ ಇರುತ್ತಾನೆ. ಅಧಿಕಾರದಿಂದಾಗಲಿ, ಅಂತಸ್ತುಗಳಿಂದಾಗಲಿ ಪ್ರೀತಿ ಹುಟ್ಟುವುದಿಲ್ಲ.

ರಾ.ಕು. : ನಾನು ಅದನ್ನೇ ಹೇಳುತ್ತಿದ್ದೇನೆ. ನಿನ್ನಲ್ಲಿ ನನಗೆ ಪ್ರೀತಿ ಹುಟ್ಟಿರುವುದು ಅಧಿಕಾರ ಅಂತಸ್ತುಗಳಿಂದ ಅಲ್ಲ. ಇಷ್ಟಕ್ಕೂ ನೀನು ತಿರಸ್ಕರಿಸುತ್ತಿರುವುದು ನಿನ್ನ ಅದೃಷ್ಟವನ್ನು ನೆನಪಿರಲಿ..

ಕಾಳಿದಾಸ : ನನ್ನ ಕಣ್ಣುಗಳಲ್ಲಿ ತುಂಬಿಕೊಂಡಿರುವ ಆ ಅವಳ ಚಿತ್ರವನ್ನು.. ನನ್ನ ಹೃದಯದಲ್ಲಿ ತುಂಬಿರುವ ಅವಳ ಆ ಉಸಿರಿನ ಪರಿಮಳವನ್ನು... ನನ್ನ ಮೈಯಲ್ಲಿ ಬೆರತಿರುವ ಅವಳ ಸೋಂಕಿನ ಪುಲಕವನ್ನು ಮರೆಯಲಾರೆ..

ಭಟರು : ರಾಜಕುಮಾರಿ ನಿಮ್ಮ ಆಜ್ಞೆಯನ್ನು ತಿರಸ್ಕರಿಸಿದ ಈ ಕಾಡು ಕೋಣವನ್ನು ಕತ್ತರಿಸಿ ಚೆಲ್ಲುತ್ತೇವೆ ಅನುಮತಿ ಕೊಡಿ.

ರಾ.ಕು. : ಪ್ರೀತಿಯನ್ನು ಕೊಲ್ಲುವುದು ಸುಲಭ, ಗೆಲ್ಲುವುದು ಕಷ್ಟ ನಾನು ಪ್ರೀತಿಯನ್ನು ಗೆಲ್ಲಬೇಕು.

ರಾ.ಕು. : ಭಟರೆ ಈತನನ್ನು ಬೇಸಿಗೆಯ ಬೆಟ್ಟದ ಮೇಲಿನ ಅರಮನೆಯ

ನೆಲಮಾಳಿಗೆಯಲ್ಲಿಡಿ. ಈ ಕವಿಯ ಹೃದಯದಲ್ಲಿ ಪ್ರೀತಿ ಹುಟ್ಟುವ ತನಕ ಅಲ್ಲಿಯೇ ಇರಲಿ. ಆ ಏಕಾಂತ ಈ ಕಾಂತೆಯನ್ನು ಒಲಿಸುವಂತಾಗಲಿ.

ಭಟರೆ : ಅಪ್ಪಣೆ ರಾಜಕುಮಾರಿ.

ರಾ.ಕು. : ಅಂದ ಹಾಗೆ ಈ ವಿಷಯ ಗುಟ್ಟಾಗಿರಬೇಕು. ರಟ್ಟಾದರೆ ನಿಮ್ಮ ತಲೆ ಉಳಿಯಲಾರದು ಜೋಕೆ.

(ಭಟರು ಕವಿಯನ್ನು ಸೆರೆಗೆದೂಡುತ್ತಾರೆ. ಸೆರೆಯಲ್ಲಿ ಕಾಳಿದಾಸ ಕಿಟಕಿಯಿಂದ ಆಚೆ ನೋಡುತ್ತಾ ಹುಣ್ಣಿಮೆಯನ್ನು ಕಂಡು ವಿರಹದಿಂದ ಹಾಡುತ್ತಾನೆ)

ತಾನು ಉಂಡ ಎದೆಯೊಲುಮೆ ತಾನು ಸೊಗವಟ್ಟು ಪಡೆದ ಹೆಣ್ಣು
ತಾನು ಕಂಡ ಋತುಮಾನ ತನ್ನ ಬಾಗಿಸಿದ ಚೆಲುವ ಕಣ್ಣು
ಬಂದ ನದಿ ಬೆಟ್ಟ ಪಟ್ಟಣದ ರಮ್ಯ ಛಾಯೆಯಿಂದ
ಮೋಡದೊಂದು ನೆವ ಮಾಡಿ ಹಾಡಿದನು ಯಕ್ಷ-ಮಾಯೆಯಿಂದ॥

ಈ ಯಕ್ಷಿನಕ್ಷಿಗಳು ಪಕ್ಷಿಯಂತೆ ಹಾರಿದವು ಗಾಳಿಯಲ್ಲಿ
ಸಿಗಲಿಲ್ಲ ತಾವು ಜಗದಗಲ ಬೀಸಿದಾ ನಯನ ಜಾಲದಲ್ಲಿ
ಶೃಂಗಾರ-ತೀರ್ಥದಲಿ ಮಿಂದ ಚಿತ್ತ ವೈದರ್ಭಿ ರೀತಿಯಾಗಿ
ಅಂತೆಯೇ ಬಂದು ಗಾಂಧರ್ವ ಪ್ರೀತಿಗಾಂಧರ್ವ ಗೀತಿಯಾಗಿ॥

ರಾ.ಕು. : ಒಂದಲ್ಲ ಎರಡು ವರ್ಷಗಳು ಕಳೆದರೂ ಕಾಳಿದಾಸನ ಮನಸ್ಸು ಬದಲಾಗಲಿಲ್ಲ, ಬದಲಿಗೆ ಕಲ್ಲು ಹೃದಯವು ಕರಗುವಂತಹ ಮೇಘದೂತ ವಿರಹ ಕಾವ್ಯವನ್ನು ರಚಿಸಿದ್ದ. ತಾನೊಬ್ಬ ಶಾಪಗ್ರಸ್ಥ ಯಕ್ಷನೆಂದು ಬಗೆದು ದೂರದಲ್ಲಿರುವ ತನ್ನ ಪ್ರೇಮಿ ಯಕ್ಷಿಗೆ ಪೇಮ ಸಂದೇಶವನ್ನು ಮೇಘಗಳ ಮೂಲಕ ಕಳುಹಿಸುವಂತೆ ಪ್ರೇಮದ ತಪಸ್ಸು ಮಾಡಿದನೆಂದರೆ ಅದು ಸುಳ್ಳಲ್ಲ. ಆ ಕವಿತೆ ಓದುತ್ತಾ ಓದುತ್ತಾ ನಾನು ಸೋತುಹೋದೆ.

ರಾ.ಕು : ಭಟರೇ ಅವನನ್ನು ಬಿಡುಗಡೆಗೊಳಿಸಿ, ನಿನ್ನನ್ನು ಒಂದು ಷರತ್ತಿನ ಮೇಲೆ ಬಿಡುಗಡೆ ಮಾಡುತ್ತೇನೆ.

ಕಾಳಿದಾಸ : ಏನು ಷರತ್ತು!

ರಾ.ಕು. : ನಿನ್ನ ಗಂಧರ್ವ ಕನ್ನೆ, ನಿನಗಾಗಿ ಕಾಯುತ್ತಾ ಇರಲಿಲ್ಲವೆಂದಾದರೆ ಇಲ್ಲಿ ನಾನು ಕಾಯುತಿರುತ್ತೇನೆ...

ಕಾಳಿದಾಸ : ನನ್ನ ಪ್ರಾಣ ಅವಳಲ್ಲಿದೆ. ಕಾಯುತ್ತಾ ಇರುತ್ತಾಳೆ.

ರಾ.ಕು. : ನನ್ನ ಪ್ರಾಣ ನಿನ್ನಲ್ಲಿದೆ. ನಾನೂ ಕಾಯುತ್ತಾ ಇರುತ್ತೇನೆ.

(ಕಾಳಿದಾಸ ಹೊರಡುತ್ತಾನೆ)

ತಾನುಉಂಡ (ಆಲಾಪ)

ರಾ.ಕು. : ಭಟರೆ, ಅವನಿಗೆ ಗೊತ್ತಾಗದಂತೆ ಅವನನ್ನು ಹಿಂಬಾಲಿಸಿ, ಅವನ ಪ್ರತಿ ಚಲನ ವಲನವೂ ನನ್ನ ಗಮನಕ್ಕೆ ಬರಬೇಕು ಇದು ನನ್ನ ಆಜ್ಞೆ. ಇನ್ನೊಂದು ಮಾತು ನನ್ನ ಅಂತಃಪುರದಲ್ಲಿ ಕಾಶ್ಮೀರದ ದಿಕ್ಕಿನ ಎಲ್ಲಾ ಕಿಟಕಿ ಬಾಗಿಲುಗಳನ್ನು ಎಂದೂ ಮುಚ್ಚದಂತೆ ಕಿತ್ತು ಹಾಕಿ. ಆ ದಿಕ್ಕಿನ ಗಾಳಿಗೂ ನನ್ನ ಅರಮನೆಯ ಪ್ರವೇಶಕ್ಕೆ ಅಡ್ಡಿಯಾಗಬಾರದು.

(ಸೆರೆಮನೆಗೆ ದೃಶ್ಯ ಬದಲು)

ರಾ.ಕು. : ನನ್ನ ಬಂಧನದಿಂದ ಬಿಡುಗಡೆಗೊಂಡ ಆತ ನಡೆದಿರುವುದನ್ನು ಮರೆತಿರುವವನ ಹಾಗೆ ಹಾರುತ್ತಲೇ ನಡೆದು ಹೋದ.

ಆಪಾದಿತೆ : ಅಯ್ಯೋ ಪಾಪಿ. ನೀನು ಬಂಧನದಲ್ಲಿರಿಸಿದ್ದರಿಂದಲೇ ಅಂದು ಆ ಹುಣ್ಣಿಯ ದಿನ ಅವನಿಗೆ ಬರಲಾಗಲಿಲ್ಲ. ಅಯ್ಯೋ.. ನಾನು ಪಾಪಿ. ಪ್ರೀತಿಯನ್ನು ಅವಮಾನಿಸಿದೆ. ಅಂದು ಅವನು ಬಾರದೆ ನನ್ನ ಬದುಕು ನರಕವಾಗಿ ಹೋಯಿತು. ನಿನ್ನಿಂದಲೇ... ನೀನೇ ನನ್ನ ಪಾಲಿನ ಶಾಪ...

ನ್ಯಾ. : ಇದೇನಿದು! ಈ ಕವಿಯ ಕತೆ ಈ ಮೂವರು ಹೆಣ್ಣುಗಳಲ್ಲಿ ಒಂದೇ ಜಡೆಯಾಗಿ ಹೆಣೆದುಕೊಂಡಿದೆಯಲ್ಲಾ.. ಇರಲಿ ಸದ್ಯ ಈಗಲಾದರೂ ಇವಳು ಬಾಯಿ ಬಿಚ್ಚಿದಳಲ್ಲಾ... ಯಾರು ನೀನು?

ಅಪಾದಿತೆ : ನಾನು ನಾನೇ... ಆ ಗಂಧರ್ವ ಕನ್ನೆ...

ಮಲ್ಲಿಕಾ : ಏನು! ನೀನಾ ಆ ಗಂಧರ್ವಕನ್ನೆ?

ಆಪಾದಿತೆ : ನಾನು ಕಾಳಿದಾಸನ ದೃಷ್ಟಿಯಲ್ಲಿ ಗಂಧರ್ವ ಕನ್ನೆ. ನಿಜದಲ್ಲಿ...

ರಾ.ಕು. : ನಿಜದಲ್ಲಿ ಯಾರು?

ಆಪಾದಿತೆ : ನಾನು ಹಾಡಿಯ ನಾಯಕನ ಸೊಸೆ.

ಮಲ್ಲಿಕಾ : ಓ ದೇವರೆ ನೀನು ನಮ್ಮ ನಾಯಕನ ಸೊಸೆಯೇನು?

ಅಪಾದಿತೆ : ಹೌದು ನಾನು ಹಾಡಿಯ ನಾಯಕನ ಮಗನನ್ನು ಮದುವೆಯಾಗಿ ಒಂದು ವಾರವಷ್ಟೇ ಆಗಿತ್ತು. ಹೊಸಜನ ಹೊಸ ಜಾಗ. ಮನೆ ಬಿಟ್ಟು ನಾನು ಆಚೆಯೇ ಬಂದಿರಲಿಲ್ಲ. ಆ ದಿನಗಳಲ್ಲಿ ರಾಜ ಪ್ರಮುಖರು ಬಂದರು. ನಮ್ಮ ಹಟ್ಟಿಯಲ್ಲಿ ಅವರಿಗೆ ಸನ್ಮಾನಗಳು ನಡೆದವು. ಇದ್ದಕ್ಕಿದ್ದಂತೆ ಹಾಡೊಂದು ಕೇಳಿಸಿತು. ಅದು ನನ್ನ ಒಳಗಿಂದ ಕೇಳಿಸಿದಂತೆ ಇತ್ತು. ಗಾಳಿಯಲ್ಲಿ ತೇಲಿ ಹೋಗುವ ತರಗೆಲೆಯ ಹಾಗೆ ಮನಸ್ಸು. ನನಗೆ ರೆಕ್ಕೆ ಬಂದಂತೆ ಮನೆಯ ಹೊರಗೆ ಓಡಿಬಂದೆ. ನನ್ನ ಹೃದಯಕ್ಕೆ ಹತ್ತಿರವಿರುವಂತೆ ಆ ಹಾಡು ನನಗಾಗಿಯೇ ಹಾಡುತ್ತಿರುವಂತೆ, ನನ್ನ ಗಂಡ, ನನ್ನ ಮನೆ, ನನ್ನ ಗುರುತು ಎಲ್ಲಾ ಮರೆತು ಹೋಯಿತು. ಪ್ರೇಮ ಹುಟ್ಟುವ ಮೊದಲ ಕ್ಷಣಗಳನ್ನು ಮಾತಿನಲ್ಲಿ ಹೇಳಲಾಗುವುದೇ?

ಮಲ್ಲಿಕಾ : ನಾನು ಅಲ್ಲಿದ್ದೆ. ನನ್ನ ಕಣ್ಣಿಗೆ ನೀನು ಬೀಳಲೇ ಇಲ್ಲ...

ಆಪಾದಿತೆ : ನಾನು ಉಪ್ಪರಿಗೆಯಲ್ಲಿ ನಿಂತಿದ್ದೆ. ಹಾಡು ಮುಗಿದ ಮೇಲೆ ಆ ಹಾಡುಗಾರ ಜನರ ಮೆಚ್ಚುಗೆಯಿಂದ ತಪ್ಪಿಸಿಕೊಂಡು ಕಾಡಿನ ಓಣಿಯಲ್ಲಿ ಓಡುತ್ತಿದ್ದ. ಹಸುವನ್ನು ಹಿಂಬಾಲಿಸುವ ಕರುವಂತೆ ನಾನು ಅದ್ಯಾವ ಧೈರ್ಯದಿಂದಲೋ ಅವನ ಬೆನ್ನು ಹತ್ತಿ ಕಾಡಿಗೆ ಬಂದೆ. ರಾತ್ರಿಯ ಜೊತೆಗೆ ಬೆಳದಿಂಗಳಿತ್ತು. ನಾನು ಬರುವುದು ಅವನಿಗೆ ಗೊತ್ತಿರುವಂತಿತ್ತು. ಅವನ ನೋಟ.. ನಾನು.. ಹೇಳಹೋದರೆ ಅವನು ತಡೆದ. ನೀನು ಗಂಧರ್ವಕನ್ಯೆ ಎಂದ. ಗಾಳಿ ನಿಧಾನ ಬೀಸುತ್ತಿತ್ತು. ಆಕಾಶ ಭೂಮಿಗಳ ಮಿಲನದಂತೆ ಅವನು ಕೈಹಿಡಿದ. ಆ ಸ್ಪರ್ಶದಲ್ಲಿ ಎಷ್ಟೋ ಜನುಮಗಳ ಪರಿಚಯವಿತ್ತು. ಹದವಿತ್ತು.. ಹಿತವಿತ್ತು. ಆ ಗಳಿಗೆ ನಾನು ಮೊಗ್ಗು ಇಡುಗಿ ಹೂವಾದೆ. ಆ ಕ್ಷಣ ಯುಗವಾಗಿರಬಾರದೇ ಅನಿಸಿತು. ಅಷ್ಟರಲ್ಲಿ ರಾಜನ ಆಸ್ಥಾನಕ್ಕೆ ಹೋಗುತ್ತಿದ್ದೇನೆ ನಿನ್ನ ಗುರುತಿಗಾಗಿ ಉಂಗುರ ಕೊಡು ಎಂದ. ನಾನು ಮರು ಮಾತನಾಡದೆ ಕೊಟ್ಟು ಬಿಟ್ಟೆ. ನಾನು ಮಂಕಾದದ್ದನ್ನು ಕಂಡು ಮೂರೇ ತಿಂಗಳಲ್ಲಿ ಬರುತ್ತೇನೆ ಎಂದ. ಭಾಷೆಕೊಟ್ಟ. ನಾನು ಪ್ರತಿ ಹುಣ್ಣಿಮೆಯಲ್ಲೂ ಅವನಿಗಾಗಿ ಕಾಯುತ್ತಿದ್ದೆ. ಕಾಲ ನಿಯತ್ತಿನದು ತಪ್ಪದೆ ಬಂತು. ಆದರೆ ಅವನು ಬರಲಿಲ್ಲ.

ರಾ.ಕು. : ನನ್ನನ್ನು ಕ್ಷಮಿಸು. ಕವಿಯನ್ನು ನಾನು ಸೆರೆ ಹಿಡಿಸದೆ ಇದ್ದಿದ್ದರೆ ಅವನಂದು ಬರುತ್ತಿದ್ದ.

ನ್ಯಾ. : ಅವನು ಅಂದು ಬರಲಿಲ್ಲ. ನಂತರ ಏನಾಯಿತು.. ನಿನ್ನ ಗಂಡ.. ನಿನ್ನ ಮನೆ.

ಆಪಾದಿತೆ : ನನ್ನ ಗಂಡನಲ್ಲಿ ನನಗೆ ಒಲವು ಹುಟ್ಟುವ ಮುನ್ನವೆ ನನ್ನ ಒಡಲೊಳಗೆ ಹೊಸ ಜೀವವೊಂದು ಹುಟ್ಟಿಕೊಂಡಿತು. ನನ್ನ ಗಂಡನಿಗೆ ನನ್ನ ನಿರಾಸಕ್ತಿಯಲ್ಲಿ, ವರ್ತನೆಗಳಲ್ಲಿ ಅನುಮಾನಗಳು ಹುಟ್ಟಿಕೊಂಡವು. ನಾನು ಹುಣ್ಣಿಮೆಗೆ ಅವನ ಕಣ್ಣು ತಪ್ಪಿಸಿ ಹೋಗುವುದನ್ನು ಗಮನಿಸಿ ಅವನು ಆ ದಿನಗಳಲ್ಲಿ ಬೇಕಂತಲೇ ಬೇಟೆಗೆ ಹೋಗಲಾರಂಭಿಸಿದ. ಅವನು ಗುಟ್ಟಾಗಿ ನನ್ನ ಹಿಂಬಾಲಿಸುವುದು ನನಗೆ ಗೊತ್ತಿತ್ತು. ನನ್ನ ಗೆಳೆಯ ಸಿಕ್ಕರೆ ಬೇಟೆಯಾಡಬೇಕೆಂದು ಆತ ಹೊಂಚುತ್ತಿದ್ದ. ಆದರೆ ಆತ ಪ್ರತಿಬಾರಿಯೂ ನನ್ನಂತೆಯೇ ಬೇಟೆಯಿಂದ ಬರಿಗೈಲಿ ಬರುತ್ತಿದ್ದ. ನನ್ನ ಹೊಟ್ಟೆ ಬೆಳದಂತೆ ಅವನ ಅಸ್ವಸ್ಥೆಯು ಬೆಳೆಯಿತು. ನನ್ನ ಗರ್ಭ ಚಿನ್ಹೆಗಳು ತೋರಿ ಬಂದಾಗ ಅವನು ಸಂತಸಗೊಂಡ. ಏಕೆಂದರೆ ನನ್ನನ್ನು ಸಾಕ್ಷಿ ಸಮೇತ ಹಿಡಿದ ಸಮಾಧಾನ ಅವನಿಗೆ. ಒಂದು ಬೆಳದಿಂಗಳ ರಾತ್ರಿ

ನ್ಯಾಸ್ತನೆ ನೆಲ ಬಾಲನೆ (ಆಲಾಪ)

(ದೃಶ್ಯ ಬದಲು)

(ಹಾಡಿಯ ಮನೆಯ ದೃಶ್ಯ ಒಂದು ಮೂಲೆಯಲ್ಲಿ ದೀಪ ಉರಿಯುತ್ತಿದೆ. ಮಂಚದ ಮೇಲೆ ಯಜಮಾನ ಕುಳಿತಿದ್ದಾನೆ. ಆತನ ಹಿಂದೆ ಮನೆಯ ಯಜಮಾನಿ ನಿಂತಿದ್ದಾಳೆ. ಇನ್ನೊಂದು ದಿಕ್ಕಿನಲ್ಲಿ ನಾಯಕನ ಮಗ ಕೋಪದಿಂದ ಕುದಿಯುತ್ತಿದ್ದಾನೆ. ಸೊಸೆ ಮತ್ತೊಂದು ತುದಿಯಲ್ಲಿ ನಿಂತಿದ್ದಾಳೆ)

ಯಜಮಾನ : ಏನು ಮಾತು ಅಂತ ಆಡ್ತಿದ್ದಿಯಾ? ನಿನಗೆ ಮೈಮೇಲೆ ಪರಿಜ್ಞಾನ ಇದಿಯಾ?

ಯಜಮಾನಿ : ಮಗಾ ಯಾಕಿಂಗೆ ಮಾತಾಡ್ತಿದ್ದಿಯಾ? ಈ ವಿಷಯ ನಾಲ್ಕು ಜನರ ಕಿವಿಗೆ ಬಿದ್ದರೆ ನಮ್ಮ ಕುಲದ ಗೌರವ ಏನಾಗಬೇಡ.

ಮಗ : ನಾನು ಸುಮ್ಮನಿದ್ದರೆ ಜನರ ಕಿವಿಗೆ ಈ ವಿಷಯ ಬೀಳದೆ ಇರಬಹುದು. ಆದರೆ ನಾಳೆ ಅವಳ ಹೊಟ್ಟೆ ಗುಡಾಣದಂತೆ ಜನರ ಕಣ್ಣಿಗೆ ಬೀಳೋದನ್ನ ಹೆಂಗೆ ಮುಚ್ಚಿಡ್ತೀರಿ.

ಯಜಮಾನ : ಮದುವೆಯಾದ ಮೇಲೆ ಹುಚ್ಚು ಬಿಡುತ್ತೆ ಅಂತಾರೆ ದೊಡ್ಡವರು. ಆದರೆ ಇವನಿಗೆ ಮದ್ವೆ ಆದ ಮೇಲೆ ಹುಚ್ಚು ಹಿಡಕಂಡದೆ.

ಯಜಮಾನಿ : ಇವನಿಗೆ ಯಾವುದೋ ಭೂತ ಮೆಟ್ಟಿರಬೇಕು. ಆ ಪೂಜಾರಪ್ಪನಿಗೆ ಹೇಳಿ ಕಳಿಸು, ಪೂಜೆ ಮಾಡಿ ತಾಯತ ಕಟ್ಟಿಸಲಿ.

ಮಗ : ಅಮ್ಮ ನನಗಲ್ಲ ಭೂತ ಮೆಟ್ಟಿರೋದು. ಅಲ್ಲಿ ನಿಂತವಳಲ್ಲ ನಿನ್ನ ಮುದ್ದಿನ ಸೊಸೆ. ಅವಳನ್ನು ಮೆಟ್ಟಿರುವ ಭೂತ ಯಾವುದು ಅಂತ ಕೇಳು.

ಯಜಮಾನ : ಬಸರಿ ಅಂದರೆ ಬಾಳೆಗಿಡ ಇದ್ದ ಹಾಗೆ ಅಂತಾರೆ. ಅವಳನ್ನು ನೋಯಿಸಿದರೆ ದೇವರು ನಮ್ಮನ್ನು ಕ್ಷಮಿಸುತ್ತಾನಾ..

ಮಗ : ಅಪ್ಪ ನನ್ನ ಸ್ಪರ್ಶವಿರಲಿ... ನನ್ನ ನೆರಳು ಕೂಡ ಅವಳನ್ನು ಸೋಕಿಲ್ಲ. ಅವಳ ಒಳಗಿನ ಕೂಸಿಗೆ ನಾನು ತಂದೆಯಲ್ಲ.

ಯಜಮಾನ : ಅವಳಿಗೆ ಬೇರೆ ಸಂಬಂಧ ಇದೆ ಎನ್ನುವುದಕ್ಕೆ ನಿನ್ನ ಬಳಿ ಏನಿದೆ ಸಾಕ್ಷಿ.

ಮಗ : ಅಪ್ಪ ನಮ್ಮ ಮದುವೆಯಲ್ಲಿ ನಮ್ಮ ಮನೆತನದ ಉಂಗುರವನ್ನು ನಾನವಳ ಕೈಗೆ ತೊಡಸಿದ್ದೆ. ಅದನ್ನ ಪ್ರಾಣ ಹೋಗುವವರೆಗೂ ತೆಗೆಯಬಾರದು ಎಂದು ನೀವು ಹೇಳಿರಲಿಲ್ಲವೆ. ನೋಡಿ! ಸವೆದು ಹೋದರೂ ಇನ್ನೂ ಅಮ್ಮನ ಕೈಯಲ್ಲಿ ಅವರ ಮದುವೆಯ ಉಂಗುರವಿದೆ. ಆದರೆ ಮದುವೆಯಾದ ಆರು ತಿಂಗಳೊಳಗೆ ಅದು ಇವಳ ಕೈಲಿ ಇಲ್ಲ.

ಯಜಮಾನಿ : ಏನು ಮದುವೆಯ ಉಂಗುರ ಇಲ್ಲವಾ?

ಯಜಮಾನ : ಇದು ನಿಜವೇನು ಮಗಳೆ?

ಸೊಸೆ : ಅದು.. ಅದೂ.. ಕೈಜಾರಿ ಬಿದ್ದು ಹೋಯಿತು.

ಯಜಮಾನಿ : ಕುಲಾಚಾರದ ಉಂಗುರ ಕೈಜಾರಿ ಹೋಯಿತೇನು? ಅಯ್ಯೋ ಶಿವನೆ ನಮ್ಮಿಂದ ಆಗಬಾರದ ತಪ್ಪೇನೋ ಆಗಿ ಹೋಗಿದೆ. ಇಲ್ಲಾಂದ್ರೆ ಇಂಥ ಅಮಂಗಲ ನಡೆದುದಾದ್ರೂ ಹೇಗೇ?

ಮಗ : ಅಮಂಗಲ ಮಾಡಿದವಳು ಇವಳು. ಇವಳನ್ನು ಕತ್ತರಿಸಿ ಹಾಡಿಗೆ ತೋರಣ ಕಟ್ಟಿದ್ದರೂ ಪಾಪವಿಲ್ಲ.

ಯಜಮಾನ : ಹೆಣ್ಣು ಮಕ್ಕಳ ಮೇಲೆ ಕೈ ಮಾಡಿದವನು ಹೇಡಿ. ಸಾಕು ನಿಲ್ಲಿಸು ನಿನ್ನ ರೋಷ. ಮಗಳೆ ಎಲ್ಲಿ ಬಿತ್ತು ಉಂಗುರ, ಹುಡುಕಿಸಿದರೆ ಸಿಗದ ವಸ್ತು ಯಾವುದಿರುತ್ತೆ ಹೇಳು.

ಸೊಸೆ : ಅವೊತ್ತು ಒಂದು ದಿನ ನೀರಿಗಂತ ನದಿಗೆ ಹೋಗಿದ್ದೆ. ಉಂಗುರ ನದಿಯಲ್ಲಿ ಜಾರಿ ಬಿತ್ತು.

ಯಜಮಾನಿ : ಹರಿಯೋ ನೀರಲ್ಲಿ ಹರಿದೇ ಹೋಯ್ತೇನೋ.

ಮಗ : ಹರಿದೋಗಿದ್ದು ಉಂಗುರ ಅಲ್ಲ. ನನ್ನ ಅವಳ ಸಂಬಂಧ. ಎಷ್ಟು ಇಷ್ಟಪಟ್ಟು ಇವಳನ್ನ ಮದುವೆಯಾದೆ. ಪ್ರೀತಿಯಿಂದ ಕೇಳಿದ್ದರೆ ನನ್ನ ಪ್ರಾಣವನ್ನೆ ಕೊಡುತ್ತಿದ್ದೆ. ಅಪ್ಪ ನನಗೆ ವಂಚನೆ ಮಾಡಿಬಿಟ್ಟಳು.

ಯಜಮಾನಿ : ಮಗಳೆ ನೀನು ಹೀಗೆ ಸುಮ್ಮನಿದ್ದರೆ ಏನು ಅರ್ಥ? ನೀನು ಯಾವ ಪಾಪವನ್ನು ಮಾಡಿಲ್ಲ ತಾನೆ?

ಸೊಸೆ : ಈ ಮನೆಗೆ ನಾನು ತಕ್ಕ ಸೊಸೆಯಾಗಲಿಲ್ಲ. ನನ್ನನ್ನು ಕ್ಷಮಿಸಿ. ನಾನು ಸೊಸೆಯಾಗಿ ಬಂದ ಆರನೆಯ ದಿನ ಸರಿರಾತ್ರಿಯ ಕಾಡಿನಲ್ಲಿ ಯಾರೋ ಹಾಡಿದಂಗಾಯ್ತು. ನಾನು ಹೋದೆ. ಯಾಕೆ ಹೋದೆ ಹೇಗೆ ಹೋದೆ ಇಂದಿಗೂ ನನಗೆ ಅರ್ಥವಾಗಿಲ್ಲ. ಅಲ್ಲಿ ಗಂಧರ್ವನೊಬ್ಬ ನನಗಾಗಿ ಕಾಯುತ್ತಿದ್ದ. ಅವನನ್ನು ಕಂಡಾಗ ನಾನು ಅವನಿಗಾಗಿಯೇ ಹುಟ್ಟಿದವಳು ಅಂತನ್ನಿಸಿತು.

ಮಗ : ಸುಳ್ಳು ಗಂಧರ್ವನೂ ಇಲ್ಲ. ಯಕ್ಷನೂ ಇಲ್ಲ. ಅಕ್ರಮಕ್ಕೊಂದು ಅಡ್ಡ ಹೆಸರು.

ಸೊಸೆ : ದಯಮಾಡಿ ನನ್ನ ಕೊಂದು ಬಿಡಿ. ಅವರನ್ನು ನಿಂದಿಸಬೇಡಿ.

ಯಜಮಾನಿ : ಅಯ್ಯೋ ದೇವರೆ ನಿನ್ನ ಹಾಲಿನಂತ ಬದುಕನ್ನು ಏಕೆ ಹಾಳು ಮಾಡಿಕೊಂಡೆ?

ಯಜಮಾನ : ಯಾರೋ ಘಟಿಂಗ ಇವಳಿಗೆ ಗಂಧರ್ವನೆಂದು ಮಂಕು ಎರಚಿ ಮೋಸ ಮಾಡಿದ್ದಾನೆ.

ಸೊಸೆ : ಇಲ್ಲ ಆತ ಮೋಸ ಮಾಡಿಲ್ಲ. ಎಂದೂ ಮಾಡಲಾರನು ಕೂಡ. ಹುಣ್ಣಿಮೆಯ ದಿನ ಅವನು ಬಂದೇ ಬರುತ್ತಾನೆ.

ಮಗ : ಬರಲಿ, ನನ್ನ ಹೆಂಡ್ತಿಯನ್ನು ದೂರ ಮಾಡಿವನ ರಕ್ತದಿಂದ ಈ ಕಾಡಿಗೆ ತರ್ಪಣ ಕೊಡುತ್ತೇನೆ. ಮೋಸ ಮಾಡಿದವಳು ಇವಳು. ಇವಳನ್ನು ಮನೆಯಿಂದ ಹೊರ ಹಾಕಿ. ಇಲ್ಲದಿದ್ದರೆ ಹಾಡಿಯವರೆದುರು ಮಾನ ಹೋಗುವ ಮೊದಲು ನಾನೇ ನೇಣು ಹಾಕಿಕೊಳ್ಳುತ್ತೇನೆ.

ಯಜಮಾನಿ : ದುಡುಕಬೇಡ ಮಗ. ಕೋಪದಲ್ಲಿ ಕೊಯ್ದ ಮೂಗು ಶಾಂತವಾದಾಗ ಬಾರದು.

ಯಜಮಾನ : ಮಗಳೆ ನೀನು ಮಾಡಿದ್ದು ಸರಿಯೋ ತಪ್ಪೋ. ತೀರ್ಪು ಕೊಡುವ ಸ್ಥಿತಿಯಲ್ಲಿ ನಾನಿಲ್ಲ. ನೀನು ಇಲ್ಲಿದ್ದರೆ ನಿನ್ನ ಮಗುವು ಉಳಿಯುವುದಿಲ್ಲ. ನಮ್ಮ ಮಗ ನಮಗೂ ದಕ್ಕುವುದಿಲ್ಲ. ದಯಮಾಡಿ ನೀನು ನಿನ್ನ ಗಂಧರ್ವನಲ್ಲಿಗೆ ಹೋಗಿಬಿಡು. ನಮ್ಮ ಈ ಇಳಿ ವಯಸ್ಸು ಪುತ್ರಶೋಕವನ್ನು ತಡೆದುಕೊಳ್ಳಲಾರದು.ಈ ಒಂದು ಉಪಕಾರವನ್ನು ಮಾಡು. ಇವಳೆ... ಆಕೆಗೆ ಏನು ಬೇಕು ಎಲ್ಲವನ್ನು ಕೊಡು.

ಸೊಸೆ : ನಿಮ್ಮ ಆಶೀರ್ವಾದ ಒಂದು ಬಿಟ್ಟು ನನಗೇನು ಬೇಡ? ನನ್ನ ಹಣೆಬರಹದಂತಾಗಲಿ ನಿಮ್ಮ ಮಾತಿನಂತೆ ನಡೆಯುತ್ತೇನೆ.

ಯಜಮಾನ : ಮಗನೆ ನನ್ನ ಮಾತಿನಲ್ಲಿ ಗೌರವ ಇರುವುದಾದರೆ ಈಕೆಯನ್ನು ಆ ಗಂಧರ್ವ ಬರುವ ಸ್ಥಳದಲ್ಲಿ ಬಿಟ್ಟು ಬಾ. ಆಕೆಯ ಕೂದಲು ಕೊಂಕಿದರು ನನ್ನ ಮೇಲಾಣೆ. ಇದು ಧರ್ಮದ ಪ್ರಶ್ನೆ.

ಮಗ : ಹೂಂ.. (ನಡೆದು ಹೋಗುತ್ತಾನೆ)

ಯಜಮಾನ : ಮಗಳೆ ಗಂಧರ್ವ ನಿಜಕ್ಕೂ ಬರುತ್ತಾನೆಯೇ?

ಸೊಸೆ : ನನ್ನ ಮೇಲೆ ನನಗೆ ನಂಬಿಕೆ ಇದೆ ಮಾವ (ನಮಸ್ಕರಿಸುತ್ತಾಳೆ)

(ಹಾಡು)

ನ್ಯಾಸ್ತನೆ ನೆಲ ಬಾಲನೆ
ಸರಿಯಲ್ಲವೋ ಏಕಾಂತನೆ
ಬಾಲೆ ನಿನ್ನಯ ಚಿನ್ನದುಂಗುರ
ಬಾವಿ ನೀರೊಳು ಜಾರಿತೋ॥

ನೀರೊಳಿರಲು ನಿಮಿಷ ಉಂಗುರ
ಕರಗಿ ನೀರಾಗುವುದುಂಗುರ
ಕೆರೆಯಲಿರುವ ಕಾಲ ಮೀನು
ಅರೆನಿದ್ದೆಯಲಿದ್ದವು॥

ಮೂರು ಬಣ್ಣದ ಉಂಗುರ
ಮುಳುಗಿ ತೇಲಿ ಹೋಯಿತು
ನಾಲ್ಕು ಬಣ್ಣದ ಉಂಗುರ
ನಾಗಾಲೋಕವ ಸೇರಿತು
ಏಳು ಬಣ್ಣದ ಉಂಗುರ ಹೊಳೆಯ ಪಾಲಾಗೋಯಿತು॥
ಗಂಗೆ ಪಾಲಾಗೋಯಿತು

ಬಿಸಿಲು ಪಯಣ ಬೆಳಸಲೆಂತು
ಬಂಡಿಗೆತ್ತು ಹೂಡಲೆಂತು
ಹೇಗೆ ಹೋಗಲಿ ಜಾತ್ರೆಗೆ। ನಾ ಹೇಗೆ ಹೋಗಲಿ ಪರಿಷೆಗೆ॥

ಅತ್ತೆ ಮನೆಯ ಹೊಸಿಲು ಮೆಟ್ಟಿ
ಆರು ದಿನಗಳಾದವು। ಉಂಗುರವೆಲ್ಲೆಂದು ಮಾವ ಕೇಳಲು
ಉಂಗುರವೆಲ್ಲೆಂದು ಅತ್ತೆ ಕೇಳಲು
ಏನ ಹೇಳಲಿ ಅತ್ತೆಗೆ! ನಾ ಹೇಗೆ ಹೇಳಲಿ ಮಾವಗೆ ॥

(ದೃಶ್ಯ ಬದಲು)

ಆಪಾದಿತೆ : ಆ ನಡು ರಾತ್ರಿ ಆ ಬೆಟ್ಟದ ಮೇಲೆ ಅವನಿಗಾಗಿ ಕಾಯುತ್ತಿದ್ದೆ. ಗಾಳಿ ಅಲುಗಿದರೂ ಸಾಕು ಬಂದನೆಂದು ಭ್ರಮೆಗೊಂಡೆ-ದಾರಿ ಕಾದು ಕಾದು ಕಣ್ಣು ಕಾಯಿಬಿದ್ದು ಹೋಯಿತು. ಕಾಲಕಳೆದಂತೆ ಚೊಚ್ಚಲ ಬಸುರಿಯ ಬಾದೆಗಳು. ಮಾತು ಮರೆತಿರಬಹುದೆ? ರಾಜಸಭೆ. ರಾಜಸನ್ಮಾನ. ಕೀರ್ತಿಕಾಂತೆ. ಅವನನ್ನು ತಡೆದು ನಿಲ್ಲಿಸಿರುವುದು ಯಾರು? ಉಂಗುವಾದರೂ, ಹುಣ್ಣಿಮೆಯಾದರೂ ನೆನಪಿಸಬಾರದೇ. ಆಗಲೇ ಆರು ತಿಂಗಳು ಕಳೆದಿತ್ತು. ಇನ್ನೂ ಅವನು ಬರುವುದಿಲ್ಲ ಅನ್ನಿಸಿದ ಆಕ್ಷಣ ಪ್ರಾಣ ಸೊಕ್ಕಿದಂತಾಯಿತು. ಪ್ರಜ್ಞೆ ತಪ್ಪಿ ಬಿದ್ದಿದೆ. ಎಚ್ಚರವಾದಾಗ ಯಾವುದೋ ಬಂಡಿಯಲ್ಲಿದ್ದೆ. ನನ್ನ ಸುತ್ತ ಅಪರಿಚಿತ ಹೆಂಗಸರು ಕುಳಿತಿದ್ದರು. ದಕ್ಷಿಣದ ಕೊಲಂಬೊದಿಂದ ಉತ್ತರಕ್ಕೆ ಬಂದಿದ್ದ ನಾಗಸಾನಿಯರ ಸಾಲು ಬಂಡಿಗಳು ಅವು. ಸರಿರಾತ್ರಿ ಕಾಡಿನಲ್ಲಿ ಬರುತ್ತಿರುವಾಗ ಪ್ರಜ್ಞೆಯಿಲ್ಲದೆ ಬಿದ್ದಿದ್ದ ನನ್ನನ್ನು ನೋಡಿ. ಅಯ್ಯೋ ಎಂದು ರಕ್ಷಿಸಿ ತಮ್ಮ ಜೊತೆ ಕರೆ ತಂದಿದ್ದರು. ನಾನು ಎಚ್ಚರ ಗೊಂಡಾಗ ಎಷ್ಟು ದಿನಗಳು ಕಳೆದಿತ್ತೋ. 'ಕಟ್ಟಿಕೊಂಡವನು ಅಟ್ಟಿರಬೇಕು ಹೊರಗೆ' ಅಂದರು. ನಾನು 'ಹೂಂ' ಅಂದೆ. ನಂತರ ಅವರು ಕೇಳಲಿಲ್ಲ.

ರಾಜಕುಮಾರಿ : ಹಾಂ ನನಗೆ ಗೂಡಾಚಾರರು ಕೊಟ್ಟ ವರದಿಯ ಪ್ರಕಾರ ಕಾಳಿದಾಸ ಸೆರೆಯಿಂದ ಆ ಕಾಶ್ಮೀರದ ಕಣಿವೆಗೆ ಓಡೋಡಿ ಬಂದನಂತೆ ಆದರೆ ಹುಣ್ಣಿಮೆಯ ದಿನ ಯಕ್ಷಣಿ ಸಿಗದೆ ಹುಚ್ಚನಂತಾಗಿ ಗಂಧರ್ವಕನ್ನೆ ಗಂಧರ್ವಕನ್ನೆ ಎಂದು ಅಲೆಯುತ್ತಿದ್ದನಂತೆ.

ಮಲ್ಲಿಕಾ : ನನಗೂ ಈ ಪುಕಾರು ಕಿವಿಗೆ ಬಿದ್ದಿತ್ತು ಕಾಡಿನಲ್ಲಿ ಕಾಳಿಯ ಹಾಗೆ ಕಾಣುವ ವಿರಾಗಿ ಓಡಾಡುತ್ತಿರುವುದಾಗಿ ಜನ ಮಾತನಾಡಿ ಕೊಳ್ಳುತ್ತಿದ್ದರು.

ರಾ.ಕು. : ಒಂದು ದಿನ ರಾತ್ರಿ ಆ ಗಂಧರ್ವಕನ್ಯೆಯನ್ನು ಕೊಲಂಬೊ ಪಟ್ಟಣದ ನಾಗಸಾನಿಯರ ಗುಂಪೊಂದು ಕರೆದೊಯ್ದರು ಎಂದು ಕಾಡಿನಲ್ಲಿ ಇದ್ದ ಮುದುಕಿಯೊಬ್ಬಳು ಕಾಳಿದಾಸನಿಗೆ ತಿಳಿಸಿದಳಂತೆ. ಅಂದಿನಿಂದ ಆತ ಪ್ರತಿ ಪಟ್ಟಣದ ಸೂಳೆಗೇರಿಗಳಿಗೆ ಭೇಟಿ ನೀಡುತ್ತಿದ್ದನಂತೆ.

ನ್ಯಾ. : ಓಹೋ. ಆಗಲೇ ಇರಬೇಕು ಊರ್ವಶಿಗೆ ಕಾಯುತ್ತಿರುವ ವಿಕ್ರಮನ ತೀವ್ರತೆ ಉತ್ಕಟತೆಗಳ ನಾಟಕ ವಿಕ್ರಮೋರ್ವಶಿಯವನ್ನು ಆತ ಬರೆದಿದ್ದು.

ರಾ.ಕು. : ರಾಜರಿಗೆ ನಿತ್ಯವೂ ಕಾಳಿದಾಸನ ಮೇಲೆ ದೂರು ಬರ ತೊಡಗಿದವು. ಆಸ್ಥಾನ ಪಂಡಿತರು ಸಿಕ್ಕಿದ ಅವಕಾಶವನ್ನು ಸಮರ್ಥವಾಗಿಯೇ ಬಳಸಿಕೊಂಡರು. ಕಾಳಿದಾಸನನ್ನು ವ್ಯಭಿಚಾರಿ.. ವಿಟ.. ಹುಚ್ಚ ಎಂದೆಲ್ಲಾ ಕರೆದು ಗುಟ್ಟಾಗಿ ಕಾಳಿದಾಸನನ್ನು ಕೊಲ್ಲಿಸುವ ಹುನ್ನಾರ ಮಾಡಿರುವುದು ನನ್ನ ಕಿವಿಗೆ ಬಿತ್ತು. ಕವಿಯನ್ನು ಉಳಿಸಿಕೊಳ್ಳುವ ಆಸೆಯಿಂದ ಮಾರು ವೇಷದಲ್ಲಿ ಬಂದೆ. ಆದರೂ ಪ್ರಯೋಜನವಾಗಲಿಲ್ಲ.

ಮಲ್ಲಿಕಾ : ಹಾಡಿ ನಾಯಕರ ಮಗನಿಗೆ ತನ್ನ ಹೆಂಡತಿಯನ್ನು ದೂರ ಮಾಡಿದವನು ಕಾಳಿದಾಸನೆಂದು ತಿಳಿದು ಹೋಗಿತ್ತು. ಅವನು ಎಲ್ಲಿದ್ದರೂ ಕಾಡು ಹಂದಿಯಂತೆ ಬೇಟೆಯಾಡುವುದಾಗಿ ಪ್ರತಿಜ್ಞೆ ಮಾಡಿದ್ದ. ಅವನು ನನ್ನ ಕಾಳಿಯನ್ನು ಕೊಲ್ಲುವ ಮುನ್ನ ಉಳಿಸಿಕೊಳ್ಳಬೇಕು ಎಂದು ಮಾರುವೇಷದಲ್ಲಿ ನಾನು ಬಂದೆ. ನನ್ನ ಪ್ರಯತ್ನವೂ ನಿಷ್ಫಲವಾಯಿತು.

ನ್ಯಾ. : ಪ್ರೇಮವನ್ನು ಬೆನ್ನು ಹತ್ತಿದವನನ್ನು ಸಾವು ಬೆನ್ನತ್ತಿ ಬಂದಿತ್ತು. ಬಹುಷಃ ರಾಜಪಂಡಿತರ ಕಡೆಯವರೋ ಅಥವಾ ನಾಯಕನ ಮಗನೋ ಈ ಕೃತ್ಯವನ್ನು ಮಾಡಿರಬೇಕು. ತುಂಬಿದ ಸಭೆಯಲ್ಲಿ ಮಲಸೂರಿಯಿಂದ ಎದೆಗೆ ಗುರಿಯಿಟ್ಟು ಹೊಡೆಯುವುದು ಅಷ್ಟು ಸುಲಭದ ಮಾತಲ್ಲ. ಇದಕ್ಕೆ ಕೌಶಲ್ಯವಿದ್ದರೆ ಸಾಲದು ಎದೆಯಲ್ಲಿ ಸೇಡಿನ ಕಿಚ್ಚು ಇರಬೇಕು.

ಮಲ್ಲಿಕಾ : ಇದು ನಾಯಕನ ಮಗನದೇ ಈ ಕೆಲಸ. ಕೊಲ್ಲುವಷ್ಟು ಕಿಚ್ಚು ಅವನ ಎದೆಯಲ್ಲಿ ಇತ್ತು.

ರಾಜಕುಮಾರಿ : ಇರಲಾರದು.. ಆ ಕತ್ತಿ ಬೀಸಿದ ಕೌಶಲ್ಯವನ್ನು ಕಂಡರೆ ಇದು ಆ ಪಂಡಿತರು ಕಳುಹಿಸಿದ್ದ ನುರಿತ ಕೊಲೆಗಾರರೇ ಮಾಡಿರಬೇಕು.

ಆಪಾದಿತೆ : ಇಲ್ಲ ಕಾಳಿದಾಸನನ್ನು ಕೊಂದವರು ಅವರಲ್ಲ.

ನ್ಯಾ. : ಯಾರು ಯಾರು ಕಾಳಿದಾಸನನ್ನು ಕೊಂದದ್ದು. ಈಗಲಾದರೂ ನಿಜ ಹೇಳು.

ಆಪಾದಿತೆ : ಕಾಳಿದಾಸ ಕೊಲೆಯಾದ ದಿನ ನಾಗಸಾನಿಯ ಮನೆಯಲ್ಲಿ ಅಭಿಜ್ಞಾನ

ಶಾಕುಂತಲ ನಾಟಕವನ್ನು ವಾಚಿಸುತ್ತಿದ್ದ. ಬೇಟೆಗೆ ಬಂದ ದುಷ್ಯಂತ ಶಕುಂತಲೆಯನ್ನು ಗಂಧರ್ವ ವಿವಾಹವಾಗಿದ್ದು, ಮುದ್ರೆ ಉಂಗುರ ಕೊಟ್ಟಿದ್ದು, ಶಕುಂತಲೆ ಬಸುರಿಯಾಗಿದ್ದು, ದೂರ್ವಾಸರು ಶಾಪಕೊಟ್ಟಿದ್ದು, ಕಣ್ವರು ಬಂದು ಗಂಡನ ಮನೆಗೆ ಕಳುಹಿಸಿಕೊಟ್ಟಿದ್ದು, ನದಿಯಲ್ಲಿ ಉಂಗುರ ಕಳೆದುಕೊಂಡಿದ್ದು, ಕೊನೆಗೆ ರಾಜಸಭೆಯಲ್ಲಿ ನಡೆದ ಆ ಅಪಮಾನ.

(ವೇದಿಕೆಯ ಹಿಂಭಾಗದಲ್ಲಿ ಎತ್ತರದ ಸ್ಥಳದಲ್ಲಿ ಕಾಳಿದಾಸ ಕಾವ್ಯ ವಾಚನ ಮಾಡುತ್ತಿದ್ದಾನೆ)

●

ದೃಶ್ಯ - ೭

[ಶಾಕುಂತಲ ನಾಟಕದ ಶಕುಂತಲಾ ನಿಷ್ಕ್ರಮಣ ದೃಶ್ಯ]

[ದುಶ್ಯಂತ ರಾಜನ ಆಸ್ಥಾನ ರಾಜ ಕುಳಿತಿದ್ದಾನೆ. ಹಿನ್ನೆಲೆಯಲ್ಲಿ ಹಾಡು ಕೇಳಿ ಬರುತ್ತಿದೆ]

ಮರೆವರೇನು ಮಂಜರಿಯಾ ನೀ
ಕಮಲವ ಸತಿಯಿಂ ಭ್ರಮರ ನೀ
ಮಥ ವೇರಿ ಮನೋಹರ ತರಿಯಾ ॥ ಮರೆವ ॥

ನವ ವಧುವನೇ ಕಂಡ
ವಿನಯ ತರವಿ ನೀ
ಸವಿದ ಸುದ್ಧಿಯಾ ನರಿಯಾ
ಕಾಡೊಳು ಸುಧೆಬಲ್
ಪೀಡಿಸಲ್ ಅಮೃತವ
ನೀಡಿದವಳ ನೆನೆಯಾ... ॥ ಮರೆವ ॥

ಆಪಾದಿತೆ : ತಪಸ್ವಿ ಕಣ್ವರಿಂದ ಸಂದೇಶಹೊತ್ತ ಶಾರ್ಙ್ಗರವ ಗೌತಮಿಯರು ತುಂಬುಗರ್ಭಿಣಿ ಶಕುಂತಲೆಯೊಂದಿಗೆ ಆಯೋಧ್ಯ ಪಟ್ಟಣವನ್ನು ಪ್ರವೇಶ ಮಾಡಿದರು. ಅವರನ್ನು ಕಂಡ ದುಶ್ಯಂತ ಪೂಜ್ಯಭಾವದಿಂದ ಕೈಮುಗಿದು ಕೇಳುತ್ತಾನೆ.

ರಾಜ : ಪೂಜ್ಯರಾದ ಕಣ್ವರು ಏನನ್ನು ಆಜ್ಞಾಪಿಸಿರುವರು.

ಶಾರ್ಙ್ಗರವ: ನೀನು ನಮ್ಮ ಪುತ್ರಿಯನ್ನು ಪರಸ್ಪರ ನಿಬಂಧನೆಯಿಂದ ವರಿಸಿದ ಕಾರಣ ಸಂಪ್ರೀತರಾಗಿದ್ದೇವೆ. ನಿಮಗೆ ನಾವು ಆಜ್ಞಾಪಿಸುವುದೇನೆಂದರೆ, ಈಗ ಗರ್ಭಿಣಿಯಾದ ಈಕೆಯನ್ನು ಧರ್ಮವನ್ನು ಆಚರಿಸುವ ಸಲುವಾಗಿ ಪ್ರತಿಗ್ರಹಿಸುವುದೆಂದು.

ರಾಜ : (ಸ್ವಗತ) ಇದೇನಿದು ಇಲ್ಲದ್ದನ್ನು ಆರೋಪಿಸುತ್ತಿರುವರು. ಏನು?! ನಾನು ಇವಳನ್ನು ಮದುವೆಯಾಗಿದ್ದೇನೆಯೆ?

ಶಕುಂತಲೆ : (ಸ್ವಗತ) ಎಲೈ ಮನಸ್ಸೆ ನೀನು ಕಳವಳಪಡುತ್ತಿದ್ದುದು ಈಗ ನಿಜವಾಯ್ತಲ್ಲ.

ಗೌತಮಿ : ಎಲೈ ಆರ್ಯನೆ, ನಾನೊಂದು ಮಾತು ಹೇಳಲು ಇಚ್ಛಿಸುತ್ತೇನೆ. ಗಂಡನಿರುವ ಸತಿ ತಂದೆ ಮನೆಯಲ್ಲಿದ್ದರೆ ಹಳಿಯುವುದು ಲೋಕ. ಅದಕ್ಕೆಂದೇ ಶಕುಂತಲೆಯನ್ನು ಇಲ್ಲಿಗೆ ಕರೆತಂದಿದ್ದೇವೆ.

ರಾಜ : ನೀವು ಋಷಿ ವಾಸಿಗಳು ಹೀಗೆ ವೃಥಾ ಆರೋಪ ಮಾಡಬಹುದೆ.?

ಗೌತಮಿ : ಎಲೆ ಮಗಳೆ. ಒಂದುಗಳಿಗೆ ಲಜ್ಜೆಪಡದಿರು. ನಿನ್ನ ಈ ಮೇಲು ಮುಸುಕನ್ನು ತೆಗೆಯುವೆನು. ನಿನ್ನ ಗಂಡನಿಗೆ ನಿನ್ನ ಗುರುತು ಸಿಗುವಂತಾಗಲಿ. (ಮುಸುಕನ್ನು ತೆಗೆವಳು) (ದುಶ್ಯಂತ ಶಕುಂತಲೆಯನ್ನು ನಿಬ್ಬೆರಗಾಗಿ ನೋಡುತ್ತಾನೆ.)

ರಾಜ : ಯಾರೀಕೆ ನೋಡಲು ಶಮೀವೃಕ್ಷದಂತೆ ತೋರುವಳಲ್ಲಾ.

ಋಷಿ : ಎಲೈ ರಾಯನೆ. ಏಕೆ ಸುಮ್ಮನಿರುವೆ.

ರಾಜ : ಎಲೈ ತಪಸ್ವಿಯೆ. ಎಷ್ಟು ಯೋಚಿಸಿದರೂ ಈಕೆಯನ್ನು ಸ್ವೀಕರಿಸಿದ ಸ್ಮರಣೆ ಬರುತ್ತಿಲ್ಲ. ಗರ್ಭ ಚಿನ್ಹೆಯುಳ್ಳ ಈಕೆಯನ್ನು ನನ್ನ ಪತ್ನಿಯೆಂದು ಹೇಗೆ ತಾನೆ ಪರಿಗ್ರಹಿಸಲಿ.

ಶಕುಂತಲೆ : ಮದುವೆಯಲ್ಲೇ ಸಂದೇಹ ಉಂಟಾದ ಮೇಲೆ ದೂರಕ್ಕೆ ಹತ್ತಿದ ನನ್ನ ಆಸೆ ಇನ್ನೆಲ್ಲಿ.

ಋಷಿ : ಎಲೈ ಶಕುಂತಲೆ. ನಾವು ಹೇಳಬೇಕಾದುದನ್ನು ಹೇಳಿದೆವು. ನೀನು ವರಿಸಿದ ರಾಜನಿಗೆ ನಂಬಿಕೆಯುಂಟು ಮಾಡುವ ಉತ್ತರವನ್ನು ಕೊಡು.

ಶಕುಂತಲೆ : ನನ್ನನ್ನು ಪರಸ್ತ್ರೀಯೆಂದು ತಿಳಿದಿರುವುದರಿಂದ ನೀನು ಹೀಗೆ ಮಾತನಾಡುತ್ತಿರುವೆ. ನೀನಿತ್ತ ಈ ಅಭಿಜ್ಞಾನಾಭರಣದಿಂದ ನಿನ್ನ ಸಂದೇಹವನ್ನು ಹೋಗಲಾಡಿಸುವೆನು.

ರಾಜ : ಇದೀಗ ಒಪ್ಪತಕ್ಕ ಮಾತನ್ನಾಡಿದೆ.

ಶಕುಂತಲೆ : (ಬೆರಳನ್ನು ನೋಡಿ) ಹಾ..! ಅಯ್ಯೋ ನನ್ನ ಬೆರಳಿನಲ್ಲಿ ಉಂಗುರ ವಿಲ್ಲವಲ್ಲಾ..! (ದುಃಖದಿಂದ ಕುಸಿಯುತ್ತಾಳೆ)

ಗೌತಮಿ : ನೀನು ಚಕ್ರಾವತಾರ ನದಿಯಲ್ಲಿ ಶಚೀತೀರ್ಥವನ್ನು ವಂದಿಸುತ್ತಿರುವಾಗ ಉಂಗುರವು ಬೆರಳಿನಿಂದ ಜಾರಿ ಬಿದ್ದಿರಬಹುದು.

ರಾಜ : ಸ್ತ್ರೀಯರು ಸಮಯಕ್ಕೆ ತಕ್ಕ ಬುದ್ಧಿಯುಳ್ಳವರೆಂಬುದು ಸುಳ್ಳಲ್ಲ. (ನಗುತ್ತಾನೆ)

ಶಕುಂತಲೆ : ವಿಧಿಯು ತನ್ನ ಶಕ್ತಿಯನ್ನು ತೋರಿಸಿತು. ಇರಲಿ. ಮತ್ತೊಂದು ಗುರುತನ್ನು ಹೇಳುವೆನು.

ರಾಜ : ನೋಡತಕ್ಕ ಸಾಕ್ಷಿ ಮುಗಿಯಿತು. ಇನ್ನು ಕೇಳತಕ್ಕ ಸಾಕ್ಷಿ. (ನಗುವನು)

ಶಕುಂತಲೆ : ಒಂದು ದಿವಸ ನವಮಲ್ಲಿಕಾ ಮಂಟಪದಲ್ಲಿ ಕುಳಿತಿರುವಾಗ ನೀರು ತುಂಬಿದ ಕಮಲ ಪಾತ್ರೆ ನಿನ್ನ ಕೈಯಲ್ಲಿತ್ತು.

ರಾಜ : ತಮ್ಮ ಕಾರ್ಯ ನೆರವೇರುವುದಕ್ಕಾಗಿ ಸ್ತ್ರೀಯರು ಜೇನುತುಪ್ಪದಂತಿರುವ ಸುಳ್ಳು ಮಾತುಗಳಿಂದ ಕಾಮಿಗಳನ್ನು ಸೆಳೆದುಕೊಳ್ಳುವರಂತೆ (ನಗುವನು)

ಗೌತಮಿ : ಎಲೈ ಮಹಾರಾಜನೇ ನೀನು ಹೀಗೆ ಹೇಳತಕ್ಕದ್ದಲ್ಲ. ತಪೋವನದಲ್ಲಿ ಬೆಳೆದ ಈಕೆಯು ಕಪಟವನ್ನು ಅರಿತವಳಲ್ಲ.

ರಾಜ : (ನಗುತ್ತಾ) ಎಲೈ ವೃದ್ಧ ತಪಸ್ವಿಯೇ ಕಲಿಸದೇ ಬರುವುದು ಕೌಶಲ್ಯಂ ಇಳೆಯೊಳಗೆ. ಕಾಗೆ ಗೂಡೊಳಗೆ ಮೊಟ್ಟೆಯಿಡುವುದನ್ನು ಕೋಗಿಲೆಗೆ ಯಾರು ಕಲಿಸುತ್ತಾರೆ?

ಶಕುಂತಲೆ : ಮುಖದಲ್ಲಿ ಮಧುವನ್ನು ಹೃದಯದಲ್ಲಿ ವಿಷವನ್ನು ಧರಿಸಿರುವ ಈತನನ್ನು ವರಿಸುವುದಕ್ಕೆ ನನಗೆ ತಕ್ಕ ಪ್ರತಿಫಲವೇ ಸಿಕ್ಕಿತು.

ಋಷಿ : ಎಲೈ ರಾಯನೆ. ಉತ್ತರ ಪ್ರತ್ಯುತ್ತರಗಳಿಂದ ಏನು ಪ್ರಯೋಜನ. ಗುರುಗಳ ಆಜ್ಞೆಯನ್ನಂತೂ ನಡೆಸಿದ್ದಾಯಿತು. ಇನ್ನು ನಾವು ಹೊರಡುವೆವು. (ಹೊರಡಲನುವಾಗುತ್ತಾರೆ)

ಶಕುಂತಲೆ : ಈ ದೂರ್ತನು ನನ್ನನ್ನು ವಂಚಿಸಿಬಿಟ್ಟನು. ದುಃಖಕ್ಕೆ ಗುರಿಯಾದ ನನ್ನನ್ನೂ ನೀವು ಬಿಟ್ಟು ಹೋಗುವಿರಾ.

ಶಾರ್ಙ್ಗರವ: ತಾನಾಗಿ ಮಾಡಿಕೊಂಡ ಚಾಪಲ್ಯವು ತನ್ನನ್ನು ಬಿಡದೆ ಸುಡುವುದು.

ಶಕುಂತಲೆ : (ದುಃಖಿತಳಾಗಿ) ಎಲೈ ಪೂಜ್ಯಳಾದ ಭೂದೇವಿಯೇ ನನಗೋಸ್ಕರ ಬಾಯನ್ನು ತೆರೆ. (ಕುಸಿದು ಬೀಳುವಳು)

(ಆ ಗಳಿಗೆ ಸಭೆಯಿಂದ ಯಾರೋ ಒಬ್ಬರು ಧಡೀರನೆ ಎದ್ದು ಕತ್ತಿಯನ್ನು ಕಾಳಿದಾಸನತ್ತ ಎಸೆದು ಓಡಿ ಹೋಗುತ್ತಾನೆ-ಸರ್ರನೆ ಬಂದ ಚೂಪುಗತ್ತಿಯೊಂದು ಕಾಳಿದಾಸನ ಎದೆಯಲ್ಲಿ ನಾಟಿಕೊಂಡಿತು.)

ಜನ : (ಹಾಹಾಕಾರ..) ಅಯ್ಯೋ ಕೊಲೆ..ಕೊಲೆ.. ಕವಿಯನ್ನು ಕೊಂದರು.. ನೋಡಿ ಹೋಗುತ್ತಿದ್ದಾರೆ..ಹಿಡಿಯಿರಿ..ಭಟರೇ..(ಗಲಭೆಯಾಗುವುದು. ಅಲ್ಲಿಗೆ ಧಾವಿಸಿ ಬಂದ ಹೆಣ್ಣಿನ ಕೈ ಹಿಡಿದುಕೊಂಡು ಕಾಳಿದಾಸ)

ಗಂಧರ್ವ ಕನ್ಯೆ : ನನ್ನ ಗುರುತು ಸಿಕ್ಕಿತೇ...? ನಾನು..

ಕಾಳಿದಾಸ : ನೀನು..!.. ಗಂಧರ್ವಕನ್ಯೆ ನಿನಗಾಗಿ ದೇಶವೆಲ್ಲಾ ಸುತ್ತಿಬಂದೆ. ನಿನ್ನ ಉಂಗುರ.

ಭಟ-1 : ಎಲೈ ಪಾಪಿ ಮಹಾಕವಿಗಳಿಗೆ ಏನು ಮಾಡಿದೆ! ಅವರೇನು ದ್ರೋಹ ಮಾಡಿದ್ದರು.

ಗಂಧರ್ವ ಕನ್ಯೆ : ಇಲ್ಲಾ ನಾನೇನು ಮಾಡಲಿಲ್ಲ.

ಕಾಳಿದಾಸ : ಇವಳೆ.. ಇವಳೇ.. ನನ್ನ... ಪ್ರಾಣ. (ಮಾತು ಕತ್ತರಿಸಿಹೋಗುವುದು)

(ಅವಳ ಕೈಯಲ್ಲಿದ್ದ ಉಂಗುರ ಕೆಳಗೆ ಬೀಳುತ್ತದೆ)

ಭಟ-2 : ಈ ಉಂಗುರ ನಿನ್ನದೇನು?

ಗಂಧರ್ವ ಕನ್ಯೆ : ಅದು... ಅದು...

ಭಟ-1 : ಇದು ಕವಿಗಳ ಬೆರಳಲ್ಲಿ ಇದ್ದದ್ದನ್ನ ನಾನೇ ನೋಡಿದ್ದೀನಿ.

ಭಟ-2 : ಸುಳ್ಳು ಸುಳ್ಳು ಹೇಳುತ್ತಿರುವೆ

ಭಟ-1 : ಇವಳೇ ಇವಳೇ ಅಂತ ಕವಿಗಳು ಸಾಯುವ ಮುನ್ನ ಕೂಗಿಕೊಂಡಿದ್ದನ್ನು ಸ್ವತಃ ನಾವು ಕೇಳಿದ್ದೇವೆ. ಇಲ್ಲಿರುವ ಎಲ್ಲರೂ ಕೇಳಿದ್ದಾರೆ.

ಭಟ-2 : ಬಂಧಿಸು ಅವಳನ್ನು. ನ್ಯಾಯಾಧೀಶರ ಮುಂದೆ ಹಾಜರು ಪಡಿಸುವ.

ಆಪಾದಿತೆ : ಇಲ್ಲ ಇಲ್ಲ ನಾನು ಕೊಲ್ಲಲಿಲ್ಲ.

(ಆಕೆಯನ್ನು ಎಳೆದು ಕೊಂಡು ಹೋಗುವರು
ಕಾಳಿದಾಸನ ಹೆಣ ವೇದಿಕೆಯ ಮೇಲೆ ಇರುತ್ತದೆ.)

(ನ್ಯಾಸ್ತನೆ ನೆಲ ಬಾಲನೆ ಆಲಾಪ ಕೇಳಿ ಬರುತ್ತದೆ)

(ದೃಶ್ಯ ಬದಲು)

ಆಪಾದಿತೆ : ಇಲ್ಲ ಇಲ್ಲ ಕೊಂದವಳು ನಾನಲ್ಲ.

ನ್ಯಾ. : ಹಾಗಾದರೆ ಯಾರು ಕೊಂದದ್ದು?

ಆಪಾದಿತೆ : ಬೀಜದೊಳಗೆ ಬೀಜ ಹುಟ್ಟಿ ಮರ ಸತ್ತ ಹಾಗೆ ಮಗನೇ ಕೊಂದ ತಂದೆಯನ್ನ.

ನ್ಯಾ. : ಏನು? ನಿನ್ನ ಮಗ ಕಾಳಿದಾಸನನ್ನು ಕೊಂದನೆ. ಓ ವಿಧಿಯೇ ಎಂಥ ವಿಚಿತ್ರ ಆಟವಿದು.

ಆಪಾದಿತೆ : ನನ್ನ ಮಗ ಹುಟ್ಟಿನಿಂದಲು ತಂದೆ ಇಲ್ಲದೆ ನಾಗಸಾನಿಯರ ಮನೆಯಲ್ಲಿ ಬೆಳೆದ. ನಾಗಸಾನಿಯರು ಅವನಿಗೆ ನಿನ್ನ ತಾಯಿಯನ್ನು ತುಂಬು ಬಸುರಿಯಿರುವಾಗ ನಿನ್ನ ತಂದೆ ಮನೆಯಿಂದ ಹೊರ ಹಾಕಿದನೆಂದು – ಅಡವಿಯಲ್ಲಿ ಬಿಟ್ಟು ಹೋದನೆಂದು ಕರಳು ಕತ್ತರಿಸುವಂತೆ ಕತೆ ಹೇಳಿ ಬೆಳೆಸಿದರು. ಶಕುಂತಲೆಯು ತುಂಬು ಬಸಿರಾಗಿರುವುದನ್ನು ಲೆಕ್ಕಿಸಿದೇ ಅರಮನೆಯಿಂದ ಹೊರ ಕಳಿಸಿದ ದುಶ್ಯಂತನ ಕತೆ ಕೇಳಿ ರೋಸಿ ಹೋದ ಗಳಿಗೆ ಅವನ ಒಡಲೊಳಗಿನ ಕಿಚ್ಚಿಗೆ ಬಲಿಯಾದವನು ಕಾಳಿದಾಸ. ಒಮ್ಮೆಯೂ ಬೇಟೆಯಾಡದ ಕೈ ಎಸೆದ ಕತ್ತಿ ಅದು. ನಿಷ್ಕರುಣೆಯಿಂದ ಕತ್ತರಿಸಿ ಹಾಕಿತು ಪ್ರೀತಿ ತುಂಬಿದ್ದ ಗುಂಡಿಗೆಯನ್ನ. ಸೂಳೆಯರ ಮನೆಯಲ್ಲಿ ಬೆಳೆಯುವ ಹುಡುಗರೆದೆಯಲ್ಲಿ ಗಂಡಸರ ಕುರಿತು ಇಷ್ಟು ದ್ವೇಷ ಹುಟ್ಟಿಕೊಳ್ಳುತ್ತದೆ ಅಂತ ನನಗೆ ತಾನೇ ಹೇಗೆ ಗೊತ್ತಿತ್ತು?

ಸೂತ್ರಧಾರ : ಆ ಗಳಿಗೆಯಲ್ಲಿ ಕಾಳಿದಾಸನಲ್ಲ ಅಲ್ಲಿ ಯಾರಿದ್ದರೂ ಸಾಯಬೇಕಿತ್ತು.

ಮಲ್ಲಿಕಾ : ನಾಳೆ ನಿನಗೆ ಗಲ್ಲು ಶಿಕ್ಷೆ. ನ್ಯಾಯಾಧೀಶರಿಗೆ ನಿಜ ಹೇಳಬಹುದಿತ್ತಲ್ಲವೆ?

ರಾ.ಕು. : ಮೊದಲೇ ಏಕೆ ನಿಜ ಹೇಳಲಿಲ್ಲ?

ಆಪಾದಿತೆ : ನನ್ನ ನಾಲಿಗೆ ಕತ್ತರಿಸಿ ಹೋಗಿದೆ. ನನ್ನ ಬದುಕಿನ ತಕ್ಕಡಿಯ ಒಂದು ಬಟ್ಟಲಲ್ಲಿ ನನಗೆ ಪ್ರಾಣವಿತ್ತ ಒಲವು, ಇನ್ನೊಂದು ಬಟ್ಟಲಲ್ಲಿ ನಾನು ಪ್ರಾಣವಿತ್ತ ಮಗ. ಯಾವುದು ಹೆಚ್ಚು, ಯಾವುದು ಕಮ್ಮಿ ಯಾವುದನ್ನ ಉಳಿಸಿಕೊಳ್ಳಲು ಯಾವುದನ್ನ ಬಲಿಕೊಡಲಿ. ಅದಕ್ಕೆ ಮೂಕಿ ಯಾಗಿದ್ದೇನೆ.

ನ್ಯಾ : ಓ ಕಾಲಪುರುಷನೇ ಎಂಥ ಬಲೆ ನೇಯ್ದಿರುವೆ. ಪ್ರೀತಿಯನ್ನು ಪ್ರೀತಿಯಿಂದ ಅಗಲಿಸುವ, ಮಗನಿಂದ ತಂದೆಯನ್ನು ಕೊಲ್ಲಿಸುವ ನಿನ್ನ ಆಟ. ಜೀವನ ನಾಟಕ. ಅವಳೋ ಅಭಿಜ್ಞಾನ ಶಕುಂತಲೆ ಇವಳೊ ಅನಭಿಜ್ಞ ಶಕುಂತಲೆ.

ಭಟ : ಸೂತ್ರಧಾರನೆ. ಪಾತ್ರಧಾರಿಗಳು ಇತ್ತಲೆ ಬರುತ್ತಿದ್ದಾರೆ. ರಾಜನ ಆಸ್ಥಾನದಲ್ಲಿ ಮಹಾಕವಿ ಕಾಳಿದಾಸರ ಶ್ರದ್ಧಾಂಜಲಿ ಸಭೆ ಮುಗಿದಿರಬೇಕು.

ನ್ಯಾ. : ಯಾರಲ್ಲಿ ಈ ಮುಸುಕುದಾರಿಗಳನ್ನು ವಿಚಾರಿಸಲಾಗಿ ಅವರು ಮುಗ್ಧರೆಂದು ತಿಳಿದು ಬಂದಿದೆ. ಇವರನ್ನು ಸೆರೆಯಿಂದ ಆಚೆ ಬಿಟ್ಟುಬಿಡಿ. (ಭಟರು ಮುಸುಕುದಾರಿಗಳನ್ನು ಕರೆದೊಯ್ಯುವರು)

ಭಟ : ಒಡೆಯ ಈ ಹೆಣ್ಣನ್ನು ಏನು ಮಾಡುವುದು?

(ನ್ಯಾಯಾಧೀಶ ಹೊರಡುತ್ತಾನೆ. ಭಟ ಹಿಂಬಾಲಿಸುತ್ತಾನೆ. ನ್ಯಾಸ್ತನೆ ಹಾಡು ಶಕುಂತಲೆ ಒಂಟಿಯಾಗಿ ಮೊದಲಿನಂತೆ ಕುಳಿತಿರುತ್ತಾಳೆ.)

ನೀರೊಳಿರಲು ನಿಮಿಷ ಉಂಗುರ
ಕರಗಿ ನೀರಾಗುವುದುಂಗುರ
ಕೆರೆಯಲಿರುವ ಕಾಲ ಮೀನು
ಅರೆನಿದ್ದೆಯಲಿದ್ದವು ॥

ಭಟ : ಆ ಹೆಣ್ಣು ಮಗಳನ್ನ ಕಂಡರೆ ನನಗೆ ಕರುಳು ಚುರ್ ಅನ್ನುವುದು. ಇವಳನ್ನು ಏನು ಮಾಡುವುದು?

ನ್ಯಾ. : ಕಾಲಚಕ್ರದಿಂದೆದ್ದ ಧೂಳಿನ ಹುಡಿ ನಾವು. ಗಾಳಿಯಲ್ಲಿ ತೇಲುತ್ತಿರುವಷ್ಟು ಹೊತ್ತು ಮಾತ್ರ ನಮ್ಮ ಪಾತ್ರ. ಕಷ್ಟ ಸುಖ ಎಲ್ಲವು ಇಲ್ಲಿ ಒಂದೇ.

(ನ್ಯಾಸ್ತನೆ ಆಲಾಪ)

ನಾಟಕ–೩

ಪಂಪ ಭಾರತ

ದೃಶ್ಯ – ೧

ಹಾಡು

ಕಾವೇರಿಯಿಂದ ಗೋದಾವರಿಯವರೆಗೆ
ಹಬ್ಬಿದಾ ನಾಡದೋ ಕನ್ನಡ, ಸಿರಿ ಗನ್ನಡ
ವೆಲ್ ಕಮ್ ಟು ಲ್ಯಾಂಡ್ ಆಫ್ ಸ್ಯಾಂಡಲ್ ವುಡ್,
ಸ್ಟೋನೇಜನಿಂದ ಕಾಲೇಜ್ ವರೆಗೂ
ವೋಲ್ಗಾ ವ್ಯಾಲಿಯಿಂದ ಸಿಲಿಕಾನ ವ್ಯಾಲಿವರೆಗೂ
ಆ ಈಟಿಯಿಂದ ಈ ಐಟಿ ಬಿಟಿ ವರೆಗೂ
ಕಾಲಯಾನದ ಯಾತ್ರೆಯೂ
ಜೀವ ಯಾನದ ಜಾತ್ರೆಯೂ ॥ಕಾ॥

ಕಲ್ಲಿನೊಳಗೆ ಹುದುಗಿವೆ ರೂಟ್ ಗಳು
ವೆಬ್ ನಲ್ಲಿ ಅಡಗಿವೆ ಫಾಟ್ ಗಳು
ಅಲ್ಲಮ ತೀರ್ಥಂಕರ ಅಲ್ಲಾಹು ಅಕ್ಬರಾ
ಬುದ್ ಸ್ಮೈಲ್ಸ್
ಜೀಸಸ್ ನೈಲ್ಸ್
ಗೋಳಕೊಂದು ಗುಡ್ಡಕೊಂದು ಕಥೆಗಳು
ಕಣ್ಣಿನೊಳಗೂ ಮಣ್ಣಿನೊಳಗೂ ವ್ಯಥೆಗಳು
ವೆಲ್ ಕಮ್ ಟು ಲ್ಯಾಂಡ್ ಆಫ್ ಗೋಲ್ಡ್ ಫೀಲ್ಡ್ಸ್
ಉರಿಯ ಉಯ್ಯಾಲೆಯಲ್ಲಿ ಜೀಕುವ
ನೆನೆಪ ನದಿ ಸುಳಿಗಳಲ್ಲಿ ತಿರುಗುವ
ಕಿನಾರೆಯಲ್ಲಿ ಬೋಟ್ಸು
ಹಂಪೆಯಲ್ಲಿ ಜಿಪ್ಸು

ಆಗುಂಬೆಯಲ್ಲಿ ಬುಲೆಟ್ ಸೌಂಡ್ಸು
ವೆಲ್ಕಮ್ ಟು ಲ್ಯಾಂಡ್ ಆಫ್ ಮೀಟಿಂಗ್ ರಿವರ್ಸ್

ಅನುವಿನಲ್ಲಿ ಅಣುಗಳು ಸೇರುವ
ಕ್ಷಣಗಳಲ್ಲಿ ಕ್ಷಣಗಳು ಕಳೆಯುವ
ಹಿಸ್ಟರಿ, ಕೆಮಿಸ್ಟರಿ, ಮಿಸ್ಟರಿ
ಕಾವೇರಿಯಿಂದ ಗೋದಾವರಿ
ಚಾಗದ ಭೋಗದ ಅಕ್ಕರದ ನಾಡದೋ

ಸಂಶೋಧಕ: ಏನ್ ದರಿದ್ರದ ಮಾರ್ಗಾನೋ ಇದು, ಏನೀ ಹಳ್ಳ, ದಿಣ್ಣೆ ಕಲ್ಲು, ಮಣ್ಣು, ಕಣ್ ಬಿಡುವುದಕ್ಕೂ ಆಗದಂತ ಧೂಳು ಬೇರೆ. ಎತ್ತ ನೋಡಿದರೂ ಬಟ್ಟಂಬಯ್ಲು ಅಲ್ಲೊಂದು ಇಲ್ಲೊಂದು ಕುರುಚಲು ಗಿಡಗಳು, ಮಿಸ್ಟಿರಿಯಸ್ ಆಗಿದೆ ಅಲ್ವ?

ಸಂ 2 : ಇತಿಹಾಸದ ದಾರಿ ಅಂದ್ರೆ ಹಿಂಗೆ, ನ್ಯಾಷನಲ್ ಹೈವೇ ಹಂಗೆ ಹಸನಾಗಿದ್ರೆ, ನಮ್ಮಂತ ಸಮ್ಶೋಧಕರಿಗೆ ಏನ್ ಕೆಲಸ, ಮಿಸ್ಟಿರಿಯಸ್ ಆಗಿದ್ದಷ್ಟೂ ಒಳ್ಳೇದು, ನಮ್ ಸಂಶೋಧನೆಗೆ ಒಳ್ಳೆ ಮೈಲೇಜ್ ಸಿಗ್ತದೆ.

ಸಂ 1 : ಇದರ ಲಕ್ಷಣಗಳನ್ನ ನೋಡಿದರೆ ಇದು ಕುರ್ಕ್ಯಾಲಕ್ಕೆ ದಾರಿ ಅಲ್ಲ ಪಾತಾಳಕ್ಕೆ ಬಾಗಿಲು ಅನ್ನೋ ಹಾಗಿದೆ ನಾವೇನಾದ್ರೂ ದಾರಿ ತಪ್ಪಿದ್ದೀವೇನೋ ಅಂತ.

ಸಂ 2 : ವಂಡರ್ ಫುಲ್, ಇಟ್ಸ್ ಎ ಗುಡ್ ಸೈನ್ ಅಂದ್ರ ನಾವು ಕನ್ಫ್ಯೂಸ್ ಆಗಿದ್ದೀವಿ ಅಲ್ವ, ಚರಿತ್ರೆಯಲ್ಲಿ ಯಾರ್ಯಾರು ಕನ್ಫ್ಯೂಸ್ ಆಗಿದ್ರೋ ಅವರೆಲ್ಲ ಸರಿಯಾದ ದಾರಿಯಲ್ಲೇ ಇದ್ರೂ, ಬುದ್ಧ ಬಸವ ಯಾರ್ನಾದ್ರೂ ತಗೋ.

ಸಂ 1 : ಏನಾದ್ರೂ ಈ ಭೂತದ ಬೆನ್ನು ಹತ್ತೋ ಕೆಲಸ ಇದೆಯಲ್ಲ ಅದು ಯಾವಾಗ್ಲೂ ಪ್ರಾಬ್ಲಮೆಟಿಕ್ಕೆ.

ಸಂ 2 : ನೋ. ನೋ ನೋ. ನಾವು ಭೂತಾನ ಬೆನ್ ಹತ್ತಿಲ್ವೋ ಬದಲಾಗಿ ಭೂತಾನೆ ನಮ್ ಬೆನ್ ಹತ್ತಿದೆ. ನನ್ನ ನಿನ್ನ ಮಾತ್ರ ಅಲ್ಲ ಇಡೀ ಮನುಷ್ಯ ಕುಲವನ್ನೇ.

ಸಂ 2 : ಯಾವುದೋ ನೇಮ್ ಬೋರ್ಡ್ ಇರೋ ಹಾಗಿದೆ.

ಸಂ 1 : ಹೋ! ಯೆಸ್.. ಏನೋ ಇದೂ ಒಳ್ಳೆ ಶಾಸನದ ತರಹಾನೇ , ಇದೆ, ಎಲ್ಲಾ ಅಕ್ಷರಗಳು ಅಳಿಸಿ ಹೋಗಿದೆ, (ಅದನ್ನ ಕೂ.. ರ ಎಂದು ಓದಲು ಯತ್ನಿಸುವನು) ಕಿ .ಮೀ. ಅಳಿಸಿ ಹೋಗಿದೆಯಲ್ಲೋ...

ಸಂ 2 : ಐ ಮೀನ್, ಈ ದೂರ ಅನ್ನೋದು ಭೌತಿಕ ಸತ್ಯ ಅಲ್ಲ, ರಿಲೇಟಿವ್ ಟ್ರುತ್. ಅಂದ ಹಾಗೆ ಈ ಭೂತ ಮಾರ್ಗದಲ್ಲಿ ಕಿ. ಮಿ. ಕಲ್ಲಿದ್ರೆ ಚೆನ್ನಾಗಿರುತ್ತೆ ಅಲ್ವಾ

ಸಂ 1 : ಓಕೇ ಲೆಟ್ ಅಸ್ ಸ್ಟಾಪ್ ದಿಸ್ ಆರ್ಗ್ಯುಮೆಂಟ್, ನಾವು ಹಿಡಿದ ಮಾರ್ಗ ಸರಿ ಹೌದೋ ಅಲ್ಲವೋ? ಅಂತ ನನಗೆ ಅನುಮಾನ.

ಸಂ 2 : ಅನುಮಾನ! ಅನುಮಾನದ ಸಂಶೋಧಕನ ಹುಟ್ಟು ಗುಣ ಆಗಿರಬೇಕು ಅಂತ ಪ್ರೊಫೆಸರ್ ಹೇಳ್ತಿದ್ರು, ಅನುಮಾನದಿಂದ್ಲೆ ಚಿ.. ಮೂ, ಕಲಬುರ್ಗಿ ಅಂತ ದೊಡ್ಡ ಸಂಶೋಧಕರು ತಯಾರಾಗಿದ್ದು.

ಸಂ 1 : ಕುರ್ಕ್ಯಾಲಕ್ಕೆ, ಆ ಪ್ರೊಫೆಸ್ಸರ್ರೂ ಬರ್ಬೇಕಿತ್ತು ಆರೇ ಹೊರಡೋ ಕೊನೆ ಘಳಿಗೆಯಲ್ಲಿ ಕೈ ಕೊಟ್ರಲ್ಲ. ಅವಳು ಬೇರೆ ಆ ಮಿಟಕಲಾಡಿ "ಓ ಮೈ ಗಾಡ್ ವಿಥ್ ಔಟ್ ಪ್ರೊಫೆಸರ್, ಹೌ ಕ್ಯಾನ್ ಐ ಕಂ ವಿಥ್ ಯೂ." ಅಂದ್ಬಿಟ್ಲಲ್ಲ ಈಡಿಯಟ್.

ಸಂ 2 : ಕೈ ಕೊಡೋದು ಕೂಡಾ ಸಂಶೋಧನೆಯ ಒಂದು ವಿಧಾನ. ಅವಳ್ನ ಮೇಷ್ಟ್ರೇ ಬೇಡಾ ಅಂದಿರಬೇಕು. ಅವಳ ಬರುವಿಕೆಯಿಂದ ನಮ್ಮ ಸಂಶೋದನೆ ದಾರಿ ತಪ್ಪೋದು ಬೇಡಾ ಅನ್ನೋದು ಅವರ ಕಾಳಜಿ. ಪಾಪ!

ಸಂ1 : ಅಲ್ಲಿ ನೋಡು ಭೂತದಿಂದ ಉದ್ಭವಿಸಿ ಬಂದ ಹಾಗೆ, ಸಧ್ಯ ನರ ಮಾನವನೊಬ್ಬ ಈ ದಾರಿಯಲ್ಲೇ ಕಾಣಿಸಿಕೊಂಡ, (ಸಂಶೋಧಕ 2 ಅವನನ್ನು ಮಾತನಾಡಿಸಲು ಎದ್ದು ಹೊರಡುತ್ತಾನೆ ಹೊರಟವನನ್ನು ತಡೆದು) ಮಾತನಾಡ್ಸೋದಕ್ಕೆ ಮೊದ್ಲು ಅವನ ಕಾಲು ಕೈ ಗಮನಿಸಿ ಮಾತನಾಡು.

(ಸಂ 2 ಅವನನ್ನ ಅಚ್ಚರಿಯಿಂದ ಮೇಲೆ ಕೆಳಗೆ ನೋಡುತ್ತಾನೆ.)

ಊರಿನವ : ಯಾಕ್ರಪ್ಪ ಹಿಂಗ್ ನೋಡುತ್ತೀರಿ. ನಾನು ನರ ಮನುಷ್ಯನ ತರಹ ಕಾಣಕಿಲ್ವ

ಸಂ 2 : ಛೆ ಛೆ ತಪ್ಪು ತಿಳೀ ಬೇಡಿ ಸ್ವಾಮಿ, ನಾವು ಪರ ಸ್ಥಳದವರು, ಕುರ್ಕ್ಯಾಲ ಗ್ರಾಮಾನ ಹುಡುಕ್ಕೊಂಡು ಹೊರಟಿದ್ದೀವಿ.

ಊರಿನವ : (ಅವರನ್ನು ಅಪಾದ ಮಸ್ತಕವಾಗಿ ನೋಡಿ) ನಿಮಗೆ ಓದು ಬರಹ ಬರಾಕಿಲ್ವ? ನೋಡಿ ಅಲ್ಲಿ, ನಿಮ್ ಕಣ್ ಮುಂದೇನೆ ಅಷ್ಟು ದೊಡ್ಡ ಬೋರ್ಡ್ ಹಾಕ್ಸವ್ರೆ ಗವರ್ನಮೆಂಟ್ನೋರು.

ಸಂ 2 : ಯಜಮಾನರೆ, ನಾವು ಬೆಂಗಳೂರು ಕಡೆಯಿಂದ ಗಂಗಾಧರ ಶಾಸನ

ಹುಡುಕ್ಕೊಂಡು ಬಂದಿದ್ದೀವಿ, ಅದು ಎಲ್ಲಿದೆ ಅಂತ ನಿಮಗೇನಾದ್ರು ಗೊತ್ತಾ?

ಊರಿನವ : (ಯೋಚಿಸಿ) ನಮ್ಮೂರ್ನಾಗೆ ಗಂಗಾಧರ ರೆಡ್ಡಿ, ಗಂಗಾಧರ ಗೌಡ, ಗಂಗಾಧರ ಭಟ್ಟ ಅಂತ ಹೆಸರಿನವ್ರೇನೋ ಅವ್ರೆ, ಆದ್ರೆ ಗಂಗಾಧರ ಶಾಸನ ಅಂತ ಯಾರು ಇಲ್ವಲ್ಲ . ಶಾಸನ ಅಂತ ಯಾವ ಮನೆಯವ್ರಿಗೂ ಅಡ್ಡ ಹೆಸರು ಇದ್ದ ಹಂಗಿಲ್ಲ.

ಸಂ 1 : ದಯವಿಟ್ಟು ಕ್ಷಮಿಸ್ಬೇಕು ಸ್ವಾಮಿ. ನಾವು ಕೇಳಿದ್ದು ಮನುಷ್ಯರ ಗುರುತಲ್ಲ. ಗಂಗಾಧರ ಶಾಸನ ಅಂಬೋದು ಕಲ್ಲು ಶಿಲೆ ಶಾಸನ.

ಊರಿನವ : ಹೋ! ಕಲ್ ಹುಡುಕ್ಕೊಂಡು ಬಾಂದ್ರಾ. ಆ ಬೆಂಗಳೂರು ಸುತ್ತ ಮುತ್ತ ಇದ್ದ ಕಲ್ಲು ಗುಡ್ಡಗಳ್ನ ಆಗ್ಲೇ ತಿಂದು ನೀರು ಕುಡುದ್ ಬಿಟ್ರಾ

ಸಂ 2 : ನೋ ನೋ ನೋ ನೋ ನಂ ನಾಡ್ನಲಿ ಸರಿಯಾಗಿ ಸಾವಿರ ವರ್ಷಗಳ ಹಿಂದೆ ಪಂಪ ಅನ್ನೋ ಹೆಸರಿನ ಮಹಾ ಕವಿ ಇದ್ದ. ಅವರ ಬಗ್ಗೆ ಶಾಸನ, ಕೆತ್ತನೆ ಕಲ್ಲು ಈ ಊರೊಳಗೆ ಇದೆ ಅಂದ್ರು, ಅದನ್ನ ಹುಡುಕ್ಕೊಂಡ್ ಬಂದಿದ್ದೀವಿ.

ಊರಿನವ : ಹೋ! ಅದಾ ಪಂಪನ ಕಲ್ಲು (ಇಬ್ಬರೂ ಸಂತೋಷದಿಂದ ಹೌದು ಎಂಬಂತೆ ತಲೆ ಹಾಕುತ್ತಾರೆ) ಹಂಗೇಳ್ರಿ ಮತ್ತೆ ನಾನು ಕ್ವಾರಿ ಬಿಸಿನೆಸ್ ನವ್ರೇನೋ ಅಂದುಕೊಂಬಿಟ್ಟೆ.

ಸಂ 1 : (ಅಲ್ಲಾ ಎಂಬಂತೆ ಇಬ್ಬರೂ ತಲೆ ಅಲ್ಲಾಡಿಸಿ) ಆ ಪಂಪನ ಕಲ್ಲು ಎಲ್ಲೈತೆ ಸ್ವಾಮಿ!

ಊರಿನವ : ಇಲ್ಲಿಂದ ಒಂದೆರಡು ಕಿ.ಮೀ ಹೋದ್ರೆ ಊರು ಸಿಕ್ತೈತೆ. ಊರ ದಾಟಿ ಹಿಂಬಾಗದಲ್ಲಿ ಪಾಳು ಬಿದ್ದ ಕೋಟೆ ಒಳಗೆ ಒಂದು ಸಣ್ಣ ಗುಡ್ಡ ಐತೆ. ಅದರ ಮ್ಯಾಲೆ ಪಾಳು ಬಿದ್ದಿರೋ ಬಸದಿ ಐತೆ, ಅಲ್ಲಿ ಈ ಕಲ್ಲೈತೆ, ಅಂದ ಹಾಗೆ ಅದರ ಕೆಳಗೆ ಏಳು ಕೊಪ್ಪರಿಗೆ ಬಂಗಾರ ಐತಂತೆ ಅದರ ಮ್ಯಾಲೆ ಸರ್ಪ ಕಾವಲೈತಂತೆ ಅದರಾಗಿರೋ ನಿಧಿ ಹೊಡ್ಯೋಕೆ ಪ್ರಯತ್ನ ಪಟ್ಟೋರು ಅಲ್ಲೇ ರಕ್ತ ಕಕ್ಕೊಂಡು ಸತ್ತವ್ರಂತೆ. ಅಷ್ಟೇ ಅಲ್ಲ 'ಆ ಕಲ್ನಾಗಿರೋ ಅಕ್ಷರಾನ ಓದಿದೋರ ತಲೆ ಒಡೆದು ಸಾವಿರ ಚೂರು ಆಗ್ತೈತೆ' ಅಂತ ನಮ್ಮ ಹಿರೀಕರು ಹೇಳೋರು, ಯಾವುದಕ್ಕೂ ಹುಷಾರಿ! (ಹೋಗುವನು)

ಸಂ 1 : ಓದಿದರೆ ತಲೆ ಒಡೆದು ಹೋಳಾಗುತ್ತೆ, ಓದದೆ ಇದ್ರೆ ಬದುಕು ಮೂರಾಬಟ್ಟೆ ಆಗುತ್ತೆ.

●

ದೃಶ್ಯ – ೨

[ಊರ ಹಿಂಭಾಗದಲ್ಲಿ ಸಣ್ಣ ಗುಡ್ಡ , ಅದರ ಮೇಲೆ ಒಂದು ಹಾಳು ಮಂಟಪ, ಪಕ್ಕದಲ್ಲಿ ಶಾಸನ ಕಲ್ಲು ಗುಡ್ಡದ ಸುತ್ತ ಮುತ್ತ ಹಕ್ಕಲು ಹೋದ ಹೊಲ ಗಾದೆ ಪಾಳು ಬಿದ್ದ ಕೋಟೆ ಸಂಶೋಧಕರು ಅಲ್ಲಿಗೆ ಬರುತ್ತಾರೆ. ಶಾಸನದ ಮೇಲೆ ಇತ್ತೀಚಿನ ಪೋಸ್ಟರ್ ಒಂದನ್ನು ಅಂಟಿಸಲಾಗಿದೆ]

ಸಂ 1 : ಅಂತೂ ಜಾಗಾನ ತಲುಪಿದ್ವಿ

ಸಂ 2 : ಆದ್ರೆ ಗುರು ಮಾತ್ರ ಇನ್ನೂ ಅಜ್ಞಾತವಾಗೇ ಇದೆ.

ಸಂ 1 : ಇದೆ ಕುರ್ಕ್ಯಾಲ ಗುಡ್ಡ ಅನ್ಸುತ್ತೆ. ಆದ್ರೆ ಶಾಸನ ಎಲ್ಲಿ? (ಸುತ ಮುತ್ತ ಹುಡುಕುತ್ತ) ಈ ಕಲ್ಲೇನೋ ಆ ಶಾಸನದ ಹಾಗೇ ಕಾಣುತ್ತೆ ಆದ್ರೆ,

ಸಂ 2 : ಅಯ್ಯಾ ಮಿತ್ರಮಾ ಅದೋ ಜಿನ ಬಿಂಬಗಳಮಂ ಇದೋ ಚಕ್ರೇಶ್ವರಿಮಂ ಅಗೋ ಆ ದೂರದಲ್ಲಿರುವುದೇ ಕವಿತಾ ಗುನಾರ್ಣವನೆಂಬ ಕೆರೆಯಮಂ ಮತ್ತೊದೋ ಪೆರವುಂ ಜಿನ ಪ್ರತಿಮೆಗಳಂ ಇದೇ ತ್ರಿಭುವನೆಂಬ ಬಸದಿಯಂ ಇದೋ ಮದನ ವಿಳಾಸನವೆಂಬ ಬನಮಂ.

ಸಂ 1 : ಇದೋ ಅಂಟಿಸಿದಾ ಮತಾಂತರ ನಿಷೇಧಮಮೆಂಬ ಜಾಹೀರಾತು ಪತ್ರಮಮಂ. (ಉಸಿರು ಬಿಟ್ಟು) ಹೂಂ.

ಸಂ 2 : (ಶಾಸನದ ಹತ್ತಿರ ಬಂದು) ಮನುಷ್ಯ ಮಾಡ್ತಾ ಬಂದದನ್ನೆಲ್ಲ ಕಾಲ ಅಳಿಸ್ತಾ ಬರುತ್ತಲ್ಲ.

ಸಂ 1 : ಇಲ್ಲಿ ಅಳಿಸಿರೋದು ಕಾಲ ಅಲ್ಲಪ್ಪ ಕೈ, ಶಾಸನದ ಮೇಲೆ ಪೋಸ್ಟರ್, ಏನ್ ಜನ ಕಣಯ್ಯಾ ಪ್ರಜ್ಞೆನೆ ಇಲ್ಲ.

ಸಂ 2 : ಅಬ್ಜೆಕ್ಷನ್ ಮೈ ಲಾರ್ಡ್, ಈ ದೇಶಲ್ಲಿ ಇಲ್ದಿರೋದು ಬರಿ ಪ್ರಜ್ಞೆ ಅಲ್ಲ "ಇತಿಹಾಸ ಪ್ರಜ್ಞೆ" ಅಂತ ಯೂರೋಪಿನ ವಿದ್ವಾಂಸರು ಯಾವತ್ತೋ ಸಂಶೋಧನೆ ಮಾಡ್ಬಿಟ್ಟಿದ್ದಾರೆ.

ಸಂ 1 : (ಓದುತ್ತಾನೆ) ಮತಾಂತರ ನಿಷೇಧದ ಸರ್ಕಾರಿ ಆದೇಶ ತಿಳುವಳಿಕೆಗಾಗಿ ಪ್ರಕಟಣೆ

"ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಮಾಡುವ/ಗೊಳ್ಳುವ ಮುನ್ನ ಜಿಲ್ಲಾಧಿಕಾರಿಗಳಿಂದ ಪೂರ್ವಾನುಮತಿಯನ್ನು ಪಡೆಯಬೇಕು. ಪಡೆಯದಿದ್ದರೆ ಅದು ಕಾನೂನು ಬಾಹಿರವಾಗುತ್ತದೆ. ಹಾಗೂ ಇಂತಹ ಚಟುವಟಿಕೆಗಳನ್ನೂ ನಿಷೇಧಿಸಲಾಗಿದೆ."

ಸಂ 1 : ಅದನ್ನ ಹರಿದು ಹಾಕ್ತ ಇರು, ನಾನು ಕೆಳಗೆ ಕುಂಟೆಯಿಂದ ನೀರು ತರುತ್ತೇನೆ (ಹೊರಡುತ್ತಾನೆ).

(ಶಾಸನ ಮೇಲೆ ಅಂಟಿಸಿದ ಪೋಸ್ಟರ್ ಅನ್ನು ಹರಿಯಲು ಹೊರಡುತ್ತಾನೆ. ಅಷ್ಟರಲ್ಲಿ ಒಬ್ಬ ದಡೂತಿ ಪಾಳು ಮಂಟಪದಿಂದ ಪ್ರತ್ಯಕ್ಷನಾಗುತ್ತಾನೆ.)

ದಡೂತಿ : ಏನ್ಲೇ ಬದ್ಮಾಶ್ ಆ ಪೋಸ್ಟರ್ ಮ್ಯಾಲೆ ಕೈ ಇಟ್ರೆ ತಿನ್ನೋಕೆ ತೊಳ್ಯೋಕೆ ಇಲ್ದಂಗೆ ಕೈ ಕತ್ರಿಸ್ಬಿಡ್ತೀನಿ. ಸರಿ ದೂರ.

ಸಂ 2 : ರೀ ಮಿಸ್ಟರ್ ಯಾರ್ರಿ ನೀವು? ನಾವು ಯೂನಿವರ್ಸಿಟಿ ಸ್ಕಾಲರ್ಸ್ ಬಾಯಿಗ್ಬಂದ ಹಾಗೆ ಮಾತಾಡಬೇಡಿ. ಮೈಂಡ್ ಯುವರ್ ಟಂಗ್.

ದಡೂತಿ : ಏಯ್! ಇಂಗ್ಲಿಷ್‌ನಾಗೆ ಬಯ್ತೀಯ. ಕೈ ಯಲ್ಲ ಮೊದ್ಲು ನಾಲಗೆ ಕತ್ತರಿಸ್ಬಿಟ್ಟೆನು.

ಸಂ : (ಪ್ರವೇಶಿಸಿ) ಗಲಾಟೆ ಮಾಡ್ಬೇಡಿ, ನಮ ಹತ್ರ ಆರ್ಕಿಯಾಲಜಿ ಡಿಪಾರ್ಟ್ಮೆಂಟಿನ ಪರ್ಮಿಶನ್ ಇದೆ ನಮ್ ಕೆಲಸಕ್ಕೆ ಅಡ್ಡ ಬಂದ್ರೆ ಕಾನೂನಿನ ಉಲ್ಲಂಘನೆ ಆಗುತ್ತದೆ. ನಾವು ಪೋಲೀಸ್ ಗೆ ಕಂಪ್ಲೇಂಟ್ ಕೊಡ್ಬೇಕಾಗುತ್ತೆ.

ದಡೂತಿ : ಏಯ್! ಯಾರ್ ಹತ್ರ ರೀಲ್ ಬಿಡೋದು. ನಿಮ ಹತ್ರ ಆರ್ಕಿಯಲಜಿ ಡಿಪಾರ್ಟ್ಮೆಂಟ್ ನ ಪರ್ಮಿಶನ್ ಇದ್ರೆ, ನಮ್ ಹತ್ರ ರಾಮರಾಜ್ಯದ ಪರ್ಮಿಶನ್ ಐತೆ. ತೋರಿಸ್ಬೇಕಾ? ಇವತ್ತು ನಮ್ಮ ಸನಾತನ ಧರ್ಮದ ಮೇಲೆ ನಿನ್ನೆ ಮೊನ್ನೆ ಹುಟ್ಟಿದ ಧರ್ಮಗಳು ಸವಾರಿ ಮಾಡ್ತಾ ಇವೆ. ನಮ್ಮ ಸಂಸ್ಕೃತಿಕ ಧಾರ್ಮಿಕ ಗುರುತುಗಳನ್ನು ಒಂದೊಂದಾಗಿ ನಾಶಪಡಿಸ್ತಾ ಬಂದಿವೆ. ನಮ್ಮ ಧರ್ಮವನ್ನ ರಕ್ಷಣೆ ಮಾಡೋಕೆ ಅಂತ ಸರಕಾರದವರೇ ಈ ಆಜ್ಞೆ ತಂದಿರೋದು, ಇದಕ್ಕೆ ಯಾವಾದ್ರು ಅಡ್ಡ ಬಂದ್ರೆ ತಗಾದೆ ತೆಗೆದರೆ ಕಚಕ್!

ಸಂ 2 : ಅಲ್ಲಾ ಸ್ವಾಮಿ ಇದು ಪುರಾತನ ಶಾಸನ

ದಡೂತಿ : ಹೌದು ಸ್ವಾಮಿ ಇದು ಇವತ್ತಿನ ಶಾಸನ.

(ಸಂಶೋಧಕರು ಅಸಹಾಯಕತೆಯಿಂದ ಮುಖ ಮುಖ ನೋಡಿಕೊಳ್ಳುತ್ತಾರೆ)

ಸಂ 1 : ನೋಡಿ ಮೊದಲಿಗೆ ನಾವು ಈ ಶಾಸನವನ್ನು ಅಥವಾ ಇಲ್ಲಿಯ ಯಾವುದನ್ನೂ ನಾಶಪಡಿಸುವುದಕ್ಕೆ ಬಂದಿಲ್ಲ. ದೂರದ ಪಟ್ಟಣ ಬೆಂಗಳೂರಿನಿಂದ ಈ ಶಾಸನ ಓದಬೇಕಂತ ಬಂದಿದ್ದೀವಿ. ನೀವು ಇದಕ್ಕೆ ಅಡ್ಡಿ ಪಡಿಸಿದ್ರೆ ನಿಮ್ಮ ಊರಿನ ಇತಿಹಾಸಕ್ಕೆ ದ್ರೋಹ ಮಾಡಿದ ಹಾಗೆ.

ದಡೂತಿ : ಏಯ್! ನೀವು ಕಲ್ತಿರೋ ಕಮಾಲ್ ನನ್ ಹತ್ರ ನಡ್ಯೋದಿಲ್ಲ ಮುಚ್ಕೊಂಡು ಬಂದ ದಾರಿನಲ್ಲೇ ಹೋದ್ರೆ ಸರಿ, ಇಲ್ಲಾಂದ್ರೆ

ಸಂ 2 : ನೋಡಿ ನೀವು ನಮ್ ಮಾತ್ನ ಸ್ವಲ್ಪ ಕೇಳಿ

ದಡೂತಿ : (ರೇಗಿ) ಥೂ! ನಿಮ್ಮಂತ ವಿದ್ಯಾವಂತರ ಮಾತು ಕೇಳಿ ಕೇಳಿ ಇಡೀ ದೇಶವೇ ಎಕ್ಕುಟ್ಟುಕೊಂಡು ಹೋಗಿವೆ . ಎಲ್ಲಾ ಜಾತಿ ಮತ ಧರ್ಮ ಒಂದೇ ಹೇಳಿ ನಮ್ಮನ ನಮ್ಮ ಸತ್ ಪರಂಪರೆಯನ್ನ ಹಾಳು ಮಾಡಿದ್ದೀರಿ. ಇಲ್ಲಿಯವರೆಗೆ ನಾವು ಕೇಳಿದ್ದಾಯ್ತು. ಇನ್ನ ಮೇಲೆ ಏನೇ ಇದ್ರೂ ನೀವು ನಮ್ಮ ಮಾತು ಕೇಳಬೇಕು ಇಲ್ಲ ಗಾಡಿ ಬಿಡ್ತಿರಬೇಕು. ನಮ್ಮ ಸನಾತನ ಧರ್ಮ ಆಚಾರ ವಿಚಾರ ಮುಖ್ಯವಾಗಿ ಚರಿತ್ರೆ, ನಾಶ ಆಗುವುದಕ್ಕೆ ಬಿಡುವುದಿಲ್ಲ. ಆ ಪ್ರಯತ್ನದಲ್ಲಿ ನಾವು ನಾಶ ಆದರೂ ಚಿಂತೆ ಇಲ್ಲ ನಿಮ್ಮ ಪುರಾಣ ಕಟ್ಟಿಟ್ಟು ಜಾಗ ಖಾಲಿ ಮಾಡಿ

ಸಂ 1 : (ಸಂಶೋಧಕ ಎರಡನೆಯವನನ್ನು ಮುಂದಕ್ಕೆ ಎಳೆದುಕೊಂಡು ಬಂದು) ಏನಯ್ಯ ಹಿಂಗೆ ಎಡವಟ್ಟಾಯ್ತು. ನಮ್ಮ ಸಂಶೋದನೆ ಆರಂಭವಾಗುವುದಕ್ಕೆ ಮುಂಚೆನೇ ಹಳಿ ತಪ್ಪಿತಲ್ಲ.

ಸಂ 2 : ಈ ಶಾಸನಾ ಸಹವಾಸವೇ ಬೇಡ, ಯಾಕೋ ಇದು ತೀರ ಗಂಭೀರ ಆಯ್ತು.

ಸಂ 1 : (ದಡೂತಿ ಹತ್ತಿರ ಬಂದು) ಒಂದೇ ಒಂದು ನಿಮಿಷ ಇರೋ! ಸಾರ್...

ದಡೂತಿ : ಕೂಗ್ಲೇನು ನಮ್ ಹುಡುಗ್ರನ್ನ, ಯಾಕೋ ಧರ್ಮದೇಟು ಬೀಳ್ದೆ ನನ್ ಮಕ್ಳಿಗೆ ಬುದ್ದಿ ಬರೋ ಹಾಗೆ ಕಾಣೆ. ಏ ಪಾರ್ಥ, ಪ್ರವೀಣ ಆ ಲಾಂಗು ಲಾಟಿ ತಗೊಂಡು ಬರ್ರಲಾ

(ಅಷ್ಟು ಹೇಳಿ ತಿರುಗಿ ನೋಡುವ ಹೊತ್ತಿಗೆ ಸಂಶೋಧಕರು ಜಾಗ ಖಾಲಿ ಮಾಡಿದ್ದಾರೆ)

●

ದೃಶ್ಯ – ೩

ಹಾಡು

ಗೌವ್ವೆನ್ನೋ ಇರುಳು, ಗಾಢಾಂಧಕಾರ
ತಲ್ಲಣಿಸುತ್ತಿದೆ ಕತ್ತಲು,
ಚಕಿತಗೊಂಡಿದೆ ಚುಕ್ಕೆ,
ಶಂಕೆಗೊಂಡಿದೆ ಗಾಳಿ,
ಅನುಮಾನಿಸುತ್ತಿವೆ ಗಳಿಗೆ,
ಕತ್ತಾಲ ಹೊಕ್ಕುಳಲ್ಲಿ
ಬೆಳಕೀನ ಅಲೆ ಹುಟ್ಟಿ,
ಮಿಂಚು ಅಂಬುಗಳೇ ತೂರಿ,
ಕಲಕಿ ಹೋಯಿತೊ
ಕಣ್ಣೊಳಗಿನಾ ದಾರಿ ॥

[ರಾತ್ರಿ ಹಾಳು ಮಂಟಪ ಮಧ್ಯ ಗಂಗಾಧರ ಶಾಸನ, ಕೌರು ಕೌರು ಬೆಳಕಿನಲ್ಲಿ ಸಂಶೋಧಕರು ಟಾರ್ಚ ಬೆಳಕು ಚೆಲ್ಲುತ್ತಾ ಕಳ್ಳ ಹೆಜ್ಜೆ ಇಡುತ್ತಾ ಬರುತ್ತಾರೆ ಆದರೆ ಅನಿರೀಕ್ಷಿತವಾಗಿ ಶಾಸನದ ಹಿಂಭಾಗದಿಂದ ಯಾರೋ ಕೆಮ್ಮಿದ ಶಬ್ಧ ಕೇಳಿ ಹೆದರಿಕೊಂಡು ಓಡಿ ಹೋಗಿ ಬಸದಿಯಲ್ಲಿ ಅಡಗಿಕೊಳ್ಳುತ್ತಾ]

ಸಂ 1 : ಲೋ ಏನೋ ಹಿಂಗಾಯ್ತು? ಯಾರೋ ಶಾಸನದ ಹಿಂದೆ ಇದ್ ಹಾಗಿದೆ.

ಸಂ 2 : ಈಗೇನು ಮಾಡೋದು

ಸಂ 1 : ಮಾಡೋದೇನು... ಉಳಿದಿರೋದು ದೌಡೋದಷ್ಟೇ.

(ಅಷ್ಟರಲ್ಲಿ ಒಬ್ಬ ಮುದುಕ ಶಾಸನದ ಹಿಂಭಾಗದಿಂದ ಬರುತ್ತಾನೆ)

ಸಂ 2 : ಸರಿ ಒನ್ ಟೂ ತ್ರಿ.... (ಓಡುತ್ತಾರೆ)

ಮುದುಕ : ಎಯ್ ಹುಡುಗ್ರಾ ... ಯಾಕ್ ಹೆದಕ್ಕಂತೀರ ಬರ್‍ರಿ ಇಲ್ಲಿ... ನಾನು ಮದ್ಯಾನದಿಂದ್ಲೆ ನೋಡ್ತಾ ಇದ್ದಿವ್ನಿ... ನಿಮ್ಮ ಪರಿಪಾಟ್ಲು

ಸಂ 1 : ಇದೇನೋ ನಮ್ಮ ಪುಟ್ಟಪೂರ್ವತ್ರನೆಲ್ಲಾ ಹೇಳ್ತಾನೆ

ಮುದುಕ : ಬರ್‍ರಪ್ಪಾ.... (ಎಂದು ಮತ್ತೆ ಕರೆಯಲು, ಹೆದರುತ್ತಾ ಭಾರದ ಹೆಜ್ಜೆಗಳನ್ನಿಡುತ್ತಾ ಹೋಗುತ್ತಾರೆ)

ಸಂ 2 : ನಮಸ್ಕಾರ ಯಜಮಾನ್ರಿಗೆ ತಾವು ಈ ಅವೇಳೆಯಲ್ಲಿ?

ಮುದುಕ : ನಾನು ವಾಸ ಮಾಡೋ ಜಾಗದಲ್ಲಿ ಅವೇಳೆಯಂಥಾದಪ್ಪ ಬರ್‍ರಿ.. ನಾನು ಈ ಕೆಳಗಿನ ಜೋಳದ ಹೊಲಗಳನ್ನ ಕಾಯ್ತಾ ಇರೋ ಕವಲುಗಾರ. (ಎಲೆ ಅಡಿಕೆ ಗಂಟನ್ನ ಬಿಚ್ಚುತ್ತಾನೆ) ನೀವು ಪರಸ್ಥಳದೋರತರ ಕಾಣ್ತೀರಾ ಈ ಸುತ್ತಲ ಪಾಳೆಪಟ್ಟಿಗೆ ಸೇರ್ದೋರಂಗೆ ಕಾಣ್ತಿಲ್ಲ. ಯಾವ ನದಿ ಕಡೆಯೊರೋ...!?

ಸಂ 2 : ಕಾವೇರಿ......... ಕಾವೇರಿ ನದಿ ಬೆಂಗಳೂರು ಪಟ್ಣ ಪಂಪ ಕವಿಯ ಶಾಸನವನ್ನ ಓದೋಕೆ ಬಂದ್ವಿ, ಆದ್ರೆ ...

ಮುದುಕ : ಆ ಪಾಪಿಗಳು ಹೆದರಿಸಿ ಕಳಿಸಿದ್ರು, ಪರವಾಗಿಲ್ಲ ಈ ಕಾಲ್ದಾಗೂ ಗುಂಡಿಗೆ ಇರೋರು ಅವ್ರೆ ಅಂತಾಯ್ತು.ಪುಕ್ಕಲರಾಗಿದ್ರೆ ಹಿಂಗೆ ರಾತ್ರಿ ಬರೋ ಧೈರ್ಯ ಮಾಡ್ತಿರ್ಲಿಲ್ಲ ಭೇಷ್.

ಸಂ 1 : ಒಳ್ಳೇ ಮನುಷ್ಯನ ತರ ಕಾಣ್ತಾನೆ.....

ಮುದುಕ : ಅಲ್ರಪ್ಪಾ ಎಷ್ಟೋ ಜನ ಬಂದ್ರು ಈ ಶಾಸನ ಓದಿದ್ರು ಹೋದ್ರು, ಅವರು ಹಗಲು ಬಂದ್ರು ನೀವು ರಾತ್ರಿ ಬಂದ್ರಿ. ಹಗಲು ಬಂದೋರು ಅಕ್ಷರದೊಳಗಿನ ಕತ್ತಲು ಹುಡುಕ್ತಿದ್ರು ನೀವು ರಾತ್ರಿ ಬಂದಿದ್ದೀರಿ ನೀವಾದ್ರೂ ಅಕ್ಷರದೊಳಗಿನ ಬೆಳಕು ಹುಡುಕ್ತೀರೋ ಹೆಂಗೆ?

ಸಂ 1 : ಹೌದು, ಅದಕ್ಕೆ ಬಂದಿದ್ದೀವಿ.

ಸಂ 2 : ಪಂಪ ಅನ್ನೋ ಹೆಸರಿನ ಮಹಾಕವಿಯೊಬ್ಬ, ಸಾವಿರ ವರ್ಷಗಳ ಹಿಂದೆ ಬದುಕಿದ್ದ. ತನ್ನ ಎಳೆ ವಯಸ್ಸಿನಲ್ಲೇ ಮಹಾ ಕಾವ್ಯಗಳನ್ನು ಬರೆದ ಅವ್ನು ಇಳಿ ವಯಸ್ಸಿನಲ್ಲಿ ಏನಾದ ಅಂತ ಯಾವ ಮಾಹಿತೀನೂ ಇಲ್ಲ. ಅದಕ್ಕೆ ಈ ಶಾಸನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ರೆ ಏನಾರ ವಿವರ ಸಿಕ್ಕಬಹುದು ಅಂತ ಸಂಶೋಧನೆ ಮಾಡೋಕೆ ಬಂದವರು ನಾವು.

(ಎಂದು ಹೇಳಿ ಶಾಸನದ ಮೇಲಿರುವ ಪೋಸ್ಟರ್ ಹರಿಯಲು ಹೋಗುವನು)

ಮುದುಕ : ಅಲ್ರಪ್ಪ, ಆ ಪುಣ್ಯಾತ್ಮ ಊರು ಬಿಟ್ಟು ಹೋದ ಮೇಲೆ ಅವನ ಗೆಪ್ತಿಗೆ ಹಾಕಿರೋ ಕಲ್ಲು ಏನು ಹೇಳೀತು ಆ ಕಥೇನ?

ಸಂ 1 : ಯಜಮಾನರೆ ನೀವು ಸ್ಥಳೀಕರು, ಪಂಪ ಕವಿ ಬಗ್ಗೆ ನಿಮಗೇನಾದ್ರು ತಿಳಿದಿದ್ರೆ ಹೇಳುತ್ತೀರಾ?

ಮುದುಕ : ಅಯ್ಯೋ! ಅಷ್ಟು ದೊಡ್ಡ ಮಾತು ಯಾಕಪ್ಪ, ಏನೋ ನಾನು ಚಿಕ್ಕವನಿದ್ದಾಗ ನಮ್ಮ ಹಿರೀಕರು ಅಂದುಕೊಳ್ಳುತ್ತಿದ್ದ ನಾಲ್ಕು ಮಾತು ನನ್ನ ಕಿವಿನಾಗೆ ಉಳಿದು ಹೋಗಿವೆ ಅಷ್ಟೆ.

ಸಂ 2 : (ಶಾಸನದ ಮೇಲೆ ಹಾಕಿರುವ ಪೋಸ್ಟರ್ ಹರಿಯುತ್ತಿದ್ದವನು ಬಿಟ್ಟು ಮುದುಕನ ಹತ್ತಿರ ಸಮೀಪಿಸಿ) ಸರಿ, ಆ ನಾಲ್ಕು ಮಾತುಗಳಲ್ಲಿ ನಿಮಗೆ ಗೆಪ್ತಿ ಇದ್ದಷ್ಟು ಹೇಳಿ.

(ಸಂ 1 ಟೇಪ್ ರೆಕಾರ್ಡರ್ ಅನ್ನು ತೆಗೆದು ಆನ್ ಮಾಡಲು ಪ್ರಯತ್ನ ಪಡುತ್ತಿದ್ದಾನೆ, ಸಂ 2 ಪೆನ್ನು ಪುಸ್ತಕ ತೆಗೆಯುತ್ತಾನೆ)

ಮುದುಕ : ಹೋಗಲಿ ಬಿಡ್ರಪ್ಪ ನಾನು ಯಾವ ದೊಡ್ಡ ಮನುಷ್ಯ... ಪಂಪ ಕವಿಯಿದ್ನಲ್ಲಾ, ಅವರ ಪೂರ್ವಿಕರು ಧರ್ಮಪುರದಾಗೆ ಅನಾದಿ ಕಾಲದಿಂದ್ಲೂ ನೆಲೆಸಿದ್ರಂತೆ, ಆಗ ಇದೊಂದು ಸಂಪ್ರದಾಯಸ್ಥ ಬ್ರಾಹ್ಮಣರ ಅಗ್ರಹಾರ ಆಗಿತ್ತಂತೆ. ಪಂಪನ ಅಪ್ಪ ಭೀಮಪ್ಪಯ್ಯ ಜೈನ ಧರ್ಮಕ್ಕೆ ಸೇರಿಕೊಂಡ ಮೇಲೆ ಈ ಹಾರವರೆಲ್ಲ ಭೀಮಪ್ಪಯ್ಯನ ಕುಟುಂಬಕ್ಕೆ ಬಹಿಷ್ಕಾರ ಹಾಕಿದ್ರಂತೆ. ಆಗ ಅವರು ತಮ್ಮ ಕುಟುಂಬಾನ ಕರ್ಕೊಂಡು ಹೆಂಡತಿ ತವರಾದ ಬನವಾಸಿ ಕಡೆಗೆ ದೆಸಾಂತರ ಹೋದ್ರಂತೆ. ಪಂಪ ಇದ್ಯಾಭ್ಯಾಸ್ ಮಾಡಿ ದೊಡ್ಡ ಕವಿಯಾದ್ಮ್ಯಾಗೆ ಅರಿಕೇಸರಿ ಮಹಾರಾಜರ ಕಣ್ಣಿಗೆ ಬಿದ್ರಂತೆ. ಆ ಮ್ಯಾಗೆ ನ್ಯಾಸ್ತಗಾರನಾದ್ನಂತೆ.

ಸಂ 2 : ಪಂಪ ಮಹಾ ಕವಿಗಳಿಗೆ ರಾಜ ಅಗ್ರಹಾರವೊಂದನ್ನ ಮಾನ್ಯವಾಗಿ ಕೊಟ್ಟಿದ್ನಂತೆ, ಆ ಬಗ್ಗೆ ನಿಮಗೇನಾದ್ರೂ ಗೊತ್ತ?

ಮುದುಕ : ಇದೇನಪ್ಪ ಅದು, ನೀವು ನಿಂತಿರೋದು. ಆ ಉಂಬಳಿ ಜಾಗದಲ್ಲೇ ಈ ಕಲ್ಲು ಮಣ್ಣುಗಳಲ್ಲಿ ಇತ್ತು ಆಗ್ರಹಾರ. ಇದೇ ಅಗ್ರಹಾರ್ದಾಗೆ ಪಂಪನ ಪೂರ್ವಿಕರು ಬಾಳಿ ಬದುಕಿದ್ದು.

ಸಂ 2 : ಪಂಪ ಕವಿಯಾಗಿದ್ದ, ಕಲಿಯಾಗಿದ್ದ, ರಸಿಕನಾಗಿದ್ದ, ಅನ್ನೋದೆಲ್ಲವೂ ಕಂಡು ಹಿಡಿದ ವಿಷಯಗಳೇ ಆದ್ರೆ ತನ್ನ ಇಳಿ ವಯಸ್ಸಿನಲ್ಲಿ ಏನಾದ ಅನ್ನೋದೇ ದೊಡ್ಡ ಒಗಟು. ಅದ್ರ ಬಗ್ಗೆ ಏನಾದ್ರೂ... (ಎದ್ದು ಮುಂದಕ್ಕೆ ಬರುವನು)

ಮುದುಕ : ಆಮೇಲೆ ನಡೆದಿದ್ದು ಜನಕ್ಕೆ. ಲೋಕಕ್ಕೆ ತಿಳೀದೆ ಇರೋದೇ ಒಳ್ಳೇದು ಕಣಪ್ಪ . ಆವಾಗ ಆಗಿಂದಾಗ್ಗೆ ಹಾರವರಿಗೆ, ಜೈನರಿಗೆ ಜಗಳ ನಡ್ಯೋದು. ಅವರ ಬಸದಿಯನ್ನ ಇವರು ಕೆಡವೋದು ಇವರ ಆಲಯಗಳನ್ನ ಅವರು ಕೆಡವೋದ್ರಿಂದ ಹಿಡಿದು ಕೆಲವು ಸಾರಿ ತಲೆ ತೆಗೆಯೋವರೆಗೆ ಎಲ್ಲಾ ರೀತಿಯಲ್ಲೂ ದುಂಡಾವರ್ತಿ ಮಾಡೋರು ಘಟಿಂಗರು.

ಸಂ 2 : ಹೌದು! ಹೌದು! ಅದಕ್ಕೆ ಸಾಹಿತ್ಯದಲ್ಲಿ, ಶಾಸನದಲ್ಲಿ ಪುರಾವೆಗಳು ಸಿಕ್ತವೆ. ಏಕಾಂತ ರಾಮಯ್ಯನ... (ಭಾಷಣ ಬಿಗಿಯಲು ಪ್ರಾರಂಭಿಸುವನು)

ಸಂ 1 : ಶೂ...ಶ್ss...

ಮುದುಕ : ಒಂದು ಸಾರಿ ಯಾರು ಶುರು ಮಾಡಿದ್ರೋ ತಿಳೀದು ಕಣಪ್ಪ. ಒಟ್ನಲ್ಲಿ ದೇಶದಾಗೆಲ್ಲಾ ಗಲಾಟೆ ನಡೀತು. ಆ ಕಾಲಾದಾಗೆ ಯುದ್ಧಗಳು ಹಗಲು ನಡೆದ್ರೆ ಇಂತಹ ಲೂಟಿಗಳು ರಾತ್ರಿ ನಡೆಯೋದು. ಸರಿ ಅಗ್ರಹಾರದಾಗೆ ಗಲಾಟೆ ಆಯ್ತು. ಅನೇಕ ಮನೆಗಳು ಸುಟ್ಟು ಹೋದವು. ಅದ್ರಾಗೆ ಪಂಪಂದೂ ಒಂದು.

ಸಂ 1 : ಯಾರು ಸುಟ್ಟಿದ್ದು?

ಮುದುಕ : ನನಗೆ ಅದೆಲ್ಲಾ ತಿಳೀದ್ರಪ್ಪ, ಅವತ್ತು ಊರಿಗೆ ಬೆಂಕಿ ಬೀಳೋದಕ್ಕೆ ಮುಂಚೆ ನೋಡಿದ್ದು ಬಿಟ್ರೆ, ಆಮ್ಯಾಗೆ ಪಂಪನ್ನ ಕಂಡೋರಿಲ್ಲ. ಕೇಳ್ದೋರಿಲ್ಲ. ಏನಾದ? ಏನಾತು? ಸತ್ನಾ? ಬದುಕಿದ್ನಾ? ಎಲ್ಲಾ ದೇವ್ರಿಗೇ ತಿಳೀಬೇಕಪ್ಪ.

ಸಂ 1 : ಅಲ್ಲಾ ರಾಜ ಪಂಪನಿಗೆ ಆಪ್ತ ಮಿತ್ರನಾಗಿದ್ದು, ಅವನ ರಕ್ಷಣೆ ಮಾಡಕಾಗ್ಲಿಲ್ವಾ, ಅಥವಾ ಅವರ ಸಂಬಂಧ ನಾವು ಅಂದುಕೊಂಡ ಹಾಗೆ ಇರ್ಲಿಲ್ವೇನೋ?

ಮುದುಕ : ರಾಜನು ಯಾಕೆ ರಕ್ಷಣೆ ಮಾಡ್ಲಿಲ್ಲ ಅನ್ನೋದು ನನಗೇನೂ ತಿಳೀದಪ್ಪ. ಆದ್ರೆ ಅವ್ರಲ್ಲಿ ನ್ಯಾಸ್ತ ಮಾತ್ರ ಕೆಟ್ಟಿರ್ಲಿಲ್ಲ ಅಂತ ಮಾತ್ರ ಗೊತ್ತು.

ಸಂ 2 : ಮುಂದೇನಾಯ್ತು!

ಮುದುಕ : ರಾಜ ತನ್ನ ಸ್ನೇಹಿತನ್ನ ಹುಡುಕಿಸ್ದಿದ್ನಂತೆ. ಜೀವಾನೂ ಇಲ್ಲ ದಟ್ಟಾನು ಸಿಕ್ಲಿಲ್ಲಾಂತೆ, ಸರಿ ಅವನ ಗೆಪ್ತಿಗಾಗಿ ಈ ಬಸದಿ ಕಟ್ಟಿಸ್ದ. ಶಾಸನ ಕೆತ್ಸಿದ್ನಂತೆ. ಕೆರೆ, ವನ ಹಿಂಗೆ ಏನೇನೋ ಮಾಡಸ್ದ.

ಸಂ 1 : ಅಗ್ರಹಾರದಲ್ಲಿ ಬಸದಿ ಕಟ್ಟಿಸಿದಕ್ಕೆ, ಶಾಸನ ನೆಡಸಿದ್ದಕ್ಕೆ ಅಗ್ರಹಾರದ ಜನರು ತಕರಾರು ತೆಗೀಲಿಲ್ಲ?

ಮುದುಕ : ಈ ಶಾಸನ ಬಸದಿ ಅವ್ರಿಗೆ ಇಷ್ಟ ಇರ್ಲಿಲ್ಲ, ಮುಖ್ಯವಾಗಿ ಪಂಪನ ನೆನಪು. ರಾಜನಿಗೆ ನೇರವಾಗಿ ಹೇಳದೆ, ಮಾಡೋ ಕೆಲಸ ಮಾಡುದ್ರು, ದೊರೆ ಬಂದಾಗ ಹಗಲೊತ್ನಲ್ಲಿ ಬಂದು ಪಂಪನನ್ನು ಕೊಂದಿದ್ದು ಜೈನರೇ ಅಂತ ಪಿರ್ಯಾದಿ ಕೊಟ್ರು. ರಾಜ ಅತ್ತ ಹೋಗ್ತಿದ್ದಂಗೆ ರಾತ್ರಿ ಶಾಸನ ಮುರ್ಸಾಕಿದ್ರು. ಅದನ್ನೂ ಕೂಡ ಜೈನರ ಹೆಸರಿಗೆ ಕಟ್ಟಿಸಿ ತಾವು ನಿರಂಬಳರಾದ್ರು.

ಸಂ 2 : ಆಗ್ಲೂ ರಾಜನಿಗೆ ಅನುಮಾನ ಬರ್ಲಿಲ್ವೆ

ಮುದುಕ : ಬಂದಿರ್ಬೋದು, ಆದ್ರೂ, ತಿರಿಗಿ ಇನ್ನೊಂದು ಶಾಸನ ನಡೆಸಿ ಈ ಸರ್ತಿ ಒಬ್ಬ ಸೈನಿಕನನ್ನ ಕಾವಲಿಟ್ಟ.

ಸಂ 1 : ಅಲ್ಲಜ್ಜ ತಪ್ಪು ತಿಳ್ಕೋ ಬೇಡಿ. ನೀವು ಎಲ್ಲಾ ಕಣ್ಗೆ ಕಟ್ಟಿದ ಹಾಗೆ ಹೇಳ್ತಿರಲ್ಲ ಕೇಳಿದ್ದನ್ನಂಗೆ..

ಮುದುಕ : (ನಕ್ಕು) ಏನು ಮಾಡೋದಪ್ಪ ನೋಡಿದ್ದನ್ನ ಕೇಳಿದ್ದನ್ನ ಮರ್ಯೋಕಾಗೊಲ್ಲ. ಮರೀದೆ ಇರೋದನ್ನ ಹೇಳ್ದೆ ಇರೋಕಾಗಲ್ಲ. ಇದೊಂತರಾ ಸಂಕಟ.

ಸಂ. 2 : ಆ ಕಾವಲುಗಾರ ನಿಮ್ಮ ಪೂರ್ವಿಕನಾ?

ಸಂ. 1 : ನಿಮ್ಮ ವಂಶಸ್ಥನಾ?

ಮುದುಕ : ಅಲ್ಲಪ್ಪ.... ಜೋಳವಾಳದ ಋಣಾನು ಇತ್ತಲ್ಲ!

ಸಂ. 1 : ಜೋಳವಾಳದ ಋಣಾನ!

ಸಂ. 2 : ಜೋಳವಾದದ ಋಣ–ಅಂದ್ರೆ ನೀವೂ.... ನೀವು

ಮುದುಕ : ಹೌದಪ್ಪೊ ಅರಿಕೇಸರಿ ಮಹಾರಾಜರ್ರು ಈ ಶಾಸನ ಕಾಯೋದಿಕ್ಕೆ ಒಬ್ಬ ಕಾವಲುಗಾರನನ್ನ ನೇಮಿಸಿದ್ರಲ್ಲಾ! ಆ ಕಾವಲುಗಾರ ನಾನೇ!

ಸಂ 1 ಮತ್ತು 2 : ಹಾ! ಅಯ್ಯೋ, ಈ ಮುದುಕ ಭೂತಾ, ದೆವ್ವ! (ಅಂತ ಕಿರುಚುತ್ತಾ ಅಡ್ಡ ದಿಡ್ಡಿಯಾಗಿ ಓಡಿ ಬಸದಿಯಲ್ಲಿ ಮೂರ್ಛೆ ಬೀಳುತ್ತಾರೆ)

ಮುದುಕ : ಭೂತದಲ್ಲಿ ಅಡಗಿರೋ ಸತ್ಯ ಹುಡುಕುವುದಕ್ಕೆ ಬಂದ್ರಿ, ಆ ಭೂತಾನೆ ಬಂದು ಎದುರಾದ್ರೆ ಓಡೋಗ್ತಿರಲ್ರೋ, ಏನು ಲೋಕವೋ ಏನೋ.

(ಅಷ್ಟರಲ್ಲಿ ಬಸದಿಯಿಂದ ಒಬ್ಬ ಆಗುಂತಕ ಪ್ರವೇಶಿಸುತ್ತ ಮೂರ್ಛೆಗೊಂಡ ಸಂಶೋಧಕರನ್ನ ದಾಟಕೊಂಡು ಬರುತ್ತಾನೆ, ಆತನನ್ನು ಕಂಡ ಮುದುಕ ಸೈನಿಕನ ಗತ್ತಿನಲ್ಲಿ ಅವನಿಗೆ ನಮಸ್ಕರಿಸಿ ಪರಾಕ್ ಶುರು ಮಾಡುತ್ತಾನೆ)

ಪರಾಕ್ರಮಧವಳ
ಸಾಹಸಭರಣ
ಕದನ ತ್ರಿನೇತ್ರ
ಪಡೆಮೆಚ್ಚ ಗಂಡ

ಸಾಮಂತ ಚೂಡಾಮಣಿ
ಶರಣಾಗತ ಜಲನಿಧಿ
ವೈರಿ ಗಜಗ ವಿಘಟನ
ಪರಸೈನ್ಯ ಭೈರವ
ಗುಣಾರ್ಣವ
ವಿಕ್ರಾಂತ ತುಂಗ
ರಿಪುಕುರುಂಗ ಕಂಠೀರವ
ವಿಜಯ ವಿಭೂಷಣ

ದೊರೆ : ಲೇ ಸಾಕು ನಿಲ್ಲಿಸಯ್ಯ, ನಿನ್ನ ಒದರಾಟ, ಸಾವಿರಾರು ವರ್ಷಗಳಿಂದ ಈ ಮಾತುಗಳನ್ನು ಕೇಳಿ ಕೇಳಿ ಕಿವಿ ತೂತು ಬಿದ್ದು ಹೋಗಿದೆ. ನಿನಗೆ ಎಷ್ಟು ಸಾರಿ ಹೇಳಿದ್ದೀನಿ, ಈ ವೇಷಗಳ ಸಹವಾಸ ಬೇಡಾಂತ. ಪ್ರೇತವಾದ್ರೂ ಈ ಪರಾಕಿನ ಪೀಡೆ ತಪ್ಪಲಿಲ್ಲ. ಥೂ ದರಿದ್ರ, ಮೈಗೆತ್ತಿಕೊಂಡಿರೋ ಹೊಲಸಿನ ಹಾಗೆ.

ಸೈನಿಕ : ಕ್ಷಮಿಸಬೇಕು ಪ್ರಭು, ತಪ್ಪಾಯ್ತು.

ದೊರೆ : ಇರ್ಲಿ ಬಿಡು, ಯಾರಯ್ಯ ಇವ್ರು.

ಸೈನಿಕ : ಪಂಪ ಮಹಾಕವಿಯ ಉತ್ತರ ಜೀವನವನ್ನ ಸಂಶೋಧನೆ ಮಾಡಿ ಸತ್ಯವನ್ನ ಕಂಡು ಹಿಡೀಬೇಕೂಂತ ಬಂದವ್ರೆ ಧಣಿ.

ದೊರೆ : (ನಕ್ಕು) ಸತ್ಯ ಕಂಡು ಹಿಡೀತಾರಂತ, ಹ ಹ ಹ... (ನಗುತ್ತಾ ಕಲ್ಲಿನ ಕಡೆ ಚಲಿಸುವನು). ಸತ್ಯ ಏನು ನಿಧೀನಾ ನಿಕ್ಷೇಪಾನ ಕಂಡು ಹಿಡ್ಯೋಕೆ. ಸತ್ಯ ಕಂಡುಕೊಳ್ಳಲು ಹೋಗೋದು ಅಂದ್ರೆ ಮಳೆ ಹುಳುಗಳು ಬೆಂಕಿಗೆ ಬಿದ್ದಂಗೆ.

ಸೈನಿಕ : (ಸೈನಿಕ ಸಂಶೋಧಕರ ಕಡೆಯಿಂದ ದೊರೆಯ ಹತ್ತಿರ ಬಂದು) ಪ್ರಭು, ಈ ಹುಡುಗರು ಅಂದ ಮೇಲೆ ನನಗೂ ಸ್ಪಷ್ಟ ಆಯ್ತು, ನನ್ನನ್ನೂ ಒಂದು ಪ್ರಶ್ನೆ ಕಾಡ್ತಾಇದೆ ಅಂತ. ತಾವು ಪಂಪ ಕವಿಯನ್ನ ಯಾಕೆ ಕಾಪಾಡ್ಲಿಕ್ಕೆ ಆಗ್ಲಿಲ್ಲಾಂತ?

ದೊರೆ : ಈ ಕವಿಗಳು ಇರ್ತಾರಲ್ಲ ಇವ್ರಿಗೆ ಮಹಾ ಕೊಬ್ಬು, ಪಂಪನ್ನ ನಾನು ಮೊದಲು ನೋಡಿದ್ದು ಯುದ್ಧದಲ್ಲಿ, ಆಗ ನಾನು ಸೇನಾಪತಿಯಾಗಿದ್ದೆ. ಅವನ ಚುರುಕು ಕಣ್ಣು ಕೈ ಚಲನೆ ನನ್ನ ಗಮನ ಸೆಳೀತು. ಒಳ್ಳೆ ಕಲಿ ಅಂತ ಅಂದುಕೊಂಡೆ. ಒಂದು ಸಾರಿ ಯುದ್ಧದಲ್ಲಿ ಪಾಳಯದವ್ರು ಮೇಲುಗೈ ಸಾಧಿಸಿದ್ರು. ಆ ರಾತ್ರಿ ಪಂಪ ನನ್ನನ್ನೂ ನನ್ನ ಸೈನಿಕರನ್ನು ಕೂಡಿಸಿಕೊಂಡು ಯಾವುದೋ ಕಥೆ ಹೇಳ್ದ. ಉತ್ಸಾಹ ತುಂಬಿದ, ಆಗ್ಲೆ ನನ್ಗೆ ಗೊತ್ತಾಗಿದ್ದು ಅವನು ಬರಿ ಕಲಿಯಲ್ಲ ಕವಿಯಂತ. ಆ ಯುದ್ಧವನ್ನ ನಾನೇ ಗೆದ್ದಿದ್ದೆ. ಅವನು ನನ್ನನ್ನು ಗೆದ್ದಿದ್ದ. ಆ ಗೆಲುವಿನಿಂದಲೇ, ಸೇನಪತಿಯಾಗಿದ್ದ ನಾನು ಸಾಮಂತ ಪದವಿಗೇರಿದ್ದೆ.

ಸೈನಿಕ : ನಿಮ್ಮ ಪ್ರಾಣ ಸ್ನೇಹಿತರಾಗಿದ್ದ ಪಂಪ ಕವಿಗಳು, ನಿಮ್ಮನ್ನ ಬಿಟ್ಟು ಈ ಅಗ್ರಹಾರಕ್ಕೆ ಯಾಕೆ ಬಂದ್ರು ಧಣಿ. ನಿಮ್ಗು ಅವ್ರಿಗು ಏನಾರ ಮನಸ್ತಾಪ...?

ದೊರೆ : (ನಕ್ಕು) ಪಂಪ ಅಂದ್ರೆ ನನ್ನ ಪ್ರಾಣ. ನಾನು ಬಡ್ಕೊಂಡೆ ಈ ಅಗ್ರಹಾರದ ಸಹವಾಸ ಬೇಡಾಂತ, ನಿಜ ಹೇಳ್ತೀನಿ, ನನ್ನ ಸಾಮ್ರಾಟರ ಎದುರು ಎಂದೂ ಮಂಡಿ ಬಗ್ಗಿಸದ ನಾನು ಅವನ ಎದುರು ಕೈ ಮುಗಿದು ಕೇಳಿಕೊಂಡೆ. ನನ್ ಜೊತೆ ಇದ್ದು ಬಿಡು ನಿನಗೆ ಅರಮನೆ ಹಿಡಿಸದೇ ಹೋದ್ರೆ ಪಟ್ಟಣದ ಪಕ್ಕದಲ್ಲೆ ಒಂದು ಅಗ್ರಹಾರ ಕಟ್ಟಿಸಿಕೊಡ್ತೀನಿ ಅಂತ

ಹಸಿಗೂಸಿಗೆ ಹೇಳ್ದಂಗೆ ಹೇಳ್ದೆ, ಗದರಿಸಿ ನೋಡ್ದೆ, ಜಪ್ಪಯ್ಯ ಅಂದ್ರು ಜಗ್ಗಲಿಲ್ಲ. ನಾನೂ ಉಪ್ಪು ಖಾರ ತಿಂದೋನು, ನನ್ನ ಅಹಂಕಾರನೂ ಅಡ್ಡ ಬಂತು, ನಿನ್ ಇಷ್ಟ ಅಂದೆ. ಅವನು ಆ ರಾತ್ರೀನೆ ಈ ಸುಡುಗಾಡಿಗೆ ಬಂದ. ಕಾವ್ಯದಲ್ಲಿ ಅಂತಹ ಧರ್ಮ ಸೂಕ್ಷ್ಮಗಳನ್ನ ಬಿಡಿಸ್ತಿದ್ದ ಮನುಷ್ಯನಿಗೆ ಈ ವಿಚಾರ ಹೊಳಿಲಿಲ್ವಾ? ಅಪ್ಪಟ ಬ್ರಾಹ್ಮಣನಾಗಿದ್ದ ಅವರಪ್ಪ ಜೈನ ಧರ್ಮಕ್ಕೆ ಮತಾಂತರವಾಗಿದ್ದನ್ನ ಈ ಹಾರವರು ತಡ್ಕೊಳ್ಳೋಕೆ ಆಗಿರ್ಲಿಲ್ಲ. ಅಂತಹದ್ರಲ್ಲಿ ಪಂಪ ವಿಕ್ರಮಾರ್ಜುನ ವಿಜಯ ಬರೆದಾಗ ವೈದಿಕ ಪುರಾಣಗಳನ್ನ ಜೈನೀಕರಿಸಿ ಅವುಗಳ ಪವಿತ್ರತೆಯನ್ನ ಹಾಳು ಮಾಡವ್ನೆ ಅಂತ ನನ್ನ ಹತ್ರಾನೆ ಚಾಡಿ ಹೇಳೋಕೆ ಬಂದಿದ್ರು, ಆದ್ರೆ ಅವರ ನಿಜವಾದ ತಕರಾರು ಏನಪ್ಪ ಅಂದ್ರೆ ನನ್ನನ್ನ ಮಹಾಭಾರತದ ಅರ್ಜುನನಿಗೆ ಹೋಲಿಸಿ ಕಾವ್ಯ ಬರೆದಿದ್ನಲ್ಲ ಅದು ಅವ್ರಿಗೆ ಕೋಪ ತರಿಸಿತ್ತು. ಆದ್ರೆ ನಾನು ರಾಜ, ಬಿಸಿ ತುಪ್ಪ, ಅದಕ್ಕೆ ಪಂಪನ ಮತಾಂತರ, ನನ್ನ ಅರ್ಜುನನ ಸಮೀಕರಣ, ಮತ್ತು ನಮ್ಮ ಸ್ನೇಹ ಹಿಂಗೆ ಅವರ ಕೋಪ ಕುದಿ ಎಗರೋ ಕಾಲ್ದಾಗೆ ಈ ಪಂಪ ನನ್ ಮಾತು ಕೇಳದೆ ಇಲ್ಲಿಗೆ ಈ ಸುಡುಗಾಡಿಗೆ ಬಂದ. ಅದಕ್ಕೆ ಇಷ್ಟು ವರ್ಷ ಆದ್ರೂ ಒಂದು ಸಾರಿನಾದ್ರು ಅವನ ಜೊತೆ ಮಾತಾಡಬೇಕು ಅಂತ ದಿನಾ ಇಲ್ಲಿ ಬಂದು ನಾಯಿ ತರ ಕಾಯ್ತಿದ್ದೀನಿ.

(ಆಗ ಧಣೀ ಎಂಬ ಶಬ್ದ ನೇಪಥ್ಯದಿಂದ ಕೇಳಿಬರುತ್ತದೆ)

(ಅರಿಕೇಸರಿಯ ಖಾಸಗಿ ದರ್ಬಾರು, ಪಲ್ಲಂಗದಲ್ಲಿ ಕುಳಿತು, ಕಾವ್ಯ ಆಸ್ವಾದಿಸುತ್ತಿದ್ದಾನೆ. ಜಿನವಲ್ಲಭ ಕಂದೀಲಿನ ಬೆಳಕಿನಲ್ಲಿ ವಿಕ್ರಮಾರ್ಜುನ ವಿಜಯವನ್ನು ಪಠಿಸುತ್ತಿದ್ದಾನೆ)

ಜಿನವಲ್ಲಭ : ಉರಿವುರಿಯನೆ ತಲೆನವಿರ್
ಅನುಕರಿಸಿರೆ ಸಂತಪ್ತ ಕನಕವರ್ಣಮಂ
ಉರಿಯೊಂದು ಉರುಳುವೊಲ್ ಇರೆ
ಜಠರಾನಳನ್ ಉರಿವಿನಂತೊರ್ವನ್
ಉರಿಯ ಬಣ್ಣದ ಪಾರ್ವಂ
ಅಂತು ವರ್ಪನಂ ಕಂಡು ಸಾಮಂತ ಚೂಡಾಮಣಿ
ತನ್ನೊಳಿಂತೆಂದು.....

ದೊರೆ : ಇದು!

ಜಿನವಲ್ಲಭ : ಇದು ಖಾಂಡವ ದಹನದ ಪ್ರಕರಣ ಪ್ರಭು.

(ಅಷ್ಟರಲ್ಲಿ ಧಣಿ, ಧಣಿ... ಆತಂಕದಿಂದ ಕೂಗಿಕೊಂಡು ಮಾಹಿತಿದಾರ ಪ್ರವೇಶಿಸುತ್ತಾನೆ ಜಿನವಲ್ಲಭ ಹೊರ ನಡೆಯುತ್ತಾನೆ)

ಮಾಹಿತಿದಾರ : ಮಹಾಪ್ರಭು, ಘಾತವಾಯಿತು. ನೆನ್ನೆ ರಾತ್ರಿ ನಡೆದ ಬ್ರಾಹ್ಮಣ ಮತ್ತು ಜೈನರ ದೊಂಬಿಯಲ್ಲಿ ಅಗ್ರಹಾರ ಸುಟ್ಟು ಹೋಯ್ತು. ಅಪಾರವಾದ ಬೆಳೆ, ಪ್ರಾಣ ನಷ್ಟವಾಯ್ತು.

ದೊರೆ : ಇದು ಇದ್ದದ್ದೇ ತಾನೆ- ಕೀವು ಕೂಡಿದ ಮೇಲೆ ಕುರು ಒಡೀಲೇ ಬೇಕಲ್ಲ... ಹೂಂ! ಇನ್ನೇನಾದ್ರೂ ಉಂಟೋ?

ಮಾಹಿತಿದಾರ : ಧಣಿ ಅದೂ...

ದೊರೆ : ಹೇಳು

ಮಾಹಿತಿದಾರ : ಧಣಿ ತಾವು ಪಂಪ ಕವಿಗಳಿಗೆ ಉಂಬಳಿ ನೀಡಿದ ಗ್ರಾಮ.... ಪಂಪ ಕವಿಯಿದ್ದ ಓಣಿ ಸುಟ್ಟು ಹೋಗಿದೆ.

ದೊರೆ : ಪಂಪ ಹೇಗಿದ್ದಾನೆ, ಆತನನ್ನು ರಾಜಧಾನಿಗೆ ಕರೆತರುವ ಏರ್ಪಾಡು ಮಾಡಿ, ಈ ಕೂಡಲೇ, ಬರುವುದಿಲ್ಲವೆಂದರೆ, ಹೆಡೆಮುರಿ ಕಟ್ಟಿ ತನ್ನಿ.

ಮಾಹಿತಿದಾರ : ಕ್ಷಮಿಸ್ಬೇಕು ಧಣಿ, ಅವರ ಸುಳಿವಿಲ್ಲ, ನಿನ್ನೆ ಕೆಳಜಾತಿಯ ಜನರನ್ನ ಕೂಡಿಸಿಕೊಂಡು ವಿಕ್ರಮಾರ್ಜುನ ವಿಜಯ ಕಾವ್ಯವನ್ನ ಓದಿ ಹೇಳುತ್ತಿದ್ದರಂತೆ, ಆಗ ಇದ್ದಕ್ಕಿದ್ದಂತೆ, ಜೈನರು ಊರಿಗೆ ನುಗ್ಗಿದ್ದಾರೆಂತ ಪುಕಾರು ಹಬ್ಬಿ ಜನ ದಿಕ್ಕಾಪಾಲಾದ್ರಂತೆ, ಆಗಿನಿಂದ ಕವಿಗಳ ಸುಳಿವಿಲ್ಲ.

ದೊರೆ : ಅವರ ಮನೆಯಲ್ಲಿ ಯಾವುದಾದ್ರು ಹೆಣ ಸಿಕ್ಕಿತೇನು?

ಮಾಹಿತಿದಾರ : ಪ್ರಾಥಮಿಕ ತನಿಖೆಯಲ್ಲಿ ಏನೂ ಕಂಡು ಬಂದಿಲ್ಲ ಪ್ರಭು, ಜೈನರ ಮೇಲೆ ದೂರು ಹೊರೆಸಿ ತಮ್ಮ ಹಗೆ ತೀರಿಸಿಕೊಂಡಿದ್ದಾರೆ... ಎಷ್ಟಾದರೂ ಅಗ್ನಿ ಕುಲದವರು.

ದೊರೆ : ಈ ಕೆಲಸ ಜೈನರದೇ ಯಾಕಾಗಿರಬಾರದು?

ಮಾಹಿತಿದಾರ : ನಾನು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ಹೇಳೊದಾದ್ರೆ...

ದೊರೆ : ಮಾಹಿತಿ ಸತ್ಯ ಅಲ್ಲ! ಮಾಹಿತಿ ಅನ್ನೋದು ನಾವು ಹುಡುಕಿದ ಹಾಗಿರುತ್ತದೆ. ಅಂದಹಾಗೆ, ನೀನು ನನ್ನನ್ನ ಹಾರವರ ವಿರುದ್ಧ ಎತ್ತಿ ಕಟ್ಟುತ್ತಿಲ್ಲ ತಾನೆ? ನೋಡು, ಜೈನರನ್ನಾಗಲಿ ಅಥವಾ ಹಾರವರನ್ನಾಗಲಿ ಈ ಆರೋಪದಿಂದ ನಾನು ಮುಕ್ತಗೊಳಿಸುತ್ತಿಲ್ಲ. ಪಂಪನ ವರ್ತಮಾನ ಹಾರವರನ್ನ ಕಾಡಿಸಿದ ಹಾಗೆ ಪಂಪನ ಭೂತ ಜೈನರನ್ನ ಕಾಡಿಸುತ್ತಿತ್ತು. ಹಂಗಾಗಿ ಈ ಕೆಲಸ ಇಬ್ರಲ್ಲಿ ಯಾರು ಬೇಕಾದ್ರೂ ಮಾಡಿರಬಹುದು. ಸರಿ, ಇಡೀ ನಾಡೆಲ್ಲಾ ಪಂಪನಿಗಾಗಿ ಹುಡುಕಿಸಿ, ಇದು ಗುಟ್ಟಾಗಿರ್ಲಿ, ಸುಳಿವು ಸಿಕ್ರೆ ನನಗೆ ತಿಳಿಸಿ. (ಸೇವಕನ ನಿರ್ಗಮನ) ಈಗ ಎದ್ದಿರೋ ಈ ದಳ್ಳುರಿಯ ಕೆನ್ನಾಲಿಗೆಯಲ್ಲಿ ಬಲಿಗೊಳ್ಳೋ ಆಹುತಿಗಳನ್ನ ನೆನೆದರೆ, ...ಅವನಿಲ್ಲಾಂತ ನನಗ್ಯಾಕೋ ಭಯ.

(ಹಿಂದಿನ ದೃಶ್ಯದಲ್ಲಿ ನಿಂತಿದ್ದ ಸ್ಥಾಟ್ನಲ್ಲೇ ನಿಂತು ಅರಿಕೇಸರಿ ಮಾತು ಮುಂದುವರೆಸುತ್ತಾನೆ, ಪ್ರೇಕ್ಷಕರ ಎದುರಾಗಿ)

ಎಷ್ಟೋ ದಿನವಾದ್ರು ಪಂಪನ ಸುಳಿವಾಗ್ಲಿ, ಮಾಹಿತಿಯಾಗ್ಲಿ ಸಿಗ್ಲಿಲ್ಲ. ಅವನು ಸತ್ತಾದ್ರು ಹೋಗಿದ್ರೆ ಇಷ್ಟು ಬಾಧೆಗೆ ಒಳಗಾಗುತ್ತಿರಲಿಲ್ಲ. ಆ ಹೊತ್ತಿನಿಂದ ಇವತ್ತಿನವರೆಗೆ ನಾನು ಯೋಚಿಸ್ತಾನೆ ಇದ್ದೀನಿ, ಪಂಪ ಯಾಕೆ ಹೀಗ್ ಮಾಡ್ದಾಂತ? ವಿಕ್ರಮಾರ್ಜುನ ವಿಜಯ ಬರೆಯುವ ಕಾಲಕ್ಕೆ ನನ್ನನ್ನ ಕರ್ಣನಿಗೆ ಸಮೀಕರಿಸಿ ಬರೆಯುತ್ತೇನೆ ಅಂದ. ನಾನೇ ಬೇಡಾಂದೆ. ಆಗ ನನ್ನ ಕಣ್ ಮುಂದೆ ಇದ್ದಿದ್ದು ಒಂದೇ, ಒಂದಲ್ಲ ಒಂದು ದಿನ ಇಡೀ ಚಾಲುಕ್ಯ ಸಾಮ್ರಾಜ್ಯಕ್ಕೆ ಸಾಮ್ರಾಟನಾಗುವುದು. ಆದ್ರಿಂದ್ಲೆ ಮಾನವ ಶ್ರೇಷ್ಠನಾದ ಕರ್ಣ ಕೊನೆಗೂ ಸಾಮಂತನಾಗಿಯೇ ಉಳಿದಿದ್ದರಿಂದ ನನ್ನ ಕೀಳರಿಮೆ ಅಥವಾ ನನ್ನ ಮಹತ್ವಾಕಾಂಕ್ಷೆ ನನ್ನನ್ನ ಅದಕ್ಕೆ ಒಪ್ಪಗೊಡಲಿಲ್ಲ. ಚಕ್ರವರ್ತಿಯ ಸಿಂಹಾಸನದ ಕನಸು ನನ್ನ ಕಣ್ಣುಗಳಲ್ಲಿ ತುಂಬಿಕೊಂಡಿತ್ತು. ಅದಕ್ಕೆ ಅರ್ಜುನನ ಪಾತ್ರ ನನ್ನನ್ನ ಸೆಳೆಕೊಂಡಿತ್ತು. ಬಹುಶಃ ನನ್ನ ಬಗ್ಗೆ ಪಂಪನಿಗೆ ಜುಗುಪ್ಸೆ ಆಗಲೇ ಆಗಿರಬೇಕು.

ಸೈನಿಕ : ಧಣಿ ತಮ್ಮ ಮನಸ್ಸು ನೋಯಿಸ್ದೆ

ದೊರೆ : ಇಲ್ಲ ನೋವು ಅವಮಾನಗಳೇ ನಮ್ಮಣ್ಣ ಮನುಷ್ಯರನ್ನಾಗಿ ಮಾಡೋದಂತ ಪಂಪ ಹೇಳುತ್ತಿದ್ದ ಮಾತು ಅವನು ಕಣ್ ಮರೆ

ಆದ ಮೇಲೆ ನನಗೆ ಅರ್ಥ ಆಯ್ತು. ಪಂಪನಿಗೆ ಕರ್ಣನ ಪಾತ್ರನಾ ಅಷ್ಟು ಕರಳು ಕತ್ತರಿಸೋ ಹಂಗೆ ಬರೆಯೋದಕ್ಕೆ ಹೆಂಗೆ ಸಾಧ್ಯ ಆಯಿತು ಅಂತ ಅವೊತ್ತಿಂದ ಯೋಚಿಸ್ತಾ ಇದ್ದೀನಿ. ಅವನೊಂದು ಸಾರಿ ಸಿಕ್ರೆ ಸಾಕು, ಅವನಿಗೊಂದು ಮಾತು ಹೇಳಬೇಕು. ನಾನು ಚಕ್ರವರ್ತಿ ಅರ್ಜುನ ಅಲ್ಲಾ, ನಾನು ಸಾಮಂತ, ನಿನ್ನ ಗೆಳೆಯ ಕರ್ಣ ಅಂತ.

●

ದೃಶ್ಯ – ೪

[ಗಂಗಾಧರ ಶಾಸನವನ್ನು ಗಟ್ಟಿಯಾಗಿ ಓದುತ್ತಿರುವ ಸದ್ದು, ಶಾಸನದ ಮೇಲೆ ಬೆಳಕು ಬಿದ್ದಿದೆ, ನೋಡ ನೋಡುತ್ತಿದ್ದಂತೆ ಶಾಸನ ಇಬ್ಭಾಗವಾಗಿ ಒಳಗಿಂದ ಓರ್ವ ವ್ಯಕ್ತಿ ಬರುತ್ತಾನೆ]

ಓಂ ನಮಸ್ಸಿಧ್ಯೆಭ್ಯಸ್ವಸ್ತಿ ಸಮಸ್ತ ಸಕಳ ಕಳಾಲಾಪ ಪ್ರವೀಣಂ
ಭವ್ಯ ರತ್ನಾಕರಂ
ಗುಣಪಕ್ಷಪಾತಿ
ಬೆನ್ಗಿನಾಡ ಸಪ್ತ ಗ್ರಾಮದೊಲೊಳಗಣ/ ಕಮ್ಮಬ್ರಾಹ್ಮಣಂ
ಜಮದಗ್ನಿ ಪಂಚಾರ್ಷೆಯಂ
ಶ್ರೀ ವತ್ಸ ಗೋತ್ರಂ

ಗುಂಡಿ ಕರಿ ನಡುಗೊಂಡಯಭಿಮಾನ ಚಂದ್ರ ಮರ್ಮಂ ಭೀಮಪ್ಪಯ್ಯನ ಬೆಳಗೊಳದ ಅಣ್ಣಿಗೆರೆಯ ಜೋಯಿಸ ಸಿಂಘನ ಮರ್ಮಳ್ ಅಬ್ಬಣಬ್ಬೆಯ ಮಗಂ ಕೊಂಡ ಕುಂಡಿಯ ದೇಶಿಗಣದ ಪೊತ್ತಿಗೆಯಾ ಬಳಿಯ ಪಾಂಡುರಂಗವಲ್ಲಿಯ ಬಯಣದಿಂ ಸಿದ್ಧಾಂತ ಭಟ್ಟಾರ್ರ್ ಗುಡ್ಡಂ ಜಿನವಲ್ಲಭಂ ಸಬ್ಬನಾದ ನಟ್ಟ ನಡುವಣ ಧರ್ಮಪುರದ ಉತ್ತರ ದಿಬ್ಭಾಗದ ವೃಪಭಗಿರಿಯೆಂಬ ಅನಾದಿ ಸಂಸಿದ್ದ ತೀರ್ಥದ ದಕ್ಷಿಣ ದಿಶಾ ಭಾಗದ ಈ ಸಿದ್ದಿ ಶಿಲೆಯೊಳ್...

(ಕಲ್ಲು ಇಬ್ಭಾಗವಾಗುವ ಸದ್ದು. ಪ್ರಖರ ಬೆಳಕು)

ಪಂಪ : (ಹಿಡಿ ಮಣ್ಣನ್ನು ಕೈಗೆತ್ತಿಕೊಳ್ಳುವನು) ಓಹ್ ಮಣ್ಣೇ! ಒಂದು ಸಾವಿರ ವರ್ಷವಾಯ್ತು, ನಿನ್ನ ಸೋಂಕಿದರೆ ಆಗಿನಂತೆ ಈಗಲೂ ಮೈ ಜುಮ್ಮನ್ನುತ್ತೆ. ಈ ಮಣ್ಣು, ಗಾಳಿಗಳಲ್ಲಿ ಅಂತಹದ್ದು ಏನಿದ್ದಾತೂಂತ? ಒಂದು ಸಾವಿರ ವರ್ಷ ಅಕ್ಷರದೊಳಗೆ, ಛಂದಸ್ಸಿನೊಳಗೆ, ನನ್ನನ್ನು ನಾನೇ ಬಂಧಿಸಿಕೊಂಡು ಯೋಚಿಸಿದೆ. ಯೋಚಿಸಿದಷ್ಟೂ ಯೋಚನೆ ಬೆಳೀತು. ದುಗುಡ ಬಲೀತು, ಆದ್ರೆ ಉತ್ತರ ಹೊಳೀಲೇ ಇಲ್ಲ. ಮತ್ತೆ ಮಣ್ಣನ್ನೇ ಎದುರಾಗಬೇಕು. ಆದ್ರೆ ಇದೂ ಕೂಡಾ ನನ್ನದಲ್ಲ. ನನ್ನ

ಕಾವ್ಯ, ನನ್ನ ಕೀರ್ತಿ, ನಾನು ಇವೆಲ್ಲವುಗಳ ಹಾಗೇ ಇದೂ ಕೂಡಾ ಅನ್ಯವೇ? ಓಹ್! ಗೆಳೆಯ ನೀನು ನೀನು. ನೀನು ಕೂಡಾ ಯಾಕೆ ನನ್ನನ್ನ ನಿರಾಶೆಗೊಳಿಸಿಬಿಟ್ಟೆ? ಇದೇನಿದು? ಮತ್ತೆ ಮಣ್ಣಿಗೆ ಬಂದ ಮೇಲೆ ಆ ಕಾಲ ಗರ್ಭದಲ್ಲಿ ಕಾಡುತ್ತಿದ್ದ ಪ್ರಶ್ನೆಗಳನ್ನೇ ಮೆಲುಕು ಹಾಕ್ತಾ ಇದ್ದೀನಿ. (ಉಸಿರೆಳೆದುಕೊಂಡು) "ಆರಂಕುಶವಿಟ್ಟೊಡಂ ನೆನೆವುದೆನ್ನಮನಂ ಬನವಾಸಿ ದೇಶಮಂ".

(ಮೇಳ ಹಾಡುತ್ತದೆ)

"ತೆಂಕಣ ಗಾಳಿ ಸೋಂಕಿದೊಡಂ ಒಳ್ ನುಡಿಗೇಳ್ದೊಡಂ
ಇಂಪಾನಾಳ್ದಗೇಯಂ ಕಿವಿಎಕ್ಕೊಡಂ ಬಿರಿದ ಮಲ್ಲಿಗೆಗಂಡೊಡಂ
ಆದ ಕೆಂದು ಆಲಂಪಂ ಗೆಡೆಗೊಂಡೊಡಂ ಮಧುಮಹೋತ್ಸವ
ಮಾದೊಡಂ
ಏನೆಂಬೆಂ ಎನ್ನ ಮನಂ ಬನವಾಸಿ ದೇಶಮಂ ಆರಂಕುಸ
ಮಿಟ್ಟೊಡಂ ನೆನೆವುದು"

ಈ ಗಾಳಿಯಲ್ಲಿನ ಪರಿಮಳಗಳು ಆ ನನ್ನ ಪ್ರೇಯಸಿಯರ ಮೈಯ್ಯಿಂದ ಇದೀಗ ತಾನೆ ಉಕ್ಕುವ ಗಮಲಿನಂತಿವೆ. ಥೂ! ಸಾವಿರ ವರ್ಷವಾದ್ರೂ ಈ ವಾಸನೆಗಳು ಇನ್ನೂ ಹಾಗೇ ಇವೆ.

(ಅಷ್ಟರಲ್ಲಿ ಬಸದಿಯ ಮೇಲೆ ಬೆಳಕು ಬೀಳುತ್ತದೆ. ಅಲ್ಲೊಬ್ಬ ಯುವಕ ಪಂಪನನ್ನ ಗಮನಿಸಿ ಧುತ್ತನೆ ಧುಮುಕುತ್ತಾನೆ. ಪಂಪ ಗಾಬರಿಗೊಂಡು ಶಾಸನದ ಕಡೆ ಅವಸರದಲ್ಲಿ ಹೋಗಬೇಕೆನ್ನುವಾಗ)

ಧನುರ್ಧಾರಿ: ನಿಲ್ಲಿ ಒಡೆಯ ನಿಲ್ಲಿ! ಅಕ್ಷರಗಳಲ್ಲಿ ಇಷ್ಟು ದಿನ ಅಡಗಿದ್ದು ಸಾಕು. ಒಂದಲ್ಲ ಒಂದು ದಿನ ನೀವು ಭೂತದಿಂದ ವರ್ತಮಾನಕ್ಕೆ ಬಂದೇ ಬರುತ್ತೀರೆಂದು ಪ್ರತಿ ಹಗಲನ್ನ, ಇರುಳನ್ನ, ನನ್ನ ಕಣ್ಣುಗಳಲ್ಲಿ ತುಂಬಿಕೊಂಡೇ ಕಾದಿದ್ದೇನೆ. ಹುಟ್ಟಿದ ಮಣ್ಣಿಗೆ ಉಸಿರಾಡಿದ ಗಾಳಿಗೆ ಹಿಂತಿರುಗದ ಕವಿಯಾರು? ಸಧ್ಯ ಸಾವಿರ ವರ್ಷಗಳ ಮೇಲಾದ್ರೂ ನೀವು ಬಂದ್ರಲ್ಲ. ಅಂತೂ ನನ್ನ ನಿರೀಕ್ಷೆ ಹುಸು ಹೋಗಲಿಲ್ಲ.

ಪಂಪ : ಅಯ್ಯ ನೀನು ಯಾರು? ಮೈತುಂಬ ಗಾಯಗಳು, ಬಿಲ್ಲು ಕೂಡಾ ಮುರಿದು ಹೋಗಿದೆ, ತುಂಬಾ ನೊಂದ ಹಾಗೆ ಕಾಣುತ್ತೀಯಾ?

ಧನುರ್ಧಾರಿ: ನಿಮಗೂ ನನ್ನ ಗುರುತು ಸಿಗಲಿಲ್ಲವೆ? (ನಕ್ಕು) ಹೆತ್ತವರಿಗೆ ಕೂಸು

ತನ್ನ ಗುರುತು ಹೇಳಿಕೊಳ್ಳುವುದಕ್ಕಿಂತ ದೌರ್ಭಾಗ್ಯ ಉಂಟೆ ಲೋಕದಲ್ಲಿ? ಗುರುತಿಲ್ಲದಿರುವುದೇ ನನ್ನ ಗುರುತು ಸ್ವಾಮಿ.

ಪಂಪ : ಕ್ಷಮಿಸಪ್ಪ, ನಿನ್ನನ್ನು ಘಾಸಿ ಮಾಡಬೇಕನ್ನೋದು ನನ್ನ ಉದ್ದೇಶವಲ್ಲ. ಸಾವಿರ ವರ್ಷಗಳಾಯ್ತು ನೋಡು, ಕಾಲನೇಮಿಯೇ ಎಷ್ಟೋ ಗುರುತು ಕಳ್ಕೊಂಡಿರಬೇಕು. ಹಾಗಾಗಿ ನೆನಪು ಹತ್ತಿಲ್ಲ.

ಧನುರ್ಧಾರಿ: ನನ್ಗೆ ಗೊತ್ತಿರೋ ಹಾಗೆ ನಾನೊಬ್ಬ ತಬ್ಬಲಿ. ನನಗೆ ಪ್ರಜ್ಞೆ ಬಂದಾಗ, ಕೆಳಜಾತಿಯವನು. ನೋಡಿ ನನ್ನ ಮೈಮೇಲಿನ ಗಾಯಗಳು ಇವೆಲ್ಲಾ ಯುದ್ಧದಲ್ಲಾದ ಗಾಯಗಳಲ್ಲ. ಮನುಷ್ಯ ಮಾಡಿರೋ ಗಾಯಗಳು, ಕೂಡದಂಗೆ ಮಾಯದಂಗೆ, ರಕ್ತ ಹರಿಸ್ತಾನೇ ಬಂದಿವೆ. ಹುಟ್ಟಿದಾಗ ಹೆತ್ತವರಿಗೆ ಅನ್ಯನಾದೆ, ಬೆಳೆದಾಗ ಇಡಿ ಪಂಚಭೂತಗಳಿಗೆ ಅನ್ಯನಾದೆ. ನನ್ನ ನೆನಪು ನೆಟ್ಟುಣ್ಣು ಬಿದ್ದು ಹೋಗಿದೆ.

ಪಂಪ : (ಸ್ವಗತ) ಇದೇನಿದು! ಈ ಮುಖ ಈ ಮೈಕಟ್ಟು, ಮುಖದಲ್ಲಿ ಧುಮಗಡ್ತಿರೋ ಆ ಅನಾದಿ ನೋವುಗಳು, ನನಗೆ ತೀರ ತೀರ ಹತ್ತಿರದವು ಅಂತ ಅನ್ನಿಸ್ತದಲ್ಲ! ಆದ್ರೂ ಸ್ಪಷ್ಟ ಆಗ್ತಿಲ್ಲ. ಆ ಮೈ ಮೇಲಿನ ಗಾಯಗಳಿಂದ ಬರೋ ವಾಸನೆಗಳನ್ನ ನೋಡಿದ್ರೆ ಅವು ನನ್ನ ಮೈಯಿಂದ್ಲೇ ಬಂದಂಗನ್ನಿಸ್ತದೆ. ಯಾರು? ಅರಿಕೇಸರಿ? ಅಲ್ಲ.. ಅಲ್ಲ ಅವನಲ್ಲ.

(ಮೇಳ ಹಾಡುತ್ತದೆ)

ಅಣ್ಣಾ ಭಾರತದೊಳ್ ಇಂಪೆರಾರುಮಂ ನೆನೆಯದಿರ! ಒಂದೇ ಚಿತ್ತದಿಂದ ನೆನವೊಡೆ! ಕರ್ಣನ ನೆನೆಯ! ಕರ್ಣನೊಳ ಆರ್ ದೊರೆ, ಕರ್ಣನ ಏರು ಕರ್ಣನ ಕಡು ನನ್ನಿ! ಕರ್ಣನಳವ! ಅಂಕದ ಕರ್ಣನ ಚಾಗಂ! ಎಂದು ಕರ್ಣನ ಪಡೆ ಮಾತಿನೊಳ ಪುರಿದು ಭಾರತಂ ಕರ್ಣರಸಾಯನಮಲ್ತೆ. ಓಹ್! ಕರ್ಣ

(ಪಂಪ ಕರ್ಣನನ್ನು ಅಪ್ಪಿಕೊಳ್ಳಲು ಓಡಿಬರುತ್ತಾನೆ. ಕರ್ಣ ತಪ್ಪಿಸಿಕೊಂಡು ಓಡುತ್ತಾನೆ. ನಂತರದಲ್ಲಿ ಕರ್ಣನನ್ನು ಹಿಡಿಯುತ್ತಾನೆ.)

ಓ! ನನ್ನ ಪ್ರಾಣವೇ. ಪುರಾಣದ ಛಂಧಸ್ಸನ್ನು ಮುರಿದು ಬಂದೆಯೇನೋ, ನನ್ನ ಪಾಲಿನ ಭಾಗ್ಯ ನೀನು, ನೀನು ಈ ಮಣ್ಣಿನ ಬೆಳಕು, ಮನುಕುಲದ ಕನಸು. ಸೃಷ್ಟಿಸಿದವನನ್ನೇ ನಿನ್ನಂತೆ ಗೆಲ್ದವರುಂಟೆ? ನೀನು ನನ್ನ

ಮಂಜು ಕಣ್ಣಿನ ಮುಂದಿರೋದು ನಿಜವೇ? ಅಂದ ಹಾಗೆ ಇದೇಕೆ ಇಲ್ಲಿ ತಬ್ಬಲಿಯಾಗಿ ಈ ಪಾಳು ಬಸದಿಯಲ್ಲಿ? ನಿನ್ನ ಗೆಳೆಯರೊಂದಿಗೆ ಸ್ವರ್ಗದಲ್ಲಿ ಸುಖವಾಗಿರಬಹುದಿತ್ತಲ್ಲ.

ಕರ್ಣ : ಒಡೆಯಾ! ಇಹದ ಪ್ರಶ್ನೆಗಳಿಗೆ ಪರದಲ್ಲಿ ಉತ್ತರಗಳುಂಟೆ? ಈ ಗಾಯಗಳು ಅಲ್ಲಿನ ದಿವ್ಯ ಔಷಧಿಗಳಿಂದಲೂ ವಾಸಿಯಾಗಲಿಲ್ಲ. ಹಗಲಿಲ್ಲ ರಾತ್ರಿಯಿಲ್ಲ, ನೆನೆಪುಗಳಿಲ್ಲದ ಆ ಸ್ವರ್ಗದಲ್ಲಿ ನಾನು ಒಬ್ಬಂಟಿಯಂತ ಅನ್ನಿಸೋಕೆ ಶುರುವಾಯ್ತು. ನನ್ನ ಗಾಯಗಳಿಗೆ ಔಷಧಿ ಮಾಡಬಲ್ಲವರು ನೀವೆಂತ ನಿಮ್ಮ ಹತ್ರ ಬಂದುಬಿಟ್ಟೆ. ಆದರೆ ನೀವು ಅಕ್ಷರಗಳಲ್ಲಿ ಬಂಧಿಯಾಗಿದ್ರಿ. ಒಂದಲ್ಲ ಒಂದು ದಿನ ಈ ಬಂಧನದಿಂದ ಆಚೆ ಬರುತ್ತೀರಂತ ನಿಮ್ಮ ಬರುವಿಕೆಯ ದಾರಿಗೆ ಅಡ್ಡಲಾಗಿ ಇಲ್ಲೇ ಬಿದ್ದಿದ್ದೆ. ನನ್ನಂತವನಿಗೂ ಅದೃಷ್ಟದಲ್ಲಿ ನಂಬಿಕೆ ಹುಟ್ಟೋ ಹಾಗೆ ನೀವು ಬಂದ್ಬಿಟ್ರಲ್ಲ. ಸಾವಿರ ವರ್ಷಗಳಿಂದ ಮಾಯದ ಈ ಗಾಯಗಳಿಗೆ ಮದ್ದು ಹುಡುಕೀ, ಹುಡುಕೀ, ನಿಮ್ಮ ದಾರಿ ಕಾಯುತ್ತಿದ್ದೇನೆ. ನನ್ನನ್ನ ಈ ಬಾಧೆಗಳಿಂದ ಕಾಪಾಡಿ.

ಪಂಪ : ನಾನೂ ಕೂಡಾ ಇಂಥದೇ ಪ್ರಶ್ನೆಗಳನ್ನ ಮನಸ್ಸಿನಲ್ಲಿ ತುಂಬಿಕೊಂಡು ಒದ್ದಾಡುತ್ತಿದ್ದೇನೆ ಕರ್ಣ. ನಿನಗಾದ್ರೆ ನನ್ನಲ್ಲಾದ್ರೂ ಪರಿಹಾರ ಸಿಕ್ಕಬಹುದೆಂಬ ನಂಬಿಕೆ ವಿಶ್ವಾಸವಿದೆ. ಆದ್ರೆ ನಂದು ಅದಕಿಂತ ದುರಂತದ್ದು.

ಕರ್ಣ : ಒಡೆಯಾ! ರಾಧೇಯನ ಮಗನಾಗಿದ್ದೆ, ಅದೇ ನಿಜ ಅಂದ್ಕೊಂಡೆ. ಪರಶುರಾಮನ ಶಿಷ್ಯನಾದೆ. ಆಗ ಅದನ್ನ ನಿಜಾ ಅಂದ್ಕೊಂಡೆ. ಧುರ್ಯೋದನನ ಪ್ರಾಣ ಸ್ನೇಹಿತನಾದೆ. ಅದೇ ನನ್ನ ಸರ್ವಸ್ವ ಅಂತ ಭಾವಿಸಿದೆ. ಹೀಗೆ ಅಂದಂದಿಗೆ ನಂಬಿದ ನಿಜದ ಮಟ್ಟಿಲುಗಳನ್ನ ಏರುತ್ತಾ ಏರುತ್ತಾ, ಸುಳ್ಳಿನ ಬಯಲಿಗೆ ಬಂದು ಬಿಟ್ಟಿದ್ದೆ. ನಿಧಾನವಾಗಿ ಕೇಳಿಸಿಕೊಂಡೆ, ನನ್ನ ಕಿವಿಗಳಲ್ಲಿ ಯಾರೋ ಕುಂತು ಮಾತನಾಡುತ್ತಿದ್ದಾರೆ, ಹಂಗಿಸ್ತಾ ಇದ್ದಾರೆಂತ ಅನ್ನಿಸ್ತು. ಮತ್ತೂ ಕೇಳಿಸಿಕೊಂಡೆ, ಒಳಗಿಂದ ಕೇಳಿಸಿದ್ದು ಮಾತಲ್ಲ, ನಂಬಿಕೆಯ ನನ್ನ ಬೆನ್ನು ಸರದೊಳಗೆ, ಗುಂಯ್ ಗುಟ್ಟುವ ದುಂಬಿ ಶಬ್ದ. ಪರುಶರಾಮರ ಆಶ್ರಮದಲ್ಲಿ ತೊಡೆ ಹೊಕ್ಕ ದುಂಬಿ ಹುಳು ಮರಿ ಮಾಡಿ ರೋಮ ರೋಮಗಳಲ್ಲಿ ಟೆಂಕಿ ನಿಂತು ಗುಂಯ್ ಗುಡುತ್ತಿದೆ. ಈ ಬಾಧೆಯನ್ನು ತಡೆಯಲಾರೆ. ಈ ನೆನಪುಗಳಿಂದ ನನ್ನನ್ನು ಮುಕ್ತಿಗೊಳಿಸಿ.

ಪಂಪ : ನೀನು ಸೂಕ್ಷ್ಮಮತಿ ಕರ್ಣ, ನಿನ್ನ ನೆನಪು ಮಾತ್ರ ಪಾಶಾಣದ ಹಾಗೆ ಇನ್ನೂ ಕಠಿಣವಾಗಿದೆ. ನಾವು ಸಾವಿನಿಂದ ಪಾರಾಗಬಹುದು ಆದ್ರೆ ನೆನೆಪಿನಿಂದ ಪಾರಾಗೋದಕ್ಕೆ ಸಾಧ್ಯವಿಲ್ಲ ನೋಡು, ಸಾವಿರ ವರ್ಷ ಆದ್ರೂ ಮತ್ತೆ ಈ ಮಣ್ಣು, ಗಾಳಿಗಳನ್ನು ಕಂಡು ಕಾಲವನ್ನೇ ಲಂಘಿಸಿ ನಾನು ನೋಡ್ತಾ ಇದ್ದೀನಿ. ಈ ನೆನೆಪು ಇಲ್ಲದೆ ಹೋಗಿದ್ರೆ, ನೀನು ನನ್ನನ್ನ ನಾನು ನಿನ್ನನ್ನ, ಗುರುತು ಹಿಡಿಯೋಕೆ ಸಾಧ್ಯ ಆಗ್ತಾ ಇರಲಿಲ್ಲ, ಏನಂತೀಯ!

ಕರ್ಣ : ಮೊದಲಿಗೆ ನನ್ನ ಸೃಷ್ಠಿ ಮಾಡಿದ ವ್ಯಾಸ ಮಹರ್ಷಿಗಳು, ಪೂರ್ವ ಜನ್ಮದ ಕರ್ಮ, ಗುಲಾಮನಾಗು ಅಂತ ಹೇಳಿದ್ರಿಂದ ನನಗೆ ಅಂಥ ದುಃಖವಾಗಿರಲಿಲ್ಲ, ನಂತರದ ಕವಿಗಳು, ವ್ಯಾಸರ ಮಾತನ್ನೇ ಸಮರ್ಥನೆ ಮಾಡೋ ಹಂಗೆ ನನ್ನನ್ನು ಮರು ಚಿತ್ರ ಮಾಡಿದ್ರು, ಆಗ಼್ೂ ನನಗೆ ಬೇಸರವಾಗಿರ್ಲಿಲ್ಲ. ಆದ್ರೆ, ನೀವು ವಿಕ್ರಮಾರ್ಜುನ ವಿಜಯ ಬರೆದು ನನ್ನ ಶಾಪ ವಿಮೋಚನೆ ಮಾಡಿದ್ರಿ. ನನ್ನನ್ನು ಒಬ್ಬ ಮನುಷ್ಯನನ್ನ ಮಾಡಿದ್ರಿ, ಯೋಚನೆ ಮಾಡೋದನ್ನ ಕಲಿಸಿದ್ರಿ, ಅವತ್ನಿಂದ ಯೋಚನೆಗಳ ಸುಳಿಗಳಲ್ಲಿ ಸಿಕ್ಕಿಕೊಂಡಿದ್ದೇನೆ. ದಯಮಾಡಿ ಸಹಾಯ ಮಾಡಿ.

ಪಂಪ : ನಮ್ಮದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬ, ನಮ್ಮಪ್ಪ ಜೈನ ಧರ್ಮಕ್ಕೆ ಮತಾಂತರಗೊಂಡಾಗ ನಾನಿನ್ನೂ ಚಿಕ್ಕ ಹುಡುಗ, ತಲೆ ತಲಾಂತರದಿಂದ ಬಾಳಿ ಬದುಕಿದ ಮಹಾ ಓಜರ ಮನೆತನ ನಮ್ಮದು. ನಮ್ಮ ಪೂರ್ವಿಕರಾದ ಮಾಧವ ಸೋಮಯಾಜಿ, ಅಭಿಮಾನಚಂದ್ರ, ಇವರೆಲ್ಲರೂ ವೈದಿಕ ಧರ್ಮದ ಸಾರವನ್ನೆಲ್ಲಾ ಹಿಂಡಿಕೊಂಡಿದ್ದ ಜ್ಞಾನಿಗಳಾಗಿದ್ರು, ಆದ್ರೆ ನಮ್ಮ ತಂದೆ ಯಾಕೋ ಜೈನ ಮತಕ್ಕೆ ಒಲಿದು, ಮತಾಂತರಗೊಂಡ ಮೇಲೆ, ನಮ್ಮ ನೆಲದಲ್ಲೇ, ನಮ್ಮ ಊರಿನಲ್ಲೇ ನಾವು ಅನ್ಯರಾಗೋದ್ವಿ, ನಮ್ಮ ಸುತ್ತ ಇದ್ದಂತ ಜನ, ವಸ್ತು ಎಲ್ಲಾ ಅಪರಿಚಿತ ಅಂತ ಅನ್ನಿಸ್ತು. ಅಂತಹ ತಬ್ಬಲಿ ಘಳಿಗೆಯಲ್ಲಿ ನಮ್ಮಪ್ಪ ಹೇಳ್ತಿದ್ದ ಮಹಾಭಾರತದ ಕಥೆಯನ್ನ ಕೇಳ್ತಾ ಕೇಳ್ತಾ ನೀನು ನನ್ನೊಳಗೆ ಬೆಳೆಯುತ್ತಾ ಹೋದೆ. ಆಮೇಲೆ ನಾನು ಒಂಟಿ ಆಗ಼್ೇ ಇಲ್ಲ. ಅವತ್ತಿನಿಂದ ನಾನು ಬೆಳೆದಂಗೆ ನನ್ನೊಳಗೆ ನೀನೂ ಬೆಳೀತಾ ಬಂದೆ. ಹಾಂ.. ಭಾರತಾನ ಓದುವಾಗ್ಲೆಲ್ಲ, ನಮ್ಮ ಪೂರ್ವ ಕವಿಗಳು ನಿನಗೆ ಮಾಡಿರುವ ಕುಂದುಗಳನ್ನ ಸರಿ ಮಾಡ್ಬೇಕೂಂತ ಅನ್ನಿಸ್ತಿತ್ತು.

ಬದುಕು ಅರಿಕೇಸರಿ ಗೆಳೆತನವನ್ನ ಉಡುಗೊರೆಯಾಗಿ ನೀಡ್ತು. ಅವನ ಸ್ನೇಹವೂ ನಿನ್ನಂಗೆ ನನ್ನನ್ನ ಕಾಡಿಸ್ತು. ಅದಕ್ಕೆ ನಿನ್ನನ್ನ ಅವನಿಗೆ ಸಮೀಕರಿಸಿ ಮಹಾಭಾರತನ್ನು ಪುನರ್ ರಚನೆ ಮಾಡ್ಬೇಕೂಂತ-ಆಸೆ ಪಟ್ಟೆ, ಅಷ್ಟರಲ್ಲಿ, ಅವನು ಬದಲಾಗಿದ್ದ. ಅವನಿಗೆ ಸ್ನೇಹಕ್ಕಿಂತ ಚಕ್ರಾಧಿಪತ್ಯದ ಕನಸು ದೊಡ್ಡದಾಯ್ತು. ಅವ್ನು ನಿನ್ನ ಬದಲು ಅರ್ಜುನನ ಜೊತೆ ಸಮೀಕರಣವನ್ನ ಬಯಸಿದ. ನನಗೆ ನಿರಾಶೆಯಾಯ್ತು, ಆದ್ರೂ ಬರೆದೆ ನನ್ನ ನೋವು ಅವಮಾನಗಳನ್ನೆಲ್ಲ ಕನ್ನಡಿ ಮಾಡಿಕೊಂಡು ನಿನ್ನನ್ನ ಚಿತ್ರಿಸ್ದೆ, ಇದು ತಪ್ಪೂಂತೀಯ!

ಕರ್ಣ : ನಿಮ್ಮ ಲೇಖನಿಯಿಂದ ಹೆಚ್ಚು ಮಸಿಯನ್ನು ನಾನು ಕುಡ್ಕೊಂಡೆ ಅನ್ನೋದು ಸುಳ್ಳಲ್ಲ. ನನ್ನ ಬಗ್ಗೆ ಉಳಿದೆಲ್ಲ ಕವಿಗಳಿಗಿಂತ ನೀವು ತೋರಿದ ಕಾಳಜಿ, ಕಕ್ಕಲಾತಿ ಹಿರಿದು ಅನ್ನೋದರ ಬಗ್ಗೆ ನನಗೆ ಅನುಮಾನವಿಲ್ಲ. ಆದ್ರೆ ನಿರ್ಣಾಯಕವಾದ ಘಟ್ಟಗಳಲ್ಲಿ ಅವಮಾನಗಳಿಂದ ನೀವು ಕೂಡಾ ನನ್ನನ್ನ ಪಾರು ಮಾಡ್ಲಿಲ್ಲ ಅನ್ನೋದು ಹಗಲೂ ರಾತ್ರಿ ನನ್ನನ್ನ ಕಾಡಿದ ಪ್ರಶ್ನೆ.

ಪಂಪ : (ಸ್ವಗತ) ಎಂಥ ಪರೀಕ್ಷೆಯಿದು? ನನ್ನ ಪಾತ್ರವೇ ನನ್ನನ್ನ ಗಲ್ಲು ಪಟ್ಟಿ ಹಿಡ್ಕೊಂಡು ನ್ಯಾಯ ಕೇಳ್ತಿದೆ. (ಕರ್ಣನ ಉದ್ದೇಶಿಸಿ) ಎಂಥ ಮಾತು ಕರ್ಣ, ನೀನು ನನ್ನ ಕನ್ನಡಿ. ನಿನಗೆ ನಾನು ಕೇಡೆಣಿಸುವುದೆ? ಅಲಂಕಾರ ಛಂದಸ್ಸುಗಳಲ್ಲಿ ನಿನ್ನ ಅವಮಾನಗಳನ್ನ ಮುಚ್ಚಿ ಹಾಕ್ದೆ ಅಂತ ಅನುಮಾನವೆ?

ಕರ್ಣ : ಕ್ಷಮಿಸ್ಬೇಕು. ತಾವು ಮಹಾ ಕವಿಗಳು, ಪ್ರತಿ ಸೃಷ್ಟಿಕರ್ತರು. ಕರ್ಣಾರ್ಜುನರ ನಡುವೆ ಹಗೆಯನ್ನ ಹೇಗೋ ಹಾಗೆ ಧುರ್ಯೋಧನ- ಕರ್ಣರ ನಡುವಿನ ಸ್ನೇಹವನ್ನ ಕಂಡರಿಸಿದ ಚಿತ್ರಕರು ನೀವು. ನೀವೇ ಬಣ್ಣ ತುಂಬಿದ ಪಾತ್ರಗಳನ್ನೊಮ್ಮೆ ನೋಡಿ, ನ್ಯಾಯ ಯಾವುದೂಂತ ಹೇಳಿ!

ಪಂಪ : ತೆರೆಯ ಹಿಂದಿದ್ದು, ಪಾತ್ರಗಳನ್ನ ರಂಗಕ್ಕೆ ಬಿಡುವುದು ಕವಿಯ ಕ್ರಮ. ನಿನ್ನ ಅನುಗ್ರಹದಿಂದ ರಂಗದ ಮುಂಭಾಗದಲ್ಲಿ ಕೂತು ತನ್ನ ಪಾತ್ರಗಳಿಗೆ ತಾನೇ ಪ್ರೇಕ್ಷಕನಾಗುವ ಭಾಗ್ಯ ಇಂದು ನನ್ನದಾಯ್ತು.

●

ದೃಶ್ಯ – ೫

[ಸಂಭ್ರಮ ಮತ್ತು ಸಡಗರಗಳು ರಂಗವನ್ನು ತುಂಬಿ ಕೊಂಡಿರುತ್ತವೆ. ದ್ರುಪದ ರಾಜನ ಆಸ್ಥಾನ. ದ್ರೌಪದಿಯನ್ನು ಮೆರವಣಿಗೆಯಲ್ಲಿ ಸ್ವಯಂವರಕ್ಕೆ ಕರೆ ತರುತ್ತಾರೆ. ವೇದಿಕೆಯ ಮತ್ತೊಂದು ಬದಿಯಲ್ಲಿ, ಯಂತ್ರದ ಮೀನಿನ ಆಕೃತಿಯಿದೆ]

ದ್ರುಪದ : (ಸಭೆಗೆ ವಂದಿಸಿ) ನನ್ನ ಆಮಂತ್ರಣವನ್ನ ಮನ್ನಿಸಿ ಬಂದಿರುವ ರಾಜಪುತ್ರರೆ, ತಮಗೆ ಸ್ವಾಗತ. ಈ ಸುಕುಮಾರಿಯನ್ನ ಕೈ ಹಿಡಿಯುವ ಇಚ್ಛೆಯುಳ್ಳ ವೀರರಿಗೆ ಇದೋ ಇಲ್ಲಿದೆ ವೀರ ಪಣ. ಈ ದಿವ್ಯ ಧನಸ್ಸನ್ನು ಏರಿಸಿ, ಆಕಾಶದಲ್ಲಿ ಅಲ್ಲಾಡಿ ಹೊಳೆಯುತ್ತಿರುವ ಮೀನಿನ ಪ್ರತಿಬಿಂಬವನ್ನ ಎಣ್ಣೆಯಲ್ಲಿ ನೋಡಿ, ಬಾಣವನ್ನ ಪ್ರಯೋಗಿಸಿ, ಮೀನನ್ನ ಛೇದಿಸಿದವನಿಗೆ ಈ ಸ್ತ್ರೀ ರತ್ನದ ಉಡುಗೊರೆ. (ಮಂತ್ರಿಗೆ ಮುಂದುವರೆಸುವಂತೆ ಸನ್ನೆ ಮಾಡುತ್ತಾನೆ)

ಮಹಾಮಂತ್ರಿ: (ಎದ್ದು ಮುಂಭಾಗಕ್ಕೆ ಬಂದು, ರಾಜನಿಗೆ, ಸಭೆಗೆ ವಂದಿಸಿ) ಈ ಸ್ವಯಂವರದ ಮೊದಲನೇ ನಿಯಮ ಕ್ಷತ್ರಿಯ ರಾಜ ಪುತ್ರರು, ಮಾಂಡಲೀಕರಾದ ಸಾಮಂತರು ಹಾಗು ಸಮರ ವೀರರಾದ ಬ್ರಾಹ್ಮಣ ಕುಮಾರರು ಮಾತ್ರ, ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯ ಎರಡನೇ ನಿಯಮ, ಕ್ಷತ್ರಿಯರು ಈ ಪಣವನ್ನು ಗೆಲ್ಲದಿದ್ದೊಡೆ ಸಾಮಂತರಿಗೆ ಅವಕಾಶ. ಸಾಮಂತರೂ ವಿಫಲರಾದರೆ, ಅಂತಿಮವಾಗಿ ಬ್ರಾಹ್ಮಣ ಕುಮಾರರಿಗೆ ಅವಕಾಶ. ಇನ್ನು ಮೂರನೇ ನಿಯಮ ಕೊಪ್ಪರಿಗೆಯಲ್ಲಿ ಕಾಣುವ ಪ್ರತಿಬಿಂಬವನ್ನು ನೋಡುತ್ತ ಆಕಾಶದಲ್ಲಿ ಚಕ್ರಕಾರವಾಗಿ ಸುತ್ತುವ ಮೀನನ್ನು ಛೇದಿಬೇಕು ಕ್ಷತ್ರಿಯರಿಗಾದರರೆ ಐದು ಬಾಣಗಳು, ಸಾಮರಂತರಿಗೆ ಮೂರು ಬಾಣಗಳು, ಬ್ರಾಹ್ಮಣರಿಗೆ ಒಂದು ಬಾಣವನ್ನು ಪ್ರಯೋಗಿಸುವ ಅವಕಾಶವನ್ನು ಕಟ್ಟು ನಿಟ್ಟಾಗಿ ವಿಧಿಸಲಾಗಿದೆ. ನಿಯಮಗಳನ್ನು ಉಲ್ಲಂಘಿಸಿದ ಸ್ಪರ್ಧಿಯನ್ನ ಪಣದಿಂದ ತಕ್ಷಣವೇ ಬಹಿಷ್ಕರಿಸಲಾಗುವುದು. (ಸಭೆಗೆ ನಮಸ್ಕರಿಸಿ ಸ್ವಸ್ಥಾನಕ್ಕೆ ಮರಳುವನು)

ದ್ರುಪದ : ಇನ್ನು ಸಭೆ ಅನುಮತಿ ನೀಡಿದರೆ ಪರೀಕ್ಷೆ ಆರಂಭವಾಗಬಹುದು.

ಪಂಪ : (ನೇರವಾಗಿ ಸ್ವಯಂವರ ಪ್ರವೇಶಿಸುವ ಪಂಪ ಕರ್ಣನನ್ನು ಉದ್ದೇಶಿಸಿ ಮಾತನಾಡುವಾಗ, ಮಿಕ್ಕೆಲ್ಲಾ ಪಾತ್ರಗಳು ಫ್ರೀಜ್ ಆಗಿರುತ್ತವೆ) ಇದರಲ್ಲಿ ಏನಿದೆ ವಿಶೇಷ ಕರ್ಣ. ದ್ರೌಪದಿಯನ್ನ ವರಿಸಬೇಕೆಂಬ ಆಸೆಯಿಂದ ಬಂದ ವೀರಾದಿ ವೀರರು ಶೂರಾಧಿ-ಶೂರರು, ಧನಸ್ಸನ್ನು ಎತ್ತಲಾಗದೆ, ಮೀನನ್ನ ಭೇದಿಸಲಾಗದೆ, ಸೋತು ಹೋದರಲ್ಲ. ದುರ್ಯೋಧನನೂ ಸಹ, ಮುಂದೆ ಕದನ ತ್ರಿನೇತ್ರನಾದ ಅರ್ಜುನ ಯಂತ್ರವನ್ನ ಬೇಧಿಸಿ ದ್ರೌಪದಿಯನ್ನ ಗೆದ್ದುಕೊಂಡಿದ್ದು ಎಲ್ಲರಿಗೂ ಗೊತ್ತಿರುವುದು ತಾನೆ?

ಕರ್ಣ : ಇಷ್ಟೇ ಆಗಿದ್ರೆ, ಈ ಸಂದರ್ಭದ ನಿಮ್ಮ ಸೃಷ್ಟಿ ಕ್ರಿಯೆ ಬಗ್ಗೆ ನನ್ನ ತಕರಾರೇ ಇರುತ್ತಿರಲಿಲ್ಲ ಕವಿಗಳೆ. ಆದರೆ.. (ನಿರ್ಗಮನ)

ಪಂಪ : ಕರ್ಣ ಕರ್ಣ.. (ಹಿಂಬಾಲಿಸುತ್ತಾನೆ. ದೃಶ್ಯ ಮುಂದುವರೆಯುತ್ತದೆ)

(ಸಭೆಯಲ್ಲಿ ಕೋಲಾಹಲ, ಧನಸ್ಸನ್ನು ಎತ್ತಲು ಕೌರವ ಬರುತ್ತಾನೆ, ಸಭೆ ಜೈಕಾರವನ್ನು ಕಿವಿಗಡಚಿಕ್ಕುವ ಹಾಗೆ ಕೂಗುತ್ತದೆ. ಸುಯೋಧನ ದ್ರೌಪದಿಯನ್ನೊಮ್ಮೆ ದಿಟ್ಟಿಸುತ್ತಾನೆ. ದ್ರೌಪದಿ ಅವನ ಕಣ್ ತಪ್ಪಿಸಿಕೊಂಡು ನೆಲ ನೋಡುತ್ತಾಳೆ. ಮೀಸೆ ಹುರಿ ಮಾಡುತ್ತಾ ಕೌರವ, ಯಂತ್ರ ಸಮೀಪ ಬರುತ್ತಾನೆ. ಗುರು ಬಲರಾಮ ದೇವರಿಗೆ ನಮಸ್ಕರಿಸುತ್ತಾನೆ. ಧನಸ್ಸನ್ನ ಎತ್ತಲು ಪ್ರಯತ್ನಸಿ, ಆಯ ತಪ್ಪಿ ನೆಲದ ಮೇಲೆ ಬೀಳುತ್ತಾನೆ, ಅವನ ಸರ್ಪ ಕಿರೀಟ ನೆಲೆದ ಪಾಲಾಗುತ್ತದೆ. ಸಭೆ ನಗು ಕಚ್ಚಿ ಹಿಡಿದರೂ ದ್ರೌಪದಿ ಮಾತ್ರ ಘೊಳ್ಳೆಂದು ನಕ್ಕು ಬಿಡುತ್ತಾಳೆ. ಅವಮಾನದಿಂದ ದುರುಗುಟ್ಟ ಸುಯೋಧನನ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ದ್ರೌಪದಿ ಸಖಿಯ ಹಿಂದೆ ಸರಿಯುತ್ತಾಳೆ)

ಕರ್ಣ : ಗೆಳೆಯಾ, (ಆತುರದಿಂದ ಓಡಿ ಬಂದು ದುರ್ಯೋಧನನ್ನು ಅಪ್ಪಿ ಹಿಡಿಯುತ್ತಾನೆ)

ಬಲರಾಮ : ಈ ಅವಮಾನ ತಾಳಲಾರೆ ಕೃಷ್ಣ, ನಾನೇ ಈ ಧನಸ್ಸನ್ನ ಎಳೆದು ಕುಟ್ಟಿ ಪುಡಿ ಪುಡಿ ಮಾಡಿಬಿಡುತ್ತೇನೆ. (ಕೋಪದಿಂದ ಮೇಲೇಳುತ್ತಾನೆ)

ಕೃಷ್ಣ : ಅಣ್ಣಾ ನಿನಗೆ ಆತುರ ಹಿರಿದು, ದ್ರೌಪದಿ ನಮಗೆ ವರಸೆಯಲ್ಲಿ ತಂಗಿಯಲ್ಲವೆ, ಸಾಲಾವಳಿ ಕೂಡುವುದಿಲ್ಲ. ನೀನು ಈ ಕಾರ್ಯಕ್ಕೆ ಕೈ ಹಾಕಿದರೆ ಲೋಕ ನಿನ್ನನ್ನ ಸ್ತ್ರೀ ಲೋಭಿಯೆಂದು ಹಿಯಾಳಿಸುವುದಿಲ್ಲವೆ? ಬಾ ಕುಳಿತುಕೋ.

ಮಂತ್ರಿ : ಮಹಾಶಯರೇ, ರಾಜ ಪುತ್ರರ ಸರದಿ ಮುಗಿಯಿತು, ಇನ್ನು ಸಾಮಂತರು ಪ್ರಯತ್ನಿಸಬಹುದು.

ದುರ್ಯೋಧನ : ಮಿತ್ರಾ ಕರ್ಣ, ನನ್ನ ಮನಸ್ಸು ಅವಮಾನದಿಂದ ಕುದಿಯುತ್ತಿದೆ, ನಮ್ಮ ಸ್ನೇಹದ ಮೇಲಾಣೆ, ಈ ಮತ್ಸ್ಯ ಯಂತ್ರವನ್ನು ನೀನು ಬೇಧಿಸಬೇಕು, ಆ ದ್ರೌಪದಿಯ ನಗು ನನ್ನ ಕಿವಿಯಲ್ಲಿ ಮೊಳಗುತ್ತಿದೆ. ಈ ಪಣವನ್ನ ನೀನು ಗೆಲ್ಲಲೇ ಬೇಕು, ಮಣ್ಣು ಪಾಲಾದ ಕುರುವಂಶದ ಪ್ರತಿಷ್ಠೆಯನ್ನ ನೀನು ಕಾಯಬೇಕು.

ಕರ್ಣ : ಪ್ರಭು ಸುಯೋಧನ, ಶಾಂತನಾಗು, ಈ ಮತ್ಸ್ಯ ಯಂತ್ರವನ್ನು ನಾನು ಮುರಿಯತ್ತೇನೆ. ನನ್ನ ಪ್ರಾಣ ಇದಕ್ಕೆ ಪಣ. ನನಗೆ ಅನುಮತಿ ಕೊಡು.

ದುರ್ಯೋಧನ : ನಿನಗೆ ಶುಭವಾಗಲಿ (ಕರ್ಣ ಧನಸ್ಸಿನ ಕಡೆಗೆ ನಡೆಯುತ್ತಾನೆ. ದ್ರೌಪದಿ ಆಸೆಯ ಕಣ್ಣುಗಳಿಂದ ಕರ್ಣನನ್ನು ನೋಡುತ್ತಾಳೆ. ಕರ್ಣ ಮತ್ತು ದ್ರೌಪದಿಯರ ಕಣ್ಣೋಟಗಳು ಒಮ್ಮೆ ಸಂಧಿಸುತ್ತವೆ)

ಕರ್ಣ : ಗುರು ಪರಶುರಾಮ, ಓ ಪಂಚೇಂದ್ರಿಯಗಳೆ, ಓ ದಿವ್ಯ ಧನಸ್ಸೇ, ನನ್ನ ಮೇಲೆ ಕೃಪೆ ಮಾಡಿ, ಕುರುಕುಲವನ್ನಾವರಿಸಿರುವ ಗ್ರಹಣವನ್ನು ಬಿಡಿಸಿ, ಮತ್ತೆ, ಚಂದ್ರ ವಂಶ ಬೆಳಗುವಂತೆ ಹರಸಿ. (ಸಭೆಗೆ, ಧನಸ್ಸಿಗೆ, ಅತ್ಯಂತ ಲೀಲಾಜಾಲವಾಗಿ ಬಿಲ್ಲನ್ನ ಎತ್ತಿ, ತನ್ನನ್ನೇ ದಿಟ್ಟಿಸುತ್ತಿರುವ ದ್ರೌಪದಿಯ ಕಣ್ಣ ಬಿಂಬವನ್ನು ದಿಟ್ಟಿಸುತ್ತ, ಆಕಾಶದಲ್ಲಾಡುವ ಮತ್ಸ್ಯವನ್ನು ಬೇಧಿಸಿ ಬಿಡುತ್ತನೆ. ಹಿನ್ನಲೆಯಾಗಿ ಹಾಡು ಬರುತ್ತಿರುತ್ತದೆ.)

"ಕಣ್ಣ ಆಲಿಯ ಮೇಲೆ
ಹೊಳೆಯಾಡುತ್ತಿದೆ ಕಡಲಲೆಯು,
ಎತ್ತ ನೋಡಿದರತ್ತ ನೀರ ಕನ್ನಡಿ ಕಣ್ಣು
ಮುತ್ತಿಕೊಂಡಿವೆ ಕಣ್ಣ ಬಣ್ಣ ಬಣ್ಣದ ಮೀನು.
ರೆಪ್ಪೆ ಮುಚ್ಚಿದರೂನು ಕಣ್ಣೆನಾಳ ಪಾತಾಳಗಳಿಂದ
ಈಜಿ ಬರುತ್ತಲಿದೆ ಮೀನು"

(ಸಭೆಯಲ್ಲಿ ಕೋಲಾಹಲ, ಕರ್ಣನಿಗೆ ಜೈಕಾರ, ಗೊಂದಲದಲ್ಲಿ ಕೆಲವರು ಜನರ ಮೆಚ್ಚುಗೆಗೆ ಕರ್ಣ ಮೂರ್ಛಿತನಾಗುತ್ತಾನೆ. ದೃಶ್ಯ ಬದಲಾಗುತ್ತದೆ)

ಪಂಪ : ಎಂಥ ಚೋದ್ಯವಿದು, ಕರ್ಣ ಹಾ, ಹೌದೌದು, ನನ್ನ ಮುದಿಗಣ್ಣಿನೊಳಗೆ ಗುಪ್ತವಾಗಿ ಚಿತ್ರಗಳು ಬಾವಿಯ ತಳದಿಂದ ನಿಧಾನವಾಗಿ ಮೇಲೆದ್ದು ಬಂದಂತೆ ತೇಲಿ ತೇಲಿ ಬರುತ್ತಿವೆ.

ಕರ್ಣ : ಅಂದು ನಾನು ಯಂತ್ರ ಬೇಧಿಸಿದ ತಕ್ಷಣ ಸಭೆ ಸಂಭ್ರಮ, ಹರ್ಷ ಉದ್ಘಾರಗಳಿಂದ ತುಂಬಿ ಹೋಗಿತ್ತು. ನಿಜ ಹೇಳುತ್ತೇನೆ ಕವಿಗಳೆ, ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ನನಗೆ ಎಂಥ ಖುಶಿಯಾಗಿತ್ತು ಅಂತೀರ! ಪಂದ್ಯ ಗೆದ್ದಿದ್ದೆ ಅಂತಲ್ಲ, ದ್ರೌಪದಿಯಂತ ಸುಂದರಿ ನನಗೆ ದಕ್ಕಿದ್ಲು ಅಂತಲೂ ಅಲ್ಲ ನನ್ನ ಸುತ್ತಲ ಜನ ಯಾವ ಕೊಂಕೂ ಇಲ್ಲದೆ ನನ್ನನ್ನ ಮೆಚ್ಚಿದ್ರು, ಚಪ್ಪಾಳೆ ತಟ್ಟಿದ್ದರು, ಸೂತ ಪುತ್ರನಾದ ಕರ್ಣನನ್ನ ರಾಜ ಪುತ್ರರ ನಡುವೆ ಯಾವ ಎಗ್ಗೂ ಇಲ್ಲದೆ ಹೊಗಳುತ್ತಿದ್ದಾರೆ. ಅವಮಾನದ ಸೋಂಕಿಲ್ಲದ ಮೆಚ್ಚುಗೆ ಎಂಥ ಸುಂದರ ಅನುಭವ ಅಲ್ಲವೇ? ಆ ಒಂದು ಸುಖದ ಹನಿಯಲ್ಲಿ ನನ್ನ ಇಡೀ ಬದುಕಿನ ಕಹಿಯನ್ನೆಲ್ಲ ಮುಳುಗಿಸಲು ಸಿದ್ದನಿದ್ದೆ. ಆದರೆ ಇದೆಲ್ಲ ಹೇಗಾಯ್ತು? ಸಂತೋಷದಿಂದ ಮೈಮರೆತಿದ್ದ ನಾನು ಎಚ್ಚೆತ್ತಾಗ ಸೋತು ಹೋಗಿದ್ದೆ, – ಹಾರವನ ವೇಷದಲ್ಲಿದ್ದ ಅರ್ಜುನ ದ್ರೌಪದಿಯ ಕೈ ಹಿಡಿಯುತ್ತಿದ್ದ. ನಾನು ನಾಚಿಕೆಯಿಂದ ಕುಗ್ಗಿ ಹೋದೆ. ದುರ್ಯೋಧನನ ಮುಖ ಕೆಂಡದಂತೆ ಅವಮಾನದಿಂದ ಕುದಿಯುತ್ತಿತ್ತು. ತಲೆಯೆತ್ತಿ ಒಮ್ಮೆ ದ್ರೌಪದಿಯನ್ನು ದಿಟ್ಟಿಸುವ ಆಸೆಯಾದರೂ ಕುತ್ತಿಗೆ ಏಕೋ ಮೇಲೇಳಲೇ ಇಲ್ಲ. ಯಾಕೆ ಕವಿಗಳೆ, ಯಾಕೆ? ನನ್ನನ್ನ ವಂಚಿಸಿದ್ದು ಯಾರು? ವಿಧಿಯೆ? ಅದೃಷ್ಟವೇ? ನಿಮ್ಮ ಮರೆವೆ? ನಾನು ಕಾಲಿಟ್ಟ ಕಡೆಗೆಲ್ಲಾ ಏಕೆ ಕಳ್ಳುಂಬಳ್ಳಗಳು ಹುದುಗಿರಬೇಕು. ಈಗಲೂ ಇಷ್ಟು ದಿನವಾದ ಮೇಲೂ ಆ ಕೆಟ್ಟ ಕಡೆ ಘಳಿಗೆಯಲ್ಲಿ ದ್ರೌಪದಿ ಕಣ್ಣಂಚಿನಲ್ಲಿ ಮೂಡಿದ ಆ ಕನಿಕರದ ನೋಟ ನನ್ನ ಎದೆಯಲ್ಲಿ ಮುರಿದ ಮುಳ್ಳಾಗಿ ಬಾಧಿಸುತ್ತಿದೆ.

ಪಂಪ : ಕರ್ಣ, ನೀನು ಅವೊತ್ತು ಮೈಮರೆತದ್ದು ಒಳ್ಳೇದೆ ಆಯ್ತು. ಒಂದು ವೇಳೆ ನೀನು ಎಚ್ಚರವಾಗಿದ್ದಿದ್ದರೆ ಜನ್ಮಾಂತರಗಳಲ್ಲೂ ಸೈರಿಸಿಕೊಳ್ಳಲಾಗದ ಅಪಮಾನವನ್ನು ಎದುರಿಸಬೇಕಾಗಿತ್ತು ಈ ಪ್ರಕರಣವನ್ನು ಕಣ್ ಕಟ್ಟಿನಂತೆ ನಾನು ನಿಭಾಯಿಸಿದ್ದು ಯಾಕೆ ಗೊತ್ತೇನು? ನಿನ್ನನ್ನ ಸಾಧ್ಯವಾದಷ್ಟು ಈ ಅಪಮಾನಗಳಿಂದ ಪಾರು ಮಾಡೋದಕ್ಕಲ್ಲ, ನನಗೂ ಒಂದು

ಸಮಸ್ಯೆ ಇತ್ತು. ಅರಿಕೇಸರಿ ಅರ್ಜುನನಾಗಲು ಹೊರಟಿದ್ದ. ಅವನನ್ನ ನಾನು ಪಣದಲ್ಲಿ ಗೆಲ್ಲಿಸಬೇಕಿತ್ತು.

ಕರ್ಣ : ಅಂದರೆ ನೀವು ನಿಮ್ಮ ಗೆಳೆತನಕ್ಕಾಗಿ ನನ್ನನ್ನ ಮೋಸಗೊಳಿಸಿದ್ದು, ನ್ಯಾಯವೆ?

ಪಂಪ : ಇಲ್ಲ ಕರ್ಣ ನಾನು ಯಾವ ಪಾತಕವನ್ನೂ ಮಾಡಿಲ್ಲಿ, ಅಥವಾ ಮಾಡುತ್ತಿದ್ದೆನೋ ಏನೋ! ಆ ಪ್ರಶ್ನೆಯೇ ಅಂದು ಉದ್ಭವಿಸಲಿಲ್ಲ. ಅಂದು ನಡೆದುದ್ದನ್ನ ಬೇಕಂತಲೆ ಮರೆ ಮಾಚಿದೆ. ಕವಿ ಹೇಳಿದ್ದಕಿಂತ ಹೇಳದಿರುವುದಕ್ಕೆ ಹೆಚ್ಚು ಕಾರಣಗಳಿರುತ್ತವೆ.

ಕರ್ಣ : ನನ್ನ ಎಚ್ಚರ ಈ ಮರೆವುಗಳ ನಡುವೆ ನಡೆದ ಕಣ್ ಕಟ್ಟು ಏನೆಂಬುದನ್ನ ನೀವು ಹೇಳಲೇ ಬೇಕು ಒಡೆಯ.

ಪಂಪ : ಆ ಉನ್ಮತ್ತ ಘಳಿಗೆ ನೀನು ಯಂತ್ರದ ಮತ್ಸ್ಯವನ್ನು ಬೇಧಿಸಿದಾಗ, ಸಭೆಯಲ್ಲಿ ಕೋಲಾಹಲವಾಯ್ತು.

(ದೃಶ್ಯ ಬದಲಾಗುತ್ತದೆ. ಮತ್ತೆ ಸ್ವಯಂವರದ ಸದ್ದುಗಳೆಲ್ಲ ಪುನಃ ಕೇಳಿಸುತ್ತದೆ, ದೃಪದನ ಆಸ್ಥಾನ, ಯಂತ್ರದ ಮೀನು ಮುರಿದು ಬಿದ್ದಿದೆ, ಕರ್ಣ ಮೂರ್ಛೆಗೊಂಡಿದ್ದಾನೆ, ಕೌರವರು ಒಂದು ಕಡೆ ಸಂಭ್ರಮಿಸುತ್ತಿದ್ದಾರೆ.)

ದೃಷ್ಟದ್ಯುಮ್ನ: ಈ ಅನ್ಯಾಯವನ್ನ ನಾನು ಒಪ್ಪುವುದಿಲ್ಲ, ಕ್ಷತ್ರೀಯ ಸಾಮಂತರು ಮಾತ್ರವೇ ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಪ್ರಕಟಿಸಲಾಗಿತ್ತು. ಕರ್ಣ ಸಾಮಂತನಾದರೂ ಸೂತ ಪುತ್ರ ಅವನಿಗೆ ನನ್ನ ತಂಗಿಯನ್ನ ಕೊಡಲಾರೆ.

ಕೌರವ : ಇದು ನಾಚಿಕೆಗೇಡು, ರಾಜಪುತ್ರರು ಪಣವನ್ನು ಮುರಿಯಲು ಸಾಧ್ಯವಿಲ್ಲದೇ ಹೋದರೆ, ಸಾಮಂತರು ಪ್ರಯತ್ನಿಸಬಹುದೆಂದು ಮಂತ್ರಿಗಳು ಪ್ರಕಟಿಸಿದ್ದಾರೆ. ನಿಮ್ಮ ಮಗನ ಮಾತನ್ನ ನೀವು ಅನುಮೋದಿಸಿದರೆ ಈ ಸ್ವಯಂವರವೇ ಯುದ್ಧ ಭೂಮಿಯಾಗ ಬೇಕಾಗುತ್ತದೆ. ದ್ರೌಪದಿ, ಕರ್ಣನ ವಧು, ಬಲಾತ್ಕಾರದಿಂದಾದರೂ ಹೊತ್ತೊಯ್ಯಬೇಕಾದೀತು, ವಧುವನ್ನು ಹೊತ್ತೊಯ್ಯುವುದು ಹೇಗೂ ಕರುವಂಶದ ಪರಂಪರೆಗೆ ಬಂದಿದೆ.

ದೃಷ್ಟದ್ಯುಮ್ನ: ನಾವೇನು ಬಳೆ ತೊಟ್ಟು ಕುಳಿತಿಲ್ಲ, ನನ್ನ ತಂಗಿಯನ್ನು ಸೂತನಿಗೆ ಕುಲಹೀನನಿಗೆ ಕೊಡಲು ನಾವೇನು ಅವಳನ್ನ ನದಿಯಿಂದ ಬಾಚಿಕೊಂಡು ಬಂದು ಸಾಕಿದ್ದಲ್ಲ.

ದ್ರೌಪದಿ : ನಾನೊಂದು ಮಾತು ಕೇಳಬೇಕಿತ್ತು.

ದ್ರುಪದ : ಏನದು?

ದ್ರೌಪದಿ : ಈ ಸ್ವಯಂವರ ನನಗಾಗಿ ತಾನೆ.

ದ್ರುಪದ : ನೀನೀಗ ವಧು ಹೂಂ (ಸುಮ್ಮನಿರುವಂತೆ ಸನ್ನೆ ಮಾಡುತ್ತಾನೆ)

(ದ್ರೌಪದಿ ಸ್ವಯಂವರದಿಂದ ಹೊರಹೋಗುತ್ತಾಳೆ. ಸಭೆ ತಬ್ಬಿಬ್ಬು.)

ಬಲರಾಮ : ದೃಪದ ಮಹಾರಾಜ, ಇಲ್ಲಿ ಕರುಳು ಕೂಡಬೇಕೆ ಹೊರತು ಕತ್ತು ಕತ್ತರಿಸಬಾರದು. ಈ ಘಟನೆಗಳು ನಿಮ್ ಸಿಂಹಾಸನಕ್ಕೆ ಭೂಷಣವಲ್ಲ. ಕರ್ಣನಿಗೆ ಅನ್ಯಾಯವಾಗುವುದನ್ನ ನಾನು ಒಪ್ಪುವುದಿಲ್ಲ. ಈ ಪ್ರಕರಣವು ಕುಲಕ್ಕೆ ಸಂಬಂಧಿಸಿದ್ದಲ್ಲ, ಒಟ್ಟಾರೆ ಸ್ಪರ್ಧೆಯ ನ್ಯಾಯಾನ್ಯಾಯದ ಚರ್ಚೆ ಆಗಬೇಕಾಗಿದೆ. ಒಂದು ನಿಷ್ಪಕ್ಷಪಾತವಾದ ಆಯೋಗವನ್ನು ನೇಮಿಸು. ಅದು ಎಲ್ಲಾ ಅಂಶಗಳನ್ನ ಗಣನೆಗೆ ತೆಗೆದುಕೊಂಡು ಪೂರ್ವಾಪರ ಪರಿಶೀಲಿಸಿ ತೀರ್ಪು ನೀಡಲಿ.

ದೃಪದ : ಈ ನಿಷ್ಪಕ್ಷಪಾತ ಆಯೋಗದ ಮುಖಂಡನನ್ನಾಗಿ ಶ್ರೀಕೃಷ್ಣನನ್ನು ಆಯ್ಕೆ ಮಾಡಿದ್ದೇನೆ, ಅಲ್ಲದೆ ಇವರೊಂದಿಗೆ ಇಬ್ಬರು ರಾಜ ಪುತ್ರರು, ಒಬ್ಬರು ಮಾಂಡಳೀಕರು ಮತ್ತು ಧನುರ್ವಿದ್ಯಾ ಪಾರಂಗತರಾದ ಆಚಾರ್ಯ ರೊಬ್ಬರು ಈ ಪ್ರಕರಣವನ್ನ ಅಧ್ಯಯನ ಮಾಡಿ ತೀರ್ಪು ನೀಡುವಂತೆ ವಿನಂತಿಸುತ್ತೇನೆ.

ಪಂಪ : ಆಗ ಗುಪ್ತ ಸಮಾಲೋಚನೆ ನಡೆಸಿದ ಆಯೋಗವು ನೀಡಿದ ತೀರ್ಪು ಏನು ಗೊತ್ತೆ? ಯಂತ್ರದ ಮೀನನ್ನು ಹೊಡೆದ ಕ್ರಮ ನಿಯಮ ಬಾಹಿರವೆಂದು, ಆದುದರಿಂದ ನಿನ್ನನ್ನ ಸ್ಪರ್ಧೆಯಿಂದ ಬಹಿಷ್ಕರಿಸಿ ಸ್ವಯಂವರವನ್ನು ಮುಂದುವರೆಸಲು ತೀರ್ಪು ನೀಡಿತು.

ಕರ್ಣ : ಇದು ಮೋಸ, ನನ್ನನ್ನು ಸ್ಪರ್ಧೆಯಿಂದ ಹೊರಹಾಕಲು ಹೂಡಿದ ಹುನ್ನಾರ ನಾನು ಸೂತ ಪುತ್ರನಲ್ಲದೆ ಹೋಗಿದ್ದರೆ? ಹೋಗಲಿ ನಾನು ಉಲ್ಲಂಘಿಸಿದ ನಿಯಮವಾದರೂ ಯಾವುದು?

ಪಂಪ : ಪಣದಲ್ಲಿ ಮೀನನ್ನ ಯಾವ ಆಧಾರದಲ್ಲಿ ಭೇದಿಸಬೇಕಿತ್ತು ನೆನಪಿದೆಯಾ ನಿನಗೆ?

ಕರ್ಣ : ಕೊಪ್ಪರಿಗೆಯಲ್ಲಿನ ಪ್ರತಿ ಬಿಂಬವನ್ನು ನೋಡಿ!

ಪಂಪ : ಹೌದು ತಾನೆ? ನೀನು ಎಣ್ಣೆಯಲ್ಲಿ ಪ್ರತಿಬಿಂವನ್ನು ನೋಡಲೇ ಇಲ್ಲವೆಂದು ಧನುರ್ವಿದ್ಯಾ ತಜ್ಞರಾದ ಆಚಾರ್ಯರು ವಾದಿಸಿದರು. ದ್ರೌಪದಿಯ ಕಣ್ಣಿನಲ್ಲಿ ಕಂಡ ಪ್ರತಿಬಿಂಬವನ್ನೇ ನೋಡಿ ನೀನು ಯಂತ್ರವನ್ನು ಕೆಡವಿದ್ದೆ. ಹೌದೋ ಅಲ್ಲವೋ? ಕಣ್ಣಿನ ಪ್ರತಿಬಿಂಬ ನೋಡಿ ಗುರಿ ಮಾಡುವುದು ಎಣ್ಣೆಯಲ್ಲಿನ ಪ್ರತಿಬಿಂಬ ನೋಡಿ ಗುರಿ ಹಿಡಿಯುವುದಕ್ಕಿಂತಲೂ ಕಠಿಣವೆಂದು ಸೂಕ್ಷ್ಮವೆಂದು ಬಲರಾಮ, ಶಲ್ಯ, ಕೌರವರು ವಾದಿಸಿದ್ದರು ಆದರೂ ತೀರ್ಪು ಪ್ರತಿಕೂಲವಾಗಿತ್ತು. ಕೊನೆಗೆ ಸಾಮಂತರಾಜರು ಜಯಿಸದೇ ಹೋದುದರಿಂದ ಬ್ರಾಹ್ಮಣರಿಗೆ ಅವಕಾಶ ನೀಡಲಾಯಿತು, ಹಾರವನ ವೇಷದಲ್ಲಿದ್ದ ಅರ್ಜುನ ಯಂತ್ರದ ಮೀನನ್ನು ಭೇದಿಸಿ ದ್ರೌಪದಿಯನ್ನು ಗೆದ್ದುಕೊಂಡ ಘಳಿಗೆ ನೀನು ಎಚ್ಚರಗೊಂಡೆ.

ಕರ್ಣ : ಎಂಥಾ ಜಾದು ಕವಿಗಳೆ, ಈ ನೆಲದಲ್ಲಿ ಜಾತಿಗೊಂದೊಂದು ಮಾನದಂಡ.

ಪಂಪ : ಗೆಳೆತನವನ್ನ ನಾನೂ ಗೆಲ್ಲಿಸಬೇಕಿತ್ತು, ಆದ್ದರಿಂದಲೇ ಆ ಪ್ರಕರಣವನ್ನ ನಾನು ಬೇಕಂತಲೇ ಮರೆಮಾಚಿದೆ. ಗೆಳೆತನವೇ ಜೀವ ಅಂದುಕೊಂಡಿರುವ ನಿನಗಿದು ಅರ್ಥವಾಗದ ವಿಷಯವೇನಲ್ಲ?

ಕರ್ಣ : ನೀವು ನಿಮ್ಮ ಸ್ನೇಹಧರ್ಮವನ್ನ ಉಳಿಸಿಕೊಳ್ಳುವುದಕ್ಕೆ ಅರಿಕೇಸರಿ ಅರ್ಜುನನ್ನ ವಿಕ್ರಮನನ್ನಾಗಿಸಿದಿರಿ. ಗೆಲುವನ್ನ ಕೊಡಿಸಿದಿರಿ, ಆದರೆ, 'ನೀನ್ನೈ ಕಳೆಯ ರಾಧೇಯ' ಎಂದು ಎದೆಯ ಸಿಂಹಾಸನದಲ್ಲಿ ನನ್ನನ್ನು ದೊರೆಯಾಗಿಸಿದ ಮಿತ್ರ ಸುಯೋದನ, ಅವನ ಅವಮಾನದ, ಅವನತಿಯ ಒಂದು ಘಳಿಗೆಯನ್ನೂ ಕಿತ್ತುಕೊಳ್ಳದ ಅಸಹಾಯಕನನ್ನಾಗಿ ಏಕೆ ಮಾಡಿದಿರಿ ನನ್ನ? ಬರಹ ಬೇರೆ ಬದುಕು ಬೇರೆಯೇ? ಆಕೃತಿ ಬೇರೆ, ನೆರಳು ಬೇರೆಯೇ? ಹೇಳಿ ಒಡೆಯಾ, ಹೇಳಿ.

ಪಂಪ : (ನಕ್ಕು) ನಿನ್ನ ಅಂತಃಕರಣವೇ ನಿನಗೆ ಶತ್ರು ಕರ್ಣ, ನಿನ್ನ ಅವಮಾನಗಳಲ್ಲಿ ಸುಯೋಧನ ತೋರಿದ ಅಭಿಮಾನವನ್ನು ನೀನು ನನ್ನಿಂದು ಬಗೆದೆಯೇನು? ರಾಜಕಾರಣದಲ್ಲಿ ಕಣ್ಣೀರಿಗೆ, ಭಾವನೆಗಳಿಗೆ ತಾವಿಲ್ಲ ಕಂದ. ಸಿಂಹಾಸನಕ್ಕೆ ನುಡಿವ ನಾಲಿಗೆ ಹಲವು, ತೂಗುವ ಕೈಯೊಂದು, ದಂಡಿಸುವ ಕೈಯೊಂದು.

ಕರ್ಣ : ಯುದ್ಧದ ಮುನ್ನಾ ದಿನ ಹೀಗೇನೆ. ಆ ಕಪಟ ನಾಟಕ ಸೂತ್ರಧಾರಿ

ಕೃಷ್ಣ ಕೂಡಾ ನಿಮ್ಮಂತೆಯೇ ನನ್ನೆದೆಯಲ್ಲಿ ಹುಳಿ ಹಿಂಡಲು ಬಂದಿದ್ದ. "ಕರ್ಣಾ ಬೇಧಿಸಲೆಂದೆ ನುಡಿದರ್, ಎನ್ನದಿರು, ಒಯ್ಯನೆ ಕೇಳ್, ನಿನ್ನಾದಿಯೊಳ್ ಅಬ್ಬೆ ಕುಂತಿ, ನಿನಗೆ ಅಮ್ಮಂ ಅಹರ್ಪತಿ. ಪಾಂಡು ನಂದರರ್ ಸೋದರರ್, ಆಂ ಏಯ್ದೆ ಮೈದುನನಂ, ಪೆರತೇಂ ಪಡೆಮಾತೋ, ನಿನ್ನದೀ ಮೇದಿನಿ, ಪಟ್ಟಮಂ ನಿನತೆ. ನೀನಿರೆ, ಮತ್ತೆ. ಪೆರರ್ ನರೇಂದ್ರರೆ?" ಕೃಷ್ಣನ ಮಾತು ಕೇಳಿ ಪಾತಾಳಕ್ಕೆ ಕುಸಿದು ಹೋಗಿದ್ದೆ ಒಡೆಯ; ಇವತ್ತು ಮತ್ತೂ ಆಳದ ಪ್ರಪಾತಕ್ಕೆ ತಳ್ಳಲ್ಪಟ್ಟ ಅನುಭವವಾಗ್ತಿದೆ. ಇಂದು ಆವತ್ತಿಗಿಂತಲೂ ಹೆಚ್ಚು ನನಗೆ ದುಃಖವಾಗುತ್ತಿದೆ. ಯಾಕೆ ಗೊತ್ತೇನು?

ಪಂಪ : ದುಃಖದ ಬಾವಿಗಳೆಂದೂ ಬತ್ತುವುದಿಲ್ಲ.. ಹೇಳು ಕರ್ಣ

ಕರ್ಣ : ನನ್ನ ಸುಯೋಧನನ ಸ್ನೇಹವನ್ನ ಲೋಕ ಆದರ್ಶವೆಂದು ತಿಳಿಯಲಿಲ್ಲ ವೆಂದಲ್ಲ. ಇಂದು ನೀವೇ ಅದನ್ನ ಅನುಮಾನಿಸುತ್ತಿರುವುದನ್ನು ಕಂಡು.

(ಅನುದೃಶ್ಯ)

(ವೇದಿಕೆಯ ಮಧ್ಯೆ ಚದುರಂಗ, ಭಾನುಮತಿ ಅಂತಃಪುರ, ಚದುರಂಗದ ಮುಂಭಾಗದಲ್ಲಿ ಭಾನುಮತಿ ಒಬ್ಬಳೇ ದಾಳಗಳನ್ನು ಎಸೆಯುತ್ತಿದ್ದಾಳೆ)

ಭಾನುಮತಿ : ಈ ಅನುಮಾನಗಳೇ ಹೀಗೆ, ಮುಷ್ಠಿಯೊಳಗಿನ ದಾಳಗಳ ಹಾಗೆ.ಈ ಆಟದಲ್ಲಿ ಅರಮನೆಯಲ್ಲಿ ಬಯುಸಿದ ಹಾಗೆ ಯಾವುದೂ ನಡೆಯವುದಿಲ್ಲ. ಆಡ ಆಡ್ತಾ ಆಡ್ತಾ ಈ ಕಾಯಿಗಳು ನಾನೇ ಅನ್ನಿಸಿಬಿಡುತ್ತೆ. ಅಷ್ಟರಲ್ಲಿ ಕರ್ಣ, (ಸುಯೋಧನ, ಸುಯೋಧನ ಎಂದು ಕೂಗುತ್ತಾ ಅವಸರವಾಗಿ ಪ್ರವೇಶಿಸುತ್ತಾನೆ)

ಭಾನುಮತಿ : ಓ! ಮಹಾರಥಿಗಳ ಆಗಮನವಾಯಿತಲ್ಲ, ಬನ್ನಿ ಬನ್ನಿ, ಒಳ್ಳೇ ಸಮಯಕ್ಕೆ ಬಂದಿದ್ದೀರಿ.

ಕರ್ಣ : ಕ್ಷಮಿಸಿ ಮಹಾರಾಣಿಯವರೇ, ಪ್ರಭುಗಳಿರಬಹುದೆಂದು ಬಂದೆ ನಾನು ಮತ್ತೆ ಕಾಣುತ್ತೇನೆ. (ಹಿಂತಿರುಗುತ್ತಾನೆ)

ಭಾನುಮತಿ : (ದಾಳಗಳನ್ನು ಎಸೆಯುತ್ತಾ) ಆಟದ ರಂಗಕ್ಕೆ ಒಮ್ಮೆಲೆ ಬಂದ ಯಾವ ಕಾಯಿಗೂ ಹೀಗೆ ಹಿಂತಿರುಗುವ ಅವಕಾಶವಿಲ್ಲ, ಆರಂಭಿಸಿದ ಆಟವನ್ನ ಆಡಿಯೇ ತೀರಬೇಕಾಗುತ್ತದೆ. ಬನ್ನಿ ಕುಳಿತುಕೊಳ್ಳಿ, ಆಡಿ, ನನ್ನ ವಿರುದ್ಧ ನಾನೇ ಆಡಿ ಬೇಸರಗೊಂಡಿದ್ದೇನೆ.

ಕರ್ಣ : ನನ ಪಗಡೆಯಲ್ಲಿ ಅಂಥ ಪರಿಶ್ರಮವಿಲ್ಲ, ಪ್ರಭುಗಳು ಬಹುಶಃ ಪೈಪೋಟಿ ನೀಡುತ್ತಿದ್ದರೇನೋ? ಶಕುನಿ ದೊರೆಗಳಲ್ಲಿ ಅವರಿಗೆ ಪಗಡೆಯ ಪಾಠಗಳಾಗಿವೆ.

ಭಾನುಮತಿ : ಸಹೋದರರ ಬೆನ್ನ ಮೂಳೆಗಳಿಂದ ಮಾಡಿದ ದಾಳಗಳಿಂದ ಕಲಿತ ಪಾಠಗಳು ಆರಂಭದಂತೆಯೇ ಅಂತ್ಯವನ್ನು ತನ್ನೊಳಗೆ ಹುದುಗಿಸಿ ಕೊಂಡಿದ್ದರೆ?

ಕರ್ಣ : ಮಹಾರಾಣಿಯವರು ಇಂದೇಕೋ ಪ್ರಕ್ಷುಬ್ಧಗೊಂಡಂತಿದೆ.

ಭಾನುಮತಿ: ಪ್ರಶಾಂತ ಧೂತರಂತೆ ತಾವು ಬಂದಾಯ್ತಲ್ಲ ಬನ್ನಿ. ಕೂರಿ ಹಾಂ ಅಲ್ಲಲ್ಲ ಇಲ್ಲಿ.

(ಭಾನುಮತಿ ಎದುರು ಬಂದು ಕುಳಿತುಕೊಳ್ಳುವನು)

ಭಾನುಮತಿ: (ದಾಳಗಳನ್ನ ಕೈಗೆತ್ತಿಕೊಂಡು) ಪಂದ್ಯಕ್ಕೆ ಪಣವೇನು?

ಕರ್ಣ : ಪಣವೇ?

ಭಾನುಮತಿ: ಪಣ ಒಡ್ಡದೇ ಹೋದರೆ ಪಂದ್ಯದಲ್ಲಿ ಆಸಕ್ತಿ ಮೂಡುವುದಿಲ್ಲ. ಒಬ್ಬರನ್ನು ಇನ್ನೊಬ್ಬರು ಗೆಲ್ಲಬೇಕೇಂದರೆ ಗೆಲುವಿಗೊಂದು ಗುರಿ ಇರಬೇಕು. ನಾನು ಸೋತರೆ ಇದೋ ಈ ಮುತ್ತಿನ ಹಾರ ಪಣಕ್ಕೆ.

ಕರ್ಣ : ನಾನು ಗೆಲುವಿನ ಬಗ್ಗೆ ಯೋಚಿಸುತ್ತಿಲ್ಲ ನನ್ನ ಅದೃಷ್ಟದಲ್ಲಿ ಸೋಲೇ ಹೆಚ್ಚು. ಸೋತರೆ ಏನೊಡ್ಡಲಿ ಅಂತ.

ಭಾನುಮತಿ: ಪಣಕ್ಕೆ ಪದಾರ್ಥವೇ ಬೇಕೆಂದೇನಿಲ್ಲ. ನಿಮ್ಮಲ್ಲಿ ಕಲಿತ ಜ್ಞಾನವಿದೆಯಲ್ಲ.

ಕರ್ಣ : (ನಕ್ಕು) ಬಿಲ್ಲುಗಾರಿಕೆ ಕಲಿಯುತ್ತೀರೇನು.

ಭಾನುಮತಿ: ದೋಣಿ ನಡೆಸುವುದನ್ನು.

ಕರ್ಣ : ದೋಣಿ ನಡೆಸುವುದನ್ನೇ!

ಭಾನುಮತಿ: ಇತ್ತೀಚೆಗೆ ಪದೇ ಪದೇ ನೀರಿನ ಕನಸು ಬೀಳುತ್ತಿದೆ. ಸುಳಿಯಲ್ಲಿ ಸಿಕ್ಕಿಕೊಂಡಂತೆ, ನೀರಿನಲ್ಲಿ ಮುಳುಗಿ ಹೋದಂತೆ. ಅಲೆಗಳಲ್ಲಿ ಕೊಚ್ಚಿ ಹೋದಂತೆ. ದೋಣಿ ನಡೆಸುವುದನ್ನ ಕಲಿತರೆ ಕನಸಿನಲ್ಲಾದರೂ ಜಲಗಂಡದಿಂದ ಪಾರಾಗಬಹುದೇನೋ ಅಂತ.

ಕರ್ಣ : ನಮ್ಮ ನೌಕಾ ಪಡೆಯಲ್ಲಿ ಅತ್ಯುತ್ತಮ ನಾವಿಕರು ತಮ್ಮ ಸೇವೆಗೆ ಸಿದ್ಧರಿದ್ದಾರೆ ಮಹಾರಾಣಿ.

ಭಾನುಮತಿ : ನಿಮ್ಮಂತೆ ನೀರಿನ ಹೊರ ಒಳಗು ಬೇಧ ಬಲ್ಲವರುಂಟ? ನಿಮ್ಮಿಂದಲೇ ಕಲಿಯಬೇಕೆಂಬುದು ನನ್ನ ಆಸೆ.

ಕರ್ಣ : ತಮ್ಮ ಆಜ್ಞೆ

(ದಾಳಗಳನ್ನು ಎಸೆಯುತ್ತಾ ಆಟ ಮುಂದುವರೆವುದು, ನೆತ್ತಮನಾಡಿ ಸೋಲ್ತಡೆ ಸೋಲಂ ಈವುದು ಎಂದು ಕಾಡುತ್ತಿರೆ ಮೇಳ ಹಾಡುತ್ತಿರುತ್ತದೆ)

ಕರ್ಣ : ಹೋ! ನಾನು ಗೆದ್ದೆ

ಭಾನುಮತಿ : ನನಗೂ ಅಚ್ಚರಿಯೇ! ನನ್ನ ವಿರುದ್ಧ ಮಹಾಪ್ರಭುಗಳು ಒಮ್ಮೆಯೂ ಗೆದ್ದಿದ್ದಿಲ್ಲ.

ಕರ್ಣ : ಕೊಡಿ ನಿಮ್ಮ ಮುತ್ತಿನ ಸರವನ್ನ

ಭಾನುಮತಿ : ಇಲ್ಲ ಕೊಡಲಾರೆ, ನಾನು ಸೋಲಲಾರೆ ಅಂತ ಭಾವಿಸಿದ್ದೆ. ಇದಕ್ಕೆ ಬದಲಾಗಿ ಏನು ಬೇಕಾದ್ರೂ ಕೊಡುತ್ತೇನೆ. ಈ ಮುತ್ತಿನ ಸರವನ್ನ ಕೊಡಲಾರೆ.

ಕರ್ಣ : ಇದು ಮೋಸ, ನೀವು ಮುತ್ತಿನ ಸರವನ್ನ ಕೊಡಲೇಬೇಕು. ಗೆದ್ದುದನ್ನ ಇಂದಾದರೂ ನಾನು ಪಡೆಯುವುದನ್ನ ಕಲಿಯಬೇಕು.

(ಭಾನುಮತಿ ಎದ್ದು ಓಡಿ ಹೋಗಲೆತ್ನಿಸುವಳು, ಕರ್ಣ ಅವಳನ್ನು ಅಟ್ಟಿಸಿಕೊಂಡು ಹೋಗುತ್ತಾನೆ ಹಾಡು ಮುಂದುವರೆಯುತ್ತದೆ. ಭಾನುಮತಿಯ ಕೊರಳಿಗೆ ಕೈ ಹಾಕಿ ಮುತ್ತಿನ ಸರವನ್ನ ಕಿತ್ತುಕೊಳ್ಳುತ್ತಾನೆ. ಸರ ಹರಿದು ಮುತ್ತುಗಳು ಚೆಲ್ಲಾಪಿಲ್ಲಿಯಾಗುತ್ತದೆ. ಆ ಸಮಯಕ್ಕೆ ಸರಿಯಾಗಿ)

ದುರ್ಯೋಧನ: ಭಾನು, ಹೇ ಭಾನು. (ದುರ್ಯೋಧನನಿಗೆ ಓಡಿ ಬಂದ ಕರ್ಣ ಡಿಕ್ಕಿ ಹೊಡೆಯುತ್ತಾನೆ. ಕರ್ಣ ಮತ್ತು ಭಾನುಮತಿ ದುರ್ಯೋಧನನನ್ನು ಕಂಡು ಅಪ್ರತಿಭರಾಗುತ್ತಾರೆ) ಯಾಕೆ? ಹೀಗೆ ಬೊಂಬೆಗಳಾಗಿ ನಿಂತು ಬಿಟ್ಟಿರಲ್ಲ. ಈ ಚದುರಿ ಬಿದ್ದ ಮುತ್ತುಗಳನ್ನ ಆಯ್ದುಕೊಡಲೇನು? ಹೇಳಿ?

ಭಾನುಮತಿ : ಪ್ರಭು, ತಪ್ಪು ನನ್ನದೆ, ನಾನೆ ಬಲವಂತಪಡಿಸಿ ಅಂಗಾಧಿಪತಿಗಳನ್ನ ಆಟಕ್ಕೆಳೆದೆ.

ದುರ್ಯೋಧನ: ಗೆಳೆಯ ಕರ್ಣ, ನನ್ನ ಬದುಕಿಸಿದೆ ನೋಡು, ನೀನು ಪಗಡೆಗೆ ಸಿಕ್ಕದೆ ಹೋಗಿದ್ದರೆ, ಮಹಾರಾಣಿಯವರು ಇಷ್ಟು ಹೊತ್ತಿಗೆ ಕೋಪಗೃಹದಲ್ಲಿ ಮುಸುಕು ಹಾಕಿಕೊಂಡು ಕಣ್ಣೀರಿನ ಮಣಿಗಳನ್ನ

ಆಯ್ದು ಮಾಲೆ ಮಾಡುತ್ತಿದ್ದರೋ ಏನೋ? ಅಲ್ಲವೇ ದೇವಿ. (ಮುತ್ತಿನ ಮಣಿಗಳನ್ನು ಆಯ್ದು ಕರ್ಣನಿಗೆ ಕೊಡಲು ಮುಂದಾಗುತ್ತಾನೆ)

ಕರ್ಣ : (ಓಡಿ ಬಂದು, ದುರ್ಯೋಧನನನ್ನು ಬಾಚಿ ತಬ್ಬಿಕೊಂಡು) ಪ್ರಭೂ (ಏವಮಿಲ್ಲದೆ, ಇವಂ ಆಯ್ವುದೋ ತಪ್ಪದೆ ಪೇಳಿ ಎಂಬ ಬೂಪೋತ್ತಮನಂ. ಹಾಡು ಮುಂದುವರೆಯುತ್ತದೆ)

"ಭಾನುಮತಿ ನೆತ್ತಮನಾಡಿ ಸೋಲ್ತಡೆ ಸೋಲಂ ಈವುದು ಎಂದು
ಕಾಡುತ್ತಿರೆ ಲಂಬಣಂ ಪರಿಯೆ ಮುತ್ತಿನ ಕೇಡನೆ ನೋಡಿ ನೋಡಿ
ಬಳುಕುತಿರೆ, ಏವಮಿಲ್ಲದೆ, ಇವಂ ಆಯ್ವುದೋ ತಪ್ಪದೇ ಪೇಳಿ ಎಂಬ
ಭೂಪೋತ್ತಮನಂ ಬಿಸುಟ್ಟು ನಿಮ್ಮೊಳ ಹೊಕ್ಕೊಡೆ ಬೇಡನಲ್ಲವೇ"
(ಹಾಡು ಅನುದೃಶ್ಯದ ಉದ್ದಕ್ಕೂ ಅನುರಣಿಸುತ್ತಿರುತ್ತದೆ)

ಕೃಷ್ಣನ ಕುಯುಕ್ತಿಯನ್ನ ಕಟ್ಟಿ ಹಾಕಲೆಂದು ನೀವೇ ನನ್ನ ಬಾಯಿಂದ ನುಡಿಸಿದ ಈ ಮಾತು ಸುಳ್ಳೇ? ಇದು ಪುಸಿಯಾದೊಡೆ. ನನ್ನ ನಾಲಿಗೆಯಿಂದ ಏಕೆ ನುಡಿಸಿದಿರಿ.

ಪಂಪ : ಕರ್ಣ ಪಗಡೆಯಾಡಿ ಸೋತ ಭಾನುಮತಿಯ ಕೊರಳ ಸರ ಹರಿದು ತಲೆ ಉಳಿಸಿಕೊಂಡಿದ್ದಕ್ಕೆ ಎಂಥ ಕೃತಜ್ಞತೆ! ಮಹಾರಾಣಿಯ ಅಂತಃಪುರವ ಪ್ರವೇಶಿಸುವ ಹಕ್ಕನ್ನು ಪಡೆದುದರಿಂದ ನಿನ್ನ ಕೀಳರಿಮೆಯನ್ನ ಗೆದ್ದೆ ಎಂಬ ಅಹಂಕಾರವೋ!

(ಪ್ರೇಕ್ಷಕರೆಡೆಗೆ) ಪಾತ್ರಗಳು ತಮ್ಮ ಸುತ್ತ ನಡೆಯುವ ಕ್ರಿಯೆಯ ಹಿಂದಿನ ಕುತಂತ್ರವನ್ನು ಅರಿಯದೆ ದುರಂತವನ್ನ ತಾನೆ ತಂದುಕೊಳ್ಳುತ್ತವೆ. ಒಂದು ದಿನ ನೀನು ಮತ್ತು ಸುಯೋಧನ ಗಂಗಾನದಿಯಲ್ಲಿ ವಿಹಾರಕ್ಕೆಂದು ಹೋಗಿದ್ದಿರಿ. ನೆನಪಿದೆಯಾ ನಿಮ್ಮ ದೋಣಿ ಗಂಗಾ ತೀರದಲ್ಲಿ ನೆಲೆಸಿದ್ದ ಸತ್ಯಂತಪ ಋಷಿಗಳ ಆಶ್ರಮಕ್ಕೆ ಬಂದುಬಿಟ್ಟಿತ್ತು.

ಕರ್ಣ : ಹಾ, ಹೌದೌದು, ಅಂದು ನಡೆದ ಒಂದು ತಮಾಷೆ ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಅಂದು ಋಷಿಗಳು, ನನ್ನನ್ನ ಸುಯೋಧನನೆಂದು, ಸುಯೋಧನನ್ನು ನಾನೆಂದು ತಪ್ಪಾಗಿ ಗ್ರಹಿಸಿ ನನಗೆ ಉನ್ನತಾಸನವನ್ನು ಸುಯೋಧನನಿಗೆ ಕನಿಷ್ಠಾಸನವನ್ನು ನೀಡಿ ಉಪಚರಿಸಿದ್ದು ನನಗಿನ್ನೂ ನೆನಪಿದೆ.

ಪಂಪ : ಮುಂದೇನಾಯ್ತು, ನೆನಪಿದೆಯಾ, ನದಿಯ ದಡದಲ್ಲಿ ನಿನ್ನೊಬ್ಬನನ್ನೇ ಬಿಟ್ಟು, ಸುಯೋಧನ ಋಷಿಯ ಆಶ್ರಮಕ್ಕೆ ಮತ್ತೆ ತೆರಳಿದ್ದು.

ಕರ್ಣ : ಹೌದು, ನಾನು ಹುಟ್ಟನ್ನ ಹುಡುಕುತ್ತಿದ್ದೆ

ಪಂಪ : ಆಗ ಋಷಿಗಳನ್ನ ಕಂಡ ಸುಯೋಧನ ಯುವರಾಜನಾದ ನನಗೆ ಕನಿಷ್ಠಾಸನವನ್ನು ನೀಡಿ, ಮೀಂಗುಲಿಗನಿಗೆ ಉನ್ನತಾಸನವನ್ನು ನೀಡಿ ಆಶೀರ್ವದಿಸಿದರಲ್ಲ. ತಾವು ಮಹಾ ಮಹಿಮರು ಕಾರಣವಿಲ್ಲದೆ ಹೀಗೆ ಮಾಡಿರಲಾರಿರಿ, ವಿಷಯವೇನೆಂದು ದುಂಬಾಲು ಬಿದ್ದ.

ಕರ್ಣ : ಮಹರ್ಷಿಗಳು ಏನು ಹೇಳಿದರು?

ಪಂಪ : ಕೃಷ್ಣ ನಿನಗೆ ಹೇಳಿದ್ದನ್ನೇ ಕುಂತಿ ನಿನ್ನಲ್ಲಿ ಬಂದು ಏನು ತೋಡಿಕೊಂಡಳೋ ಅದನ್ನ.

ಕರ್ಣ : ಅಂದರೆ, ಸತ್ಯಂತಪರು ನನ್ನ ಹುಟ್ಟಿನ ಗುಟ್ಟನ್ನ ಸುಯೋಧನನಿಗೆ ಅಂದೇ ಹೇಳಿ ಬಿಟ್ಟಿದ್ದರೇನು?

ಪಂಪ : ಯುದ್ಧದ ಮುನ್ನವಷ್ಟೇ ತಿಳಿದ ಸತ್ಯವನ್ನ ಗೆಳೆಯನಿಗೆ ಹೇಳಿದರೆ ಎಲ್ಲಿ ನೊಂದುಕೊಂಡಾನೋ ಎಂದು ಬಚ್ಚಿಟ್ಟೆಯಲ್ಲ ಆ ಸಂಗತಿ ಸುಯೋಧನನಿಗೆ ಅಂದೇ ಗೊತ್ತಿತ್ತು. 'ಒಯ್ಯನೆ ಮುಳ್ಳೊಳೆ ಮುಳ್ಳಂ ಪಾಟಿಸುವೆಂ' ಎನ್ನುವ ನಿರ್ಧಾರಕ್ಕೆ ಬಂದಿದ್ದ ಋಷಿಗೊಂಡಿದ್ದ. ಅದಕ್ಕಾಗಿಯೇ ನಿನ್ನನ್ನ ತನ್ನ ಬತ್ತಳಿಕೆಯ ಬಾಣದಂತೆ ಬಳಸಿಕೊಂಡ. ಅದಕ್ಕೆ ನಿತ್ಯ ಸ್ನೇಹದ ಸಾಣೆ ಹಿಡಿಯುತ್ತಾ ಬಂದ. ಆ ಸತ್ಯವೇ ಭಾನುಮತಿ ಪ್ರಕರಣದಲ್ಲಿ ನಿನ್ನ ತಲೆ ಕಾಯ್ದುದು. ಎಷ್ಟಾದರೂ ನೀನು ಕುರುಕುಲದ ಹಿರಿಯ, ಭಾನುಮತಿಗೆ ಭಾವ. ನಿನ್ನ ಅವಳ ಸಲಿಗೆ ಸುಯೋಧನನಿಗೆ ಒಪ್ಪಿಗೆ ಆದುದ್ದೇ ನಿನ್ನ ಕುರುಕುಲದ ರಕ್ತ ಸಂಬಂಧದಿಂದ.

ಕರ್ಣ : ಇಲ್ಲ ಛೇ! ಇರಲಾರದು ನೀವು ತಪ್ಪು ನುಡಿಯುತ್ತಿರಬೇಕು. ನನ್ನ ದುರ್ವಿಧಿ ಕವಿಯ ಬಾಯಿಂದಲೂ ಹುಸಿ ನುಡಿಸುತ್ತಿರಬೇಕು. ಅನ್ಯ ಬಗೆದು ಅವನ ನೆನಪನ್ನ ಅಪವಿತ್ರ ಮಾಡಲಾರೆ. ಅಯ್ಯೋ ನನ್ನ ಗಾಯಗಳಿಗೇಕೆ ಉಪ್ಪು ಸವರುತ್ತೀರಿ.

ಪಂಪ : ಕರ್ಣ, ನೀನು ನಿರಾಕರಿಸಿದ ಮಾತ್ರಕ್ಕೆ ಪಾಷಾಣ ಅಮೃತವಾಗಲಾರದು. ಸುಯೋಧನ ಕೂಡಾ ನಾನು ಸೃಷ್ಟಿಸಿದ ಪಾತ್ರ ಈ ಅಧಿಕಾರ, ರಾಜಕಾರಣಗಳು ಎಂತೆಂಥ ತಂತ್ರ, ತಳತಂತ್ರಗಳಿಂದ ನಡೆಯುತ್ತವೆ ಎಂಬುದನ್ನ ನೀನರಿಯಬೇಕು ಇಲ್ಲದಿದ್ದೊಡೆ ನಿನ್ನ ನೋವುಗಳಿಂದ ನಿನಗೆ ಮುಕ್ತಿಯಿಲ್ಲ.

(ದೃಶ್ಯ ಬದಲಾಗುತ್ತದೆ)

ದೃಶ್ಯ – ೬

ಕದನಕ್ಕೆ ಕರೆ ಬಂತೋ
ನೆತ್ತರಿಗೆ ನೆರೆ ಬಂತೋ
ಕಪಟ ನಾಟಕದಲ್ಲಿ
ಮುರಿದು ಬಿತ್ತೋ ಸಂಧಾನ
ಮಾತು ಮುರಿಯಲೆಂದೇ
ಮುರಹರಿ ಬಂದಾನ!

[ಸುಯೋಧನನ ಗುಪ್ತ ಸಭೆ, ದ್ರೋಣ, ಅಶ್ವತ್ಥಾಮ, ದುಶ್ಯಾಸನ ಮೊದಲಾದವರು ಯೋಚನಾ ಮಗ್ನರಾಗಿದ್ದಾರೆ]

ದುರ್ಯೋಧನ : ಕೇಳಿದಿರೇನು, ಪಾಂಡವರ ರೋಷದ ನಿಶ್ಚಯದ ಛಲದ ಬಲದ ಕಲಿತನದ ಅತಿರೇಕವನ್ನು? ಅವರಾಗಲೇ ಕುರಕ್ಷೇತ್ರದಲ್ಲಿ ಸನ್ನದ್ಧರಾಗಿ ನಮ್ಮೊಡನೆ ಸೆಣಸಿ ಹೋರಾಡಲು ಬಂದು ನಿಂತಿದ್ದಾರೆ! ನೋಡಿ ಅವರೇ ನಮಗೇ ದಾಯಾದಿ ಮಾತ್ಸರ್ಯ ವನ್ನು ತೋರಿಸಿಕೊಡುತ್ತಿದ್ದಾರೆ.

ದ್ರೋಣ : ಸಂಧಾನವನ್ನು ಮುರಿದು ಕುರುಕ್ಷೇತ್ರವನ್ನು ರಣರಂಗವೆಂದು ನಿಶ್ಚಯಿಸಿದವನು ನೀನೆ, ಅವರ ಬಾಹುಬಲ– ಚತುರಂಗಬಲ– ಮಿತ್ರಬಲವನ್ನು ಕುರಿತು, ಇನ್ನೇನು ಕೇಳುತ್ತೀಯ? ಪಾಂಡವರು ಬಲಸಂಪನ್ನರು, ದೈವಬಲಸಂಪನ್ನರು, ಹುಚ್ಚು ಮಾತುಗಳನ್ನು ಬಿಡು.

ಕರ್ಣ : ಸಾಕು ಈ ಪ್ರಲಾಪದ ಮಾತುಗಳು, ಯೋಚಿಸಿ ನೋಡಿ, ಸಂಧಾನ ಮುರಿದವರಾರು? ಇದು ಕೃಷ್ಣನ ಕಪಟ ನಾಟಕ, ಸಂಧಾನ ಒಂದು ನೆಪ. ಯುದ್ಧವನ್ನು ಮೊದಲೇ ನಿರ್ಣಯಿಸಿಕೊಂಡು ಸಂಧಾನಕ್ಕಾಗಿ ಬಂದಿದ್ದ ಕೃಷ್ಣ. ಸಂಧಾನಕ್ಕೆ ನೀವು ಒಪ್ಪಿದ್ದರೂ ಕೃಷ್ಣನೇ ಅದನ್ನು ಮುರಿಯುತ್ತಿದ್ದ. ಯುದ್ಧ ಅವರಿಗೆ ಬೇಕಾಗಿದೆ.

ದುರ್ಯೋಧನ : ಈಗಾಗಲೇ ಯುದ್ಧ ನಿರ್ಧಾರವಾಗಿದೆ, ಆದ್ದರಿಂದ ಚರ್ಚೆ ಬೇಡ, ಮುಂದಾಗುವುದನ್ನು ಯೋಚಿಸೋಣ, ಮುಖ್ಯವಾಗಿ ಸೇನಾಧಿಪತಿಯ ಪಟ್ಟ ಯಾರಿಗೆ ಕಟ್ಟಬೇಕು ಎಂಬ ಬಗ್ಗೆ ಚರ್ಚೆಯಾಗಲಿ.

ದ್ರೋಣ : ದುರ್ಯೋಧನ, ಚಂಚಲೆಯಾದ ವಿಜಯಲಕ್ಷ್ಮಿಯನ್ನು ಹಿಡಿದು ತರಬಲ್ಲ ಯುಕ್ತಿ, ಶಕ್ತಿ ಯುದ್ಧ ನೈಪುಣ್ಯವು ಕುಲ ವೃದ್ಧರಾದ ಭೀಷ್ಮಾಚಾರ್ಯರಿಗಲ್ಲದೆ ಮತ್ತಾರಿಗುಂಟು? ಭೀಷ್ಮಾಚಾರ್ಯರು ಹೇಳುವ ರೀತಿಯಲ್ಲಿ ನೀನು ಯುದ್ಧ ಮಾಡು.

ಕರ್ಣ : ಮಿತ್ರಾ, ಕಳೆದ ಆಯಸ್ಸಿನ ಭಾರಕ್ಕೆ ಕುಸಿದು ಹೋಗಿರುವ ಮುದಿ ಜೀವ ಆಸರದಿಂದ ಹೋರಾಡುತ್ತಾರೆಂದು ಭ್ರಮಿಸಿ ವ್ಯಾಮೋಹ ದಿಂದ ಅವರಿಗೆ ಪಟ್ಟ ಕಟ್ಟಿದರೆ ಹಗೆಗಳು ಆಡಿಕೊಳ್ಳುವುದಕ್ಕೆ ಆಸ್ಪದವಾಗುವುದು. ಪಾಂಡವರನ್ನು ಚಿಕ್ಕಂದಿನಲ್ಲಿ ಅತಿಶಯವಾದ ಆದರದಿಂದ ಸಾಕಿದ ಅಜ್ಜರಾದುದರಿಂದ ಅವರ ಮೇಲಿವರು ಕಾದಾಡುವುದಿಲ್ಲ. ಇವರ ಮೇಲವರೂ ಹೋರಾಡುವುದಿಲ್ಲ. ಇಂಥವರೊಡನೆ ಒಂದಾಗಿ ಹೇಗೆ ನಂಬುವೆ ಮಿತ್ರ.

ದ್ರೋಣ : ಎಲೈ ಅಂಗರಾಜ, ಸಿಂಹದ ಮುಪ್ಪನ್ನು ಕಾಡಾನೆಗಳು ಹೀಗಳೆಯಲಾಗದು. ವೀರನೆಂಬ ಸೊಕ್ಕು ನಿನ್ನನ್ನು ಅಹಂಕಾರಿ ಯನ್ನಾಗಿಸಿದೆ. ನಾಲಗೆ ಕುಲವನ್ನು ಹೇಳಿತು ಎಂಬಂತೆ ನೀನು ಮಿತಿಮೀರಿದ ಮದದಿಂದ ಕುಲಜರನ್ನು ಉದಾತ್ತರನ್ನು ದೂಷಿಸುತ್ತಿದ್ದೀಯ!

ದುರ್ಯೋಧನ : ಈಗ ವಿವಾದ ಬೇಡ, ನನ್ನ ನಿರ್ಣಯವನ್ನ ಕೇಳಿ, ಕುಲ ವೃದ್ಧರಾದ ಭೀಷ್ಮರನ್ನೇ ಸೇನಾಧಿಕಾರ ಪಟ್ಟಕ್ಕೆ ಆರಿಸಿದ್ದೇನೆ ಪಾಂಡವರು ತೆಪ್ಪಗಿರದೆ ಕೃಷ್ಣನ ಕುಮ್ಮಕ್ಕಿನಿಂದ ನನ್ನ ಮೇಲೆ ಯುದ್ಧ ಸಾರಿದ್ದಾರೆ. ನಾನು ಕಿಂಕರ ಭಾವದಿಂಥ ತಮ್ಮ ಪಾದವನ್ನು ಹಿಡಿದಿದ್ದೇನೆ. ಹೇಗೂ ನಾನು ಅಚ್ಚನ್ನು ಹಿಡಿದೆ. ಅವರು ಬಂಡಿಯನ್ನ ಹಿಡಿದರು. ನಾನು ನಿಮ್ಮನ್ನೇ ನೆಚ್ಚಿಕೊಂಡು ಬಲಿಷ್ಠರಾದವರಲ್ಲಿ ಯುದ್ಧವನ್ನು ಸಾರಿದ್ದೇನೆ. ಆದ್ದರಿಂದ ಇನ್ನು ಯುದ್ಧ ವಿಜಯಶ್ರೀ ನಿರಂತರ ನನ್ನ ಜೊತೆಗಿರುವಂತಾಗಲು ತಾವು ಶ್ರಮಿಸಬೇಕು.

ಕರ್ಣ : ದೃಷ್ಟಿ ಮಂಜಾದ ಮುದುಕನಿಗೆ ಪಟ್ಟ ಕಟ್ಟಿದೆಯಲ್ಲ, ಅವರು ಹಿಡಿದ ಬಿಲ್ಲು, ದಂಟಿಗೆ ಸಮ, ಅಂಬು ಹುಲ್ಲಿಗೆ ಸಮ. "ಪಗೆವರ ನೆಟ್ಟೆಲ್ವಂ ಮುರಿವೊಡೆ ಎನಗೆ ಪಟ್ಟಂಗಟ್ಟಾ,

ದ್ರೋಣ : ನಿನ್ನ ನಾಲಿಗೆ ಕುಲವಂ ತಬ್ಬುವವೋಲ್ ಉರಿದೆ ನೀಂ ಕಡೆ ನುಡಿವೈ ಕರ್ಣ ಸೂತ ಕುಲದಲ್ಲಿ ಹುಟ್ಟಿ ಬೆಳೆದವನಿಗೆ ಉನ್ನತ ಸಂಸ್ಕಾರಗಳೆಲ್ಲಿಂದ ಬರಬೇಕು? ನಾಯಿಯನ್ನು ಕರೆತಂದು ಸಿಂಹಾಸನದ ಮೇಲೆ ಕುಳ್ಳಿರಿಸಿದಂತಾಯಿತು. ನಿನ್ನ ಅಹಂಕಾರವು ಮಿತಿ ಮೀರಿತು.

ಕರ್ಣ : ಮಾತಿಗೆ ಮುಂಚೆ ಕುಲವನ್ನೇಕೆ ಎತ್ತಿ ಮಾತನಾಡುತ್ತೀರಿ? ನಿಮ್ಮ ಕುಲಗಳು- ಶತ್ರು ಸೈನ್ಯವನ್ನು ಅಟ್ಟಿಸಿಕೊಂಡು ಹೋಗಿ ತಿನ್ನುತ್ತವೇನು? ಕುಲ-ಕುಲವಲ್ಲ: ಛಲವೆಂಬುದು ಕುಲ, ಗುಣವೆಂಬುದು ಕುಲ, ಅಭಿಮಾನವೆಂಬುದೊಂದು ಕುಲ, ಶೌರ್ಯವೆಂಬುದು ಕುಲ, ನೋಡುತ್ತಿರಿ. ಈ ಯುದ್ಧದಲ್ಲಿ ನಿಮ್ಮ ಕುಲಗಳು ವ್ಯಾಕುಲವನ್ನುಂಟು ಮಾಡದಿರ್ದೊಡೆ ಕೇಳಿ.

(ಎಲ್ಲರೂ ಕರ್ಣನನ್ನು ನಿಂದಿಸುತ್ತಾರೆ. ಸುಯೋಧನ ಸಹಾಯಕ್ಕೆ ಬರಬಹುದೆಂದು ಅವನೆಡೆ ನೋಡುತ್ತಾನೆ. ಸುಯೋಧನ ಕರ್ಣನೆಡೆಗೆ ನೋಡದೆ ತಲೆಬಗ್ಗಿಸಿ ಕುಳಿತಿದ್ದಾನೆ)

ಕರ್ಣ : (ಅವಮಾನ ತಡೆಯದೆ) ಈ ಯುದ್ಧದಲ್ಲಿ ಭೀಷ್ಮ ಪಾಂಡವರನ್ನು ಜಯಿಸಿದರೆ, ನಾನು ಕಾಡಿಗೆ ಹೋಗುತ್ತೇನೆ. ಆ ಪಾಂಡವರ ಕೈಯಲ್ಲಿ ಭೀಷ್ಮರು ಸತ್ತರೆ ಆಗ ಮಾತ್ರ ನಾನು ಶತ್ರುಗಳನ್ನು. ಕೊಲ್ಲಲು ಪ್ರಾಣವನ್ನು ಪಣಕ್ಕಿಟ್ಟು ಹೋರಾಡುತ್ತೇನೆ. " ಅನ್ನೆಗಂ ನಾಂ ಬಿಲ್ವಿಡಿಯೆಂ ಇದು ನನ್ನ ಪ್ರತಿಜ್ಞೆ."

ಭೀಷ್ಮ : "ಕಲಿತನದುರ್ಕು, ಜವ್ವನದ ಸೊರ್ಕು, ನಿಜೇಶನ ನೆಚ್ಚು ಮಿಕ್ಕ ತೋಳ್ಬಲದ ಪೊಡರ್ಪು.. ಕರ್ಣ ನಿನ ಗುಳ್ಳೆನಿತು ಎನಗುಂಟೆ. ಇದು ಮಹಾಭಾರತದ ಯುದ್ಧ. ಸೂಳ್ ಪಡೆಯೆಪ್ಪುದು ಕಣಾ".

(ಕರ್ಣ ಸುಯೋಧನನ ಕಡೆಗೆ ನೋಡಿದಾಗ, ಸುಯೋಧನ ತಲೆ ತಗ್ಗಿಸಿದ್ದಾನೆ. ಸಭೆ ಸ್ತಬ್ಧವಾಗುತ್ತದೆ)

(ದೃಶ್ಯಕ್ಕೆ ಬದಲಾಗುತ್ತದೆ)

ಪಂಪ : ಇದೇ ಜನ ಆವತ್ತು ಸಹಸ್ರ ಜನರ ಎದುರು ಪ್ರದರ್ಶನ ರಂಗದ ಮೇಲೆ ನಿನ್ನನ್ನ ಜಾತಿ ಮಾತುಗಳಿಂದ ಮೂದಲಿಸಿ ಅವಮಾನಿಸಿದಾಗ ಎಲ್ಲರನ್ನೂ ದಿಕ್ಕರಿಸಿ ನಿನಗೆ ಅಂಗಾಧಿಪತಿ ಪಟ್ಟ ಕಟ್ಟಿದನಲ್ಲ. ಆದರೆ, ಯುದ್ಧ ಪಟ್ಟಾಭಿಷೇಕದಲ್ಲಿ ಅದು ಗುಪ್ತ ಸಭೆಯ ನಡುವೆ ಅದೇ ಜನ ಮತ್ತೆ ನಿನ್ನನ್ನು ಅವಮಾನಿಸಿದಾಗ, ನಿನ್ನೀ ಗೆಳೆತನವನ್ನೇ ಅವನು ನನ್ನಿ ಎಂದು ಬಗೆದಿದ್ದರೆ, ನೀನಾಗಿಯೇ ಕೇಳಿಕೊಂಡಾಗಲೂ ನಿನಗೆ ಪಟ್ಟ ಕಟ್ಟದೆ ಭೀಷ್ಮನಿಗೆ ಪಟ್ಟ ಕಟ್ಟಿದನಲ್ಲ, ಯಾಕೆಂದು ಬಲ್ಲೆಯೇನು? ನಿನಗೆ ಪಟ್ಟ ಕಟ್ಟಿದರೆ ಯುದ್ಧದಲ್ಲಿ ಭೀಷ್ಮ, ದ್ರೋಣರ ಅಷ್ಟೇ ಅಲ್ಲ ಅನೇಕ ರಾಜರು ಸಾಮಂತರುಗಳ ಬೆಂಬಲ ಸಿಗದೇ ಹೋಗುತ್ತಿತ್ತು. ಅದಕ್ಕೆ, ಸ್ನೇಹಕ್ಕೆ ಎಷ್ಟೇ ಅವಮಾನವಾದರೂ ತುಟಿ ಎರಡು ಮಾಡದೆ ಕುಳಿತಿದ್ದ. ಕೆಲವರು ನಂಬಲೆಂದೇ ಹುಟ್ಟಿರುತ್ತಾರೆ ನಿನ್ನ ಹಾಗೆ, ರಾಜ ಧರ್ಮದ ಮುಂದೆ ವ್ಯಕ್ತಿ ಸಂಬಂಧಗಳೆಲ್ಲ ಗೌಣ, ಅಧಿಕಾರ ಸಂಬಂಧವೊಂದೇ ಅಂತಿಮವೆಂದು ನೀನೇಕೆ ಗ್ರಹಿಸಲಿಲ್ಲ ಕರ್ಣ?

ಕರ್ಣ : ನನ್ನ ಜೀವನ ಎಷ್ಟೊಂದು ವಿಚಿತ್ರಗಳಿಂದ ಕೂಡಿಕೊಂಡಿದೆ. ನನ್ನ ನೋವುಗಳ ಮೂಲವನ್ನು ಅರಿಯಬೇಕು ಎಂಬ ಹಂಬಲಕ್ಕೆ ನಾನೇಕೆ ಸಿಕ್ಕಿಕೊಂಡೆ? ನನ್ನ ಸಾವನ್ನ ಯೋಚಿಸಿದಾಗಲೆಲ್ಲಾ ಮತ್ತೆ ಮತ್ತೆ ಎಷ್ಟೋ ಬಾರಿ ಸತ್ತಿದ್ದೇನೆ ಒಡೆಯ.

ಪಂಪ : ಕರ್ಣ, ಅಂದಿನ ನಿನ್ನ ಅವಮಾನಗಳ ಕಾರ್ಯಕಾರಣದ ಬೆನ್ನು ಹತ್ತುವುದು ಎಂಥ ಅಪಾಯಕಾರಿ ಎನ್ನುವುದು ನಿನಗೆ ಗೊತ್ತೆ. ನಿನ್ನ ಸಾವು ದುರ್ಯೋಧನನಿಗೆ ಸತ್ಯಂತಪ ಋಷಿಗಳು ನಿನ್ನ ಜನ್ಮ ರಹಸ್ಯ ತಿಳಿಸಿದಂದು, ಕೃಷ್ಣ ನಿನ್ನನ್ನ ಯುದ್ಧದ ಮುನ್ನಾ ದಿನ ಭೇಟಿ ಮಾಡಿ ಪಾಂಡವರನ್ನು ಸೇರುವಂತೆ ಆಹ್ವಾನಿಸಿದನಲ್ಲ ಅಂದು, ಸೂರ್ಯದೇವರ ಮಾತುಗಳನ್ನು ನೀನು ಹೀಗಳೆದೆಯಲ್ಲ ಅಂದೇ, ಕುಂತಿ ಗಂಗಾ ನದಿಯಿಂದ ಮತ್ತೆ ತಾಯ್ತನದ ಸತ್ತೆಯನ್ನು ಬಾಚಿಕೊಂಡಳಲ್ಲ ಅಲ್ಲೇ ನೀರಿನಲ್ಲಿ ನೀನಾಡಿ ಬೆಳೆದ ಅಲೆಗಳಲ್ಲಿ ಅಡಗಿತ್ತು ನಿನ್ನ ಸಾವು.

(ಅನುದೃಶ್ಯ)

(ಗಂಗಾ ನದಿಯ ಮಧ್ಯದಲ್ಲಿ ನಿಂತು ಕರ್ಣ ಅರ್ಘ್ಯ ಕೊಡುತ್ತಿರುತ್ತಾನೆ. ನೀರ ದಡದಲ್ಲಿ ಕುಂತಿ ನಿಂತಿರುತ್ತಾಳೆ. ಆಕೆ ದುಃಖತಪ್ತಳಾಗಿ ಗಂಗೆಯನ್ನು ಮುಟ್ಟಿ)

ಕುಂತಿ : ಅಮ್ಮಾ ಗಂಗೆ. ನನ್ನಂತಹ ನತದೃಷ್ಟೆ ಈ ಹಿಂದೆ ಯಾರಾದರೂ ಹುಟ್ಟಿದ್ದರೆ? ನಿನ್ನನ್ನ ಸೋಂಕಿದ್ದರೆ? ಹೆತ್ತ ಪಿಂಡವನ್ನ ಅಮ್ಮಾ ಎನ್ನುವ ಮೊದಲೇ ನಿನ್ನ ಮಡಿಲಿಗೆ ಹಾಕಿ ಎಳ್ಳು ನೀರು ಬಿಟ್ಟಿದ್ದೆ. ಈ ಮಾಯೆ ನೋಡು. ಅದೇ ಕೂಸಿನ ಬಾಯಿಂದ ಒಂದೇ ಒಂದು ಸಾರಿ ಅಮ್ಮಾ ಎನಿಸಿಕೊಳ್ಳುವ ಈ ಕ್ಷಣಕ್ಕೆ ಹೇಗೆ ಈದ ನಾಯಿಯ ಹಾಗೆ ತಹತಹಿಸುತ್ತಿದ್ದೇನೆ.

ಗಂಗೆ : (ನೀರಿನಿಂದ ಕಾಣಿಸಿಕೊಂಡು) ಕುಂತಿ ನೀನು ಕೈಯೆಡೆಯಾಗಿ ಕೊಟ್ಟ ಮಗನನ್ನು ಇದೋ ಮತ್ತೆ ನಿನ್ನ ಮಡಿಲಿಗೆ ಒಪ್ಪಿಸುತ್ತಿದ್ದೇನೆ. ಇನ್ನಾದರೂ ಅವನನ್ನ ಉಳಿಸಿಕೊ. (ನೀರಿನಲ್ಲಿ ಹರಿದು ಮರೆಯಾಗುತ್ತಾಳೆ)

ಕುಂತಿ : ತಾಯಿಕರುಳು ತೊಳೆದುಕೊಳ್ಳಲು ನಿನ್ನಲಿಗೆ ಅಂದು ಬಂದಿದ್ದೆ. ಇಂದು ಕರುಳನ್ನ ಕತ್ತರಿಸಿಕೊಳ್ಳಲು ಬಂದಿದ್ದೇನೆ. ನನ್ನ ನಾಲಿಗೆಯಾದರೂ ಏಕೆ ಸೇದಿ ಹೋಗುತ್ತಿಲ್ಲ? ಹೇಗೆ ತಾನೆ ಅವನನ್ನ ಕಂದಾ ಎಂದು ಕರೆದು ಬಲಿಗೊಳ್ಳಲಿ, ಅಯ್ಯೋ! (ಕುಸಿದು ಬೀಳುತ್ತಾಳೆ)

ಕರ್ಣ : (ನದಿಯ ಮಧ್ಯ) ತಂದೆ ಸೂರ್ಯ ದೇವ. ನಾನು ತಬ್ಬಲಿಯಲ್ಲ. ಅದೋ ನನ್ನ ತಾಯಿ ಇಂದು ನನ್ನನ್ನ ಮಗನೆಂದು ಗಂಗೆ ಸಾಕ್ಷಿಯಾಗಿ ಘೋಷಿಸಲು ಬಂದಿದ್ದಾಳೆ. ಪಾಪ! ಮಾತನಾಡಲು ನಾಲಿಗೆ ಕಟ್ಟಿಹಾಕಿದೆ. ನನ್ನ ಬಗೆಗಿನ ವಾತ್ಸಲ್ಯ ಚೆನ್ನಾಗಿ ಪಾಚಿಗಟ್ಟಿರಬೇಕು. ಆಕೆ ನುಡಿಯದಿದ್ದರೇನು. ಅದೋ ಆ ನೀರಿನಲ್ಲಿ ಪ್ರತಿಬಿಂಬಿಸುವ ಆ ತಾಯ ಕಣ್ಣುಗಳನ್ನ ನೋಡಿ. ಮಾತೃ ವಾತ್ಸಲ್ಯ ಹೇಗೆ ಕೆನೆಕಟ್ಟಿದೆ.

ಸೂರ್ಯ : (ಕೋಪದಿಂದ) ಅಯ್ಯೋ ಹುಚ್ಚ ನನ್ನ ಮಗನೆ! ಇವಳು ನಿನ್ನ ತಾಯಿ ಕುಂತಿಯಲ್ಲ. ಮೃತ್ಯು ದೇವತೆ. ಕರುಳನ್ನ ಬಾಚಿಕೊಳ್ಳಲು ಬಂದಿಲ್ಲವೊ ದಡ್ಡ, ನಿನ್ನ ಹೆತ್ತಿದ್ದಕೆ. ಸುಂಕ ಕೇಳಲು ಬಂದಿದ್ದಾಳೆ. ಆಕೆ ಹೆಣ್ಣಲ್ಲ ಮೃತ್ಯು, ಎಚ್ಚರ.

ಕರ್ಣ : ತಂದೆ, ನಾನು ಮೀನುಂಗುಲಿಗನಾಗಿದ್ದಾಗಲೇ ವ್ರತ ಭ್ರಷ್ಟನಾಗಲಿಲ್ಲ. ಈಗ ಕುಂತಿಯ ಮಗನೆಂದು ತಿಳಿದ ಮೇಲೆ ಇಲ್ಲ ಎನ್ನುವುದು ಹೇಗೆ? ಇದು ನಿಮ್ಮ ಹೆಸರಿಗೂ ಕಳಂಕವಲ್ಲವೆ? (ನಕ್ಕು) ಸಾವು ತಾನೆ! ಸಾಲ ಕೊಟ್ಟವರು ಎಂದಾದರೂ ಮರಳಿ ಕೇಳದಿರುತ್ತಾರೆಯೇ?

ಸೂರ್ಯ : ಅಯ್ಯೋ ಮರುಳೆ! ಹಿಂದು ಮುಂದು ಯೋಚಿಸದೆ, ಕರ್ಣ ಕುಂಡಲಗಳನ್ನ ಇಂದ್ರನಿಗೆ ದಾನ ಮಾಡಿದ್ದು ಹೀಗೆಯೇ ಅಲ್ಲವೇ? ಅದರ ಬಗ್ಗೆ ನಾನೀಗ ಮಾತನಾಡಲಾರೆ. ನನ್ನ ಮಾತು ಕೇಳೋ! ಕುಂತಿ ಏನು ಕೇಳಿದರೂ ಹೂಂಗುಡಬೇಡ. ಆಕೆ ನಿನ್ನ ಮೃತ್ಯುವಿನ ಗರ್ಭ. ನಿನಪಿರಲಿ ಕಂದ! "ಕೊಲ್ಲಲಲ್ಲದೆ ಬರಳು ಕುಂತಿ"

(ಅನುದೃಶ್ಯ ದೃಶ್ಯಕ್ಕೆ ಪರಿವರ್ತನೆಯಾಗುತ್ತದೆ)

ಕರ್ಣ : ಅಯ್ಯೋ ಕವಿಗಳೆ, ನೀವು ಕೂಡಾ ಇರುಳು ಗಣ್ಣಿನವರೆ. ಕೃಷ್ಣ ಬಂದು ನನ್ನನ್ನು ಅಧಿಕಾರದ ಆಸೆ ಹುಟ್ಟಿಸಿ ಕೊಲ್ಲಲು ನೋಡಿದ. ಕುಂತಿ ಬಂದು ತನ್ನ ಕರುಳನ್ನು ಕೊರಳಿಗೆ ನೇಣಿನಂತೆ ಸುತ್ತಿ ಕೊಲ್ಲಲು ಯತ್ನಿಸಿದಳು ನಿಜ. ಆದರೆ ನಾನು ಸತ್ತಿದ್ದು ಹೇಗೆ ಗೊತ್ತೆ? ಅಂಬೆ ಭೀಷ್ಮನನ್ನ ಬೆಂಬತ್ತಿ ಕೊಂದಂತೆ. ದ್ರೌಪದಿ ಕೊಂದಳು ನನ್ನ, ಅಂದು ಸ್ವಯಂವರದಲ್ಲಿ ನಾನು ಮೀನನ್ನು ಬೇಧಿಸಲು ಹೂಡಿದೆನಲ್ಲ ಅದೇ ಬಾಣವೇ ಬಲಿ ಬೇಡಿತು ನನ್ನ, ಹೂಡಿದವರು ಯಾರು ಗೊತ್ತೆ? ಪಾಂಚಾಲಿ!

ಪಂಪ : (ಆಶ್ಚರ್ಯದಿಂದ) ಪಾಂಚಾಲಿ! ನಾನೂ ಕೂಡಾ ಕುಂತಿ ಬಂದು ಹೋದ ನಂತರ ನೀನು ತೊಟ್ಟ ಬಾಣದಲ್ಲಿ ನಿನ್ನ ಸಾವು ಅಡಗಿತ್ತು ಅಂದುಕೊಂಡೆ, ಈ ಕವಿಯ ಕಣ್ಣಿಗೂ ರೆಪ್ಪೆಗಳಿರುವುದು ಸುಳ್ಳಲ್ಲ. ಅನಿವಾರ್ಯವಾಗಿ ಮಿಟುಕಿಸುವ ಅರೆ ಕ್ಷಣಗಳಲ್ಲಿ ಅದೆಷ್ಟು ಸತ್ಯಗಳು ಹೀಗೆ ನೀರಿನಲ್ಲಿ ಮೀನುಗಳು ನುಣುಚಿಕೊಳ್ಳುವ ಹಾಗೆ ನುಣುಚಿ ಕೊಂಡು ಬಿಡುತ್ತವಲ್ಲವೇ? ಈ ಮಹಾಭಾರತ ಕಥೆಯೇ ಹೋಗೆ ಅಪೂರ್ಣಗಳ ದೊಡ್ಡ ಕಂತೆ. ಇದನ್ನು ಪೂರ್ಣಗೊಳಿಸಲು ಪ್ರಯತ್ನಿಸಿದವರೆಲ್ಲಾ ಇನ್ನಷ್ಟು ಅಪೂರ್ಣಗಳನ್ನ ಸೃಷ್ಟಿಸಿಬಿಡುತ್ತಾನೆ.

ಕರ್ಣ : ಅವತ್ತು ನಾನು ಸೇನಾಪತಿಯಾದ ಮೊದಲ ರಾತ್ರಿ, ಈ ಮೊದಲ ರಾತ್ರಿಗಳೇ ಹೀಗೆ, ರೋಮಾಂಚನದಲ್ಲಿ ಮಿಂಚುಗಳಲ್ಲಿ ಎಂತೆಂಥ ನಗ್ನ ಸಿಡಿಲುಗಳು ಹುದುಗಿರುತ್ತವೋ? ಆ ರಾತ್ರಿ ದ್ರೌಪದಿ ಯುದ್ಧ ಭೂಮಿಯಲ್ಲಿ ನನ್ನ ಭೇಟಿಯಾದಳು.

●

ದೃಶ್ಯ – ೭

[ಯುದ್ಧಭೂಮಿ, ಕರ್ಣ ತನ್ನ ಬಿಡಾರದಲ್ಲಿ ಮರುದಿನದ ಯುದ್ಧ ಸಿದ್ಧತೆಯಲ್ಲಿ ತೊಡಗಿದ್ದಾನೆ. ಬಿಡಾರದ ಹೊರಗೆ ಮುಖ ಮುಚ್ಚಿಕೊಂಡ ಹೆಣ್ಣು ಆಕೃತಿಯೊಂದು ಪ್ರವೇಶಿಸುತ್ತದೆ]

ಕರ್ಣ : (ಕತ್ತಿ ಮಸೆಯುತ್ತಿರುತ್ತಾನೆ. ಸ್ವಗತ) ನೆನ್ನೆಯವರೆಗಿನ ಪ್ರಯತ್ನಗಳಂತೆ ನಾಳೆಯು ನಿರರ್ಥಕವಾಗುವುದನ್ನ ತಪ್ಪಿಸಲೇಬೇಕು. ನಾವು ಯೋಚಿಸುವುದಕ್ಕೂ ಮೊದಲೇ ಅದನ್ನ ಊಹಿಸಿ ಪ್ರತಿ ತಂತ್ರ ರೂಪಿಸುತ್ತಾನೆ ಕೃಷ್ಣ, ಇರಲಿ, ನಾಳೆ ಈ ಅಂಬಿಗನ ಜಲ ತಂತ್ರದ ರುಚಿಯನ್ನ ಆ ಪಾಂಡವರಿಗೆ ತೋರಿಸುತ್ತೇನೆ.

ಧ್ವನಿ : (ರಂಗದ ಹೊರಗಿನಿಂದ) ಯಾರದು? ನಿಲ್ಲು! ಮುಂದೆ ಹೆಜ್ಜೆಯಿಟ್ಟರೆ, ಪರಿಣಾಮ ನೆಟ್ಟಗಾಗಲೊಲ್ಲದು. ಯಾರು ನೀನು?

ಹೆಣ್ಣು : ನಾನು ಹೆಣ್ಣು

ಧ್ವನಿ : ಹೆಣ್ಣೆಂದರೆ?

ಹೆಣ್ಣು : ಯುದ್ಧ ದೇವತೆ!

ಧ್ವನಿ : ಈ ಅವೇಳೆಯಲ್ಲಿ ಇಲ್ಲಿಗೇಕೆ ಬಂದೆ?

ಹೆಣ್ಣು : ಬಲಿ ಬೇಕು.

ಕರ್ಣ : (ಸ್ವಗತ) ಇಂಥ ಅವೇಳೆಯಲ್ಲಿ ಈ ಯುದ್ಧ ಭೂಮಿಯಲ್ಲಿ ನನ್ನ ಭೇಟಿ ಮಾಡ ಬಂದವರು ಯಾರಿರಬಹುದು? ಇದು ಕೃಷ್ಣನ ಮತ್ತೊಂದು ಕುತಂತ್ರವಲ್ಲ ತಾನೆ? (ಅಷ್ಟರಲ್ಲಿ ಆಕೃತಿ ರಂಗ ಪ್ರವೇಶಿಸುತ್ತದೆ) (ಪ್ರಕಾಶದಲ್ಲಿ) ಯಾರು ನೀನು, ಯಾಕೆ ಬಂದೆ? ನನ್ನಿಂದ ಏನಾಗಬೇಕು? ಕೃಷ್ಣ ಧೂತೆಯಾಗಿದ್ದರೆ ಬಂದ ದಾರಿಯಲ್ಲೇ ಹಿಂತಿರುಗು.

ಹೆಣ್ಣು : ರಣರಂಗದಲ್ಲಿ ದಾನಶೂರನ ದಾನಕ್ಕೆ ಬರ ಬಿತ್ತೇನು.

ಕರ್ಣ : ಏನು ಬೇಕು ನಿನಗೆ? ಅದಕ್ಕೂ ಮುಂಚಿತವಾಗಿ ನೀನು ಯಾರು ಅದನ್ನು ಹೇಳು.

ಹೆಣ್ಣು : ನಿನ್ನಲ್ಲಿ ಮಾತನಾಡಲುಂಟು.

ಕರ್ಣ : (ಆಸನವನ್ನ ತೋರಿಸಿ) ತಾವು ಯಾರು ಅಂತ ಗೊತ್ತಾಗಲಿಲ್ಲ? ಈ ಯುದ್ಧ ಭೂಮಿಯಲ್ಲಿ ಇದಕ್ಕಿಂತ ಉತ್ತಮ ಆಸನವನ್ನು ಕೊಡಲಾರದ್ದಕ್ಕೆ ಕ್ಷಮೆಯಿರಲಿ.

(ಹೆಣ್ಣು ನಿಧಾನವಾಗಿ ಮುಸುಕನ್ನ ತೆಗೆದು ಆಸನದ ಮೇಲೆ ಇಡುತ್ತಾಳೆ)

ಕರ್ಣ : (ಬೆಚ್ಚಿ-ಅಚ್ಚರಿಗಳಿಂದ) ಕೃಷ್ಣೆ! ನೀನು? (ಓಡಿಬಂದು ಕೈಹಿಡಿದುಕೊಳ್ಳುತ್ತಾನೆ, ತಕ್ಷಣ ಕೈ ಬಿಟ್ಟು) (ನಿಯಂತ್ರಿಸಿ) ಕ್ಷಮಿಸಿ ಮಹಾರಾಣಿಯವರೆ!

ದ್ರೌಪದಿ: ಸಧ್ಯ ನನ್ನ ಗುರುತು ಸಿಕ್ಕಿತಲ್ಲ!? ಯುದ್ಧೋನ್ಮಾದದ ಉದ್ವೇಗದಲ್ಲಿರುವ ಮಹಾ ಸೇನಾಪತಿಗಳಿಗೆ ನನ್ನ ಗುರುತು ಸಿಕ್ಕುವುದು ಅಸಾಧ್ಯವೆಂದು ಕೊಂಡಿದ್ದೆ.

ಕರ್ಣ : (ಸ್ವಗತ) ನನ್ನ ನಾಲಗೆಯಲ್ಲಿ ಸೆರಗೊಂಡ ಮಾತುಗಳು ಬಂಧ ಹರಿದು ಹೊರಬರಲು ಏಕೆ ಹೀಗೆ ತವಕಿಸುತಿವೆ?.

ದ್ರೌಪದಿ: ಎಷ್ಟು ದಿನ ಎಷ್ಟು ವರ್ಷ... ಈ ಯಾತನೆಯನ್ನು ಕಟ್ಟಿದ ಗರ್ಭದ ಭಾರವನ್ನು ಹೊತ್ತು ಬಸವಳಿದಿದ್ದೇನೆ.

ಕರ್ಣ : ನಿನ್ ಕಣ್, ಮಿಂಚಿನಿಂದಾಗಿ ಗಾಯ ಗುಂಡಿಗೆ ಮೇಲೆ ಮಾಸಿದ್ದರೂ ನೋವು ಇನ್ನೂ ಅಳಿದಿಲ್ಲ. ಹೇಳಿಕೊಳ್ಳದ ನೋವಿಗಿಂತ ಅಧಿಕ ಹಿಂಸೆ ಬೇರಾವುದು ಇದ್ದಿರಲಾರದು

ದ್ರೌಪದಿ: ವರ್ತಮಾನಕ್ಕೆ ಹೆದರುವವರೆಲ್ಲ ನೆನಪುಗಳ ದಾರಿಯಲ್ಲಿ ನಡೆಯುವವರೇ. ಆದರೆ ನನ್ನ ನೆನಪಿನ ದಾರಿಯುದ್ದ ಉರಿದು ಬಿದ್ದ ಕೆಂಡಗಳು ಬೂದಿಯ ಮುಸುಕೊದ್ದು ಮಲಗಿವೆ. ನಾನು ತಿರುಗಿ ಕಾಲಿಟ್ಟರೆ ಸಾಕು ಬಗ್ಗನೆ ಹೊತ್ತಿಕೊಳ್ಳುತ್ತವೆ.

ಕರ್ಣ : ಸರಿ ರಾತ್ರಿಯಲ್ಲಿ ಪರಪುಷನ ಹತ್ತಿ ಕರೆತರುವ ದಾರಿಯೂ ಕೆಂಡದ ದಾರಿಯೆ!

ದ್ರೌಪದಿ: ಮನಸ್ಸು ಕೈ ಹಿಡಿದ ಪುರುಷನೊಂದಿಗೆ ಬಾಳುವ ಅವಕಾಶವನ್ನು ಈ ಬದುಕು ಯಾವ ಹೆಣ್ಣಿಗೆ ತಾನೆ ಕೊಟ್ಟಿದೆ? ಹಾಗೆ ನೋಡಿದರೆ ನನಗೆ

ಪರ ಪುರುಷರನ್ನ ಸರಿ ರಾತ್ರಿಯಲ್ಲಿ ಭೇಟಿಯಾಗುವಲ್ಲಿ ಸಾಕಷ್ಟು ಅಭ್ಯಾಸವುಂಟು.

ಕರ್ಣ : ನೀನು ಪಾಂಡವರ ಧರ್ಮಪತ್ನಿ, ಕುರುವಂಶದ ಮಹಾರಾಣಿ.

ದ್ರೌಪದಿ: ಮಹಾರಾಣಿ! (ನಿಟ್ಟುಸಿರು ಬಿಟ್ಟು) ಗಂಡಾಗಿ ಹುಟ್ಟಿದವನಿಗೆ ಕಳೆದುಕೊಳ್ಳುವುದು ಸುಲಭ. ಅದಕ್ಕೆ ತ್ಯಾಗದ ಲೇಪನ ಬೇರೆ. ಆದರೆ ಹೆಣ್ಣಿಗೆ ಪಾತಿವ್ರತ್ಯದ ಬೇಲಿ. ಹರಿಯುವ ನೀರಿನಲ್ಲಿ ನಾವು ನಿಂತಿದ್ದರು ಸಹ ನಮ್ಮ ನೆರಳು ನೀರಿನಲ್ಲಿ ಹರಿದು ಹೋಗುತ್ತಿರುತ್ತದೆ.

ಕರ್ಣ : ಹೌದು! ನಾನು ನದಿಯಲ್ಲಿ ಬೆಳೆದವನು. ನೀನು ಅಗ್ನಿಯಲ್ಲಿ ಹುಟ್ಟಿದವಳು, ಅದಕ್ಕೆ ಇರಬೇಕು ಅತ್ತ ಹರಿದೂ ಹೋಗದ ಇತ್ತ ಉರಿದೂ ಹೋಗದ ಸಂಬಂಧ ನಮ್ಮಲ್ಲಿ ಉಳಿದು ಹೋಗಿದೆ.

ದ್ರೌಪದಿ: ಈ ನಿಜಗಳೇಕೆ ಇಷ್ಟು ನಿಧಾನವಾಗಿ ತಿಳಿಯುತ್ತವೆ. ನೀನು ಪಾಂಡವನಂತೆ! ಕೃಷ್ಣ–ಕುಂತಿಯರು ಮಾತನಾಡುವುದನ್ನು ಕದ್ದು ಕೇಳಿಸಿಕೊಂಡೆ.

ಕರ್ಣ : ನಾನು ಪಾಂಡವನಲ್ಲ, ನಾನು ರಾಧೇಯ, ಕೌರವನ ಸಾಮಂತ, ನಾನು ಕುರವಂಶದ ಗುಲಾಮ. ಆ ಮಾತು ಕೇಳಿ ಒಂದು ಕ್ಷಣ ಪುಳಕಗೊಂಡಿದ್ದು ನಿಜ. ನೀರ ಮೇಲಿನ ಗುಳ್ಳೆಯ ಹಾಗೆ. ನೀವು ಕೂಡಾ ನನ್ನನು ಪಾಂಡವನೆಂದು ಕರೆದು ಅಪಮಾನ ಮಾಡಬೇಡಿ.

ದ್ರೌಪದಿ: ಅಪಮಾನ ಎದುರುಗೊಳ್ಳುವುದು ನಿನಗೆ ಜಾಯಮಾನವಾಗಿ ಬಿಟ್ಟಿದೆ ಕರ್ಣ. ಅಪಮಾನ ಮಾಡಿದವನು ನೀನು. ನನ್ನ ಕಣ್ಣಲ್ಲಿ ಕಣ್ಣಿಟ್ಟು ಆ ಒಂದು ಘಳಿಗೆಯಲ್ಲಿ ಎಷ್ಟೊಂದು ಕನಸುಗಳನ್ನ ಹುಟ್ಟಿಸಿಬಿಟ್ಟೆ, ನಾನೆಂಥ ಸ್ವಪ್ನದಲ್ಲಿ ಉಯ್ಯಾಲೆಯಾಡುತ್ತಿದ್ದೆ. ಇದ್ದಕ್ಕಿದ್ದಂತೆ ಯಾರೋ ಜೀಕುವ ಉಯ್ಯಾಲೆಯನ್ನು ತಡೆದು ನಿಲ್ಲಿಸಿದಂತಾಗಿ ಸ್ವಪ್ನ ಕಡಿದು ಬಿತ್ತು. ಅರ್ಜುನ ನನ್ನ ಕೈ ಹಿಡಿದಿದ್ದ. ಆ ಹೊತ್ತಿನಿಂದ ಈ ಹೊತ್ತಿನವರೆಗೂ ಆ ಮುಕ್ಕಾದ ಸ್ವಪ್ನದಲ್ಲೇ ಜೀವಿಸುತ್ತಿದ್ದೇನೆ. ನನ್ನ ಗಂಡಂದಿರೆಲ್ಲ ಏಕಾಂತದಲ್ಲಿ ನಿನ್ನ ಹಾಗೆ ತೋರುತ್ತಾರೆ. ನಿನ್ನ ಒಂದು ಕಣ್ ಸನ್ನೆ ಸಾಕಿತ್ತು. ನಾನು ಓಡಿ ಬಂದು ನಿನ್ನ ತೋಳಿನಲ್ಲಿರುತ್ತಿದ್ದೆ. ಆ ಕ್ಷಣವನ್ನ ಕಾದಿದ್ದೇ ಬಂತು, ಕಣ್ ಸನ್ನೆ ಇರಲಿ, ಕನಿಷ್ಠ ಮುಖ ಎತ್ತಿ ಕೂಡಾ ನೋಡದೆ. ಎಂಥ ನಿರಾಶೆಗೆ ನನ್ನನ್ನ ತಳ್ಳಿದೆ.

ಕರ್ಣ : ನನ್ನ ಬುದುಕಿನಲ್ಲಿ ಅನಿರೀಕ್ಷಿತಗಳದ್ದೇ ಕಾರುಬಾರು. ನದಿಯ ದಡದಲ್ಲಿ ಹುಟ್ಟನ್ನ, ಆಟದ ಅಂಗಳದಲ್ಲಿ ಸಿಂಹಾನವನ್ನ ಸ್ವಯಂವರದಲ್ಲಿ ವಧುವನ್ನು

ಆಕಸ್ಮಿಕವೆಂಬಂತೆ ಪಡೆದುಕೊಂಡೆ.

ಈ ಆಕಸ್ಮಿಕಗಳನ್ನೇ ನೋಡು ನನ್ನನ್ನು ವಿನಾಶದ ದಾರಿಯಲ್ಲಿಯೇ ಕೈಹಿಡಿದು ಕರೆತಂದಿವೆ. ಇಲ್ಲದೆ ಹೋಗಿದ್ದರೆ ಯುದ್ಧ ಭೂಮಿಯ ಮರಣಮುಖದಲ್ಲಿ ನಿನ್ನನ್ನು ಹೀಗೆ ಭೇಟಿಯಾಗಬೇಕಿರಲಿಲ್ಲ.

ದ್ರೌಪದಿ: ಹಚ್ಚಿಟ್ಟ ಸುಗಂಧ ಧೂಪಗಳು, ತಣ್ಣನೆ ಉರಿಯುವ ಮಂದ ದೀಪಗಳು, ಹಾಸಿಗೆ ತುಂಬ ಮಲ್ಲಿಗೆಯ ಘಮಲು, ನಮ್ಮ ಭೇಟಿ ಸಜ್ಜೆ ಮನೆಯಲ್ಲಿ ಈಗಲೂ ನನ್ನ ಮನೋರಂಗದಲ್ಲಿ ಸಿಂಗರಿಸಿದ ಸಜ್ಜೆ ಒಂದೂ ಹೂ ನಲುಗುದ ಪಲ್ಲಂಗ, ಕಿರುಬೆರಳ ಉಗುರಿನಲ್ಲಿ ಜ್ಯೋತಿಯನ್ನು ಮುಡಿಸಿ ಕದ ತೆರೆದು ನೀನು ಬರಬಹುದು ಅಂತ ಕಾಯುತ್ತಲೇ ಇದ್ದೇನೆ. ಅಗ್ನಿ ಜಲಗಳ ಸಮಾಗಮಕ್ಕೆ ಕಾಲ ಸನ್ನಿಹಿತವಾಗಲೇ ಇಲ್ಲ. (ಕರ್ಣನನ್ನು ಹಿಂದಿನಿಂದ ಬಂದು ಅಪ್ಪುತ್ತಾಳೆ. ಕರ್ಣ ಬೆಚ್ಚಿ ದೂರ ಓಡುತ್ತಾನೆ) ನಾನು, ಹೀಗೆ ಒಬ್ಬಂಟಿ, ನಿತ್ಯ ವಿರಹಿ.

ಕರ್ಣ : ನೀನು ಗೋರಿಗಳನ್ನ ಅಗೆದು ಎಲುಬುಗಳನ್ನ ಗುರುತಿಸುವ ಪ್ರಯತ್ನ ಮಾಡುತ್ತಿರುವೆ.

ದ್ರೌಪದಿ: ನನಗೆ ಒಂದು ಬಲವಾದ ಅನುಮಾನ ಕರ್ಣ, ನಿನ್ನ ಶೌರ್ಯ ಸಾಹಸಗಳನ್ನ ನೀನು ಕೀಳರಿಮೆಗೆ ಒತ್ತೆಯಿಟ್ಟಿರಬಹುದು ಅಂತ. ರಾಜಸಭೆಯಲ್ಲಿ ದುಶ್ಯಾಸನ, ಮೈ ಚರ್ಮ ಸುಲಿದ ಹಾಗೆ ನನ್ನ ವಿವಸ್ತ್ರಗೊಳಿಸುತ್ತಿದ್ದರೆ. ನೀನು ಕೂಡಾ ಗೊಳ್ಳನೆ ನಕ್ಕೆಯಲ್ಲ. ಆಗಲೂ ನಿನ್ನೊಳಗೇ ಇದ್ದ ಅಸಹಾಯಕ ಹೆಣ್ಣೊಬ್ಬಳ ಅಳುವಿನ ಸದ್ದು ನಿನಗೆ ಕೇಳಲಿಲ್ಲವೆ. ಪ್ರೀತಿಸಿದವನ ವಕ್ಷದಲ್ಲೇ ಹೆಣ್ಣು ಇರುತ್ತಾಳೆ ಎನ್ನುತ್ತಾರೆ. (ನಕ್ಕು) ನೀನು ಕೂಡಾ ಆದಿನ ಎಲ್ಲರಂತೆ ಯಕಃಶ್ಚಿತ್ ಗಂಡಸಾಗಿಬಿಟ್ಟೆ.

ಕರ್ಣ : ನಿಜ ಹೇಳಲಾ ದ್ರೌಪದಿ, ನನಗೆ ನೀನು ದಕ್ಕದೆ ಹೋದ ನಿರಾಶೆ ಎದೆಯಲ್ಲಿ ಹುಳಿಯಾಗಿ ಹೀಗೆ ವಿಷವಾಗಿದ್ದಿರಬಹುದು ಅಂತ ನನಗೆ ಗೊತ್ತಾದುದ್ದೇ ಅಂದು. ಆ ಕಳಂಕವನ್ನ ತೊಳೆದುಕೊಳ್ಳಲು ನಾನೆಷ್ಟು ಕಣ್ಣೀರು ಹರಿಸಿದರೂ ಆ ಕಲೆಯಿನ್ನೂ ಅಳಿಸಿಲ್ಲ.

ದ್ರೌಪದಿ: ನಿನ್ನ ತಾಯಿ ಬಂದಿದ್ದರಂತೆ!

ಕರ್ಣ : ಹೌದು

ದ್ರೌಪದಿ: ಭಾರಿ ಉಡುಗೊರೆ ಕೊಟ್ಟಿರಬೇಕು?

ಕರ್ಣ : ಕೃಷ್ಣ-ಕುಂತಿಯರ ಮಾತುಗಳಲ್ಲಿ ತೆರೆದುಕೊಂಡ ಅಲಕಾವತಿಯನ್ನು ಕಂಡು ಅಧೀರನಾಗಿದ್ದೇನೆ. ಕಣ್ಣು ಮುಚ್ಚಿದರೆ ಸಾಕು ಕೌರವನ ಕಿರೀಟ. ನೋಡ ನೋಡುತ್ತಲೇ ಬೋನಿನಂತಾಗುತ್ತದೆ. ಅದಕ್ಕೆ, ನಿದ್ದೆಯನ್ನೂ ಮಾಡದೇ ಎಚ್ಚರವಾಗಿದ್ದು ಆ ಬಾಧೆಯನ್ನು ತಪ್ಪಿಸಿಕೊಂಡಿದ್ದೇನೆ.

ದ್ರೌಪದಿ: ಕನಸಿಲ್ಲದ ರಾತ್ರಿಗೆ ಜನರು ಹೆದರುತ್ತಾರೆ. ನೀವು ವೀರಾಧಿವೀರರು ಸ್ವಪ್ನಗಳಿಗೆ ಅಂಜುತ್ತೀರಿ.

ಕರ್ಣ : ನನ್ನಂತ ಮೀನುಂಗಲಿಗನಿಗೆ ಸ್ವಪ್ನಗಳೂ ದುಬಾರಿ ದೇವಿ. ನನ್ನ ಕಷ್ಟ ಅಷ್ಟಕ್ಕೇ ತೀರಲಿಲ್ಲ. ಕನಸಿರಲಿ, ನಿಜದಲ್ಲೇ ನೀರನ್ನ ದಿಟ್ಟಿಸಿದರೆ ಸಾಕು, ಒಂದು ಹೆಣ್ಣಿನ ಮುಖ ಅಲೆಗಳಲ್ಲಿ ತೇಲುತ್ತಾ ಬರುತ್ತದೆ. ಈಗೀಗ ಬಾಯಾರಿಕೆಯಾದರೆ ನೀರು ಕುಡಿಯಲು ಕಣ್ಣು ಮುಚ್ಚಬೇಕಾಗಿದೆ.

ದ್ರೌಪದಿ: ಈ ಮರೆವುಗಳ ಹಿಂದೆ ಅಡಗಿ ಅಡಗಿ ನನಗಂತೂ ಸಾಕಾಗಿದೆ. ಆದರೂ ಮಾತಿನ ಮೊರೆ ಹೋಗುವ ನಿನ್ನನ್ನು ಕಂಡರೆ ನನಗೆ ಕನಿಕರವಾಗುತ್ತದೆ. ಕುಂತಿ ಬಂದುದ್ದೇಕೆಂದು ನಿನಗೆ ಅರಿವಾಯಿತೇನು?

ಕರ್ಣ : "ಪಗಡೆಯ ದಾಳವಾದ ತಾಯಿ ಕುಂತಿಯನ್ನು ನೆನೆದರೆ ನನಗೆ ಅಯ್ಯೋ ಅನ್ನಿಸುತ್ತದೆ. ಕೊಟ್ಟಿದ್ದನ್ನ ತಿರುಗಿ ಪಡೆದುಕೊಳ್ಳುವ ದೌರ್ಭಾಗ್ಯ ಯಾವ ತಾಯಿಗೂ ಬರಬಾರದು."

ದ್ರೌಪದಿ: ನಾನು ಮಾತ್ರ ಯಾರ ಕೈಗೊಂಬೆಯೂ ಅಲ್ಲ.

ಕರ್ಣ : ಅದು ನನಗೆ ಗೊತ್ತು. ನನ್ನಿಂದೇನಾಗಬೇಕು? ಅರ್ಜುನನ ಪ್ರಾಣವೊಂದನ್ನು ಉಳಿದು ಏನು ಬೇಕೋ ಕೇಳು.

ದ್ರೌಪದಿ: ಕುಂತಿಗೆ, ನಿನ್ನ ಹಡೆದ ತಾಯಿಗೆ " ನಾಳಿನ ಯುದ್ಧದಲ್ಲಿ ನಿನಗೆ ಐವರು ಮಕ್ಕಳು ಉಳಿಯುತ್ತಾರೆ ಎಂದು ವಚನ ಕೊಟ್ಟೆಯಂತಲ್ಲ."

ಕರ್ಣ : ಹೌದು. ನಾನು ಅಥವಾ ಅರ್ಜುನ, ಈ ಯುದ್ಧ ಭೂಮಿ ನಾಳೆ ನಿರ್ಣಯ ಮಾಡುತ್ತದೆ.

ದ್ರೌಪದಿ: ನನ್ನನ್ನು ಒಗಟೊಂದು ಕಾಡುತ್ತಿದೆ. ಅದನ್ನ ನೀನು ಬಿಡಿಸಿಕೊಡಬೇಕು.

ಕರ್ಣ : ಒಗಟು (ಸ್ವಗತ) ಮಾತು ಕಲಿಯುವ ಮೊದಲೇ ಮಾತುಗಳಲ್ಲಿ ಹುದುಗಿರುವ ಸುಳಿಗಳಲ್ಲಿ ಸಿಕ್ಕಿಕೊಂಡವನು ನಾನು. ನೀನು ಕೂಡಾ ಲೆಕ್ಕ ಚುಕ್ತ ಮಾಡಲು ಬಂದೆಯೇನು? ಬಾಗಿಲಿಗೆ ಬಂದ ಅತಿಥಿಯನ್ನ ಬರಿಗೈಯಲ್ಲಿ ಕಳುಹಿಸಲಾರೆ, ಕೇಳಿ.

ದ್ರೌಪದಿ: ತಾಯಿ ಒಬ್ಬ ಮಗ ನಷ್ಟಗೊಂಡರೆ ಮಗನ ನಷ್ಟವನ್ನ ತುಂಬಿಕೊಡುವವರು, ಹೆಣ್ಣಿಗೆ ಒಂದು ಗಂಡು ನಷ್ಟಗೊಂಡರೆ ಆ ನಷ್ಟವನ್ನೂ ತುಂಬಿಕೊಡುವುದು ನ್ಯಾಯ ತಾನೆ?

ಕರ್ಣ : ಹೌದು, ಆದರೆ ಅದು ನನ್ನಿಂದ ಸಾಧ್ಯವಿಲ್ಲ, ವೇಷ ಬದಲಿಸಿದ ಹಾಗೆ ಪಾಂಡವನಾಗಲಾರೆ. ಅದು ನಿನಗೆ ಗೊತ್ತಿದ್ದೂ.

ದ್ರೌಪದಿ: ನನಗೆ ಗೊತ್ತಿಲ್ಲ, ಗೊತ್ತಿರುವುದು ಸ್ವಯಂವರದಲ್ಲಿ ಪಣಕ್ಕೊಡ್ಡಿದ ದ್ರವ್ಯ. ಜೂಜಿನಲ್ಲಿ ಸೋತ ವಸ್ತು. ಕಚ್ಚು ಗಾಯಗಳ ನೋವಿನ ಜೀವಂತ ಚಿತೆ ನಾನು. ನಾನೇನು ಸೆರಗೊಡ್ಡಿ ನನ್ನ ಗಂಡಂದಿರ ಪ್ರಾಣ ಭಿಕ್ಷೆ ಕೇಳುತ್ತಿಲ್ಲ. ನೀನು ನಿನ್ನ ತಾಯಿಗೆ ಕೊಟ್ಟ ಮಾತನ್ನ ಅಕ್ಷರಸಃ ಪಾಲಿಸಬೇಕು, ಇದೇ ನನ್ನ ಬೇಡಿಕೆ.

(ದೃಶ್ಯ ಪ್ರಾರಂಭದಲ್ಲಿಯ ದುರ್ಯೋಧನನ ಮಾತುಗಳು ಪ್ರತಿಧ್ವನಿಯಾಗಿ ಮತ್ತೊಮ್ಮೆ ಕೇಳಿಸುತ್ತದೆ. "ಪೇಳ್ ವೀರಪಟ್ಟಮಮ್ ತಡೆಯದೆ ಕಟ್ಟಿ ವೈರಿಗಳ ಪಟ್ಟನೆ ಪಾರಿ ಎನ್ನ ಬೆಳ್ ಗೊಡೆಯಮಂ ಎನ್ನ ಪಟ್ಟಮಮಂ ಎನ್ನುಮಂ ಕಾವುದು")

ಕರ್ಣ : ಅಯ್ಯೋ, ಇದೆಂತಹ ಪರೀಕ್ಷೆ ಒಂದು ಕಡೆ ನನ್ನನ್ನೇ ನಂಬಿಕೊಂಡಿರುವ ಪ್ರಾಣ ಸ್ನೆಹಿತ ದುರ್ಯೋಧನ ಮತ್ತವನ ನಂಬಿ. ಇನ್ನೊಂದು ಕಡೆ ಆತ್ಮ ಘಾತಕ ಪ್ರಪಾತ. ನನ್ನ ಅವಮಾನಗಳಲ್ಲಿ ನಿನ್ನನ್ನ ಮರೆಯುವ ಪ್ರಯತ್ನ ನಡೆಸಿದ್ದೆ.

ದ್ರೌಪದಿ: ನನ್ನ ಕಣ್ಣಲ್ಲಿ ಕಣ್ಣಿಟ್ಟು ಈ ಮಾತು ಹೇಳು, ಸತ್ಯವನ್ನ ಈಗಲೂ ಒಪ್ಪಿಕೊಳ್ಳಲು ಭಯ. ನೈತಿಕತೆಯ ಭಯ. ಮಾನವಾದರ್ಶ ಮೂರ್ತಿಯಾದ ಕರ್ಣನ ವ್ಯಕ್ತಿತ್ವ ಜನರ ಕಣ್ಣಲ್ಲಿ ಪ್ರಪಾತಕ್ಕೆ ಉರುಳುರುಳಿ ತಿರಸ್ಕಾರಕ್ಕೆ ತುತ್ತಾಗುತ್ತದೆ ಎನ್ನುವ ದಿಗಿಲು. ಭೇಷ್ ಮೆಚ್ಚಿದೆ ನಿನ್ನ ಸೈರಣೆಯನ್ನ.

ಕರ್ಣ : ಹೊತ್ತು ಮೀರುತ್ತಿದೆ.

ದ್ರೌಪದಿ: ಯಾರ ಹೊತ್ತು ಮೀರಿದ್ದು ಎಂಬುದು ನಾಳೆ ಗೊತ್ತಾಗಲಿದೆ.

ಕರ್ಣ : ನಾಳೆ ರಣಭೂಮಿಯಲ್ಲಿ ನನ್ನ ಬಲಿ ಬೇಡುತ್ತಿದ್ದೀಯೇನು?

ದ್ರೌಪದಿ: ಅದರಿಂದಲಾದರೂ ನನ್ನೊಳಗಿನ ಚಿತೆ ಆರುವಂತಾಗಲಿ, ನನ್ನ ಮನದ ಕ್ಷೋಭೆ ಶಮನವಾಗಲಿ. ಮಣ್ಣನ್ನ, ಹೆಣ್ಣನ್ನ, ಯಾವ ಗಂಡಸೂ ಅರ್ಥಮಾಡಿಕೊಳ್ಳಲೇ ಇಲ್ಲ.

ಕರ್ಣ : ಕ್ಷಮಿಸೆಂದು ಕೇಳಲು ನನ್ನ ನಾಲಿಗೆ ಏಳುತ್ತಿಲ್ಲ

ದ್ರೌಪದಿ: ಧರ್ಮ ಮೊಗ್ಗಲಾಗುವ ಹೊತ್ತಾಯಿತು. ನಾನಿನ್ನು ಬರುತ್ತೇನೆ.

(ಸೆರಗು ಹೊದ್ದು ದ್ರೌಪದಿ ಹೊರಡುತ್ತಾಳೆ, ಅಷ್ಟರಲ್ಲಿ ಹೊರಗಿನಿಂದ ಸೇವಕನೊಬ್ಬ ಪ್ರವೇಶಿಸಿ, ದ್ರೌಪದಿಯನ್ನು ನೋಡಿ)

ಸೇವಕ: ಪ್ರಭು, ಆಕೆ ಯಾರು?

ಕರ್ಣ : (ನಿರ್ಧಾರದಿಂದ ತಲೆಯೆತ್ತಿ) ವಿಜಯಲಕ್ಷ್ಮಿ. ಯುದ್ಧ ದೇವತೆ

ಸೇವಕ: ಈ ಸರಿ ಇರುಳಲ್ಲಿ ಎಲ್ಲಿಗೆ ಹೊರಟಿದ್ದಾಳೆ ಪ್ರಭು?

ಕರ್ಣ : ಪಾಂಡವರ ಪಾಳೆಯಕ್ಕೆ.

(ಅನುದೃಶ್ಯ)

(ಯುದ್ಧ ಭೂಮಿಯಲ್ಲಿ ರಥದ ಗಾಲಿಗಳು ಹೂತು ಹೋಗಿವೆ. ಕರ್ಣ ಅವುಗಳನ್ನು ಮೇಲೆತ್ತಲು ಪ್ರಯಾಸ ಪಡುತ್ತಿರುತ್ತಾನೆ. ಆಗ ಥುತ್ತನೆ ದ್ರೌಪದಿ ಅರ್ಜುನನನ್ನು ಹಿಂದಿಕ್ಕಿಕೊಂಡು ಎರಗುತ್ತಾಳೆ ಹಾಗೂ ಕರ್ಣನನ್ನು ಕೊಲ್ಲಲ್ಲು ಹುರಿದುಂಬಿಸುತ್ತಾಳೆ)

ಕರ್ಣ : ನಿಲ್ಲು ಅರ್ಜುನ, ರಥದ ಗಾಲಿಗಳು ನೆಲದಲ್ಲಿ ಹೂತು ಹೋಗಿರುವಾಗ ಎದುರಾಳಿಯ ಮೇಲೆ ಬಾಣ ಪ್ರಯೋಗ ಮಾಡುವುದು ಯುದ್ಧ ಧರ್ಮಕ್ಕೆ ವಿರುದ್ಧವಾದದ್ದು, ನನಗೆ ಸ್ವಲ್ಪ ಸಮಯಕೊಡು ನಿನಗೆ ತಕ್ಕ ಉತ್ತರ ಕೊಡುತ್ತೇನೆ.

ದ್ರೌಪದಿ: ಇವನನ್ನು ಈ ಸ್ಥಿತಿಯಲ್ಲೇ ನೀನು ಕೊಲ್ಲದಿದ್ದರೆ ನೀನು ಎಂದಿಗೂ ಅವನನ್ನು ಕೊಲ್ಲಲಾರೆ. ಹೂಂ ಅರ್ಜುನ ಹೂಡು ಬಾಣ.

ಕರ್ಣ : ನಿಲ್ಲು ಅರ್ಜುನ, ನಿಲ್ಲು (ಕೂಗುತ್ತಿರುವಂತೆ ನಗಾರಿಯ ಶಬ್ಧ ಅಧಿಕಗೊಳ್ಳುತ್ತದೆ. ಅರ್ಜುನ ಬಾಣ ಪ್ರಯೋಗ ಮಾಡುತ್ತಾನೆ ಕರ್ಣ ಸಾಯುತ್ತಾನೆ. ಅರ್ಜುನ ನಿಷ್ಕ್ರಮಣ. ದ್ರೌಪದಿ ನಿಧಾನವಾಗಿ ಕರ್ಣನ ಸಮೀಪ ಬಂದು ತನ್ನೊಳಗೆ ಹೇಳಿಕೊಳ್ಳುತ್ತಾಳೆ)

ಕಣ್ಣೊಳಗಿನ ಕಿಚ್ಚೇ ನಂದಿ ಹೋಗು
ಮೈಯೊಳಗಿನ ಚಿತೆಯೇ ಉರಿದು ಹೋಗು
ನನ್ನ ಕೊಂದ ಕನಸ ಬಯಲಾಗಿ ಹೋಗು
ನನ್ ಮರವಿನ ಮರವೇ ಶೂನ್ಯವಾಗು.

(ಕರ್ಣನನ್ನು ಅಪ್ಪಿ ರೋಧಿಸುತ್ತಾಳೆ)

(ನೋವಿನಿಂದ ಜರ್ಜರಿತನಾದ ಕರ್ಣನನ್ನು ಪಂಪ ಆಸರೆಗೊಟ್ಟು ಕರೆ ತರುತ್ತಾನೆ.)

ಕರ್ಣ : ಎಲ್ಲ ಕವಿಗಳು ಆ ರಾತ್ರಿಯಲ್ಲಿ ನಡೆದ ಘಟನೆಗಳನ್ನು ಯಾರೂ ಯಾಕೋ ಗಮನಿಸಲೇ ಇಲ್ಲ. ಗಡದ್ದಾಗಿ ನಿದ್ದ ಹೊಡೆದ್ರು ಅಂತ ಕಾಣುತ್ತೆ. ದ್ರೌಪದಿಯ ಹಠ ನಿಮಗೂ ಗೊತ್ತಲ್ಲ ಆಕೆಯ ಕೂದಲಿನ ರಕ್ತದಾಹ ದುಶ್ಯಾಸನನ ನೆತ್ತರಿನಿಂದ ತೀರಿರಲಿಲ್ಲ ಕವಿಗಳೇ ಆ ರಾತ್ರಿಯ ನಿಶ್ಯಬ್ಧದಲ್ಲಿ ಅವುಗಳ ಬಾಯಾರಿದ ಸದ್ದನ್ನು ಕೇಳಿಸಿಕೊಂಡೆ. ನಾನು ಬದುಕಿದ್ದರೆ ಯುದ್ದ ಗೆಲ್ಲಬೇಕಿತ್ತು. ಗೆದ್ದಿದ್ದರೆ ಪಾಂಡವನಾಗಬೇಕಿತ್ತು. ಆ ರಾತ್ರಿ ನನಗೊಂದು ಕನಸು ಬಿತ್ತು. ನಾನು ಪಾಂಡವನಾಗಿದ್ದೆ. ಚಕ್ರವರ್ತಿಯಾಗಿದ್ದೆ. ದ್ರೌಪದಿ ನನ್ನ ಮಹಾರಾಣಿಯಾಗಿದ್ದಳು. ಆದರೆ ನನ್ನ ತಲೆಯ ಮೇಲಿನ ಕೌರವನ ಕಿರೀಟ ನೋಡ ನೋಡುತ್ತಿದ್ದಂತ ಉದ್ದಕ್ಕೆ ಬೆಳೆದು ಪಂಜರದಂತಾಗಿ ನಾನು ಬಂದಿಯಾದೆ. ಬೆಚ್ಚಿ ಕಿರೀಟವನ್ನು ಕಿತ್ತೆಸೆದು ಓಡಿದೆ ಅರಮನೆ, ನಗರ ಊರು ಕಾಡು ದಾಟಿ ಓಡುತ್ತಿದ್ದೆ. ಬಹುಷಃ ಕನಸಿನಲ್ಲಿ ಸರಾಗವಾಗಿ ನಾನು ಓಡಿದ್ದು ಇರಬೇಕು. ನನ್ನನ್ನು ಹೊತ್ತು ಸಾಕಿದ ನದಿಯ ದಡಕ್ಕೆ ಬಂದೆ. ಬಾಯಾರಿತ್ತು. ನೀರಿಗಿಳಿದೆ ಒಡ್ಡಿದ ಬೊಗಸೆಗೆ ಬಂದಿದ್ದು ಏನು ಗೊತ್ತೇ? ಒಂದು ಹಸುಗೂಸು, ಎಂಥ ಚಂದವಿತ್ತು ಅಂತೀರಿ ಆದರೆ ಅದು ಸತ್ತಿತ್ತು. ಅದು ನನ್ನನ್ನೇ ಹೋಲುವಂತಿತ್ತು. ಎಚ್ಚರ ಕಳಕೊಂಡು ನೀರಿನಲ್ಲಿ ಬಿದ್ದೆ. ಗಂಗ ನನ್ನನ್ನು ತನ್ನ ಅಲೆಯ ಅಂಗೈ ಮೇಲೆ ಆಡಿಸುತ್ತಾ ಕರೆದೊಯ್ಯುತ್ತಿದ್ದಳು, ಇಡೀ ರಾತ್ರಿ ಹೀಗೆ ನೀರಿನ ಅಲೆಗಳ ಮೇಲೆ ತೇಲುತ್ತಾ ತೇಲುತ್ತಾ ಸಾಗುತ್ತಿದ್ದೆ. ಪ್ರಜ್ಞೆ ಬಂದಾಗ ಬೆಳಕಾಗಿತ್ತು ಅಷ್ಟರಲ್ಲಿ ನನ್ನ ಕರ್ತವ್ಯ ನನಗೆ ಸ್ಪಷ್ಟವಾಗಿತ್ತು. ಆ ಅರ್ಜುನನನ್ನು ಕುರಿತು ಯೋಚಿಸಿದ್ರೆ ಅಯ್ಯೋ ಪಾಪ ಅನ್ನಿಸುತ್ತೆ. ಆ ಯುದ್ಧದಲ್ಲಿ ಒಬ್ಬನೇ ಒಬ್ಬ ಜೀವಂತ ವೀರನೊಡನೆ ಹೋರಾಡಲಿಲ್ಲ ಅವನು. ಸತ್ತವರನ್ನೆ ಶತ್ರುಗಳೆಂದು ಗೆಲ್ಲಬೇಕಾಯ್ತು.

ಪಂಪ : ಆ ರಾತ್ರಿ ನೀನು ಸೈನಿಕರೊಡನೆ ಆಡಿದ ಮಾತು ಕೇಳಿ ನಿಜಕ್ಕೂ ವಿಜಯ ಲಕ್ಷ್ಮಿಯೇ ಪಾಂಡವರ ಪಾಳಯಕ್ಕೆ ನಡೆದು ಹೋಗಿರಬೇಕು ಅಂತ ಭಾವಿಸಿದೆ. ಆಯಷ್ಯವೆಲ್ಲಾ ಅವಮಾನ, ಅತೃಪ್ತಿಗಳಿಂದ ಅಗ್ನಿಕುಂಡಗಳಾಗಿದ್ದ ನಿನ್ನ ಕಣ್ಣುಗಳಲ್ಲಿ ಉರಿಯುತ್ತಿದ್ದ ಸೂರ್ಯರಿಗೆ ಬದಲು ಅಂದು ಚಂದ್ರ ಬಿಂಬಗಳು ತೇಲುತ್ತಿದ್ದವು. ನೀನು ಪುಣ್ಯವಂತ ಕರ್ಣ, ನಿನ್ನ ಸಾವಿನ ನೆನಪಾದ್ರೂ ನಿನಗಿದೆ.

ಕರ್ಣ : ಅಂದ್ರೆ ನಿಮ್ಮ ಮಾತಿನ ಅರ್ಥ

ಪಂಪ : ನಾನು ಸತ್ತಿದ್ದು ಹೇಗಂತ ನನಗೇ ಗೊತ್ತಿಲ್ಲ.

ದೊರೆ : (ಬಸದಿಯಿಂದ ಹೊರಬರುತ್ತಾ) ನನಗೆ ಗೊತ್ತು.

ಪಂಪ : ಯಾರು ನೀನು? ನಿನ್ನ ದನಿ ಕೇಳಿದರೆ..

ಕರ್ಣ : (ಸ್ವಗತ) ಇದೇನಿದು? ಥೇಟ್ ದುರ್ಯೋಧನನ ಹಾಗೆ ತೋರಿತ್ತಿದ್ದಾನೆ, ಇದು ನನ್ನ ಭ್ರಾಂತಿಯಲ್ಲ ತಾನೆ?

ದೊರೆ : (ನಕ್ಕು) ಕಾಲದಲ್ಲಿ ಚದುರಿ ಬಿದ್ದ ಗುರುತುಗಳನ್ನು ಆಯ್ದು ಕೊಳ್ಳುತ್ತಿದ್ದಿರೇನು? ಈ ಒಡಕು ಚಿತ್ರಗಳಿಂದ ಏನು ಪ್ರಯೋಜನ?

ಪಂಪ : ಮಹಾಶಯ. ನೀನು ಯಾರು? ಯಾಕೆ ಬರೋಣವಾಯಿತು?

ದೊರೆ : ಲೇ ಹೊಗಳು ಭಟ್ಟ ಎಲ್ಲಿ ಸತ್ತಿಯೋ? ಬೇಡದಿದ್ದಾಗ ನನ್ನ ಗುರುತುಗಳನ್ನು ಹೇಳಿ ನನ್ನ ಗುರುತೇ ನನಗ ಮರೆತು ಹೋಗುವಂತೆ ಮಾಡಿದೆಯಲ್ಲೋ? ಲೇ ಬಾರೋ ಇಲ್ಲಿ, ನಾನು ಯಾರು ಅಂತ ಕೇಳುತ್ತಿದ್ದಾರೆ ಹೇಳೋ. (ಪಂಪ ಕರ್ಣರನ್ನು ಉದ್ದೇಶಿಸಿ) ನಿಜ ಹೇಳಬೇಕೆಂದ್ರೆ ನಮ್ಮ ಹೊಗಳು ಭಟ್ಟ ಹೇಳಿದರೆ ಮಾತ್ರ ನನಗೂ ನಾನು ಯಾರು ಅಂತ ತಿಳಿಯೋದು. ಬೇರೆಯವರು ಹೇಳಿದ್ದನ್ನು ನಂಬೋದಿಕ್ಕೆ ಶುರು ಮಾಡಿದ ಮೇಲೆ ನನಗೆ ನಾನು ಯಾರು ಅಂತ್ಲೇ ಮರೆತು ಹೋಗಿದೆ ಮಾರಾಯರೇ.

ಆಳು : ಪಡೆ ಮೆಚ್ಚೆ ಗಂಡನ್... ಶರಣಾಗತ ಜಲನಿಧಿ, ಪರಾಕ್ರಮದವಳ ರಿಪು ಕುರಂಗ ಕಂಠೀರವ... ವಿಜಯ ವಿಭೂಷಣ... ಸುರತ ಮಕರ ಧ್ವಜ

ಪಂಪ : (ತಡೆಯುತ್ತಾ) ಅರೆ ಇವು ನಾನೇ ಬರೆದ ಸಾಲುಗಳಂತೆ ತೋರುತ್ತಿವೆ ಅಂದ್ರೆ,

ದೊರೆ : ನೋಡಿದೆಯಾ ಕರ್ಣ ಗುರುತು ಎಷ್ಟು ಕಷ್ಟ? ಕವಿ ಬರೆದ ಸಾಲಷ್ಟೆ ಸತ್ಯ ನಾನು ನೀನು ಅಂದ್ರೆ ಕವಿ ಬಿಡಿಸಿದ ಶಬ್ದ ಚಿತ್ರಗಳಷ್ಟೆ.

ಕರ್ಣ : ನನ್ನ ಪ್ರಶ್ನೆ ಕೂಡ ಇದೆ. ನಿಮಗೂ ಇಂಥದ್ದೇ ಅನುಮಾನ.

ದೊರೆ : ನಾನು ಅರಿಕೇಸರಿ. ಪಂಪನ ಆಪ್ತಮಿತ್ರ ಆಪ್ತಮಿತ್ರ ಆಗಿದ್ದವನು. (ಕರ್ಣನ ಹತ್ತಿರ ಹೋಗಿ) ನೀನು ನನ್ನ ಕ್ಷಮಿಸಬೇಕು. ನನ್ನ ಕೀಳರಿಮ ಮತ್ತು ಚಕ್ರವರ್ತಿಯ ಕನಸು ನಿನ್ನಿಂದ ದೂರ ಮಾಡಿತು.

ಪಂಪ : ನೀವು ಇಲ್ಲಿ? ಏನು ಮಾಡುತ್ತಿರುವಿರಿ ಪ್ರಭು?

ದೊರೆ : ನಿಜ ಹೇಳಬೇಕಂದ್ರೆ ನನ್ನ ಅಹಂಕಾರ ಅಡ್ಡ ಬರುತ್ತೆ. ಈ ಅಹಂಕಾರಕ್ಕೆ

ಒಂದು ಬಾರಿ ಬೆಲೆ ಕೊಟ್ಟಿದ್ದಾಗಿದೆ. ಒಂದು ಸಾವಿರ ವರ್ಷದಿಂದ ನಿನ್ನ ಈ ಶಾಸನದ ಮುಂದೆ ನಾನೆ ಕೆತ್ತಿಸಿದ ಈ ಕಲ್ಲಿನ ಮುಂದೆ ಕಾದು ಕುಳಿತಿದ್ದೇನೆ.

ಕರ್ಣ : ನಾನೂ ಕಾದಿದ್ದೆ ಆದರೆ ಒಮ್ಮೆಯೂ ನಾವು ಭೇಟಿಯಾಗಲಿಲ್ಲವಲ್ಲ!

ದೊರೆ : ನಮ್ಮ ಕಾಲಗಳ ಲೆಕ್ಕ ಬೇರೆ ಬೇರೆ ನೋಡಿ. ನಾನು ಬಂದ ಕಾಲ ಬೇರೆ, ನೀವು ಬಂದ ಕಾಲ ಬೇರೆ. ಆದರೆ ಕಾಲದ ದಾರಿಗಳು ಎಲ್ಲೋ ಒಂದು ಕಡೆ ಕೂಡಿಯೇ ಇರುತ್ತವಂತೆ. ಆ ಕಾಲ ಬಿಂದುವನ್ನೆ ಇರುಬೇಕು.. ಸಂಧಿ ಕಾಲವೆಂದು ಕರೆಯುವುದು. ಬಹುಶಃ ಅಂಥ ಬಿಂದುವಿನಲ್ಲಿ ಇರಬೇಕು ನಾವು ಕೂಡಿರುವುದು.

ಪಂಪ : ಪ್ರಭು ಹೇಗಿದ್ದೀರಿ? ನಿಮ್ಮನ್ನು ನೋಡಿದ ಸಂಭ್ರಮದಲ್ಲಿ ಕುಶಲ ವಿಚಾರಿಸುವುದನ್ನು ಮರೆತುಬಿಟ್ಟೆ. ನೀವು ನನ್ನ ಕ್ಷಮಿಸಬೇಕು. ನಾನು ನಿಮ್ಮ ಮಾತನ್ನು ನಡೆಸಿ ಕೊಡಲಿಲ್ಲ.

ದೊರೆ : ಭೂಮಿಯ ಮೇಲೆ ಕ್ಷಮೆಗಾಗಿ ಕಾಯದ ಜೀವ ಯಾವುದಿದೆ ಹೇಳಾ..? ನೀನೇನೋ ನನ್ನ ಬಿಟ್ಟು ನಿರುಂಬಳವಾಗಿ ಬಂದುಬಿಟ್ಟೆ. ಆದರೆ ನಾನು, ನೋಡು, ಮೂರಾ ಬಟ್ಟೆಯಾಗಿದ್ದೇನೆ. ಸತ್ಯದ ಕಲ್ಲುಗಳನ್ನು ಎದೆಗೆ ಕಟ್ಟಿಕೊಂಡು ನೀರಿಗೆ ಬಿದ್ದಿದ್ದೇನೆ.

ಪಂಪ : ನಾನು ನಿಮ್ಮನ್ನ ಬಿಟ್ಟು ಬರಲೇ ಬೇಕಿತ್ತು. ನಾನು ಕಿತ್ತುಕೊಂಡು ಬರುವಾಗಲೇ ತಡವಾಗಿತ್ತು. ಆಗ ಮುರಿದ ಬೇರುಗಳ ಗಾಯಗಳಿನ್ನೂ ಮಾಸಿಲ್ಲ.

ಕರ್ಣ : ನನಗೂ ಹೀಗೆ ದೂರ ಹೋಗಬೇಕೆನಿಸಿದಾಗ, ನದಿಯವರೆಗೂ ಹೋಗುತ್ತಿದ್ದೆ. ನೀರಿನ ಹರಿವನ್ನ ನೋಡುತ್ತಲೇ ಇದ್ದು ಬಿಡುತ್ತಿದ್ದೆ. ನನ್ನ ನೋವುಗಳು ನೀರಿನ ಜೊತೆ ಹರಿದು ಹೋಗದೆ ಗಡ್ಡೆ ಕಟ್ಟಿಕೊಂಡಿದ್ದು ಇಂದಿಗೂ ನನಗೆ ಆಶ್ಚರ್ಯದ ಸಂಗತಿ.

ದೊರೆ : ಬಿಡುಗಡೆ ಬಯಸಿ ಆಗ್ರಹಾರಕ್ಕೆ ಬಂದಿದ್ದೂ ಕೂಡಾ ಮತ್ತೊಂದು ಬಂಧನವೇ ಅಲ್ಲವೆ?

ಪಂಪ : ಅಗ್ರಹಾರದಲ್ಲಿ ನನ್ನ ಬಾಲ್ಯ ಭಗ್ನಗೊಂಡಿತ್ತು. ಆ ಅವಮಾನದ ಜಾಗಕ್ಕೆ ಮತ್ತೆ ಹೋಗಬೇಕೂಂತ ನನಗೆ ಯಾಕೆ ಅನ್ನಿಸಿತೋ ಇವತ್ತಿಗೂ ಅರ್ಥವಾಗಿಲ್ಲ. ಆದರೆ ಅಲ್ಲಿಗೆ ಹೋದಾಗ ನನ್ನ ಮನಸ್ಸಿನ ನಿರಾಳ ಅನ್ಸಿದ್ದು ಮಾತ್ರ ಸುಳ್ಳಲ್ಲ

ಕರ್ಣ : ಕಳೆದುಕೊಂಡ ಕಡೇನೆ ಪಡೆದುಕೊಳ್ಳುವ ಪ್ರಯತ್ನ, ಸಹಜ ಪ್ರವೃತ್ತಿ ತಾನೆ.

ಪಂಪ : ನನಗೆ ನನ್ನ ಬಾಲ್ಯ ಬೇಕಿತ್ತು. ನಿಮಗೆ ನಿಮ್ಮ ಭವಿಷ್ಯತ್ ಬೇಕಿತ್ತು. ನಮ್ಮ ಮಾರ್ಗಗಳು ಬೇರೆಂದು ತಿಳಿದ ನಂತರವೂ ಜೊತೆಯಾಗಿ ಸಾಗುವುದಿದೆ ನೋಡಿ ಹಾ! ಎಂಥ ಸಂಬಂಧವಾದರೂ ಬಹು ದೂರ ಬಾಳಲಾರದು. ಹರಿದು ಕೊಳ್ಳುವುದಕ್ಕಿಂತ ಬಿಡಿಸಿಕೊಳ್ಳುವುದು ಹೆಚ್ಚು ಸೌಜನ್ಯದ ದಾರಿ ಅನ್ನಿಸ್ತು. ಕರ್ಣನನ್ನ ನೋಡಿ, ಕಾಲಿಗೆ ತೊಡರಿದ ಸಿಂಹಾಸನವನ್ನ ಒದ್ದು ಬಂದವನು. ಸಾಮಾನ್ಯವಾಗಿ ಉಳಿದವನು.

ಕರ್ಣ : ಇದೇನಿದು? ನನ್ನ ನೋವಿನ ಮೂಲಗಳು, ಕೆಲವು ಈ ಕವಿಯಲ್ಲಿಯೂ ಇನ್ನು ಕೆಲವು ಈ ದೊರೆಯಲ್ಲಿಯೂ ಹುದುಗಿರುವಂತೆ ಕಾಣುತ್ತಿವೆಯಲ್ಲ.

ಪಂಪ : ಪ್ರಭು, ನನ್ನ ಸಾವು ನನಗೆ ತಿಳಿಯಬೇಕು, ನನ್ನನ್ನು ಕೊಂದವರು ಯಾರು?

ದೊರೆ : ನಾನು! ನಿನ್ನ ಕೊಂದವನು ನಾನು! ನಾನು ಮಿತ್ರದ್ರೋಹಿ.

ಪಂಪ : ಇಲ್ಲ, ನೀವು ನನ್ನ ಕೊಂದಿಲ್ಲ. ನಿಮ್ಮ ಮನಸ್ಸು ನನಗೆ ಗೊತ್ತು. ಯಾಕೆ ಸತ್ಯವನ್ನು ಬಚ್ಚಿಡುತ್ತೀರಿ. ಬತ್ತಲಾಗದೆ ಬಯಲು ಸಿಕ್ಕುವುದಿಲ್ಲ ಪ್ರಭು.

ದೊರೆ : ನಿನ್ನನ್ನ ರಕ್ಷಿಸಬಹುದಿತ್ತು ನಾನು. ವ್ಯಾಪಾರದ ಮೂಲಕ ಜೈನರು, ರಾಜ್ಯದ ಬೊಕ್ಕಸವನ್ನ ನಿಯಂತ್ರಣದಲ್ಲಿಟ್ಟು ಕೊಂಡಿದ್ದರು. ಅಧಿಕಾರ ಸ್ಥಾನಗಳ ಮೂಲಕ ಬ್ರಾಹ್ಮಣರು ಆಡಳಿತವನ್ನು ತಮ್ಮ ಹದ್ದುಬಸ್ತಿನಲ್ಲಿಟ್ಟು ಕೊಂಡಿದ್ದರು. ಈ ಇಬ್ಬರನ್ನೂ ಎದುರಿಸುವ ಸಾಮರ್ಥ್ಯ ನನಗಲ್ಲ ನನ್ನ ಚಕ್ರವರ್ತಿಗಳಿಗೂ ಇರಲಿಲ್ಲ. ಈ ಗಲಭೆ ಸಾಮ್ರಾಟರಿಗೆ ತಿಳಿಯದ ಮೊದಲೇ ಇದನ್ನ ಹುಟ್ಟಡಗಿಸುವ ಪ್ರಯತ್ನ ನಡೆಸಿದೆ. ಇದಕ್ಕೆ ಎಂಥ ಪ್ರತಿರೋಧವಿತ್ತು ಗೊತ್ತೇನು? ಅದೂ ನನ್ನ ಮನೆಯಲ್ಲೇ, ಪಂಪನ ವಿಷಯದಲ್ಲಿ ಹೆಚ್ಚು ತಲೆ ಕೆಡಿಸಿಕೊಂಡಿದ್ರೆ, ಸಾಮಂತ ಪದವಿಯಿಂದಲೇ ನನ್ನನ್ನ ಉಚ್ಚಾಟಿಸುತ್ತಿದ್ದರು. ಆ ಗುಟ್ಟು ನನಗೆ ಗೊತ್ತಿತ್ತು. ಅಲ್ಲದೆ ಸಾಮ್ರಾಟರಿಗೆ ಪಂಪನ ವಿಷಯದಲ್ಲಿ ಮೊದಲಿನಿಂದಲೂ ಅಸಮಾಧಾನ ಇದ್ದೇ ಇತ್ತು.

ಕರ್ಣ : ಅವರಿಗೇಕೆ ಕವಿಗಳ ವಿಷಯದಲ್ಲಿ ಅಸಮಾಧಾನವಿರಬೇಕು?

ದೊರೆ : ಪಂಪ ಒಬ್ಬ ಸಾಮಂತನನ್ನ ಅರ್ಜುನನಿಗೆ ಸಮೀಕರಿಸಿ ಕಾವ್ಯ ಕಟ್ಟಿದ್ದನಲ್ಲ, ಅದಕ್ಕೆ, ಸಾಮ್ರಾಜ್ಯದ ವಿರುದ್ಧ ಇದು ಪಿತೂರಿ ಎಂಬ ಅನುಮಾನ ಅವರಿಗೆ ಇತ್ತು. ಓದಿಸಿ ಕೇಳಿದ ಮೇಲೆ ಅದನ್ನು ನಿಜವೆಂದು ಭಾವಿಸಿದರೂ

ಕೂಡ. ಪಂಪನನ್ನ ದುಡ್ಡಿನಿಂದ ಕೊಳ್ಳಲು ಪ್ರಾಮಾಣಿಕ ಪ್ರಯತ್ನವನ್ನೇನೋ ಪಟ್ಟರು, ಅದನ್ನು ಆತ ನಿರಾಕರಿಸಿದ. ಕೊನೆಗೆ ರಹಸ್ಯವಾಗಿ ಮುಗಿಸಲು ಯೋಜನೆ ರೂಪಿಸಿದರು.

ಕರ್ಣ : ಈ ಹುನ್ನಾರಗಳೂ ಅಂದಿನಿಂದಲೂ ಇಂದಿಗೂ ಒಂದೇ ರೀತಿ ಸಂಭವಿಸುತ್ತಿವೆಯಲ್ಲ!

ಪಂಪ : ಒಬ್ಬ ಕವಿ ಒಂದು ಪ್ರಭುತ್ವಕ್ಕೆ ಇಷ್ಟು ದೊಡ್ಡ ತಲೆ ನೋವಾಗಿ ಪರಿಣಮಿಸುತ್ತಾನೆ ಎಂದು ಯಾರಾದರೂ ಹೇಳಿದ್ದರೆ, ಬಹುಷಃ ನಾನೇ ನಂಬುತ್ತಿರಲಿಲ್ಲ. ಅಂದು ನಡೆದ ಜೈನ ಬ್ರಾಹ್ಮಣ ಗಲಾಟೆ, ನನ್ನನ್ನು ನಿವಾರಿಸಲು ಆಡಳಿತ ರೂಪಿಸಿದ ಸಂಚೇ ಏನು?

ದೊರೆ : ಅಯ್ಯೋ ಆ ದಿನಗಳನ್ನ ನೆನಪಿಸಬೇಡ, ಆ ಘಟನೆಗಳು, ನನ್ನ ಕಣ್ಣುಗಳಲ್ಲಿ ಪ್ರತಿ ದಿನ ಉರಿಯುತ್ತಿವೆ. ಸಿಂಹಾಸನದ ಆಸೆಗೆ ನನ್ನನ್ನ ಭೂ ಲೋಕದ ದೇವರಾಗಿಸಿದ ಚರಿತ್ರೆಯಲ್ಲಿ ದಾಖಲಿಸಿದ ಗೆಳೆಯನನ್ನು ಬಲಿ ಕೊಡಲು ಒಪ್ಪಿಕೊಂಡಿದ್ದೆನಲ್ಲಾ, ನಾನೆಂಥ ದುಷ್ಟ ಎಂದರೆ ಈ ಕೃತ್ಯವನ್ನು ನಾನಾಗಲಿ ನನ್ನ ಸೈನಿಕರಾಗಲಿ ಮಾಡಲಾಗದು ಎಂಬ ವಿನಾಯಿತಿ ಪಡೆದುಕೊಂಡಿದ್ದೆ. ಅದನ್ನು ಅವರೂ ಒಪ್ಪಿದ್ದರು. ನನ್ನ ಗುಪ್ತ ಮಾಹಿತಿದಾರ ಆವತ್ತು ಬಂದು ಅಗ್ರಹಾರದಲ್ಲಿ ಗಲಭೆ ನಡೆಯುವ ಸೂಚನೆ ಕೊಟ್ಟ. ಆ ರಾತ್ರಿ ನನ್ನ ನಂಬಿಗಸ್ತ ಸೈನಿಕರನ್ನ ಕರೆದು ಪಂಪನನ್ನ ರಕ್ಷಿಸಲು ಕಳುಹಿಸಿದೆ. ಆದರೆ ಲೆಕ್ಕಾಚಾರ ತಪ್ಪಾಗಿತ್ತು. ನನ್ನ ಮಗ ಭದ್ರದೇವ ನನ್ನ ಆ ಸೈನಿಕರನ್ನು ಊರು ಬಾಗಿಲಲ್ಲೇ ಸೆರೆ ಹಿಡಿಸಿದ್ದ. ಎಷ್ಟಾದರೂ ನನ್ನ ರಕ್ತವಲ್ಲವೆ.

ಪಂಪ : ಒಂದು ದಿನ ಸಂಜೆ ನನ್ನ ಒಂಟಿತನವನ್ನು ಮರೆಯಲು ಕಾವ್ಯವನ್ನು ಗಟ್ಟಿಯಾಗಿ ಓದಿಕೊಳ್ಳುತ್ತಿದ್ದೆ. ಮನೆಯ ಹೊರಗೆ ಜಗುಲಿಯ ಮೇಲೆ ಒಬ್ಬ ಹುಡುಗ ನನ್ನ ಕಾವ್ಯವನ್ನ ಕೇಳಿಸಿಕೊಳ್ಳುತ್ತಿದ್ದ. ನಿನಗೇನು ಬೇಕು ಎಂದೆ, ಓದು ಕಲಿಯಬೇಕು ಅಂದ, ನಾನು ದಿಗ್ಭ್ರಾಂತನಾದೆ. ನನ್ನ ಮೌನವನ್ನ ಪಾಪ ಏನೆಂದುಕೊಂಡನೋ ಏನೋ?

ದೊರೆ : ಇದು ಭದ್ರದೇವನದೇ ಕೆಲಸ. ನನ್ನ ಸೈನಿಕರನ್ನೇ ನನ್ನ ವಿರುದ್ಧ ಎತ್ತಿಕಟ್ಟಿದ. ಪಿತೃಹತ್ಯೆಯೊಂದೇ ಈ ನೆಲದಲ್ಲಿ ಮಗನಿಗೆ ಗುರಿಯಾಗಿರುವುದು ಏಕೆ ಅಂತ ನನಗೆ ಅರ್ಥವಾಗುತ್ತಿಲ್ಲ. ಮಾಹಿತಿದಾರ ಬಂದು ಪಂಪನ ಮನೆ ಸುಟ್ಟು ಹೋದ ಘಟನೆ ಹೇಳಿದ. ಆ ದಿನ ನಾನು ಕೋಣೆಯ ಬಾಗಿಲು ಹಾಕಿಕೊಂಡು ಮಲಗಿ ಅಳಲು ಆಸೆಪಟ್ಟೆ. ಕಣ್ಣೀರು ನನ್ನ ಮೇಲೆ ಸೇಡು

ತೀರಿಸಿಕೊಂಡಿತ್ತೋ ಏನೋ, ನನ್ನ ಕಣ್ಣುಗಳು ಜಲ ಬತ್ತಿದ ಬಾವಿಗಳಾಗಿದ್ದವು. ನಾನೆ ನನ್ನ ಮಿತ್ರನನ್ನು ಕೊಂದು ಹಾಕಿದೆ ಎಂದು ದುಃಖಿಸಿದೆ. ಆ ರಾತ್ರಿ ಮಂತ್ರಿಯನ್ನ ಕರೆಸಿ, ಪಂಪನ ಸಾವಿನ್ನೂ ಖಚಿತವಾಗುವ ಮೊದಲೇ ಶಾಸನ ಕೆತ್ತಿಸುವ ಆದೇಶವಿತ್ತೆ.

ಪಂಪ : ನನ್ನ ಸಾವು ಬೆಂಕಿಯಿಂದಲ್ಲ ಈಗಲೂ ಬೆಂಕಿಯನ್ನು ಕಂಡರೆ ನನ್ನ ಮನಸ್ಸು ಭಯಗೊಳ್ಳುತ್ತಿಲ್ಲ. ನಾನು ನೀರಲ್ಲಿ ಮುಳುಗಿ ಸತ್ತಿರಬೇಕು. ಜಲ ಸ್ವಪ್ನ ಬಿದ್ದಂತೆ ನೆನಪು.

(ನೇಪಥ್ಯದಲ್ಲಿ 'ನೋಡು ಆ ಗುಂಪಿನಲ್ಲಿ ಓಡುತ್ತಿದ್ದಾನಲ್ಲ ಅವನೇ ಪಂಪ, ಹೊಡೀರಿ, ಕೊಲ್ಲಬೇಡಿರಿ.' ಕೋಲಾಹಲ, ಮತ್ತೊಂದು ಧ್ವನಿ, 'ಪ್ರಜ್ಞೆ ತಪ್ಪಿದೆ, ನದಿಗೆ ಎಸೆಯಿರಿ ಕುದುರೆ ಮೇಲೆ ಸಾಗಹಾಕಿ ಭೀಮೆಯಲ್ಲಿ ಮುಳುಗಿಸಿ, ಇದು ಗುಟ್ಟಾಗಿರಲಿ'. ಮತ್ತೆ ಕೋಲಾಹಲ ಮುಂದುವರೆಯುತ್ತದೆ)

ದೊರೆ : ಮಾರನೇ ದಿನ ನನಗೆ ಖಚಿತ ಮಾಹಿತಿ ಸಿಕ್ಕಿತು. ಪಂಪ ಸತ್ತಿದ್ದ. ಮೀನುಗಳು ಶರೀರವನ್ನ ಅರ್ಧಂಬರ್ಧ ತಿಂದು ಮುಗಿಸಿದ್ದವು. ಆಗ ಅವನ ಗುರುತು ಹಚ್ಚಲು ಯಾರಿಂದಲೂ ಸಾಧ್ಯವಿರಲ್ಲಿಲ್ಲ. ನನ್ನ ಚಕ್ರವರ್ತಿಯ ಕನಸು ಭಗ್ನವಾಗಿತ್ತು. ಭದ್ರದೇವ ಚಕ್ರವರ್ತಿಗಳಿಗೆ ಹತ್ತಿರವಾದ. ಹೆಸರಿನ ನಾನು ದೊರೆಯಾಗಿದ್ದೆ. ನನ್ನ ಮನೆಯಲ್ಲಿ ನಾನು ಸೆರೆಯಾಗಿದ್ದೆ. ಈ ಹಂಗಿನ ಬದುಕು ಬೇಸರವಾಯ್ತು. ಭದ್ರನಿಗೆ ಕೊಲ್ಲುವ ಅವಕಾಶ ಕೊಡಬಾರದೆಂದು ಒಂದು ದಿನ ನಾನ ವಜ್ರ ನುಂಗಿ ಸತ್ತೆ. ಸಾಯುವ ಆ ಘಳಿಗೆಗಳಲ್ಲಿ ಜಿನವಲ್ಲಭನ ಬಾಯಿಂದ ಪಂಪ ಭಾರತದ ಕಥೆಯನ್ನು ಕೇಳುತ್ತಾ ಯಾರೂ ಅರಿಯದ ಹಾಗೆ ಸತ್ತು ಪಾರಾದೆ.

ಪಂಪ : ನನ್ನನ್ನೂ ಪಾರು ಮಾಡಿದಿರಿ ಪ್ರಭು, ನಾನು ಸತ್ತಿದ್ದು ಹೇಗೆಂದು ಯೋಚಿಸಿದಾಗಲೆಲ್ಲ, ಮತ್ತೆ ಮತ್ತೆ ನೆನಪಿಟ್ಟು ಕೊಳ್ಳುವುದಕ್ಕಾದರೂ ಸಾಯಬೇಕಿತ್ತು ಎಂದು ಅನ್ನಿಸುತ್ತಿತ್ತು.

ಕರ್ಣ : ನನಗೆ ನದಿಯನ್ನ ಕಂಡಾಗಲೆಲ್ಲ ಮತ್ತೆ ಮತ್ತೆ ಸಾಯಬೇಕು ಅನ್ನುವ ಆಸೆ ಹುಟ್ಟುತ್ತದೆ. ಅದೇಕೋ ಗೊತ್ತಿಲ್ಲ.

ಆಳು : (ಧಣೀ ಧಣೀ ದಾವಿಸಿ ಬಂದ ಕಾವಲುಗಾರ) ಪ್ರಭು ಘಾತವಾಯ್ತು. ಮತ್ತೆ ಅವರು ಬರುತ್ತಿದ್ದಾರೆ!?

ದೊರೆ : ಯಾರು? ಯಾರು ಬರುತ್ತಿದ್ದಾರೆ?

ಆಳು : ಅವರೇ? ಅವರೇ ಪ್ರಭು ಅಗ್ರಹಾರವನ್ನು ಸುಟ್ಟವರು (ಪಂಪ ಕರ್ಣರನ್ನು ಅರಿಕೇಸರಿ ಎಳೆದು ಕೊಂಡು ಮುರಿದು ಬಿದ್ದ ಶಾಸನವನ್ನು ಅವಸರವಾಗಿ ಪ್ರವೇಶಿಸಿ ಅಡಗಿಕೊಳ್ಳುತ್ತಾರೆ.)

ನಾಯಕ : (ಓಡಿ ಬಂದು ಮುರಿದ ಶಾಸನ ನೋಡಿ) ನಮ್ಮ ಊಹೆ ನಿಜವಾಗಿದೆ ಗೆಳೆಯರೇ ಹುಡುಕಿ ಧರ್ಮದ್ರೋಹಿಗಳು ಈ ಸುತ್ತೆಲ್ಲೊ ಇರಬೇಕು ಮೈಯಲ್ಲಾ ಕಣ್ಣಾಗಿರಲಿ. (ಹುಡುರು ಚೆಲ್ಲಾಪಿಲ್ಲಿಯಾಗಿ ಓಡುವರು. ಮುರಿದ ಶಾಸನದ ಚೂರುಗಳನ್ನು ಮತ್ತ ಜೋಡಿಸುತ್ತಾರೆ)

ಹುಡುಗರು: ಅಣ್ಣಾ. ಈ ದ್ರೋಹಿಗಳು ಬಸದಿಯಲ್ಲಿ ಪ್ರಜ್ಞೆ , ತಪ್ಪಿ ಬಿದ್ದಿದ್ದರು. (ಸಂಶೋಧಕರನ್ನು ಹಿಡಿದು ತರುತ್ತಾರೆ)

ನಾಯಕ : ಓ ಮಧ್ಯಾನ ಇವರನ್ನ ಸುಮ್ಮನೆ ಬಿಟ್ಟಿದು ತಪ್ಪಾಯಿತು ನೋಡಿ. ಹಿಡಿದು ಕಟ್ಟಿ ಕಂಬಗಳಿಗೆ.

ಸಂ 1 & 2: ದಯವಿಟ್ಟು ನಮ್ಮ ಮಾತು ಕೇಳಿ ಇಲ್ಲಿ ದೆವ್ವಗಳು ಇವೆ, ಅವುಗಳದೇ ಈ ಕೆಲ್ಸ ನಮ್ಮ ಮಾತು ನಂಬಿ.

ನಾಯಕ : ನಾಲ್ಗೆ ಬಿಚ್ಚಿದ್ರೆ ಮುಗೀತು ಹುಷಾರ್ ಪಾಪಿಗಳಾ.

ಹುಡುಗರು: ಸನಾತನ ಧರ್ಮಕ್ಕೆ ಜಯವಾಗ್ಲಿ ಸತ್.. ಪರಂಪರೆ ಉಳಿಯಲಿ.

ನಾಯಕ : (ಸನ್ನೆ ಮಾಡುವನು, ಸುಮ್ಮನಾಗುವರು ಭಾಷಣ ಧಾಟಿಯಲ್ಲಿ ಮಾತನಾಡುವನು) ದೇಶ ಪ್ರೇಮಿಗಳೇ ನಿಮ್ಮ ಕಣ್ಣ ಮುಂದೆ ನಡೆದಿರುವ ಈ ಹೀನ ಕೃತ್ಯವನ್ನು ನಾನು ವಿವರಿಸಿ ಹೇಳಬೇಕಿಲ್ಲ, ನಮ್ಮ ಸನಾತನ ಸಂಸ್ಕೃತಿಯ ಗುರುತುಗಳನ್ನು ನಾಶಪಡಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ ಎಂಬುದಕ್ಕೆ ನಮ್ಮ ಹೆಮ್ಮೆಯ ಕವಿ, ಮಹಾಕವಿ ಅವರ ಶಾಸನ ನಾಶಪಡಿಸಿರುವುದೇ ಸಾಕ್ಷಿಯಾಗಿದೆ ಮಿತ್ರರೇ. ಇದು ಇಂದು ನೆನ್ನೆಯದಲ್ಲ ಆದಿಯಿಂದಲೂ ನಮ್ಮ ಧರ್ಮವನ್ನು ವಿರೂಪಗೊಳಿಸಲು ನಿರಂತರ ಪ್ರಯತ್ನ ಮಾಡುತ್ತ ಬಂದಿರುವುದಕ್ಕೆ ಚರಿತ್ರೆಯಲ್ಲಿ ಪುರಾವೆಗಳು ಸಿಕ್ಕುತ್ತವೆ. ಮಿತ್ರರೆ ಈಗ ನಾವು ಎಚ್ಚರ ಗೊಂಡಿದ್ದೇವೆ ನಮ್ಮ ಪ್ರಾಣಗಳನ್ನು ಬಲಿ ಕೊಟ್ಟಾದರು, ರಕ್ತ ಹರಿಸಿಯಾದ್ರೂ ನಮ್ಮ ಸತ್ ಪರಂಪರೆಯನ್ನ ಉಳಿಸಿಕೊಳ್ಳಬೇಕು. ಅದಕ್ಕೆ ಈ ಕವಿಯ ಶಾಸನದ ಮುಂದ ಪ್ರತಿಜ್ಞೆ ಮಾಡುತ್ತೀವಿ. (ಭಾಷಣ ಮಾತಿಲ್ಲದ ಆಂಗಿಕವಾಗಿ ಮುಂದುವರೆಯುತ್ತದೆ.)

ಅಅಅ

ನಾಟಕ–೪

ಕೈವಾರ ನಾರೇಯಣ

(ಕೈವಾರ ತಾತಯ್ಯನ ಗುರುತಿನ ದನಿ ಹಿಡಿದು)

ದೃಶ್ಯ – ೧

[ತಿರುಪತಿ ದೇವಸ್ಥಾನ ಬ್ರಹ್ಮರಥೋತ್ಸವದ ಸಿದ್ಧತೆ. ಸಾಮೂಹಿಕವಾಗಿ ಮಂತ್ರಘೋಷವನ್ನು ಮಾಡುತ್ತಾ ಕಳಸದೊಂದಿಗೆ ಮೆರವಣಿಗೆ (ಮಾರ್ಚ್ ಪಾಸ್ಟ್)]

ಅನಾಮಿಕ : (ತನಗೆ ತಾನು ಹಾಡುತ್ತಾನೆ)

ತಬ್ಬಲಿ ದೇವರಿಗೆ ಅಬ್ಬರದ ಪೂಜಾರಿ
ವರ ಕೊಡುವ ದೇವನೊಬ್ಬನಿಲ್ಲ
ತಮ್ಮೊಳಗಿನ ದೇವರ ತಾವು ಕಾಣರಯ್ಯ
ನಾದ ಬ್ರಹ್ಮಾನಂದ ನಾರೇಯಣ

ಗುಂಪು 1 : ಹಿಂದಿನ ಸರ್ತಿ ಆದಂತೆ ಈ ಸಾರಿ ನಾವು ಪೈಲು ಅಗ್ಬಾರದು.

ಒಬ್ಬ : ಆಡಳಿತಕ್ಕೆ ಏನಾದ್ರು ಸುಳಿ ಸಿಕ್ಕಿರಬೌದಾ! ಬಂದೋಬಸ್ತು ಬಿಗಿಯಾಗಿದೆ.

ಇನ್ನೊಬ್ಬ : ರಾಜ್ಯಾಡಳಿತಕ್ಕೆ ಹೇಗೋ ಗೊತ್ತಿಲ್ಲ. ಆದರೆ ದೇವರ ಆಡಳಿತಕ್ಕೆ ಅನುಮಾನ ಬಂದಂಗಿದೆ.

ಮತ್ತೊಬ್ಬ : ಕಳಶದ ಮೆರೆವಣಿಗೆಯ ಪುರೋಹಿತರ ಜನಿವಾರದಲ್ಲಿ ಮಲಚೂರಿ ಗಳನ್ನ ಕಟ್ಟಿಕೊಂಡಿದ್ದಾರೆ. ದೈವ ದಾರಿಗೆ ಪನ್ನೀರು ಚೆಲ್ಲುವ ಹೊತ್ತಿನಲ್ಲಿ ಒಬ್ಬನ ಸೊಂಟದಿಂದ ಮಲಚೂರಿ ಆಚೆಗೆ ಬಂತು.

ಒಬ್ಬ/ಮತ್ತೊಬ್ಬ: ಸರಿ ಹೊತ್ತಾಯಿತು ನೀವು ನಿಮ್ಮ ನಿಮ್ಮ ಜಾಗಗಳಿಗೆ ಹೊರಡಿ. ಹೇಳಿದ್ದೆಲ್ಲ ಜ್ಞಾಪಕ ಉಂಟಲ್ಲ.

ಮತ್ತೊಬ್ಬ : ರಥ ಚಕ್ರಗಳು ಹೊರಳುತ್ತಲೆ ನಾನು ಸೀಟಿ ಹೊಡಿತೀನಿ. ತಕ್ಷಣ ಮುತ್ತಿಗೆ ಹಾಕಬೇಕು. ನಡೀರಿ...

ಅನಾಮಿಕ : (ಹಾಡುತ್ತಾನೆ)

ರಥದ ಕೀಲು ಮುರಿದು ರಥಕ್ಕೆ ಸಾರಥಿಯಿಲ್ಲ
ದೊರೆಯೊಬ್ಬನಿದ್ದಾನೆ ದೊಡ್ಡವನು

ಅವನ ಕೃಪೆ ದೊರಕಿದರೆ ಸಾರಥಿಯು ಯಾತಕ್ಕೋ
ನಾದ ಬ್ರಹ್ಮಾನಂದ ನಾರೇಯಣ

ಇನ್ನೊಂದು ಗುಂಪು: ಕೇಳಿ ಕೇಳಿ ಅಲ್ಲಿ ಹಾಡ್ತಾ ಇದ್ದಾನಲ್ಲ ಅವನ್ಯಾರೋ ವೇಷದಾರಿಯಂತೆ ಕಾಣ್ತವನೆ. ಅವನ ವರಸೆ ನೋಡಿದ್ರೆ ಅಡ್ಡ ಪಟ್ಟೆಯವನಿರಬೇಕು.

ಒಬ್ಬ : ಅಲ್ಲ ರಥ, ಕೀಲು ಅಂತ ಏನೋ ಒಗಟಿನಲ್ಲಿ ಸೂಚನೆಗಳನ್ನು ಕೊಡ್ತಿರುವಂಗಿದೆ.

ಇನ್ನೊಬ್ಬ : ಕಳೆದ ಬಾರಿ ನಮ್ಮ ದಾರಿಗೆ ಅಡ್ಡ ಬಂದವನು ಅವನೆ, ಆದ್ರೆ ಈ ಸಾರಿ ನಮ್ಮ ಪ್ಲಾನು ವೇಸ್ಟ್ ಆಗ್ಬಾರದು.

ಮತ್ತೊಬ್ಬ : ಈ ಸಾರಿ ದೇವರು ಕೈ ತಪ್ಪಿದ್ರೆ ಈ ದೇವಸ್ಥಾನ ಶಾಶ್ವತವಾಗಿ ನಮ್ಮ ಮತದವರಿಗೆ ಕೈ ಬಿಟ್ಟಂಗೆ.

ಇನ್ನೊಬ್ಬ : ಇನ್ನೊಂದು ವಿಷಯ ಯುವ ಪೂಜಾರಿಗಳಿಗೆ ನಾಟಕದ ತಾಲೀಮಿನ ಹೆಸರಿನಲ್ಲಿ ಗುಟ್ಟಾಗಿ ಯುದ್ಧ ಕಲೆಗಳನ್ನು ಕಲಿಸಿದ್ದಾರಂತೆ. ರಾಜನಿಗೂ ತಿಳಿಯದಂತೆ ಈ ಕೆಲಸಾನ ಪ್ರಧಾನ ಅರ್ಚಕರೇ ಮಾಡಿಸಿದ್ದಾರಂತೆ.

ಒಬ್ಬ : ಒಂದು ವಿಷಯ ನಿಮ್ಮ ಮನಸ್ಸಿನಲ್ಲಿ ಇರಬೇಕು. ಈ ದೇವರು ನಮ್ಮವನು. ಈ ದೇವಸ್ಥಾನ ಹುಂಡಿ ನಮಗೆ ಸೇರಿದ್ದು. ಇನ್ನೇನು ಉತ್ಸವ ಶುರುವಾಗುತ್ತೆ. ನಿಮ್ಮ ನಿಮ್ಮ ಜಾಗಗಳಿಗೆ ತೆರಳಿ; ಹುಷಾರ್!..

(ಅಷ್ಟರಲ್ಲಿ ಪುರೋಹಿತರ ಮಾರ್ಚ್ 'ದಾರಿ ಬಿಡಿ ರಥ ಹೊರಡುತ್ತಿದೆ' ಎಂದು ಜನರನ್ನು ದೂರ ಸರಿಸುತ್ತಾರೆ.)

ಅನಾಮಿಕ : ಅಯ್ಯಯ್ಯೋ ವೆಂಕಟರಮಣ ಏನೋ ಇದು ನಿನ್ನ ಸಂಕಟ? ಯಾರೋ ಪಾಪಿಗಳು ನಿನ್ನ ಕಟ್ಟಿ ಹಾಕಿದವರು. ನಿನಗೇ ನಾಮ ಹಾಕಿಬಿಟ್ಟವರಲ್ಲಯ್ಯ. ಎಂಥ ಘಾತಕರು ಇವರು. ಎಯ್ ಈ ಸೆರೆಯಾಗನಿಂಕ ದೇವರನ ಬಿಡಸಾನ ಬನ್ನಿರಪ್ಪ ದೇವರನ್ನ ಅರೆಸ್ಟು ಮಾಡವರಲ್ಲ ರಾಕ್ಷಸರು ಇವರೇ ಇವರೇ

(ರಥದ ಮೇಲೆ ನುಗ್ಗುವನು).

ನೂರು ಮಾರೆತ್ತರದ ತೇರ ಸಿಂಗರಿಸಿ
ಗುಡಿಯ ಸುತ್ತಲೂ ಎಳೆಯುವರು
ಗುಣಹೀನರೆಲ್ಲ। ನಾದಬ್ರಹ್ಮಾನಂದ ನಾರೇಯಣ।

ಪುರೋಹಿತ : ಏ ಶೂದ್ರ ಶನಿ ಮುಂಡೇದೆ, ದೇವರನ್ನ ಮುಟ್ಟಿ ಮೈಲಿಗೆ ಮಾಡಿಬಿಟ್ನಲ್ಲಪ್ಪ. ಹಿಡಿಯಿರಿ ಅವನನ್ನ, ದೊರೆಗೆ ಹೇಳಿ ಅವನ ಮೈ ಚರ್ಮ ಸುಲಿಸುತ್ತೇನೆ. ವೈಕುಂಠದ ಏಳು ಬಾಗಿಲು ಈ ದರಿದ್ರ ದಾಟಿ ಬಂದಿದ್ದಾದ್ರು ಹೇಗೆ? ಹಿಡಿಯಿರಿ ದೈವಕ್ಕೆ ಅಪಚಾರವಾದರೆ ಲೋಕದಲ್ಲಿ ಪ್ರಳಯ ಆಗುತ್ತೆ. ಏನ್ ನೋಡ್ತಾ ಇದ್ದೀರಿ ಹಿಡಿಯಿರಿ.

ಇತರೆ ಪುರೋಹಿತರು: ಹಿಡಿಯೋಣ ಅಂದ್ರೆ ಮಡಿ ಕೆಡುತ್ತೆ, ಅದಕ್ಕೆ ಯೋಚ್ನೆ ಮಾಡ್ತಾ ಇದ್ದೀವಿ.

ಪ್ರಮ : ಪ್ರಾಣಕ್ಕೆ ಬಂದಾಗ ಆತ್ಮ ರಕ್ಷಣೆಗಂತ ಕಟ್ಟಿಕೊಂಡಿರುವ ಮಲ ಚೂರಿ ಏನಾದವು, ದೈವಕ್ಕೆ ಏನಾದ್ರು ಅಪಚಾರ ವಾಗುವ ಮುನ್ನ ಆ ದುಷ್ಟನನ್ನ ಓಡಿಸಿ. ಅವನನ್ನು ರಥದ ಬೀದಿಯಲ್ಲಿ ಮರಕ್ಕೆ ಕಟ್ಟಿ ನಾಳೆ ರಾಜಾಸ್ಥಾನಕ್ಕೆ ಒಪ್ಪಿಸೋಣ.

'ಓಂ ಶ್ರೀ ವೆಂಕಟನಾಥಾಯ ನಮಃ ಓಂ ಏಳು ಗಿರಿ ನಿವಾಸಾಯ ನಮಃ'

(ಆಚರಣೆಗಳು ಮುಂದುವರೆಯುತ್ತವೆ).

●

ದೃಶ್ಯ – ೨

[ಚಂದ್ರಗಿರಿಯ ರಾಜನ ಆಸ್ಥಾನ. ರಾಜ ಚಿಂತಾಕ್ರಾಂತನಾಗಿದ್ದಾನೆ. ಮಹಾಮಂತ್ರಿಗಳು ಕೈ ಕಟ್ಟಿ ನಿಂತಿದ್ದಾರೆ; ಆಗ ಪ್ರಧಾನ ಪುರೋಹಿತನ ಆಗಮನ]

ದೊರೆ : ಪುರೋಹಿತರೆ ರಥ ಕದಲಿತೆ.

ಪ್ರ.ಪು : ಇಲ್ಲ ಪ್ರಭು, ದೈವದ ಈ ವಿಪರೀತವನ್ನ ನಾನು ಕಂಡೂ ಇಲ್ಲ, ಕೇಳಿಯೂ ಇಲ್ಲ.

ದೊರೆ : ದೇವಾಲಯದ ಎಲ್ಲಾ ಆನೆಗಳನ್ನ ಕಟ್ಟಿ ಎಳಸಬೇಕಿತ್ತು.

ಪ್ರ.ಪು : ಪ್ರಭು ನಮ್ಮ ಸೈನ್ಯದ ಎಲ್ಲಾ ಆನೆ ಕುದುರೆ ಕಾಲಾಳು ಜನ ಎಲ್ಲರು ಪ್ರಯತ್ನಿಸಿದ್ದು ವಿಫಲವಾಯಿತು.

ದೊರೆ : ನಮ್ಮ ಚಂದ್ರಗಿರಿಯ ವಂಶದ ಆಳ್ವಿಕೆಯ ಕಾಲದಲ್ಲಿ ಬ್ರಹ್ಮರಥ ಕದಲದೆ ನಿಂತಿದೆ ಅಂದರೆ ನಮ್ಮಿಂದ ದೈವಕ್ಕೆ ಏನೋ ಅಪಚಾರವಾಗಿರಲೇ ಬೇಕು.

ಪ್ರ.ಪು : ತಮ್ಮ ಆಳ್ವಿಕೆಯಲ್ಲಿ ದೇವರ ಕಾರ್ಯಕ್ಕೆ ಯಾವುದೇ ಕೊರತೆಯಾಗಿಲ್ಲ ಪ್ರಭು. ಕಳೆದ ವರ್ಷಕ್ಕಿಂತ ಈ ವರ್ಷ ಖಜಾನೆಯಿಂದ ಹತ್ತು ಸಾವಿರ ವರಹ ಹೆಚ್ಚು ಧನ ಬಿಡುಗಡೆಯಾಗಿದೆ. ಹಾಗೆ ನೋಡಿದರೆ ಈ ವರ್ಷದಿಂದ ನಿರಂತರ ಅನ್ನ ದಾಸೋಹವನ್ನು ನಡೆಸುತ್ತಿದ್ದೇವೆ. ಹಗಲು ರಾತ್ರಿ ಸತ್‌ಬ್ರಾಹ್ಮಣರಿಂದ ದೇವರ ಪೂಜೆ ನಡೆಸುತ್ತಾ ಬಂದಿದ್ದೇವೆ. ಹಿಂದೂ ಧರ್ಮ ಶಾಸ್ತ್ರಗಳು ಹೇಳಿರುವ ಎಲ್ಲ ಮಡಿ ಮೈಲಿಗೆಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ. ದೇವರಿಗೆ ಸಿಟ್ಟು ಬರುವ ಯಾವ ಕಾರ್ಯವನ್ನೂ ಮಾಡಿಲ್ಲ ಪ್ರಭು.

ದೊರೆ : ಹಾಗಾದರೆ ರಥದ ಗಾಲಿಯೇಕೆ ಉರುಳುತ್ತಿಲ್ಲ.

ಮಂತ್ರಿ : ಪ್ರಭು ಅರಮನೆಯಲ್ಲಿ ಅಥವಾ ರಾಜ್ಯದಲ್ಲಿ ಯಾವುದಾದರು ನಡೆಯಬಾರದ್ದು ತಪ್ಪು ನಡೆದಿರಬೇಕು. ಅದು ದೇವರಿಗೆ ಸಿಟ್ಟು ತರಿಸಿರಬಹುದು. ಅದು ದೇವಾಲಯದಲ್ಲೇ ನಡೆದಿರಬಾರದೇಕೆ?

ಪ್ರಮ : ಸಾಧ್ಯವೇ ಇಲ್ಲ. ಅದು ಅಸಂಭವ.

ಮಂತ್ರಿ : ಪುರೋಹಿತರೆ, ನಮ್ಮ ಕಣ್ಣುಗಳು ಧರ್ಮಶಾಸ್ತ್ರಗಳು ಹೇಳಿರುವ ಪಾಪ ಕಾರ್ಯಗಳನ್ನು ಮಾತ್ರ ಗುರುತಿಸುತ್ತವೆ. ಆದರೆ ದೈವದ ಕಣ್ಣಿಗೆ ಅದರಾಚೆಗಿನ ತಪ್ಪುಗಳು ಬಿದ್ದಿರುವ ಬಗ್ಗೆ ನಾನು ಯೋಚಿಸುತ್ತಿದ್ದೇನೆ. ಪ್ರಭು ನಾನು ಗೂಢಾಚಾರ ಮುಖ್ಯಸ್ಥನಿಗೆ ಕರೆ ಕಳಿಸಿದ್ದೇನೆ. ಆತ ಬಂದರೆ ಏನಾದರೂ ಮಾಹಿತಿ ಸಿಗಬಹುದು.

ದೊರೆ : ನನ್ನ ಆಡಳಿತದಲ್ಲಿ ನನಗೆ ತಿಳಿಯದೆ ತಪ್ಪು ಜರುಗಿರಬಹುದೇ ಮಂತ್ರಿಗಳೆ?

ಕಾವಲುಗಾರ : ಪ್ರಭು, ಗೂಢಚಾರ ಮುಖ್ಯಸ್ಥ ತಮ್ಮನ್ನು ಕಾಣಲು ಬಂದಿದ್ದಾರೆ.

ದೊರೆ : ಶಿಷ್ಟಾಚಾರ ಬೇಡ. ಬರಹೇಳಿ. ಮಂತ್ರಿಗಳೆ ಮುಂದೇನು?

ಮಂತ್ರಿ : ನೋಡಿ ನೆನ್ನೆ ಮತ್ತು ರಾತ್ರಿ ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ಅರಮನೆ ಹಾಗೂ ತಿರುಮಲೆಯ ದೇವಾಲಯದಲ್ಲಿ ನಡೆದ ಎಲ್ಲಾ ಘಟನೆಗಳ ವಿವರವನ್ನು ಸಂಗ್ರಹಿಸಿದ್ದೀರೋ ಹೇಗೆ?

ಗೂಢಚಾರ : ಪ್ರತಿ ನಿತ್ಯದಂತೆ ಸಂಗ್ರಹಿಸಿದ್ದೇನೆ.

ದೊರೆ : ಅರಮನೆಯಲ್ಲೇನಾದರು ನಮ್ಮ ಕಣ್ಣು ತಪ್ಪಿ...

ಗೂಢಚಾರ : ಇಲ್ಲ ಪ್ರಭು ನಮ್ಮ ವರದಿಯ ಪ್ರಕಾರ ಅರಮನೆಯಲ್ಲಿ ಅಂತಹ ಯಾವುದೇ ದೈವದ್ರೋಹದ ಕೆಲಸ ನಡೆದಿಲ್ಲ. ಆದರೆ ಯಥಾ ಪ್ರಕಾರ ರಾಜ್ಯದ ಬೇರೆ ಬೇರೆ ಕಡೆ ನಾಲ್ಕು ಕಳ್ಳತನ, ಎರಡು ಸುಲಿಗೆ ಪ್ರಕರಣಗಳು ನಡೆದಿವೆ, ಒಂದೆಡೆ ಜಾತಿ ದಳ್ಳುರಿಯಿಂದ ಗಲಭೆಯಾಗಿದೆ. ನಮ್ಮ ಆಡಳಿತ ಯಂತ್ರದ ಸಕಾಲಿಕ ಪ್ರವೇಶದಿಂದ ಜೀವ ಹಾನಿ ತಪ್ಪಿದೆ ಮತ್ತೊಂದೆಡೆ ಮದುವೆ ಮಂಟಪದಿಂದಲೇ ವಧು ಪರಾರಿಯಾಗಿದೆ.

ಮಂತ್ರಿ : ನೆನ್ನೆ ದೇವಾಲಯದ ಆವರಣದಲ್ಲಿ ನಡೆದ ಘಟನೆಗಳು.

ಪುರೋಹಿತ : ದೈವ ಸನ್ನಿಧಿಯಲ್ಲಿ ಅಪರಾಧಕ್ಕೆ ಎಡೆಯೆಲ್ಲಿದೆ ಮಂತ್ರಿಗಳೆ. ನೀವು ವಿನಾಕಾರಣ ದೇವಾಲಯದ ಸಿಬ್ಬಂದಿಯ ಮೇಲೆ ನಿಂದೆ ಹೊರಿಸಲು ಪ್ರಯತ್ನ ಪಟ್ಟಂತೆ ತೋರುತ್ತಿದೆ.

ಮಂತ್ರಿ : ದಯಮಾಡಿ ಕ್ಷಮಿಸಿ ಪುರೋಹಿತರೆ, ಪ್ರಭುಗಳು ರಥ ನಿಂತು ಹೋಗಿರುವುದರಿಂದ ಬೇಸರಗೊಂಡಿದ್ದಾರೆ. ಯಾವುದೋ ದೈವಕ್ಕೆ

ಇಷ್ಟವಿಲ್ಲದ ಕೆಲಸ ನಡೆದು ಹೋಗಿದೆಯೆಂದೇ ನೀವು ಹೇಳುತ್ತೀರಿ. ನನ್ನ ಅನುಭವದ ಮೇಲೆ ಹೇಳುವುದಾದರೆ ದೀಪದ ಕೆಳಗೆ ಕತ್ತಲು ಇರುತ್ತದೆ. ಅದನ್ನು ತಾವು ಬಲ್ಲಿರಿ.

ಗೂಢಚಾರ : ಇಲ್ಲ. ಪ್ರಧಾನ ಅರ್ಚಕರ ಕಟ್ಟೆಚ್ಚರದಲ್ಲಿ ದೈವ ಕಾರ್ಯಗಳು ಯಾವ ಲೋಪವಿಲ್ಲದಂತೆ ನಡೆಯುತ್ತಿವೆ. ಈ ಬಾರಿ ಪ್ರತಿವರ್ಷಕ್ಕಿಂತ ಹೆಚ್ಚು ಭಕ್ತಾಧಿಗಳು ಆಗಮಿಸಿರುವುದರಿಂದ ಶಿಸ್ತು ಕಾಯುವುದಕ್ಕೆ ಸೇನಾಧಿಪತಿಗಳು ಸೈನ್ಯವನ್ನೆ ನಿಯೋಜಿಸಿದ್ದಾರೆ.

ದೊರೆ : ಹಾಗಾದರೆ ದೇವಾಲಯದ ಆವರಣದಲ್ಲಿ ಯಾವುದೇ ತಪ್ಪು ನಡೆದಿಲ್ಲವೆನ್ನಿ.

ಪ್ರಪು : ನನ್ನ ಶಿರ ಬಿದ್ದರೂ ಸರಿ ದೇವಾಲಯದಲ್ಲಿ ತಪ್ಪು ನಡೆಯಗೊಡೆ ಪ್ರಭು.

ಗೂಢಚಾರ : (ಮಾತನ್ನು ತಡೆದು) ಕ್ಷಮಿಸಬೇಕು ಪ್ರಭು. ನೆನ್ನೆ ಅರೆ ಹುಚ್ಚನಂತಿರುವ ಯಾತ್ರಿಕನೊಬ್ಬ ಇದ್ದಕ್ಕಿದ್ದಂತೆ ಬ್ರಹ್ಮರಥಕ್ಕೆ ದಾಳಿಯಿಟ್ಟ ಘಟನೆ ಒಂದು.

ಪ್ರಪು : ಅದೊಂದು ಕ್ಷುಲ್ಲಕ ವಿಚಾರ ಪ್ರಭು. ಅನಾಮಿಕನೊಬ್ಬ ನುಗ್ಗಿ ಬಂದಿದ್ದೇನೋ ನಿಜ. ಆದರೆ ದೇವರ ಮೂರುತಿಗಳನ್ನಾತ ಮುಟ್ಟುವ ಮುನ್ನವೆ, ದೇವರ ಅಂಗರಕ್ಷಕ ಪಡೆ ಪ್ರಾಣದ ಹಂಗು ತೊರೆದು ಆತನನ್ನು ಹಿಮ್ಮೆಟ್ಟಿಸಿ ದೇವರ ಕಾರ್ಯಕ್ಕೆ ಭಗ್ನವಾಗದಂತೆ ಕಾಪಾಡಿತು ಪ್ರಭು. ಈ ಅಮಂಗಲವಾಗದೇ ಹೋಗಿದ್ದರೆ..

ಮಂತ್ರಿ : ಅವರಿಗೆ ವೀರ ಚಕ್ರ ಬಹುಮಾನ ನೀಡಲು ಶಿಫಾರಸ್ಸು ಮಾಡಬೇಕೆಂದಿದ್ದಿರಿ ಅಲ್ಲವೆ?

ದೊರೆ : ಗೂಢಚಾರರೆ ಈ ಘಟನೆ ಯಾಕೋ ವಿಚಿತ್ರವಾಗಿದೆ. ಅಲ್ಲಿ ಏನಾಯಿತು ಅಂತ ವಿವರವಾಗಿ ಹೇಳಿ.

ಮಂತ್ರಿ : ಪುರೋಹಿತರೇ ಈ ವಿಷಯ ತಮಗೂ ಗೊತ್ತಿರಬಹುದಲ್ಲವೆ?

ಪ್ರಪು : ಅದೂ ತೀರ ಸಣ್ಣ ವಿಷಯವಾದ್ದರಿಂದ...

ಗೂಢಚಾರ : ಅದು ನಡೆದಿದ್ದು ರಥಕ್ಕೆ ದೇವರನ್ನು ಕೂಡಿಸುವಾಗ, ಆ ಅನಾಮಿಕನಾರೋ ಏಕಾಏಕಿ ನುಗ್ಗಿ ಬಂದು ದೇವರನ್ನು ಬಂಧನದಿಂದ ಬಿಡಿಸಬೇಕು ಅಂತ ಕೂಗುತ್ತಿದ್ದನಂತೆ. ಆಗ ಪುರೋಹಿತರು ಆತನನ್ನು ತಡೆದು ದೇವರನ್ನು ರಕ್ಷಿಸಿದರಂತೆ.

ಆಗ ಆತನೇನೋ ಬ್ರಹ್ಮರಥ ಕದಲುವುದಿಲ್ಲವೆಂದು ಶಪಿಸಿದನೆಂದು ಅದಕ್ಕೆ ರಥ ಕದಲುತ್ತಿಲ್ಲವೆಂದು ಅಲ್ಲಿನ ಜನ ಮಾತನಾಡಿಕೊಳ್ಳುವುದನ್ನು ನಮ್ಮ ಬೇಹುಗಾರರು ಕೇಳಿಸಿಕೊಂಡರಂತೆ.

ಮಂತ್ರಿ : ಆತನ ಮೇಲೆ ನಮ್ಮ ಕಾವಲಿನವರು ಕೈ ಮಾಡಿಲ್ಲ ತಾನೆ?

ಗೂಢಚಾರ : ಇಲ್ಲ ಪ್ರಭು, ಆದರೆ ಪುರೋಹಿತರು ಹಿಮ್ಮೆಟ್ಟಿಸುವಾಗ ಅವರು ಬೀಸಿದ ಕತ್ತಿ ಆತನ ಹಣೆಗೆ ತಗುಲಿ ಒಂದು ತೊಟ್ಟು ನೆತ್ತರು ಭೂಮಿಗೆ ಬಿದ್ದಿತ್ತು ಅಂತ ಕಾವಲಿನವರು ಅಂದರು.

ದೊರೆ : ಈಗ ಆತನೆಲ್ಲಿ?

ಗೂಢಾಚಾರಿ : ಆತನನ್ನು ರಥ ಬೀದಿಯಲ್ಲಿ ಮರಕ್ಕೆ ಕಟ್ಟಲು ಪ್ರಧಾನ ಅರ್ಚಕರು ಆಜ್ಞೆ ಮಾಡಿದ್ದರಂತೆ. ಅದರಂತೆ ಆತನನ್ನು ಮರಕ್ಕೆ ರಾತ್ರಿ ಕಟ್ಟಿದ್ದರು. ಆದರೆ ಬೆಳಗಾಗುವಷ್ಟರಲ್ಲಿ ಆತ ಅಲ್ಲಿ ಇರಲಿಲ್ಲ ಪ್ರಭು. ಮರಕ್ಕೆ ಕಟ್ಟಿದ್ದ ಹಗ್ಗಗಳಷ್ಟೆ ಉಳಿದಿದ್ದವು.

ಮಂತ್ರಿ : ಆತನಿಗೆ ಕಾವಲು ಹಾಕಿರಲಿಲ್ಲವೇ?

ದೊರೆ : ಆದರೂ ಆತ ಯಾರಿಗೂ ಕಾಣದಂತೆ ಪರಾರಿಯಾಗಿದ್ದಾನೆ.

ಪ್ರಪು : ಮಹಾಪ್ರಭು ಆತನಾರೋ ಹುಚ್ಚನಿರಬೇಕು; ಹೆಚ್ಚೆಂದರೆ ಮೋಡಿಯವನಿರಬೇಕು. ಆತ ದೇವರ ರಥ ನಿಲ್ಲಿಸುವುದೆಂದರೆ ಏನು?

ಮಂತ್ರಿ : ನನಗ್ಯಾಕೋ ಆತನಾರೋ ಬಹುದೊಡ್ಡ ದೈವ ಸಾಧಕನಿರಬೇಕು ಅಂತ ಅನ್ನಿಸುತ್ತೆ ಪ್ರಭು. ಆತನನ್ನು ಪತ್ತೆ ಹಚ್ಚಿದರೆ ನಮ್ಮ ಸಮಸ್ಯೆ ತೀರಬಹುದು ಅನ್ನಿಸುತ್ತಿದೆ. ಆತನನ್ನು ಬೆಟ್ಟದ ಮೇಲೆ, ಕೆಳಗೆ ಹುಡುಕಿದರೇನು?

ಗೂಢಾಚಾರ : ಹುಡುಕಿಯಾಯಿತು ಪ್ರಭು. ಎಲ್ಲಿಯೂ ಆತನ ಸುಳಿವಿಲ್ಲ. ಆದ್ದರಿಂದ ದೇವರ ದರ್ಶನಕ್ಕೆ ಬಂದಿರುವ ಎಲ್ಲಾ ಸಂತರನ್ನು ಕೂಡಿ ಹಾಕಿದ್ದೇವೆ.

ದೊರೆ : ಒಂದು ತಪ್ಪನ್ನು ಸರಿಪಡಿಸಲು ಮತ್ತೊಂದು ತಪ್ಪು ಮಾಡಿದಂತಾಯಿತು. ತಕ್ಷಣವೇ ಆ ಎಲ್ಲರನ್ನೂ ಸಗೌರವದಿಂದ ಬಿಡುಗಡೆ ಮಾಡಿ ಸಂಸ್ಥಾನದ ಕ್ಷಮಾಪಣೆಯನ್ನ ಅವರಿಗೆ ತಿಳಿಸಿ.

ಗೂಢಚಾರ : ಅಪ್ಪಣೆ ಪ್ರಭು.

ಮಂತ್ರಿ : ಪ್ರಭು ದೇವರ ಮೂರ್ತಿಗಳಿಗೆ ಕೈಹಾಕಿದ್ದಾನೆಂದರೆ ಈತನಾರೋ ಸಂತನೇ ಇರಬೇಕು. ಆತನನ್ನು ಮತ್ತೆ ಬೆಟ್ಟಕ್ಕೆ ಕರೆತರದೆ ರಥ ಕದಲುವುದಿಲ್ಲವೆಂದು ನನ್ನ ಅನುಮಾನ.

ಪ್ರಪು : ಪ್ರಭು ಒಬ್ಬ ದೈವ ನಿಂದಕನಿಗೆ ನೀಡುವ ಗೌರವ ಮನ್ನಣೆ ದೈವನಿಂದನೆಗೆ ಸರಿ ಸಮನಾದದ್ದು. ಹೆಚ್ಚೆಂದರೆ ಆತನ ತಪ್ಪಿನ ಶಿಕ್ಷೆಯನ್ನು ಮನ್ನಾ ಮಾಡಬಹುದು, ಅದನ್ನು ಬಿಟ್ಟು ಆತನನ್ನ ಮತ್ತೆ ಬೆಟ್ಟಕ್ಕೆ ಕರೆತರುವುದು ಪ್ರಭುತ್ವಕ್ಕೆ, ಮುಖ್ಯವಾಗಿ ದೈವಕ್ಕೂ ಎಸಗುವ ಅಪಚಾರವೆಂದೇ ನನ್ನ...

ದೊರೆ : ಯಾವುದು ದೈವ ದ್ರೋಹದ ಕಾರ್ಯ ಎಂದು ತೀರ್ಮಾನವಾಗ ಬೇಕಾದರೆ ಆತನನ್ನು ಬೆಟ್ಟಕ್ಕೆ ಮತ್ತೆ ಕರೆತರದೇ ಅನ್ಯ ಮಾರ್ಗವಿಲ್ಲ. ತಾವಿನ್ನು ಹೊರಡಿ.

ಪ್ರಪು : ಅಪ್ಪಣೆ ಪ್ರಭು. (ಹೊರಡುತ್ತಾನೆ)

ದೊರೆ : ಗೂಢಚಾರರೇ, ನಿಮ್ಮ ತಂಡದ ಇಬ್ಬರು ಚಾಣಾಕ್ಷರಾದ, ಆ ವಿನಯವಂತರಾದ ಯುವಕರನ್ನು ಈ ಕಾರ್ಯಕ್ಕೆ ಇಂದೇ ನಿಯೋಜಿಸಿ ಆ ಸಂತರನ್ನ ಎಲ್ಲೇ ಇರಲಿ ಯಾವ ದೇಶವೇ ಆಗಿರಲಿ ಎಷ್ಟೇ ದಿನವಾದರೂ ಸರಿ ಹುಡುಕಿ ಮನವೊಲಿಸಿ ಕರೆತರಲು ಕಳುಹಿಸಿ.

ಮಂತ್ರಿ : ಮೊದಲು ಆತನ ಊರು ವೃತ್ತಿ ದೇಶಗಳನ್ನು ಪತ್ತೆ ಹಚ್ಚಿ. ಅಂದ ಹಾಗೆ ನಿಮ್ಮ ತನಿಖೆಯ ಕಾರ್ಯ ದೇವಾಲಯದ ಪುರೋಹಿತರಿಂದಲೇ ಆರಂಭಿಸಿ, ಗಾಯದ ಮೂಲನ್ನು ಅರಿಯಲು ಗಾಯಕ್ಕೆ ಬಳಸಿದ ಆಯುಧದಿಂದಲೇ ಆರಂಭಿಸಬೇಕು. ಇದು ಗುಟ್ಟಾಗಿರಲಿ. ಹುಂ. ಹೊರಡಿ.

ದೊರೆ : ಚಂದ್ರಗಿರಿಯ ರಾಜಮನೆತನಕ್ಕೆ ಒದಗಿರುವ ಕುತ್ತನ್ನು ನೀವು ಪರಿಹರಿಸಬೇಕು. ಮತ್ತೆ ತಿರುಮಲೆಯ ಬೆಟ್ಟದ ಮೇಲೆ ಶ್ರೀನಿವಾಸನ ಬ್ರಹ್ಮರಥದ ಗಾಲಿಗಳು ಎಂದಿನಂತೆ ಉರುಳಬೇಕು.

ಏಳಂತಸ್ತುಗಳ ತೇರ ಮೇಲಕ್ಕೇರಿ
ಸೂರ್ಯ ಚಂದ್ರರಿಲ್ಲದ ಬೆಳಕು ನೋಡಿ
ಮೆಲ್ಲನಿಳಿದು ಬಂದು ಎಚ್ಚರಗೊಳ್ಳಬೇಕೋ
ನಾದ ಬ್ರಹ್ಮಾನಂದ ನಾರೇಯಣ ॥

●

ದೃಶ್ಯ – ೩

[ಒಂದು ಗುಂಪು ಜನ ಕುಳಿತಿದ್ದಾರೆ. ಒಬ್ಬ ಭಾಗವತನಂತೆ ವೇಷ ತೊಟ್ಟವನು ಹರಿಕತೆಯನ್ನು ಶುರು ಮಾಡುತ್ತಾನೆ]

ಭಾಗವತ : ಶ್ರೀಮದ್ ರಮಾರಮಣ ಗೋವಿಂದಾ..

ಗುಂಪು : ಗೋವಿಂದಾ...

ಭಾಗವತ : ಹರಹರ ಮಹಾದೇವ್...

ಗುಂಪು : ಹರಹರ ಮಹಾದೇವ್

ಭಾಗವತ : ಭಕ್ತಾದಿಗಳೇ ತಾವು ಅನುಮತಿ ಕೊಟ್ಟರೆ ಕೈವಾರದಲ್ಲಿ ದೇವರಾಗಿ ನೆಲೆಸಿರುವ ಶ್ರೀ ಕೈವಾರ ತಾತಯ್ಯನವರ ಕಥೆಯನ್ನು ಹರಿಕತೆಯಾಗಿ ಪಾರಾಯಣ ಮಾಡುವಂತವನಾಗುತ್ತೇನೆ.

ಗುಂಪು : ಆಗಬಹುದು.

ಭಾಗವತ : (ಹಾಡು)

ಪಾರ್ವತಿ ಸುತನೇ ಏಕದಂತನೆ
ಮೂಷಿಕ ವಾಹನ ಮೂಜಗ ಪೂಜಿತ
ವಿಘ್ನ ನಿವಾರಕ ವಿನಾಯಕನೆ
ವಕ್ರದಂತನೆ ಗಣನಾಯಕನೆ॥

ಈ ಪ್ರಕಾರವಾಗಿ ದೈವಸ್ತುತಿಯ ನಂತರ ಕೈವಾರ ಪಟ್ಟಣದಲ್ಲಿ ನೆಲೆ ನಿಂತಿರುವ ಸ್ಥಳ ದೇವರಾದ ಶ್ರೀ ಅಮರ ನಾರಾಯಣ ಸ್ವಾಮಿಗೆ ವಂದಿಸಿ, ಕತೆಯನ್ನು ಆರಂಭಿಸುತ್ತೇನೆ. ಶ್ರೀ ಅಮರ ನಾರಾಯಣಸ್ವಾಮಿ ಪಾದಕ್ಕೆ ಒಂದು ಸಾರಿ ಗೋವಿಂದಾ..

ಗುಂಪು : ಗೋವಿಂದಾ...

ಭಾಗವತ : ಆ ಕಾಲದಲ್ಲಿ ಇವೊತ್ತಿನ ಕೈವಾರ ಪಟ್ಟಣವನ್ನು ಏಕಚಕ್ರಪುರವೆಂದು ಕರೆಯುತ್ತಿದ್ದರು. ಪಾಂಡವಾದಿಗಳು ಇಲ್ಲಿ ನೆಲೆಗೊಂಡು, ಬಕಾಸುರನನ್ನು

ವಧಿಸಿ, ದೈವಾನುಗ್ರಹ ಹೊಂದಿ ತಮ್ಮ ಇಷ್ಟಾರ್ಥಗಳನ್ನು ಕೈಗೊಂಡರೆಂದು ನಮ್ಮ ಹಿರೀಕರು ಹೇಳ್ತಾರೆ. ಅಂತಹ ಪಟ್ಟಣದಲ್ಲಿ ಅಮರ ನಾರಾಯಣನ ಪರಮ ಭಕ್ತರಾದ ಬಳೆ ವ್ಯಾರುವ ಶ್ರೀ ಕೋಂಡಪ್ಪ ಮತ್ತು ಶ್ರೀಮತಿ ಮುದ್ದಮ್ಮ ಅವರು ಸತಿ ಪತಿಗಳಾಗಿ ಧರ್ಮದಿಂದ ಬಾಳಾಟ ಮಾಡುತ್ತಿದ್ದರು. ಅನೇಕ ವರ್ಷಗಳ ಕಾಲ ಅವರಿಗೆ ಮಕ್ಕಳಾಗಲಿಲ್ಲ. ಪರಿಪರಿಯಾಗಿ ದೈವನನ್ನು ಸ್ತುತಿಸಿದರು. ಫಲ ಕಾಣದೆ ಹೋದಾಗ ಊರ ಜನರೆಲ್ಲಾ ಆಕೆಯನ್ನು ಬಂಜೆಯೆಂದು ಹಿಂದೆ ಮಾತನಾಡಿಕೊಳ್ಳುತ್ತಿದ್ದರು. ಆ ಮಾತುಗಳಾದರೋ ಎದೆಗೆ ಚೂರಿ ಇರಿದಂತೆ ಆಗುತ್ತಿತ್ತು. ಆಗ ಆ ತಾಯಿಯ ಮನಸ್ಸಾದರು ಯಾವ ರೀತಿಯಾಗಿ ಪರಿತಪಿಸುತ್ತಿತ್ತು ಅಂದರೆ, ಮುಂಜಾನೆ ಹುಟ್ಟಲಿ, ಸಂಜೆಗೆ ಸಾಯಲಿ. ಬಂಜೆ ಎಂಬ ಸೊಲ್ಲ ಬಿಡಿಸಯ್ಯ ಅಮರ ನಾರಾಯಣ... ಅಂತ ದೇವರಲ್ಲಿ ಮೊರೆಯಿಡುತ್ತಿದ್ದಳು. ಹೀಗೆ ಕಾಲ ಸರಿಯುತ್ತಿರುವಾಗ ಒಂದು ದಿನ ಈ ದಂಪತಿಗಳು ಉಪವಾಸ ವ್ರತ ಮಾಡಿ ಬ್ರಾಹ್ಮಣರಿಗೆ ದಾನ ಧರ್ಮ ಮಾಡಿ ನಾರಾಯಣನನ್ನು ಸ್ತೋತ್ರಿಸಿ ಮನೆಗೆ ಬಂದರು. ಆ ರಾತ್ರಿ ನಾರಾಯಣನಿಗೆ ದಯೆ ಬಂದು ಕಣ್ಣು ತೆರೆದ ಕರುಣಾಕರನು ಕರುಣೆ ಮಳೆ ಕರೆದು ಅಮರ ನಾರಾಯಣ ಕರುಣೆ ಮಳೆಗರೆದಾ...

ಆ ರಾತ್ರಿ ಕನಸಿನಲ್ಲಿ ಇಷ್ಟ ದೇವರಾದ ಅಮರನಾರಾಯಣಸ್ವಾಮಿ ಕಾಣಿಸಿಕೊಂಡು "ಭಕ್ತರೆ, ನಿಮ್ಮ ಸೇವೆ-ಭಕ್ತಿಗೆ ಮೆಚ್ಚಿದ್ದೇನೆ. ಲೋಕ ಕಲ್ಯಾಣಾರ್ಥವಾಗಿ ಮಹಾಪುರುಷನೊಬ್ಬ ನಿಮ್ಮ ಹೊಟ್ಟೆಯಲ್ಲಿ ಮಗನಾಗಿ ಹುಟ್ಟುತ್ತಾನೆ. ಭೂ ಲೋಕದಲ್ಲಿ ಮೋಸ, ವಂಚನೆ, ಅಧರ್ಮ ಜಾಸ್ತಿಯಾಗಿದೆ. ಹಾಗಾಗಿ ನನ್ನ ಪ್ರಿಯ ಭಕ್ತನಾಗಿರುವ ರಾಮಾನುಜಚಾರ್ಯನನ್ನೇ ನಿಮ್ಮ ಮಗನಾಗಿ ಕಳುಹಿಸುತ್ತಿದ್ದೇನೆ" ಅಂತ ಹೇಳಿದ ಹಾಗಾಯಿತು. ಬೆಚ್ಚಿ ಎದ್ದು ನೋಡಿದರೆ ಆಕೆಯ ಮಡಿಲಲ್ಲಿ ಒಂದು ಹೂ ಬಿದ್ದಿತ್ತು. ಗಂಡ ಹೆಂಡ್ತಿಯಾದರೋ ಅತೀವ ಆನಂದದಿಂದ ತಮ್ಮ ಬಹುದಿನದ ಕನಸು ಫಲಿಸಿತು; ಮಹಾಪುರುಷ ನಾದ ರಾಮಾನುಜಚಾರ್ಯರೇ ತಮ್ಮ ಹೊಟ್ಟೆಯಲ್ಲಿ ಮಗುವಾಗಿ ಹುಟ್ಟುತ್ತಾರೆ ಅನ್ನೋ ವಿಷಯದಿಂದ ಪುಳಕಗೊಂಡಿದ್ದರು. ಆಗ...
(ಧಡಕ್ಕನೆ ಗುಂಪಿನಿಂದ ಒಬ್ಬ ಆಗಂತುಕ ಎದ್ದು)

ಅನಾಮಿಕ : (ಎದ್ದು ನಿಂತು) ಸುಳ್ಳು! ಇವರು ಹೇಳ್ತಿರೋದು ಸುಳ್ಳು. ಹೆಸರು ಹರಿಕತೆ ಇಲ್ಲಿ ಬುಡ್ತಿರೋದು ಬುರುಡೆ.

ಭಾಗವತ : ಯಾರಯ್ಯ ನೀನು? ಯಾಕೆ ಹರಿಕತೆಯ ಮಧ್ಯ ವಿಘ್ನ ಉಂಟು ಮಾಡುತ್ತಿರುವೆ?

ಗುಂಪು : ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ರೀ... ಈ ಕಾಲದಾಗ ಟಿ.ವಿ., ಸಿನಿಮಾ ಅಂತ ದೇವರನ್ನ ನೆನೆಯೋರೆ ಇಲ್ಲ. ಅಂತಾದ್ರಾಗ ಪಾಪ ಮಠದವರೇ ದುಡ್ಡುಕೊಟ್ಟು ಕತೆ ಹೇಳೋದಿಕ್ಕೆ ಈ ಭಾಗವತರನ್ನ ಕಳಿಸವರೇ..

ಅನಾಮಿಕ : ಲೇ.. ಲೇ.. ನೀವು ಬುದ್ಧಿಗೇಡಿಗಳು, ಬುದ್ಧಿಗೇಡಿಗಳು... ಮಠದ ಯಜಮಾನನಿಗೆ ತಿಂದದ್ದು ಅರಗತಾ ಇಲ್ಲ. ಇವರಿಗೆ ತಿನ್ನಕೇ ಇಲ್ಲ. ಅದಕ್ಕೆ ಹೊಟ್ಟೆ ತುಂಬಿದವರು-ಹಸಿದವರು ಇಬ್ಬರೂ ಸುಳ್ಳು ಹೇಳ್ತಾವರೆ.

ಭಾಗವತ : ರೀ ಸ್ವಾಮಿ ನನ್ನ ನಾಲಿಗೆಯಲ್ಲಿ ಅಸತ್ಯ ನುಡಿಯೋದಿಲ್ಲ. ಈ ಕತೆಯನ್ನೇ ನೂರು ಹಳ್ಳಿಗಳಲ್ಲಿ ಸಾವಿರಾರು ಭಕ್ತರಿಗೆ ಹೇಳಿದ್ದೀನಿ. ಎಲ್ಲರೂ ಮೆಚ್ಚವರೆ ಗೊತ್ತ.

ಅನಾಮಿಕ : ಜನ ಮೆಚ್ಚಿದ್ದರೆ ಸುಳ್ಳು ಸತ್ಯ ಆಯ್ತುದಾ. ಕೈವಾರ ತಾತನಿಗೂ ಆ ರಾಮಾನುಜಚಾರ್ಯರಿಗೂ ಏನಯ್ಯ ಸಂಬಂಧ!

ಭಾಗವತ : ನಮ್ಮ ಗುರುಗಳು ಹೇಳವರೆ, ಮಠದವರು, ಜ್ಞಾನಿಗಳು, ಬುದ್ಧಿವಂತರು ಎಲ್ಲರೂ ಒಪ್ಪಿದ ಮ್ಯಾಲೇನೆ ಈ ಹರಿಕತೆಯನ್ನು ಜನಗಳಿಗೆ ಹೇಳ್ತಿರೋದು.

ಅನಾಮಿಕ : ನೋಡಪ್ಪ, ನಾರಾಯಣಪ್ಪ ಯಾರ ಅವತಾರನೂ ಅಲ್ಲ. ಅಪರಾವತಾರನೂ ಅಲ್ಲ.

ಗುಂಪು : ಮತ್ತೆ ಅವರು ಸಾಧುಗಳಾಗಿದ್ದು ಸುಳ್ಳ?

ಅನಾಮಿಕ : ಅವರು ಸಾಧುಗಳಾಗಿದ್ದು ನಿಜ. ಆದರೆ ದೇವರು ಅವರ ಅಪ್ಪ-ಅಮ್ಮನ ಕನಸಿನಲ್ಲಿ ಬಂದದ್ದು, ದೇವರು ಹೂ ಕೊಟ್ಟಿದ್ದು... ರಾಮಾನುಜಚಾರ್ಯರು ಕೈವಾರ ತಾತಯ್ಯನಾಗಿ ಅವತಾರ ಎತ್ತಿದ್ದು ಎಲ್ಲಾ ಸುಳ್ಳು.

ಭಾಗವತ : ಎಲ್ಲೈ ದೈವದ್ರೋಹಿ. ದೇವರ ಕೆಲಸಕ್ಕೆ ಕಲ್ಲು ಹಾಕಬೇಡ. ನಿನಗೆ ಒಳ್ಳೇದಾಗಲ್ಲ ದೂರ ತೊಲಗು.

ಅನಾಮಿಕ : ದೇವರ ಕೆಲಸಕ್ಕಲ್ಲ ನಿನ್ನ ಅನ್ನಕ್ಕೆ ಮಣ್ಣು ಬಿತ್ತು ಅನ್ನೋದು ನಿನ್ನ ಬಾಧೆ.

ಭಾಗವತ : ಈ ದೈವ ನಿಂದೆಯನ್ನು ನಾನು ತಾಳಲಾರೆ. ನಿನ್ನ ಈಗ್ಲೇ ಏನು ಮಾಡ್ತೀನಿ ನೋಡು.

ಗುಂಪು : ಭಾಗವತರೆ ದುಡುಕಬ್ಯಾಡಿ ಇರಿ. ಯೋ ಯುಜವಾನಪ್ಪ ನಾರಾಯಣಪ್ಪನು ಹೆಂಗಯ್ಯ ಹುಟ್ಟಿದನು ಮತ್ತೆ?

ಅನಾಮಿಕ : ನೀನು, ನಾನು ಈ ಎಲ್ಲರೂ ಹೆಂಗೆ ಹುಟ್ಟಿದೆವೋ ಹಂಗೇನೆ ನಾರಾಯಣಪ್ಪನೂ ಹುಟ್ಟಿದ್ದು. ಗಾಳಿ ಬೀಸಲ್ವೆ, ಮಳೆ ಬೀಳಲ್ವೆ, ನೆಲಕ್ಕೆ ಬಿದ್ದ ಬೀಜ ಮೊಳಕೆ ಹೊಡೆಯಲ್ವೆ. ಹಂಗೆ ಹೂಂ.

ಭಾಗವತ : ಆತ ಕಾರಣ ಜನ್ಮನಲ್ಲದೆ ಹೋಗಿದ್ದರೆ ಕಾಲಜ್ಞಾನ-ಬ್ರಹ್ಮಜ್ಞಾನವನ್ನು ಹೇಗೆ ತಿಳಕಂತಿದ್ದ. ಹುಟ್ಟಿದ ತಕ್ಷಣವೇ ಹಸು ಮಗುವಿನ ತಲೆ ಮ್ಯಾಲೆ ಆ ನಾಗದೈವ ಹೆಡೆಯನ್ನು ಕೊಡೆಯಂತೆ ಹೇಗೆ ಹಿಡಿತಿದ್ದ.

ಗುಂಪು : ಕರೆಕ್ಟ್... ಇದು ಪಾಯಿಂಟ್.

ಅನಾಮಿಕ : ಕಟ್ಟುಕತೆ. ನಾರಾಯಣಪ್ಪ ಹೆಸರಲ್ಲಿ ಜೀವ ಹಿಡಕಂಡಿರೋದು ಕತೆ.

ಭಾಗವತ : ಪೂರ್ವ ಜನ್ಮದ ಸುಕೃತ ಇಲ್ದೆ ಇದ್ದಿದ್ದರೆ ಶೂದ್ರ ಜಾತಿಯಲ್ಲಿ ಹುಟ್ಟಿದ ನಾರಣಪ್ಪನಿಗೆ ಅಂತಹ ಸಂಸ್ಕಾರ ಹೇಗೆ ಬಂತು?

ಅನಾಮಿಕ : ಸಂಸ್ಕಾರ ಹುಟ್ಟಿನಿಂದ ಬರಲ್ಲಪ್ಪ, ಬದುಕೋದ್ರಿಂದ ಬರುತ್ತೆ. ಇಲ್ಲಿ ಕುಂತವರಲ್ಲಾ ಈ ಮಕ್ಕಳು ಅವರಲ್ಲಿ ಯಾರು ಬೇಕಾದ್ರೂ ನಾರಾಯಣಪ್ಪನವರ ತರಹ ಆಗಬೌದು... ಅದಕ್ಕೆ ಪೂರ್ವ ಜನ್ಮದ ಲೆಕ್ಕಾಚಾರ ಬೇಕಾಗಿಲ್ಲ ತಿಳಕೋ.. ಬೆಂಕಿಯಲ್ಲಿ ಎಂಥ ಗಟ್ಟಿ ಕಬ್ಬಿಣಾನಾದ್ರೂ ಕಾಯಿಸಿದ್ರೆ ಕಾದು ಮೆತ್ತಗಾಗಲ್ವೆ, ಬದುಕು ಅಂದ್ರೆನೆ ಬೆಂಕಿ, ಅದ್ರಲ್ಲಿ ಯಾರ್‍ಯಾರು ಎಷ್ಟು ಬೇಯುತ್ತಾರೋ ಅಷ್ಟು ಅವರ ಪಾಲಿನದ್ದು. ನಾರಾಯಣಪ್ಪೋರ ಪಾಲು ನಾರಾಯಣಪ್ಪನ್ದು.

ಭಾಗವತ : ನಾನು ಹೇಳಿದ್ದು ಸುಳ್ಳಾದರೆ ನೀನು ಹೇಳಿದ್ದು ನಿಜ ಅನ್ನೋದಿಕ್ಕೆ ಏನೈತೆ ಸಾಕ್ಷಿ. ಅಂಗೇನೆ ಬದುಕು ಅಂದ್ರೆ,

ಅನಾಮಿಕ : ಸತ್ಯಕ್ಕೆ ಸಾಕ್ಷಿಗಳಿರಲ್ಲೋ, ಸಾಕ್ಷಿ ಇರೋದೆಲ್ಲ ಸುಳ್ಳಿಗೆ ಮಾತ್ರ.

ಗುಂಪು : ನೀನು ಹೇಳೋದೇನೋ ಸರಿ, ನೀನು ಯಾರು? ಎಲ್ಲಿಂದ ಬಂದೆ? ಅದೇಳು ಫಸ್ಟು.

ಅನಾಮಿಕ : ಊರು ಹೆಸರು ಕಳೆದು ಹೋಗಿರೋ ದಾರಿನಾಗ ನಡೀಬೇಕು ಅಂತ ಹೊರಟವನು ನಾನು.

ಭಾಗವತ : ನೋಡಿದ್ರಾ ಇವನ ನಾಟಕ, ಊರ ಹೆಸರು ಹೇಳಿದ್ರೆ ತನ್ನ ಬಣ್ಣ ಬಯಲಾಗಬಹುದು ಅಂತ್ಲೇ ಗಿಲೀಟು ಮಾಡ್ತಾವನೆ.

ಅನಾಮಿಕ : ಗಿಲೀಟು ಚಲಾವಣೆಗೆ ಬಂದಾಗಿನಿಂದ ನಿಜಾವನಿಜಗಳ ನಡುವಿನ ಗೆರೇನೆ ಅಳಿಸೋಗದೆ.

ಗುಂಪು : ಈ ಪಿಕ್ಕ ಎಲ್ಲಾ ಬ್ಯಾಡ ನಿಜ ಹೇಳಿದ್ರೆ ಸರಿ ಇಲ್ಲಾಂದ್ರೆ..

ಭಾಗವತ : ಇಂಥವರನ್ನ ಸುಮ್ಮನೆ ಬಿಡಬಾರದು. ಇವರ್ನ ಹಿಂಗೇ ಬಿಟ್ರೆ ನಾಳೆ ದೇವರ ಹೆಸರು ಹೇಳೋದಕ್ಕೂ ಇವರು ಆಸ್ಪದ ಕೊಡಲ್ಲ. ಒಂದು ವೇಳೆ ಅದೇ ಆದ್ರೆ ಆಮ್ಯಾಲೆ ಭೂಮಿ ಮ್ಯಾಲೆ ಮಳೆ ಬೆಳೆ ಆದಾತ. ಜನ ಜೀವಗಳು ಬದುಕಿದಾರ! ನೀವೆ ಯೋಚ್ನೆ ಮಾಡ್ರಿ

ಗುಂಪು : ನೋಡಯ್ಯ ನೀನು ಯಾರು ಅಂತ ಹೇಳು ಇಲ್ಲಾಂದ್ರೆ ನಿನ್ನ ಹಿಡಿದು ಊರಿನ ಕಂಬಕ್ಕೆ ಕಟ್ಟಿ ಹಾಕಬೇಕಾಗುತ್ತೆ.

ಅನಾಮಿಕ : ದಿಗಲೇ ವೊಂಟೋಗಿ ಎಷ್ಟೋ ದಿನ ಆಯ್ತೋ ಅನ್ಸತದೆ. ಆಯ್ತರಪ್ಪ ನಾನು ಮಾಡಿದ್ದು ತಪ್ಪಾದ್ರೆ ಹಿಡಿದು ಕಟ್ಟಿ ಅದೇನು ಶಿಕ್ಷೆ ಕೊಡ್ತೀರೋ ಕೊಡಿ.

ಭಾಗವತ : ಗೌಡರೆ, ಕಟ್ಟಿರಿ. ಮಠದವರಿಗೆ ಸ್ವಾಮಿಗಳಿಗೆ ಹೇಳಿ ಕಳಿಸೋಣ?

ಇನ್ನೊಬ್ಬ : ಪೊಲೀಸ್‌ಗೆ ಹ್ಯಾಂಡೋವರ್ ಮಾಡೋಣ. ಏನಂತೀರಿ.

ಮತ್ತೊಬ್ಬ : ಯಾರೋ ತಲೆ ಕೆಟ್ಟವನಿರಬೇಕು ಆಚೆ ಕಳಿಸಿ ಕಥೆ ಮುಂದಕ್ಕೆ... ನಡೆಸಿ...

ಅನಾಮಿಕ : ನೀವು ಏನು ಮಾಡಿದ್ರು ಈ ಮನುಷ್ಯ ಧಗಾಕೋರ. ಹೊಟ್ಟೆ ತುಂಬಿಸ್ಕೊಳ್ಳಕೆ ಸುಳ್ಳು ಹೇಳ್ತಾ ಅವನೆ.

ಭಾಗವತ : ಗೌಡರೇ ನೀವು ಇವನ್ನ ಕಟ್ಟಿಸ್ತಿರೋ ಇಲ್ಲ ನಾನೇ ಇಲ್ಲಿಂದ ಹೋಗ್ಲೋ. ನನಗೆ ಅವಮಾನ ಆದ್ರೂ ಪರವಾಗಿಲ್ಲ; ಆದರೆ ಈ ರಾಕ್ಷಸನ ದೈವ ನಿಂದನೆಯನ್ನು ಸಹಿಸಿಕೊಳ್ಳಲು ಸಾಧ್ಯ ಆಗ್ತಿಲ್ಲ.

ಗೌಡ : ಹಿಡಿದು ಕಟ್ಟಿರೋ ಈ ತರಲೆ ಮುದುಕನ್ನ. (ಆಗ ಧುತ್ತನೆ ಗುಂಪಿನಿಂದ ಇಬ್ಬರು ಯೋಧರು ಮುನ್ನುಗ್ಗಿ ಬರುತ್ತಾರೆ)

ಯೋಧರು: ನಿಲ್ಲಿ. ಹೆಜ್ಜೆ ಮುಂದೆ ಇಟ್ಟರೆ ಪರಿಣಾಮ ನೆಟ್ಟಗಾಗದು.

ಅನಾಮಿಕ : ಬರ್ರೀ... ಬರ್ರೀ... ಹಿಡಿದು ಕಟ್ಟಿ, ಕೊರಡ ತನ್ನಿ, ಮೈ ಚರ್ಮ ಎಬ್ಬಿಸಿ.

ಗೌಡ : ಯಾರು ನೀವು? ನಮ್ಮ ಊರಿನಲ್ಲಿ ಬಂದು ನಿಮ್ಮದೇನು ಉಸಾಬರಿ.

ಭಾಗವತ : ರೌಡಿಗಳಿರಬೇಕು.. ನೋಡಿದ್ರೆ ಅಂಗೆ ಇದ್ದಾರೆ. (ಗೌಡನ ಹಿಂದೆ ಅಡಗುವನು)

ಯೋಧರು: ನಾವು ರೌಡಿಗಳಲ್ಲ. ರಾಕ್ಷಸರೂ ಅಲ್ಲ. ನಾವು ಚಂದ್ರಗಿರಿಯ ರಾಜನ ಗೂಢಾಚಾರರು. ಈತನ ಮೇಲೆ ಕೈ ಮಾಡಿದ್ರೆ ನಿಮ್ಮ ರುಂಡಗಳು ಮುಂಡದಿಂದ ಬೇರ್ಪಡುತ್ತವೆ. ಅವರ್ನ ಅವರ ಪಾಡಿಗೆ ಬಿಡಿ.

ಗೌಡ : ದಯಮಾಡಿ ನಮ್ಮ ದುಡುಕನ್ನು ಕ್ಷಮಿಸಿ. ಈ ಹಿರೇಕರು ದೈವನಿಂದೆ ಮಾಡಿದರೆಂದೇ ನಮಗೆ ಸಿಟ್ಟು ಬಂದಿತ್ತು ಅಷ್ಟೆ. ಯಜಮಾನಪ್ಪ ನಮ್ಮನ್ನು ಕ್ಷಮಿಸು.

ಯೋಧರು: (ಹಿರೀಕನನ್ನು ಉದ್ದೇಶಿಸಿ) ತಾವು ಎಲ್ಲ ಬಲ್ಲವರು. ಅವರ ದುಡುಕನ್ನ ಕ್ಷಮಿಸಿ. ತಾವು ಯಾರು ಎಲ್ಲಿಂದ ಬರೋಣವಾಯಿತು. ನಾವು ತಿರುಮಲೆಯ ಬ್ರಹ್ಮರಥವನ್ನು ನಿಲ್ಲಿಸಿ ಬಂದ ಸಂತನನ್ನು ಹುಡುಕಿ ಆತನ ಜಾಡು ಹಿಡಿದು ಇಲ್ಲಿಯವರೆಗೆ ಬಂದಿದ್ದೇವೆ. (ಪಕ್ಕಕ್ಕೆ ಕರೆದೊಯ್ದು ಕಲ್ಲಿನ ಮೇಲೆ ಕೂರಿಸ್ತಾರೆ)

ಅನಾಮಿಕ : ನೀವು ಯಾಕೆ ಅವರ್ನ ತಡದಿರಿ.. ಹಗ್ಗ ಕಲ್ಲುಗಳಿಗಿಷ್ಟು ವ್ಯಥೆ ತಪ್ಪಿಸಿದಿರಲ್ಲ.

ಯೋಧರು: ನಾವು ತಿರುಪತಿಯಿಂದ ಹೆಸರಿಲ್ಲದ ಊರಿಲ್ಲದ, ಆ ಸಂತನ ಗುರುತು ಹಿಡಿದು ಗಾಳಿಯಲ್ಲಿ ತೇಲಿಬಂದ ಪರಿಮಳದ ಬೆನ್ನ ಹತ್ತಿ ನಾದಬ್ರಹ್ಮನ ಹುಡುಕಿಕೊಂಡು ಇಲ್ಲಿಗೆ ಬಂದು ಮುಟ್ಟಿದ್ದೇವೆ. ಈಗ ನೀವು ನಮಗೆ ಸಹಾಯ ಮಾಡಬೇಕು.

ಅನಾಮಿಕ : ನಡೆದ ದಾರಿಯಲ್ಲಿ ಮೂಡಿದ ಹೆಜ್ಜೆ ಗುರುತನ್ನ ಅಳಿಸಿ ನಡೆದವನ ಬೆನ್ನ ಹತ್ತಿ ಬಂದಿದ್ದೀರಿ ಎಂದರೆ ನಿಮ್ಮ ಪ್ರಯತ್ನವೂ ಕೂಡ ಹಠಯೋಗದ್ದೇ..

ಯೋಧರು: ತಾವು ತಪ್ಪು ತಿಳಿಯದಿದ್ದೊಡೆ ನಿಮ್ಮ ಹೆಸರನ್ನು ನಾವು ತಿಳಿದು ಕೊಳ್ಳಬಹುದೇ..

ಅನಾಮಿಕ : ನೀವು ಹುಡುಕುತ್ತಿರುವ ಗುರುವಿನ ಶಿಷ್ಯ ನಾನು. ಆದರೆ, ಅದು ನನ್ನ ಗುರುತಲ್ಲ..

ಯೋಧರು: ನೀವು ಆಡಿದ ಮಾತುಗಳಲ್ಲೇ ಆ ಗುರುತು ಇದೆ. ಆದರೆ..?

ಅನಾಮಿಕ : ಸರಿ. ಕಷ್ಟಪಟ್ಟು ಕಳೆದುಕೊಂಡ ಹೆಸರಿನಿಂದ ನಿಮಗೆ ಅನುಕೂಲ ವಾಗುವುದಾದರೆ ಹೇಳ್ತೇನೆ.

ಯೋಧ-1: ಹೇಳಿ. (ಇನ್ನೊಬ್ಬ ಯೋಧನಿಗೆ) ಈತನೇ ಸಂತನಿದ್ದರೆ?

ಯೋಧ-2: ಇರಬಹುದು. ತಾಳು ಪ್ರಾರ್ಥಿಸುವಾ!

ಅನಾಮಿಕ : (ನಕ್ಕು) ನೀವು ಹುಡುಕುವ ಸಂತ ನಾನಲ್ಲ. ನನ್ನ ಹೆಸರು ದಾದಿ ನಾಯಕನದೊಡ್ಡಿ ವೆಂಕಟಗಿರಿಯಪ್ಪ ಅಂತ ಕರೀತಾ ಇದ್ದರು ಜನ.

ಯೋಧ : ಸ್ವಾಮಿಗಳೆ. ಕೈವಾರ ನಾರಾಯಣಪ್ಪನವರ ಬಾಲ್ಯದ ಬಗ್ಗೆ ಏನೋ ಹೇಳ್ತಾ ಇದ್ದಿರಿ. ಆತ ಕಾರಣ ಜನ್ಮನಲ್ಲ ಅಂತಾ!

ಅನಾಮಿಕ : ನಿಮಗೂ ಆ ಭಾಗವತನ ಹುಚ್ಚು ಹತ್ತಿಲ್ಲ ತಾನೆ? ಆತ್ನ ತಂದೆ ಒಬ್ಬ ಬಳೆ ವ್ಯಾಪಾರಿ. ತನ್ನ ಮಗನಿಗೆ ಕೂಲಿ ಮಠದಲ್ಲಿ ಒಂದಷ್ಟು ಅಕ್ಷರ ಕಲಿಸಿದರು. ಬಾಲ್ಯ ಕಳೆಯುತ್ತಲೆ ಜೊತೆಗೆ ಕರೆದೊಯ್ದು ಬಳೆಯ ವ್ಯಾಪಾರವನ್ನು ಕಲಿಸಿದರು. ತಂದೆ ಶ್ರೀಮಂತರ ಹೆಣ್ಣು ಮಕ್ಕಳಿಗೆ ಬಳೆ ತೊಡಿಸುವಾಗ ಅದನ್ನ ನೋಡಿ, ತಮ್ಮ ಕಣ್ಣಿಗೂ ಗೊತ್ತಾಗದ ಹಾಗೆ ಬಡ ಹೆಣ್ಣು ಮಕ್ಕಳು ಆಸೆಯನ್ನು ಹತ್ತಿಕ್ಕುತ್ತಿದ್ದುದು ನಾರಾಣಪ್ಪನ ಎಳೆ ಮನಸ್ಸಿಗೆ ನಾಟಿತು. ತಾನು ವ್ಯಾಪಾರ ಮಾಡುವ ಕಾಲಕ್ಕೆ ಮೊದಲು ಈ ಬಡ ಹೆಣ್ಣು ಮಕ್ಕಳ ಕೈಗೆ ಗೌರಮ್ಮನನ್ನು ತೊಡಿಸುವ ಆಸೆಯನ್ನು ಹುಟ್ಟಿಸಿಕೊಂಡರು.

ಯೋಧರು: ಅಷ್ಟೇನಾ! ಏನು ಪವಾಡ... ದೈವಿಕತೆ.

ಅನಾಮಿಕ : ದೈವಿಕತೆ ಅನ್ನೋದು ಪವಾಡದಲ್ಲಿ ಇಲ್ಲ ಹುಚ್ಚುಗಳಿರಾ. ಗೆಜ್ಜೆಕಾಯಿ, ಚೆನ್ನಿದಾಂಡು ಆಡಿಕೊಂಡು ಸ್ಕೂಲ್‌ಗೆ ಚಕ್ಕರ್ ಹಾಕಿ ಕರೆದಾಗ ಈಜ್ಕಂಡು ತ್ವಾಟಗಳಲ್ಲಿ ಚೇಪೆಕಾಯಿ, ಕಳ್ಳೇಕಾಯಿ ಕದ್ದು ತಿನ್ಕೊಂಡು ಎಲ್ಲ ಮಕ್ಕಳಂಗೆ ಬೆಳೆದರು ನಾರಾಯಣಪ್ಪ. ಯಾವ ಹಾವು ಇಲ್ಲ ಬದನೆಕಾಯಿಯೂ ಇಲ್ಲ. ಅವರು ಸಂತರಾದ ಮ್ಯಾಲೆ ಈ ಕಲ್ತವರು ಕಾವಿಸಿರೋ ಕಟ್ಟುಕತೆಗಳು ಇವೆಲ್ಲ. ನಾರಾಯಣಪ್ಪ ಮಣ್ಣಿನ ಗೊಂಬೆ ಆದರೆ ಹದವಾಗಿ ತುಳಿದು-ನೇದು ತಕ್ಕಲಿ ಮ್ಯಾಲೆ ಚೆನ್ನಾಗಿ ತಿರುಗಿಸಿ ಒಲೆಯಲ್ಲಿ ಅರೆ ಕಾವಿಲ್ಲದಂಗೆ ಸುಟ್ಟ ಮಣ್ಣಿನ ಗೊಂಬೆ. ಅಷ್ಟೆ.

ಯೋಧರು: ಈಗ ಅವರು ಎಲ್ಲಿದ್ದಾರು ಅವರನ್ನ ನೋಡಬೇಕಲ್ಲಾ.

ಅನಾಮಿಕ : (ನಕ್ಕು) ನಾನೂ ನೋಡಬೇಕು. ನಾನೂ ಹುಡುಕ್ತಾ ಇದ್ದೀನಿ.. ನಾನಿನ್ನು ಬರ್ತೀನಪ್ಪ. ಸಮ ಸವರಾತ್ರಿ ಆಯ್ತು. ನನ್ನ ಕರಳು ತೊಳಕೊಳೋ ರವಷ್ಟು ಕೆಲಸ ಆಗಬೇಕು (ಹೊರಡುತ್ತಾನೆ) ನಿಮಗೆ ಒಳ್ಳೆಯದಾಗಲಿ.

ಯೋಧರು: ಹೋಗಲಿ ನಾವು ಹೋಗಬೇಕಿರೋ ದಾರಿನಾದ್ರೂ ತೋರ್ಸಿ.

ಅನಾಮಿಕ : ಹೋಗೋ ದಾರಿಗಳು ಎಲ್ಲ ಸರಿದಾರಿನೇ ಆದ್ರೆ ನಡಿಗೆ ಸರಿ ಇರಬೇಕು.

ಆ ಮೇರು ಪರ್ವತವು ಅದೆಷ್ಟು ದೂರವೋ
ಎಷ್ಟು ವಿಸ್ತೀರ್ಣ ಎತ್ತರವದೆಷ್ಟೋ
ಮೂಡು ಬೆಟ್ಟ ಮುಳುಗು ಬೆಟ್ಟ
ಸೂರ್ಯ ಬಲ್ಲನೋ ನಾದಬ್ರಹ್ಮಾನಂದ ನಾರೇಯಣ

ದೃಶ್ಯ – ೪

[ಮಸ್ತಕದಲ್ಲಿ ಭೂತಕನ್ನಡಿ ಹಿಡಿದು ನೋಡುತ್ತಿದ್ದ ಒಬ್ಬ ದಢೂತಿ ಅರೆ ವಸ್ತ್ರಧಾರಿಯನ್ನು ಹುಡುಕಿಕೊಂಡು ಇಬ್ಬರು ಯೋಧರು ಬರುತ್ತಾರೆ] ಹಿನ್ನೆಲೆಯಲ್ಲಿ ಹಾಡು ಕೇಳಿ ಬರುತ್ತದೆ.

ಯೋಧರು: ನಮಸ್ಕಾರ ಪಂಡಿತ್ ಕೈವಾರ ಶಾಸ್ತ್ರಿಗಳು..

ಶಾಸ್ತ್ರಿ : ಯಸ್.... ಯಸ್.... ನಾನೇ.... ಅಂದ ಹಾಗೆ ನಮಸ್ಕಾರ ಅಂದ್ರಲ್ಲಾ ನಮಸ್ಕಾರ. ಬನ್ನಿ ಬನ್ನಿ.

ಯೋಧರು: ತಮ್ಮ ವಿದ್ವತ್ ಕುರಿತು ಕೇಳಿದೆವು. ಲೋಕದಲ್ಲಿ ನಿಮ್ಮ ಬಗ್ಗೆನೇ ಹೇಳ್ತು. ಈ ಕೈವಾರ ಪಟ್ಣ. ಇಲ್ಲಿನ ದೇವರು, ಮಠ, ನಾರಾಯಣಪ್ಪ ಅಂತ ಸಾಧಕರು ಇದ್ದರಂತಲ್ಲ.. ಅವರ ಬಗ್ಗೆ ಮಾಹಿತಿ ಬೇಕಿತ್ತು.

ಶಾಸ್ತ್ರಿ : ಓ.ಕೆ. ಓಕೆ. I know all this things...ಆದ್ರೆ ನೀವು ಯಾರು? ಆರ್ ಯು ಟೂರಿಸ್ಟ್?

ಯೋಧ : ಅಲ್ಲ.... ಅಲ್ಲ.... ನಾವು ಯಾತ್ರಿಕರಲ್ಲ, ಸಂತರೊಬ್ಬರ ವಿಳಾಸ ಹುಡುಕಿಕೊಂಡು ಬಂದವರು.

ಶಾಸ್ತ್ರಿ : ಸಂತರ ವಿಳಾಸ ಹುಡುಕಿ ಇಲ್ಲಿಗೆ ಬಂದ್ರಾ.... ಹೆ ಹೆ ಹೆ.... ನಾನೇನು ದೊಡ್ಡ ಸಂತನಲ್ಲ ಬಿಡಿ. ಏನೋ ತಾಯಿ ಸರಸ್ವತಿ ನಾಲಿಗೆ ಮೇಲೆ ನಾಲ್ಕು ಅಕ್ಷರ ಬರೆದವಳೆ.

ಯೋಧ : ದಯಮಾಡಿ ಕ್ಷಮಿಸಿ.. ತಾವು ತಪ್ಪು ತಿಳಿದಂತಿದೆ. ಇಲ್ಲಿ ಈ ಪಟ್ಟಣದಲ್ಲಿ ಕೈವಾರ ನಾರಾಯಣಪ್ಪನವರ ಬಗ್ಗೆ ತಾವು ಸಂಶೋಧನೆ ಮಾಡಿ ಮಸ್ತಕ ಬರೆದಿದ್ದೀರಂತಲ್ಲ.

ಶಾಸ್ತ್ರಿ : ಓ ತಾತಯ್ಯನ ಬಗ್ಗೆ ಕೇಳ್ತಿದ್ದೀರೇನು? ಹೌದು ತಾತಯ್ಯನವರ್ನ ಜಗತ್ತಿಗೆ ಪರಿಚಯ ಮಾಡಿದ್ದು ನಾನೇ. ಕನ್ನಡ ತೆಲುಗು ಅಷ್ಟೇ ಅಲ್ಲ ಇಂಗ್ಲೀಷ್‌ನಲ್ಲೂ ತಾತಯ್ಯನವರನ್ನ ಕುರಿತು ಬರೆದಿದ್ದೀನಿ. ಅವರ

ಕೀರ್ತನೆ, ತತ್ವ ಪದಗಳನ್ನ not only country introduced him to the world you see. It was a big task.

ಯೋಧ : ಅವರ ತತ್ವಗಳು.

ಶಾಸ್ತ್ರಿ : ತುಂಬ ಪ್ರಾಬ್ಲಮೆಟಿಕ್. ಅಕ್ಷರ ಸರಿಯಿರಲಿಲ್ಲ. ಕೆಲವುಗಳಲ್ಲಿ ಫಿಲಾಸಫಿನೇ ತಪ್ಪಾಗಿತ್ತು. ಮುಖ್ಯವಾಗಿ ತಾತಯ್ಯನಿಗೆ ಸಂಸ್ಕೃತ ಛಂದಸ್ಸಿನ ಜ್ಞಾನ ಇರಲಿಲ್ಲ ನೋಡಿ. ಈ ಶೂದ್ರ ಜಾತಿಗಳವರಿಗೆ ಸಹಜವಾಗಿ ಉಚ್ಚಾರಣೆಯಲ್ಲಿ ನಾಲಿಗೆ ಹೊರಳಲ್ಲ. ಸಂಸ್ಕಾರದ ಕೊರತೆ ಪಾಪ. ಆ ನಾರಾಯಣ ತಾತ ಆ ಕೀಳು ಜಾತಿಯಲ್ಲಿ ಹುಟ್ಟಬಾರದಾಗಿತ್ತು. ಹುಂ. ಪೂರ್ವಜನ್ಮದ ಕರ್ಮ ಏನು ಮಾಡಕ್ಕಾಗುತ್ತೆ.

ಯೋಧ : ಶಾಸ್ತ್ರಿಗಳೆ ಈ ಕೈವಾರ ನಾರಾಯಣಪ್ಪನವರ ಜೀವನ ಚರಿತ್ರೆ.

ಶಾಸ್ತ್ರಿ : ನೋಡಿ ನಮ್ಮ ಮುತ್ತಾತನ ಕಾಲದಲ್ಲಿ ಈ ನಾರಾಯಣಪ್ಪ ಇದ್ದರಂತೆ.

ಯೋಧ : ಏನು? ಇದ್ದರಂತಾ! ಅಂದ್ರೆ ಈಗಿಲ್ಲಾಂತ!

ಶಾಸ್ತ್ರಿ : ಏ ನೀವು ತುಂಬಾ ಶಾರ್ಪ್ ರೀ.... ಇದ್ದರು ಅಂದ್ರೆ ಸಾವಿರದ ಏಳುನೂರ ಮೂವತ್ತರಲ್ಲಿ ಆತ ಹುಟ್ಟಿರಬೇಕು. ನಾನೇ ಪಂಚಾಂಗದ ಆಧಾರದ ಮೇಲೆ ಹುಟ್ಟಿದ ಕಾಲನ ಗೊತ್ತು ಮಾಡಿದ್ದೀನಿ. ತಂದೆ ತಾಯಿನು ಗೊತ್ತು ಮಾಡಿದ್ದೀನಿ.

ಯೋಧ : ಏನಂದ್ರಿ.... ತಂದೆ ತಾಯಿನೂ ಗೊತ್ತು ಮಾಡಿದ್ರಾ!

ಶಾಸ್ತ್ರಿ : ಹೌದು ಹಿಂದೆ ಬರೆದಿಡೋದು ಯಾರಿಗೂ ಗೊತ್ತಿರಲಿಲ್ಲ ನೋಡಿ. ಈಗ ಅವರ ವಂಶವೃಕ್ಷದ ಮ್ಯಾಲೆ ಕೆಲಸ ಮಾಡ್ತಾ ಇದ್ದೀನಿ. ಅವರ ಕಾಲಜ್ಞಾನವನ್ನ ಸ್ವಲ್ಪ ರಿಪೇರಿ ಮಾಡಬೇಕಿದೆ. ಅದೇ ಕೆಲಸದಲ್ಲಿದ್ದೆ ನೀವು ಬಂದಾಗ.

ಯೋಧ : ತಾವು ಇಷ್ಟೆಲ್ಲಾ ತಿಳಿದವರು ನಮಗೊಂದು ಉಪಕಾರ ಮಾಡಬೇಕು.

ಶಾಸ್ತ್ರಿ : ಹೇಳಿ ಸಂಕೋಚವೇಕೆ? ಪರೋಪಕಾರಾರ್ಥಂ ಇದಂ ಶರೀರಂ.

ಯೋಧ : ನಮಗೆ ಕೈವಾರ ನಾರಾಯಣಪ್ಪನ ಅಡ್ರೆಸ್ ಬೇಕು.

ಶಾಸ್ತ್ರಿ : (ಬೆಚ್ಚಿ) ರೀ, ಏನ್ರೀ ಹೇಳ್ತಾ ಇದ್ದೀರಿ.. ಅಲ್ಲಲ್ಲ ಏನು ಕೇಳ್ತಾ ಇದ್ದೀರಿ. ಅವರು ಹುಟ್ಟಿದ ದಿನಾನ ಗೊತ್ತು ಮಾಡ್ದಾಗೆ ಅವರು ಸತ್ತ ದಿನವನ್ನು ಭದ್ರವಾಗಿ ಬರೆದು ದಾಖಲು ಮಾಡಿದ್ದೀನಿ, ಪುಸ್ತಕ ಓದಿಲ್ಲೇನು?

ಯೋಧ : ನಾರಾಯಣಪ್ಪ ಅಂತ ಸಂತರಿಗೂ ಸಾವು ಬರುವುದೆಂದರೇನು?

ಯೋಧ1 : ನಮ್ಮ ಇಷ್ಟು ದಿನದ ಹುಡುಕಾಟ ನಿರರ್ಥಕವಾಗುವುದೆಂದರೇನು?

ಶಾಸ್ತ್ರಿ : ಅಲ್ಲ ನೀವು ಹೇಳುತ್ತಿರುವುದಾದರು ಏನು? ನನ್ನ ಜ್ಞಾನಕ್ಕೆ ಸವಾಲು ಹಾಕ್ತಾ ಇದ್ದೀರಿ. ನಾನು ಬರೆದದ್ದೆಲ್ಲಾ ಸತ್ಯವೆಂದು ಲೋಕ ಒಪ್ಪಿಕೊಂಡಿದೆ. ಶ್ರೀ ತಾತಯ್ಯಮಠದವರೆ ಸಾವಿರಾರು ಪುಸ್ತಕ ಮುದ್ರಿಸಿ ಲೋಕಕ್ಕೆ ತಂದಿದ್ದಾರೆ. ನಿಮಗೆಲ್ಲೋ ಹುಚ್ಚು.

ಯೋಧ : ನಮಗೆ ನಮ್ಮ ತಿರುಮಲೆಯ ಬ್ರಹ್ಮರಥ ಮತ್ತೆ ಉರುಳಬೇಕು ಅಷ್ಟೆ. ನಮಗೆ ನಾರಾಯಣಪ್ಪ ಬೇಕು.

ಶಾಸ್ತ್ರಿ : ನನ್ನ ಮಾತಿನಲ್ಲಿ ನಂಬಿಕೆ ಇಲ್ಲದೆ ಹೋದರೆ ಬನ್ನಿ ಅವರ ಪಾರ್ಥಿವ ಶರೀರವನ್ನು ಸಮಾಧಿ ಮಾಡಿದ ಜಾಗಕ್ಕೆ ಕರೆದೊಯ್ಯುತ್ತೇನೆ.

(ದೃಶ್ಯ ಬದಲಾವಣೆ)

[ಅಲ್ಲಿ ಒಂದಷ್ಟು ಜನ ತಮ್ಮ ಪಾಡಿಗೆ ತಾವು ಮೆಲು ದನಿಯಲ್ಲಿ ಹಾಡಿಕೊಳ್ಳುತ್ತಿರುತ್ತಾರೆ]

ಸಚ್ಚಿನವಾಳ್ಳಂತಾ ಸಮಕ್ಷಮುಗಾ ಮಳ್ಳಿ ವಚ್ಚಿ
ಮಾಟ್ಲಾಡಿ ಮಳ್ಳಿ ಪೋಯೆ ಮಾಯಮೇಮಿರಾ
ಓ ಶಿಷ್ಯಾಗ್ರತನಯಾ ನಿನ್ನು ನೀವು ತೆಲಿಸಿ ಚೂಡರಾ॥
ಕಾಯ ಪ್ರಾಯ ಸ್ಥಿರವಲ್ಲ ಹೊಸತೊಂದೂ....

ಶಾಸ್ತ್ರಿ : ನೋಡಿ ಇದೇ ತಾತಯ್ಯನವರ ಸಮಾಧಿ. ಇಲ್ಲೇ ಅವರು ಈ ಲೌಕಿಕದ ಎಲ್ಲಾ ವೇಷಗಳನ್ನು ಕಳಚಿಬಿಟ್ಟು ಸತ್ತು ಮಲಗಿದ್ದಾರೆ.

ಗುಂಪಿನಿಂದ: ಅವರು ಸತ್ತಿಲ್ಲ. ನೀವೆ ಸಾಯಿಸಿದ್ದು.

ಶಾಸ್ತ್ರಿ : ಯಾರವನು? ತೊಲಗು. ನಾನೇಕೆ ನಾರಾಯಣಪ್ಪನನ್ನ ಸಾಯಿಸಲಿ.

ಗುಂಪಿನಿಂದ: ಸತ್ತ ಅಂತ ಬರೆದಿದ್ದು ನೀನೆ ತಾನೆ?

ಶಾಸ್ತ್ರಿ : ಯಾರೋ ಹುಚ್ಚನಿರಬೇಕು. ಅವರ ಪಾರ್ಥಿವ ಶರೀರವನ್ನು ಇದರೊಳಗಿಟ್ಟು ಸಮಾಧಿ ಕಟ್ಟಿದ್ದೇವೆ. ಅವರ ನೆನಪನ್ನ ಶಾಶ್ವತ ಮಾಡಬೇಕು ಅಂತ.

ಆಗಂತುಕ : ಶಾಶ್ವತ ಮಾಡ್ಬೇಕು ಅಂತ ಏನು ಮಾಡಿದ್ರಿ, ತಾತಯ್ಯನವರು ಬಯಲಿನಲ್ಲಿ ಜಾತಿಗೊಂದು ಹೂವಿನ ಗಿಡ ನೆಟ್ಟಿದ್ದರು. ದೇವರಿಗೆ ದಿನಕ್ಕೊಂದು ಜಾತಿ ಹೂ ಕೊಡುತ್ತಿದ್ದರು. ನೀವು ಏನು ಮಾಡಿದ್ರಿ ಹೂ ತೋಟ ಹೂ ಗಿಡಗಳನ್ನ ಕಿತ್ತು ಹಾಕಿದ್ರಿ, ಜಾತಿಗಳನ್ನು ನೆಟ್ಟು ಬೆಳೆಸಿದ್ರಿ, ಆತ ಕಷ್ಟಪಟ್ಟು ಆಲಯವನ್ನ ಬಯಲು ಮಾಡಿದ್ದ, ನೀವು ಬಯಲನ್ನ ಹಿಂಗೆ ಹಿಂಗೆ ದೊಡ್ಡ ಕಲ್ಲು ಕಟ್ಟಡ ಕಟ್ಟಿದ್ರಿ. ನಾರಾಯಣಪ್ಪನನ್ನ ನೀವೇ ಕೊಂದ್ರಿ

ಶಾಸ್ತ್ರಿ : ಇವನ್ಯಾರೋ ಹುಚ್ಚನಿರಬೇಕು. ಇವನ ಮಾತು ನಂಬಬೇಡಿ. ನಾನು ಸಂಶೋಧನೆ ಮಾಡಿ ಬರೆದಿರೋ ಈ ಪುಸ್ತಕದಾಣೆ ಇದೆಲ್ಲಾ ಸುಳ್ಳು. ಇವ್ನ ಸುಮ್ಮನೆ ಬಿಡಲ್ಲ. ಮಠದ ಯಜಮಾನರಿಗೆ ಹೇಳಿ ಎತ್ತಂಗಡಿ ಮಾಡಿಸ್ತೀನಿ. (ಏರಿ ಹೋಗುತ್ತಾನೆ. ಯೋಧರು ತಡೆಯುತ್ತಾರೆ)

ಯೋಧ : ಸಮಾಧಾನ ಮಾಡಿಕೊಳ್ಳಿ ಶಾಸ್ತ್ರಿಗಳೇ ನಿಜವನ್ನ ಯಾರು ಹೇಳಾಗಲಿ, ಬರೆದಾಗಲಿ ಸುಳ್ಳು ಮಾಡಕ್ಕಾಗಲ್ಲ ಅಲ್ವೆ ತಾವು ಜ್ಞಾನಿಗಳು ಸಮಾಧಾನ ಮಾಡ್ಕೊಳ್ಳಿ.

ಆಗಂತುಕ : ನನಗಲ್ರೋ ಹುಚ್ಚು ನಿಮಗೆ. ನಿಮ್ಮ ಲೋಕಕ್ಕೆ ಹುಚ್ಚು ಇಡ್ಕಂಡದೆ. ಜಾತಿ ಹುಚ್ಚು, ದುಡ್ಡಿನ ಹುಚ್ಚು, ಜ್ಞಾನದ ಹುಚ್ಚು. (ನಗುತ್ತಾನೆ)

ಶಾಸ್ತ್ರಿ : ಇವ್ನ ಮಾತು ಕೇಳ್ತಾ ಇದ್ರೆ ಶಿವ ಶಿವ. ಸತ್ಯದ ಕೊಲೆಯನ್ನು ನೋಡಲಾರೆ. ನಾನು ಬರ್ತೀನಿ.

(ಹೊರಟು ಹೋಗುವನು)

ಆಗಂತುಕ : ಹೋಗು ಹೋಗು ಸತ್ತವರ ಲೆಕ್ಕ ಬರ್ಕೋ ಹೋಗು..

ಸಕಲ ಶಾಸ್ತ್ರ ಸಂಪುಟಗಳ ಬರೆಯುತ್ತ
ಓದು ಕಲಿಯುವರು ಸಾವ ತಿಳಿಯರು
ತಮ್ಮ ಸಾವು ತಿಳಿಯದ ಓದೆಂಥ ಓದೋ
ನಾದ ಬ್ರಹ್ಮಾನಂದ ನಾರೇಯಣ

ಯೋಧ : ಯಜಮಾನ್ರೆ... ತಾವು ಯಾರು?

ಆಗಂತುಕ : ನಾನು ಅದ್ನೆ ಯೋಚ್ನೆ ಮಾಡ್ತಾ ಇದ್ದೀನಪ್ಪ.

ಯೋಧ–2: ನಮಗೆ ನಾರಾಯಣಪ್ಪನವರ ಬಗ್ಗೆ ಮಾಹಿತಿ ಬೇಕು.

ಆಗಂತುಕ : ಗಾಳಾನ ನೀರಲ್ಲಿ ಹಾಕಿದ್ರೆ ಮೀನು ಸಿಗಬೌದು. ಆದ್ರೆ ಗಾಳೀಲಿ ಹಾಕಿದ್ರೆ ಏನು ಸಿಗತೈತೋ ಹುಚ್ಚಗಳಿರಾ.

ಯೋಧ : ನಮ್ಮ ಅಜ್ಞಾನವನ್ನು ಮನ್ನಿಸಬೇಕು. ತಾವು ನಮಗೆ ದಾರಿ ತೋರಿಸ್ಬೇಕು. ಮೊನ್ನೆ ನಾವು ದಾದಿ ನಾಯಕನ ದೊಡ್ಡಿ ವೆಂಕಟಗಿರಿಯಪ್ಪನವರನ್ನ ಭೇಟಿಯಾಗಿದ್ದೆವು.

ಆಗಂತುಕ : ಏನು! ವೆಂಕಟಗಿರಿಯಪ್ಪನನ್ನ ಭೇಟಿ ಮಾಡಿದ್ರಾ, ಏನೋ ಅಂತಿದ್ದೆ ನೀವು ಪುಣ್ಯವಂತರು ಕಣಪ್ಪ. ಪುಣ್ಯವಂತರು. ಕಣ್ಣಿಗೆ ಎಣ್ಣೆ ಬಿಟ್ಕಂಡು ಹುಡುಕುತ್ತಿದ್ದೀನಿ. ನನ್ನ ಕಣ್ಣಿಗೆ ಅವರು ಬಿದ್ದಿಲ್ಲ. ಭೇಷ್. ಹಾಗಾದ್ರೆ ನೀವು ಸರಿದಾರಿನಾಗೇ ಇದ್ದೀರಿ ಬಿಡಿ. ಅಂಗೇ ಮುಂದುವರೀರಿ.

ಯೋಧ : ಅಲ್ಲ ಪುಸ್ತಕಗಳಲ್ಲಿ ಬರೆದಿರೋದು ಸುಳ್ಳಾದರೆ ನಿಜ ಅನ್ನೋದು ಇರಬೇಕಲ್ಲ. ನಾರಾಯಣಪ್ಪನ ಕುಟುಂಬ ಮಕ್ಕಳು.

ಯೋಧ–2: ತಾತಯ್ಯನವರ ಹೆಂಡ್ತಿ ಬಜಾರಿ, ಗಯ್ಯಾಳಿ ಅಂತಾರಲ್ಲ ನಿಜವೇ ಸ್ವಾಮಿ. ಅಂತಹ ಮಹಾತ್ಮರ ಜೊತೆ ಬದುಕಿಯೂ ಆಕೆ ರಕ್ಕಸಿಯಾಗಿ ಉಳಿದದ್ದು ಹೇಗೆ ಅಂತ. ಅಥವಾ ಈ ಜನ.

ಆಗಂತುಕ : ನಾವು ನೋಡೋ ನೋಟದಂಗೆ ಲೋಕ ಕಾಣ್ತದಲ್ಲಪ್ಪ. ನಾರಾಯಣಪ್ಪನ ಹೆಂಡ್ತಿನ ಗಯ್ಯಾಳಿ, ರಾಕ್ಷಸಿ ಅಂತೆಲ್ಲ ಈ ಲೋಕ ಯಾಕೆ ಅಂತು ಅಂತೀರಾ?! ಆ ತಾಯೀನೆ ಕರೆದು ಕೇಳಿದ್ರೆ ಆಯ್ತಲ್ಲ.

ಯೋಧ : ಏನು? ನಾರಾಯಣಪ್ಪನವರ ಹೆಂಡ್ತಿ ಇಲ್ಲಿ ಇದ್ದಾರಾ?!

ಯೋಧ–2: ಸ್ವಾಮಿ ದಯಮಾಡಿ ಕರೆದುಬಿಡಿ ಸ್ವಾಮಿ.

ಆಗಂತುಕ : ನನ್ನ ಇಕ್ಕಟ್ಟಿಗೆ ಸಿಕ್ಕಿಸಿಬಿಟ್ರಿ ನೋಡಿ. ಆ ತಾಯಿನ ಕರೀಬೇಕು ಅಂದ್ರೆ ನನ್ನ ಗುರುತು ಹೇಳಬೇಕು. ಇಲ್ಲಾಂದ್ರೆ ಆಕೆ ಈಚೆಗೆ ಬರಲ್ಲ. ಆದರೆ ನನ್ನ ಹೆಸರು ಮರ್ತು ಬಿಟ್ಟಿದ್ದೀನಲ್ಲ.

ಯೋಧರು: ಜ್ಞಾಪಿಸಿಕೊಳ್ಳಿ ತಮ್ಮ ಹೆಸರು.

ಆಗಂತುಕ : ಹಾ! ತಾಯಿ ನಾನಮ್ಮ! ಬೇರಿಕಿ ಬುಟ್ಟಪ್ಪನು ಕರೆತಾ ಇದ್ದೀನಿ ರವಷ್ಟು ಬಾರಮ್ಮ ಆಚ್ಗೆ, ಯಾರೋ ಮಕ್ಕಳು ಬಂದವರೆ ನೋಡು...
(ವಿಂಗ್‌ನಿಂದ ಒಬ್ಬ ನಡುವಯಸ್ಸಿನ ಹೆಂಗಸು ನಡೆದು ಬರುತ್ತಾಳೆ)

ಬುಟ್ಟಪ್ಪ : ಅಮ್ಮ ಅಡ್ಡಬಿದ್ದೆ. ಇವರ್ಯಾರೋ ನಿನ್ನ ಬಗ್ಗೆ ಕೇಳ್ತಾ ಇದ್ರು,

ಹೆಂಗಸು : ಲೋಕ ಹೇಳಿದನ್ನೆ ಕೇಳಿರ್ತಾರೆ. ಅದ್ರಾಗ ಹೊಸದೇನು ಇದ್ದೀತು. ಬಂದೋರೆಲ್ಲ ನನ್ನ ಗಂಡನ್ನ ಕೊಂಡಾಡಿದಷ್ಟೇ ನನ್ನನ್ನೂ ಬೈದು ಶಾಪ ಹಾಕಿ ಹೋಗವರಲ್ಲ ಅದೇನೆ ಬಂದ ಭಾಗ್ಯ.

ಯೋಧರು : ತಾಯಿ ಈ ಲೋಕದ ಜನ ತಮ್ಮನ್ನ ಯಾಕಿಂಗೆ ತಪ್ಪು ತಿಳಕಂಡ್ರು ಅಂತ.

ಹೆಂಗಸು : ಆ ದಿನಗಳನ್ನ ಮತ್ತೆ ಜ್ಞಾಪಿಸಿಕೊಳ್ಳೋದಕ್ಕೂ ಸವಕಲು ಆಗಿಬಿಟ್ಟಿವೆಯಪ್ಪ. ನನಗೆ ಈ ತಪಸ್ಸು, ದೇವರು ಅದೇನೋ ಹೇಳ್ತಿರಲ್ಲ, ಆಧ್ಯಾತ್ಮ ಯೋಗ ಒಂದೂ ಗೊತ್ತಿಲ್ಲಪ್ಪ. ಗೊತ್ತಿದ್ದದ್ದು ಮನೆಯಾಗ ಉರಿಯದ ಒಲೆ, ಹೊಲದಾಗ ಬೆಳೆಯದ ಬೆಳೆ. ಎಲ್ಲರ ಮನೆನಾಗು ಮಕ್ಕಳು ಉಂಡು ಮಲಗಿದ್ರೆ ನನ್ನ ಮಕ್ಕಳು ಬರಿ ಹೊಟ್ಟೆನಾಗ ನಿಸ್ಸೂರಾಗಿ ಹಸಿದು ಮಲಗಿದ್ದುದು ಮಾತ್ರ ಗೆಪ್ತಿ ಇರೋದು. ಗಂಡ ವ್ಯಾಪಾರಕ್ಕೆ ಹೋದವನು ಕೈತುಂಬ ಕಾಸು, ಬೆನ್ನು ಮೇಲೆ ಹೊರುವಷ್ಟು ರಾಗಿ ತರ್‍ಲಿ ಅಂತ್ಲೇ ನಾನು ಬದುಕಿದಷ್ಟೂ ದಿನ ಕನಸು ಕಂಡಿದ್ದು.

ಯೋಧ : ನಿಮ್ಮ ಜಾಗದಲ್ಲಿ ಯಾವ ತಾಯಂದ್ರಿದ್ರೂ ಹೀಗೆ ಮಾಡ್ತಾ ಇದ್ರು ಅಂತ. ಅದಕ್ಕೆ ಯಾಕೆ ರಾಕ್ಷಸಿ ಅನ್ನಬೇಕು.

ಹೆಂಗಸು : ನನ್ನ ಗಂಡ ಒಂದು ದಿನವೂ ಅಂಗೆ ನನ್ನನ್ನು ಅಂದೋರಲ್ಲ ಅಂದಿದೆಲ್ಲ ಕಂಡವರು. ಕಂಡವರಿಗೆ ನಾನಂದ ಮಾತು ಕೇಳಿಸ್ತೇ ಹೊರತು, ನನ್ನ ಹೊಟ್ಟೆ ಉರಿ ಕಾಣಲಿಲ್ಲ. ಮೂಲೆ ಒಳಗಿನ ನನ್ನ ಕಣ್ಣೀರು ಒಲೆನಾಗ ಕಿಚ್ಚು ಆರಿಸಲಿಕ್ಕೆ ಸರಿಹೋಗೋದು. ಅವರು ಕೂಡ ನನ್ನಂಗೆ ಕಣ್ಣೀರು ಹಾಕೋರು. ಸಮರಾತ್ರಿ ಹೊತ್ನಾಗ ನಿದ್ದೆನಾಗ ಮಕ್ಕಳು ಹೊಟ್ಟೆ ಹಸಿವು ಅಂದ್ರೆ ತಡೆಯಕಾಗದೆ ಹಲ್ಲು ಕಚ್ಚಿ ಒಂದು ಮಾತು ಅಂತಿದ್ದೆ. ತಂಪು ಹೊತ್ತು ನೋಡಿ ನನ್ನ ಮಾತು ಸೆಲೆ ಕೊಟ್ಟಂಗೆ ಊರೂರಿಗೆ ಕೇಳಿಸೋದು. ಆ ಮಾತು ಕೇಳ್ಸಿಕಂಡ ಜನ ನನ್ನನ್ನ ರಾಕ್ಷಸಿ, ಗಯ್ಯಾಳಿ, ಜಗಳಗಂಟಿ ಹಿಂಗೆ ಅವರಿಗೆ ಇಷ್ಟ ಬಂದಂಗೆ ಅಂದ್ರು, ಬೈದ್ರು.

ಯೋಧ : ಅವರಿಗೆ ವ್ಯಾಪಾರ ಮಾಡಾಕ ಬರ್‍ತಿರಲಿಲ್ಲ ಅಂದ ಮೇಲೆ ಆರಂಭ ಮಾಡಬೇಕಿತ್ತು.

ಹೆಂಗಸು : ಬಡವರನ್ನ ಕಂಡ್ರೆ ಕರಗಿ ಹೋಗುತಿದ್ರು, ಮೊಂಡು ಕೈ ಹೆಣ್ಣುಮಕ್ಕಳಿಗೆ ಪುಗಸಟ್ಟೆ ಬಳೆ ತೊಡಿಸಿ ಬರೋರು. ಎಷ್ಟೊಂದು ಬುದ್ದಿ ಹೇಳೋದು.

ಇದ್ದ ಒಡವೆ, ಒಂದೊಂದೇ ಜಮೀನು ಎಲ್ಲಾ ಕೈ ಬಿಟ್ಟು ಹೋದ್ವು. ಆವೊತ್ತು ಒಂದಿಸ ಇಟ್ಕೊತ್ತಾದ್ರೂ ಇವರು ಮಲಾರ ತಕ್ಕಂಡು ಮನೆಗೆ ಬರಲಿಲ್ಲ. ಒಲಿ ಮ್ಯಾಲೆ ಹಿಟ್ನೆಸರು ಕುದೀತಾ ಇದ್ದಂಗೆ ನನ್ನ ಮನಸ್ಸು ಕುದೀತಾ ಇತ್ತು. ಆಗ ನನ್ನ ಮಗ ಅಳ್ತಾ ಬಂದು ಅಮ್ಮ ಅಪ್ಪನ ಮಲಾರಾನ ಶೆಟ್ಟರು ಕಿತ್ತುಕಂಡವರೆ ಚಾವಡಿ ತಾವ ಶ್ಯಾನಭೋಗರು, ಗೌಡ್ರು ಎಲ್ಲಾ ಸೇರವರೆ ಅಪ್ಪನ ನಿಲಾಕಿ ಏನೇನೋ ಬೈಯ್ತಾ ಇದ್ರು ಅಂದ. ನನ್ನ ಗುಂಡಿಗೆ ಚಟೀರ್ ಅಂತು. ಮಲ್ಲಾರ ಕಿತ್ತುಕಂಡವನಲ್ಲ ಆ ಶೆಟ್ಟಿ ಅಂತ ನಾನು ಚಾವುಡಿ ತನಕ ಹೋದೆ. ಆವಾಗ ನನಗೆ ಭಯಾನು ಆಯ್ತು. ಮಲ್ಲಾರ ಅವರ ಪ್ರಾಣದಂಗಿತ್ತು. ಅವರು ಸಂಪಾದಿಸಿ ಹಣ ತರದಿದ್ರು, ಬಳೆ ವ್ಯಾಪಾರಕ್ಕೆ ಹೋಗಿ ಬಂದ ದಿನ ಎಂಥದೋ ಸಮಾಧಾನ, ಅವರ ಮುಖದಾಗ ಸಂತೋಷ ಕಾಣೋದು. ನಾನು ಸೊಪ್ಪು ಸದೆ, ತಂದು ಬೇಯಿಸಿ ಹಾಕಿದ್ರು ಅದನ್ನ ಪ್ರಸಾದ ಅಂತ ತಿಂದು ಖುಷಿಯಾಗಿರೋರು.

•

ದೃಶ್ಯ – ೫

[ಊರಿನ ಚಾವಡಿ. ಶ್ಯಾನುಭೋಗರು–ಗೌಡರು–ಸೂಲಶೆಟ್ಟಿಗಳು ಕುಳಿತಿದ್ದಾರೆ. ಮಧ್ಯ ಮಲಾರ ಇದೆ. ಒಬ್ಬ ವ್ಯಕ್ತಿ ಮಾತ್ರ ರಂಗದ ಹಿಂಬದಿಗೆ ಮುಖ ಮಾಡಿ ನಿಂತಿದ್ದಾನೆ.]

ಗೌಡ : ಏನಯ್ಯ ಶೆಟ್ಟಿ ಇವೊತ್ತಿನ ಬೇಟೆ.

ಶೆಟ್ಟಿ : ಬ್ಯಾಟೆನ ಬೇಟೆಗಾರ್ನ ಬಲಿ ಕೇಳೋ ಕಾಲ ಬಂತಲ್ಲ ಗೌಡ್ರೆ.

ಶ್ಯಾನುಭೋಗ : ಹೆಣ್ಣು ಮಕ್ಕಳ ಕೈಗೆ ಇರಬೇಕಾದ ಗೌರಮ್ಮನ ಹೀಗೆ ಬೀದಿಗೆ ಎಳೆದು ಬಿಟ್ಟಲ್ಲಯ್ಯ.

ಶೆಟ್ಟಿ : ಬೇರೆ ದಾರಿ ಕಾಣಲಿಲ್ಲ. ಹೀಗೆ.

ಶ್ಯಾನುಭೋಗ : ನಿನಗೂ ದಾರಿ ಕಾಣದಂಗೆ ಮಾಡಿದ ಪಟಿಂಗನು ಯಾರಯ್ಯ.

ಶೆಟ್ಟಿ : ಬಳೆಯೋರ ನಾರಾಯಣಪ್ಪ. ಕೊಟ್ಟ ಸಾಲ. ಅಸಲು ಅಂಗೆ ಉಳೀತು. ದಿನೇ ದಿನೆ ಬಡ್ಡಿ ಬಲೀತು. ಹಣ ವಸೂಲಿಗೆ ಬೇರೆ ದಾರಿ ಕಾಣಲಿಲ್ಲ.

ಗೌಡ : ಅದಕ್ಕೆ ಮಲಾರಾನೆ ಕಿತ್ತಕಂಡು ಬಿಟ್ಯ. ಅಲ್ಲಯ್ಯ ನಾರಾಯಣಪ್ಪ ತಟವಟದ ಮನುಷ್ಯನೇನಯ್ಯ.

ಶೆಟ್ಟಿ : ಸಾಲ ತೀರಸಕ್ಕಾಗದಷ್ಟು ಒಳ್ಳೇತನ ಇದ್ದರೆ ಏನು ಪ್ರಯೋಜನ ಗೌಡ್ರೆ.

ಶ್ಯಾನುಭೋಗ : ಸರಿ ಈ ಮಲಾರ ಕಿತ್ತಕಂಡ್ರೆ ಸಾಲ ಹೆಂಗೆ ತೀರುತ್ತೆ. ಅದನ್ನ ಹೇಳಯ್ಯ ಶೆಟ್ಟಿ.

ಗುಂಪಿನ ವ್ಯಕ್ತಿ : ಸಾಲ ತೀರಗಂಟ ಶೆಟ್ಟಿನೇ ಬಳೆ ವ್ಯಾಪಾರ ಮಾಡ್ತಾನೋ ಏನೋ! (ನಗು) ಮದುವೆ ಸೀಸನ್ ಬೇರೆ.

ಶೆಟ್ಟಿ : ಯವುದ್ರಾ ಅದಿ. ಕಷ್ಟಪಟ್ಟು ಕವಡೆ ಸಂಪಾದಿಸಿದ್ರೆ ಗೊತ್ತಾಗಿರೋದು ಕಾಸಿನ ಬೆಲೆ.

ಗೌಡ : ಏ ಸುಮ್ಮನಿರೋ ಸಾಲ ಕೊಟ್ಟ ಶೆಟ್ಟಿನಾ. ಎಡೆ ಎತ್ತಿರೋ ಹಾವ್ನ ಕೆಣಕಬಾರದು.

ಶ್ಯಾನುಭೋಗ : ಆಯ್ತು ಈಗ ನ್ಯಾಯ ಆದ್ರೂ ಏನು ಅಂತ?

ಶೆಟ್ಟಿ : ನನ್ನ ಸಾಲ ನನಗೆ ವಾಪಸ್ ಕೊಡ್ಬೇಕು. ಪಂಚಾಯ್ತಿ ಕೊಡಿಸಿಕೊಡಬೇಕು?

ಗೌಡ : ನಾರಾಯಣಪ್ಪ ಇಲ್ಲ ಅಂದವನೇನು?

ಶೆಟ್ಟಿ : ಇಲ್ಲ ಅಂತಾದ್ರು ಅಂದಿದ್ರೆ ಚೆನ್ನಾಗಿತ್ತು. ವಸೂಲಿಗೆ ಬೇರೆ ದಾರಿ ಹುಡುಕುತ್ತಿದ್ದೆ.

ಶ್ಯಾನುಭೋಗ : ಎಷ್ಟು ಬರಬೇಕು.

ಶೆಟ್ಟಿ : ಹತ್ತಿರ ಹತ್ತಿರ ಐನೂರು ರುಪಾಯಿ ಸ್ವಾಮಿ.

ಗೌಡ : ಬಡ್ಡಿ ಸರ್ರ್ಯಾಗಿ ಲೆಕ್ಕ ಹಾಕಿದ್ದೀಯೆ ತಾನೆ.

ಶೆಟ್ಟಿ : ಸಾಲ ತಕ್ಕಂಡವರು ಬೇರೆ ಬೇರೆ ಆದ್ರೂ ಲೆಕ್ಕ ಮಾತ್ರ ಶ್ಯಾನುಭೋಗರ ಕೈಲೇ ಬರಸ್ತೀನಿ. ಲೆಕ್ಕದಾಗ ತಪ್ಪು ಮಾಡಿದ್ರೆ ದೇವನಿಕೆ ಕ್ವಾಪಮು ರಾದ ಮರಿ.

ಶ್ಯಾನುಭೊಗ : ಗೌಡ್ರೆ ನಾರಾಯಣಪ್ಪನ್ನ ಕೇಳಿ ಏನು ಹೇಳ್ತಾನಂತೆ.

ಗೌಡ : ನಾರಾಯಣಪ್ಪ ನೀನೇನು ಹೇಳ್ತಿಯಾ.

ನಾರಾಯಣಪ್ಪ : (ಮೌನ)

ಶ್ಯಾನುಭೋಗ : ನೀನು ಹಿಂಗೆ ದೇವಸ್ಥಾನದಾಗಿನ ದೇವರಂಗೆ ನಿಂತುಬಿಟ್ರೆ ಎಂಗೆ ಅಂತ.

ಒಬ್ಬ : ಪಾಪ ಆತನ್ನ ಹಿಂಗೆ ನಾಲ್ಕು ಜನದಾಗ ಅವಮಾನ ಮಾಡಬಾರದಿತ್ತು ಬಿಡಿ ಸ್ವಾಮಿ.

ಗೌಡ : ನಾರಾಣಪ್ಪ ನೀನು ಹಿಂಗೆ ಮೌನ ವಹಿಸಿದ್ರೆ ನ್ಯಾಯ ಬಗೆ ಹರಿದಾತ. ಏನಾದ್ರು ಒಂದು ಮಾತನ್ನಾಡು.

ನಾರಾಯಣಪ್ಪ : (ಮೌನ)

ಶೆಟ್ಟಿ : ಮುಂದೆ ನನ್ನ ಗತಿ ಎಂಗೆ?

(ಅಷ್ಟರಲ್ಲಿ ನಾರಾಯಣಪ್ಪನ ಹೆಂಡ್ತಿ ಬರ್ತಾಳೆ. ಸಭೆ ಗಂಭೀರವಾಗುತ್ತೆ)

ಗೌಡ : ಬಾರವ್ವ ತಾಯಿ ಸರಿಯಾದ ಸಮಯಕ್ಕೆ ಬಂದಿ.

(ಗಂಡನ ಪಕ್ಕ ರಂಗಕ್ಕೆ ಮುಖಮಾಡಿ ನಿಲ್ಲುತ್ತಾಳೆ)

ಶ್ಯಾನುಭೋಗ : ನಿನಗೆ ಈ ಶೆಟ್ಟಿ ಸಾಲದ ಬಗ್ಗೆ ಗೊತ್ತೇನಮ್ಮ.

ಮುನಿಯಮ್ಮ : ಗೊತ್ತಣ್ಣ.

ಶೆಟ್ಟಿ : ಸಾಲ ತೀರಿಸದೋನು ನಾಗ ಮುಟ್ಟಿದಂಗೆ ಮೌನವಾಗವ್ನೆ.

ಮುನಿಯಮ್ಮ : ಶೆಟ್ಟರೆ ಕಾಸನ್ನ ಬಿಗಿ ಹಿಡಿದೋರು ನೀವು ಮಾತನ್ಯಾಕೆ ಜಾಸ್ತಿ ಚೆಲ್ತೀರಿ. ಹೊಟ್ಟೆ ಕಟ್ಟಿ ಸೊಪ್ಪು ತಿಂದ್ರು ಯಾರ ಹೊಟ್ಟೆ ಮ್ಯಾಲೆ ಹೊಡೆದವ್ರಲ್ಲ ನಾವು. ನಾವು ನಿನ್ನ ಹತ್ರ ಸಾಲುಗಾರ್ರು ನಿಜ. ಆದರೆ ಈ ಹತ್ತೂರ ಒಕ್ಕಲು ನಮ್ಮ ಸಾಲದಾಗ ಅವ್ರೆ. ನಾವು ಯಾರ್ನ ಕೇಳಬೇಕು.

ಶೆಟ್ಟಿ : ಅಂದರೆ ಏನಮ್ಮ ನಿನ್ನ ಮಾತಿನ ಅರ್ಥ. ದುಡ್ಡು ಕೇಳಿ ಕೇಳಿದಾಗೆಲ್ಲ ಕೊಟ್ಟಿದ್ದೇ ನಾನು ಮಾಡಿದ ತಪ್ಪು ಅಲ್ವಾ!

ಮುನಿಯಮ್ಮ : ನಿಮ್ಮನೆ ಹೆಂಗಸ್ರನ್ನ ಕೇಳಿ, ಬಳೆ ತೊಡಿಸ್ಕೊಂಡು ಯಾವೊತ್ತಾದ್ರು ದುಡ್ಡು ಕೊಟ್ಟವರಂತಾ.

ಶ್ಯಾನುಭೋಗ : ರೀ ಶೆಟ್ಟರೆ ಸ್ವಲ್ಪ ಸುಮ್ಮನೆ ಇರ್ತೀರಾ. ನೋಡವ್ವಾ ನಾರಾಣಪ್ಪ ಏನು ಮಾತನಾಡಿಸಿದ್ರು ಮಾತ್ನಾಡ್ತಿಲ್ಲ. ನಮಗೆ ಈವಾಗ ದಿಕ್ಕೇ ತೋಚುತ್ತಿಲ್ಲ.

ಮುನಿಯಮ್ಮ : ನಮ್ಮ ಯಜಮಾನ್ರು ಎಂಥವರಂತಾ ನಿಮಗೆ ತಿಳಿದಾ. ಸುತ್ತು ಹತ್ತೂರಲ್ಲಿ ಒಬ್ಬರ್ನ ಬಿರುಸಾಗಿ ಒಂದು ಮಾತು ಆಡಿದೋರಲ್ಲ. ಕಡ್ಡಿ ಎತ್ತಿ ಒಂದು ಜೀವನ ಒಂದೇಟು ಹೊಡೆದವರಲ್ಲ. ಅಂತವರ್ನ ಹೀಗೆ ಬೀದಿಗೆ ಎಳೆದುಬಿಟ್ರಲ್ಲಾ.

ಶೆಟ್ಟಿ : ಎಷ್ಟು ದಿನಾಂತ ಕಾಯ್ಲೋದು. ಹದಿನೈದಿನ, ತಿಂಗಳು ಅಂತ ಸಾಲ ತಗಳ್ಳಾದು ವಾಪಸು ಕೊಡಂಗೇ ಇಲ್ಲ. ದೇವರೆ ಸಾಲ ಕೊಟ್ಟಿದ್ದರು ಇಷ್ಟು ದಿನ ಕಾಯ್ತಾ ಇರಲಿಲ್ಲ ತಿಳಕಳಮ್ಮ. ಹೂ....

ಶ್ಯಾನುಭೋಗ : ಅಲ್ಲಮ್ಮ ನಾರಾಯಣಪ್ಪ ಸಾಲ ತಕ್ಕಂಡು ಬಳೆ ವ್ಯಾಪಾರ ಮಾಡ್ತಾನಲ್ಲ ವ್ಯಾಪಾರದ ದುಡ್ಡು ಏನು ಮಾಡ್ತಾನೆ ಅಂತ! ಬೇರೆ ಯಾವುದಾದರೂ ಕಯಾಲಿ ಗಿಯಾಲಿ ಉಂಟ?

ಗೌಡ : ಏ. ಛೇ ಛೇ.... ಈ ನಾರಾಣಪ್ಪನಿಗಾ? ಏನು ಶ್ಯಾನುಭೋಗರೆ ಏನೋ ಜಪ್ತಿಗೆ ಬಂದಂಗದೆ.

ಶ್ಯಾನುಭೋಗ : (ಹಿಹಿಹಿ) ಅಲ್ಲ ಗೌಡರೆ ನ್ಯಾಯ ಹತ್ತು ದಿಕ್ಕಿನಿಂದ ಯೋಚ್ನೆ ಮಾಡಬೇಕು ನೋಡಿ. ಅದಕ್ಕೆ...

ಮುನಿಯಮ್ಮ : ಕೊಟ್ಟ ಸಾಲ ಕೊಡ್ಲಿಲ್ಲ ಅಂತ ಶೆಟ್ಟರು ಪಂಚಾಯ್ತಿಗಾದ್ರು ಬರ್ತಾರೆ. ಆದರೆ ಗಂಡಸು ಸಂಜೆ ಬರಿಗೈಲಿ ಮನೆಗೆ ಬಂದರೆ ಹೊಟ್ಟೆಗಿಲ್ಲದ ಮಕ್ಕಳು–ಕಿತ್ತು ತಿನ್ನೋ ಬಡತನದಾಗ ನಾನು ಯಾವ ಪಂಚಾಯ್ತಿಗೆ ಹೋಗಲಿ. ವ್ಯಾಪಾರಕ ಅಂತ ಸಾಲ ಮಾಡಿ ತಕ್ಕೊಂಡೋಗಿ ಮುಗಸಟ್ಟೆ ಬಳೆ ತೊಡಿಸಿ ಬರ್ತಾರೆ. ಬಡವರ ಹೆಣ್ಣುಮಕ್ಕಳಿಗೆ ಮುಗಸಟ್ಟೆ ತೊಡಸ್ತಾರೆ. ಅಂತೇಳಿ, ಇದ್ದವರು ಕೂಡ ಸಬೂಬು ಹೇಳಿ ಬರಿಗೈಲಿ ಕಳಿಸ್ತಾರೆ, ಮಾಡಿದ ಸಾಲದ ಮೂಟೆ ಹೊತ್ತಕಂಡು ದಿನವು ಬರಿಗೈಲಿ ಬರ್ತಾರೆ. ಸಾಲ ಹೆಂಗೆ ತೀರಿಸ್ತಾರೆ. ಶೆಟ್ಟರು ಯೋಚ್ನೆ ಮಾಡ್ತಾರೆ. ನಾಳೆ ಹೆಂಗಪ್ಪ ನೂಕೋದು ಅಂತ ನಾನು ಯೋಚ್ನೆ ಮಾಡ್ತೀನಿ. (ದುಃಖ)

ಗೌಡ : ಸಮಾಧಾನ ಮಾಡ್ಕ ತಾಯಿ. ನೀನು ಕಣ್ಣೀರು ಹಾಕ್ಬೇಡ. ಹತ್ತು ಜನದಾಗ ಹೆಣ್ಣುಮಕ್ಕಳು ಕಣ್ಣೀರು ಹಾಕಿದ್ರೆ ಊರಿಗೆ ಒಳ್ಳೇದಲ್ಲ.

ಶೆಟ್ಟಿ : ಅಂದ್ರೆ ಈಯಮ್ಮನ ಕಣ್ಣೀರಾಗ ನನ್ನ ಸಾಲ ತೊಳೆದು ಬಿಡೋ ಅಂಗಿದ್ದೀರಲ್ಲ.

ಮುನಿಯಮ್ಮ : ಶೆಟ್ಟರೆ. ಸತ್ತರು ನಿಮ್ಮ ಋಣದಾಗ ಮಾತ್ರ ಸಾಯೋದಿಲ್ಲ.

ಶ್ಯಾನುಭೋಗ : ನೀನು ಹೇಳೋದೇನೋ ಸರಿ. ಈಗ ಮಲಾರ ವಾಪಸ್ಸು ಕೊಟ್ಟರು ಕಟ್ನಿಟ್ಟಾಗಿ ವ್ಯಾಪಾರ ಮಾಡಿ ಹಣ ಸಂಪಾದಿಸ್ತಾನೆ ಅಂತ ಗ್ಯಾರೆಂಟಿ ಏನು?

ಮುನಿಯಮ್ಮ : ನಾನು ಗ್ಯಾರಂಟಿ ಸ್ವಾಮಿ.. ನಾನು ಗ್ಯಾರಂಟಿ.

ಗೌಡ : ಅಲ್ಲಮ್ಮ ಚೆನ್ನಾಗಿ ಯೋಚ್ನೆ ಮಾಡು ದುಡುಕಬ್ಯಾಡ. ಇದು ಪಂಚಾಯ್ತಿ ಹತ್ತು ಜನರ ಮುಂದೆ ಆಡಿದ ಮಾತು.

ಶೆಟ್ಟಿ : ನಿನ್ನ ಗ್ಯಾರಂಟಿ ತಕ್ಕಂಡು ನಾನೇನು ಮಾಡ್ಲಮ್ಮ. ಒಡವೆ, ವಸ್ತ್ರ ಅಡ ಇಟ್ಟರೆ..

ಮುನಿಯಮ್ಮ : ಅವೆಲ್ಲಾ ಈಗಾಗ್ಲೇ ನಿಮ್ಮ ಕಬ್ಬಿಣಪೆಟ್ಟಿಗೆ ಸೇರಿ ಹೋಗವಲ್ಲ. ಇನ್ನೇನು ತಾನೆ ಉಳಿದಾದೆ ಅಡ ಇಡೋದಿಕ್ಕೆ.

ಗೌಡ : ಲೇ ಶೆಟ್ಟಿ ನಾರಾಣಪ್ಪನಿಗೆ ನೂರು ಅವಕಾಶ ಕೊಟ್ಟೋನು. ಈ ಹೆಣ್ಣು ಮಗಳಿಗೆ ಒಂದು ಅವಕಾಶ ಕೊಡು. ಸಾಲ ತೀರಿಸ್ತೀನಿ ಅಂತವಳಲ್ಲಾ.

ಶೆಟ್ಟಿ : ದೇವಸ್ಥಾನದ ಹಿಂದೆ ಇರೋ ಆ ಕೈ ತೋಟನ ಒತ್ತೆ ಇಟ್ಟಂಗೆ ಪತ್ರ ಬರಕೊಟ್ಟರೆ. ಮಲ್ಲಾರ ಕೊಡತೀನಿ. ವ್ಯಾಪಾರಕ್ಕೆ ಹೊಸ ಸಾಲಾನೂ ಕೊಡುತ್ತೀನಿ.

ಗುಂಪು : ಎಲ್ಲ ಕಳಕಂಡು ಬೀದಿಗೆ ಬಿದ್ದಿರೋ ನಾರಾಣಪ್ಪನ ಹೆಂಡ್ತಿ ಮಕ್ಕಳಿಗೆ ಆಧಾರವಾಗಿರೋ ಆ ಅಂಗೈಯಗಲ ಭೂಮಿನೂ ಒತ್ತೆ ಇಟ್ಟಕೊಳ್ಳೋದು ನ್ಯಾಯ ಅಲ್ಲ ಬಿಡಿ.

ಶೆಟ್ಟಿ : ನನ್ನ ಹೆಂಡ್ರು ಮಕ್ಕಳು ಬೀದಿಗೆ ಬೀಳಕೂಡದು ಅಂದ್ರೆ ಇದಾಗಲೇ ಬೇಕು. ಇಲ್ಲಾಂದ್ರೆ ನಾನು ಅಮಲ್ದಾರರಿಗೆ ದೂರು ಕೊಡ್ತೀನಿ ಅಷ್ಟೆ. ದೇವುಡು ಚೇಸಿನಟ್ಲು ಅಯ್ತುಂದಿ.

ಮುನಿಯಮ್ಮ : ಆಯ್ತು ಬರ್ದು ಕೊಡ್ತೀನಿ.

ಶ್ಯಾನುಭೋಗ : ಚೆನ್ನಾಗಿ ಯೋಚ್ನೆ ಮಾಡಿ ತೀರ್ಮಾನ ತಕಳಮ್ಮ. ಆಮ್ಯಾಲೆ ಹತ್ತು ಜನರ್ನ ಸೇರ್ಸಿ ಹಿಂಗೆ ಮಾಡಿದ್ರು ಅಂತ ಮಾತು ಬರಬಾರ್ದು ಅಷ್ಟೆ

ಶೆಟ್ಟಿ : ತಕ್ಕಳಿ ಈ ಪತ್ರ ರೆಡಿಯಾಗಿ ಇಟ್ಟಿದ್ದೀನಿ. ಇದಕ್ಕೆ ನಿನ್ನ ಗಂಡನ ಸೈನು ಮಾಡ್ಸಿಕೊಡು.

ಶ್ಯಾನುಭೋಗ : ಅಂಗೇ ನೀನು ಹೆಬ್ಬೆಟ್ಟು ಹಾಕ್ಬಿಡು.. ಪಾಪ ಶೆಟ್ಟಿ ಭಯಸ್ತ.. ಏನಯ್ಯ ಶೆಟ್ರೆ (ನಗು)

ಗೌಡ : ಶ್ಯಾನುಭೋಗರೆ ಈ ಪತ್ರದಾಗ ಏನು ಬರದಾದೊ ರವಷ್ಟು ಓದಿ ಹೇಳಿ ಬಿಡಿ.

ಶ್ಯಾನುಭೋಗ : ನಾನೇ ಬರೆದಿದ್ದು. ಇವೊತ್ತಿನಿಂದ ಮುಂದಿನ ಮಾರ್ನಾಮಿಗೆ ಮೂರು ತಿಂಗಳು. ಈ ಮೂರು ತಿಂಗಳಲ್ಲಿ ನಾರಾಣಪ್ಪ ಶೆಟ್ಟಿ ಸಾಲಾನ ತೀರಿಸ್ಬೇಕು. ಇಲ್ಲದೆ ಹೋದರೆ ದೇವಸ್ಥಾನದ ಹಿಂದೆ ಇರೋ ಅವರ ಕೈತೋಟ ಶೆಟ್ಟಿ ಸಾಲಕ್ಕೆ ವಜಾ ಆಯ್ತದೆ.

ಗೌಡ : ಒಪ್ಪಿಗೆನಮ್ಮ.

ಮುನಿಯಮ್ಮ : ಇರೋ ದಾರಿ ಒಂದೇ ಆಂದ್ಮ್ಯಾಲೆ ಬೇರೆ ಯೋಚ್ನೇ ಮಾಡೋದೇನು ಬಂತಣ್ಣ. ದೇವ್ರು ನನ್ನ ಹಣೆನಾಗ ಬರ್ದಂಗೆ ಆಗ್ಲಿ.

ಶೆಟ್ಟಿ : ನಾರಾಣಪ್ಪ ಮಲ್ಲಾರ ತಕ್ಕಂಡು ಹೋಗು. ಹೇಳಿರೋ ವಾಯಿದೆ ಗೆಪ್ತಿ ಇರಲಿ. ಮಾರ್ನಾಮಿ ತೀರಿದ ಮಾರ್ನೆ ದಿನ ನನ್ನ ದುಡ್ಡು ನನಗೆ ಬರಬೇಕು.

ಶ್ಯಾನುಭೋಗ : ಇಲ್ಲಾಂದ್ರೆ ಭೂಮಿ ನಿನಗೆ ಸೇರ್ಬೇಕು. ಹುಂ. ಹೊರಡಿ ಇಟ್ಕೊನ್ತಾಯಿತು.

(ಎಲ್ಲರೂ ಏಳುವರು. ನಾರಾಯಣಪ್ಪ ಬಂದು ಮಲ್ಲಾರ ಎತ್ತಿ ಹೆಗಲಿಗೆ ಹಾಕಿಕೊಳ್ಳುವನು)

(ದೃಶ್ಯ ಬದಲಾಗಿದೆ. ಬುಟ್ಟಪ್ಪ ಮತ್ತು ಯೋಧರು ಇದ್ದಾರೆ)

ಹೆಂಗಸು : ಆವೊತ್ತು ಮಲ್ಲಾರ ತಕ್ಕಂಡು ಮನೆಗೆ ಬಂದ ರಾತ್ರಿ ಪೂರ್ತಿ ಅವಮಾನದಿಂದ ಕಮಲಿ ಹೋದ್ರು, ನಾನೇ ಸಮಾಧಾನ ಮಾಡ್ದೆ. ಸುತ್ತ ಹತ್ತೂರಾಗ ಈ ಪಾಳ್ಯ ಪಟ್ನದಾಗೆ ವ್ಯಾಪಾರಕ್ಕೆ ಹೋಗಬೇಡ. ಮದನಪಲ್ಲಿ ಕಡೆ ಹೋಗು ಗುರುತು ಪರತು ಇಲ್ಲದ ಊರಾಗ ಯಾಪಾರ ಮಾಡು. ಇದೇ ಕಡೇ ಚಾನ್ಸ್. ಯಾರಿಗೂ ಸಾಲ ಕೊಡಬ್ಯಾಡ ಅಂದೆ. ಬಡವರ ಹೆಣ್ಣುಮಕ್ಕಳು ಮೊಂಡ ಕೈ ಆಗಿದ್ರೆ ನನ್ನಿಂದ ನೋಡಕಾಗಲ್ಲ ಅಂದ್ರು, ನಿನ್ನ ಮಕ್ಕಳು ಹೊಟ್ಟೆಗಿಲ್ದೆ ಕರಳು ಕಟ್ಟಿಕಂಡಿರೋದ್ನ ನೋಡಕ ಆಯ್ತದಾ ಅಂದೆ. ಅಂಗಾದ್ರೆ ನಾನು ವ್ಯಾಪಾರ ಬಿಟ್ಟು ಬಿಡುತೀನಿ ಅಂದ್ರು, ಬಿಟ್ಟಿಟ್ಟು ಏನು ಮಾಡ್ತೀರ ಅಂದೆ.

ಯೋಧರು : ನಾರಾಣಪ್ಪನವರಿಗೆ ಬೇರೆ ಯಾವ ಕಸಬು ಬರ್ತಿರಲಿಲ್ಲವೆ?

ಹೆಂಗಸು : ಆರಂಭ ಬರ್ತಿತ್ತು ಆದ್ರೆ ಆರಂಭ ಮಾಡಾಕ ಭೂಮಿನಾದ್ರು ಎಲ್ಲಿತ್ತು.

ಯೋಧ-2 : ವ್ಯಾರಕ್ಕ ಮಾಡಬೌದಿತ್ತಲ್ಲ.

ಬುಟ್ಟಪ್ಪ : ಎತ್ತು ಎಲ್ಲಿದ್ದವು. ಏನು ಹೆಂಡ್ರು ಮಕ್ಕಳನ್ನ ನೊಗ ಕಟ್ಟಕಾಯ್ತದೇನು?

ಹೆಂಗಸು : ಊರ ಹತ್ತು ಜನರ ಮುಂದೆ ನೀವು ಆ ಸೂಲ ಶೆಟ್ಟಿ ಸಾಲ ತೀರ್ಸಿ ನಮ್ಮ ಪೂರ್ವಿಕರು ಸಂಪಾದಿಸಿದ ಕೈತೋಟನ ನಾವು

ಉಳಿಸ್ಕಬೇಕು ಅಂತ ರಾತ್ರಿಯಲ್ಲ ಗಿಳಿ ಪಾಠ ಮಾಡಿ ಮದನಪಲ್ಲಿಗೆ ಕಳಿಸಿಕೊಟ್ಟೆ. ಸಂಪಾದಿಸ್ಕಂಡು ಲಚ್ಮಿ ದೇವಿನ ಮನೆ ಕರ್ಕಂಡು ಬರ್ತಾರೆ ಅಂತ ಆಸೆಪಟ್ಟೆ. ಆದ್ರೆ ಇವೊತ್ತಿಗೂ ನನ್ನ ಆಸೆ ಅಂಗೆ ಉಳಿದೋಯ್ತು.

(ನಿಟ್ಟುಸಿರು)

ಯೋಧ–1 : ಯಾಕೆ ಏನಾಯ್ತು. ಮನದಪಲ್ಲಿಗೆ ನಾರಾಣಪ್ಪ ಹೋಗಲಿಲ್ವ?

ಯೋಧ–2 : ಮತ್ತೆ ಅಲ್ಲಿ ಕೂಡ ಎಂದಿನಂಗೆ ದಾನ ಮಾಡಿಬಿಟ್ರಾ?

ಹೆಂಗಸು : ಮನೆ ಒಳಗಿನದೇ ಗೊತ್ತಿಲ್ಲದ ನನಗೆ ಇನ್ನು ಹೊರಗಿಂದು ಹೆಂಗರಪ್ಪ ಗೊತ್ತಾಗಬೇಕು. ಅದೇನು ಮಾಯೆ ನಡಿತೋ ಏನೋ ಆ ದೇವರ್ಕ ತಿಳೀಬೇಕು. ಹೊಸ್ತಿಲು ದಾಟುವಾಗ ಈ ಸರ್ತಿ ನಿನೇಳಿದಂಗೆ ಮಾಡ್ತೀನಿ ನೀನು ಹಾಕಿದ ಗೆರೆ ದಾಟಲ್ಲ ಅಂತ ಮಾತು ಕೊಟ್ಟು ಹೋದವರು ನಮ್ಮ ಸಂಬಂಧಕ ಎಳ್ಳು ನೀರು ಬಿಟ್ಟು ಹೊಯ್ತಾರೇಂತ ಗೊತ್ತಿರಲಿಲ್ಲ!

ಯೋಧ–1 : ಏನು ಎತ್ತ ಅಂತ ಆಮ್ಯಾಲಾದ್ರು ನೀವು ಕೇಳಬೇಕಿತ್ತು!

ಹೆಂಗಸು : ನನ್ನ ಗಂಡ ಆಗಿದ್ರೆ ಕೇಳಬೌದಿತ್ತು. ಎಲ್ಲ ಗುರುತು ಮರೆತವರಿಗೆ ಗುರುತು ಜ್ಞಾಪಿಸೋದು ಎಷ್ಟು ಕಷ್ಟಾಂತ ನಿಮಗೇನಪ್ಪ ಗೊತ್ತು.

ಯೋಧ–2 : ಅಲ್ಲ ನಡೆದಿದ್ದಾದ್ರು ಏನು? ಮೊಗಲಿ ಕಣಿವೇಲಿ ಅವರಿಗೆ ಪರದೇಸಿ ಸ್ವಾಮಿ ಕಾಣಿಸಿಕೊಂಡು ಜ್ಞಾನೋಪದೇಶ ಮಾಡಿದ್ರಂತೆ ಅಂತ ಜನ ಮಾತ್ನಾಡ್ತಾರೆ ಹೌದಾ! ಈ ಪರದೇಸಿಸ್ವಾಮಿ ಅಂದ್ರೆ ಯಾರು? ಆವೊತ್ತು ಏನು ನಡೀತು ಅಂತ ಯಾರ್ನ ಕೇಳೋದು!

ಯೋಧ–1 : ಕೇಳಿದ್ರು ಹೇಳೋದಿಕ್ಕೆ ಯಾರಿಗೆ ತಾನೇ ಗೊತ್ತಿದೆ! ದೈವಲೀಲೆ.

ಅನಾಮಿಕ : (ಒಬ್ಬ ಓಡಿ ಬಂದು ಕಾಲು ಹಿಡಿದು) ಅಮ್ಮ ತಾಯೆ ನನ್ನ ಕ್ಷಮಿಸಮ್ಮ. ನಾನೇ ದ್ರೋಹಿ. ನಿಮಗೆ ಮೋಸ ಮಾಡಿದ ಪಾಪಿ ನಾನು. ನಿನ್ನ ಕಾಲು ಮುಟ್ಟೋದಿಕ್ಕೂ ನನಗೆ ಯೋಗ್ಯತೆ ಇಲ್ಲ ತಾಯೆ. ನನ್ನ ತಪ್ಪನ್ನ ಹೊಟ್ಟೆನಾಗ ಹಾಕಬೇಕು. ನೀನೊಂದು ಸಾರಿ ನನ್ನ ಕ್ಷಮಿಸಿದ್ದೀನಿ ಅಂತ ಹೇಳ್ಬೇಕು ತಾಯಿ.

ಹೆಂಗಸು : ಯಾರಪ್ಪ ನೀನು? ನೀನು ನನಗೇನು ದ್ರೋಹ ಮಾಡ್ದೆ.

ಅನಾಮಿಕ : ನಿಮ್ಮ ಕಷ್ಟಕ್ಕೆಲ್ಲಾ ನಾನೇ ತಾಯಿ ಕಾರಣ.

ಹೆಂಗಸು : ನಿನಗೆ ನಮ್ಮ ಯಜಮಾನ್ರು ಗುರುತಿದ್ದರೇನು?

ಅನಾಮಿಕ : ಹೌದು ತಾಯಿ ಅವರು ಕೊಟ್ಟ ಮಾತು ಉಳಿಸಿಕೊಳ್ಳಲು ಆಗ್ದೆ ಹೋಗಿದ್ದಕ್ಕೆ ನಾನೇ ಕಾರಣ. ನಾನು ಪಾಪಿ.

ಯೋಧರು : ನೀವು? ಯಾರೆಂದು ಕೇಳಬೌದೆ.

ಅನಾಮಿಕ : ನಾನು.... ನಾನು.... ನಾನೇ ತಾಯಿ ನಿಮ್ಮ ಯಜಮಾನರ ದುಡ್ಡನ್ನ ಮೊಗಲಿ ಕಣಿವೇಲಿ ಎಗರಿಸಿದ ಕಳ್ಳ. ನಾನು ಮೋಸಗಾರ.

ಯೋಧರು : ಹಾಗಾದರೆ ನಿನಗೆ ನಾರಾಣಪ್ಪನವರು ಎಲ್ಲಿದ್ದಾರೆ ಅನ್ನೋದು ಗೊತ್ತಿದೆಯಾ!

ಯೋಧರು : ರಾಜ ಬೊಕ್ಕಸದಿಂದ ನೀನು ಎಂದಿಗೂ ಕದಿಯಲಾರದಷ್ಟು ದೊಡ್ಡ ಮೊತ್ತವನ್ನು ಬಹುಮಾನವಾಗಿ ಕೊಡ್ತೀವಿ.

ಯೋಧರು : ದಯಮಾಡಿ ಹೇಳು. ತಿರುಮಲೆಯ ಬೆಟ್ಟದಲ್ಲಿ ನಿಂತಿರೋ ಬ್ರಹ್ಮರಥ ಕದಲದೆ ತುಕ್ಕು ಹಿಡಿಯುತ್ತಿದೆ. ಕಾಲ ಮೀರ್ತಾದೆ.

ಹೆಂಗಸು : ಮಗ ಆದದ್ದರಲ್ಲಿ ನಿನ್ನ ತಪ್ಪೇನು? ಹಾಗೆ ನೋಡಿದರೆ ನಾನೇ ನಿನಗೆ ಋಣಿ. ಆವೊತ್ತು ನೀನು ನನ್ನ ಗಂಡನ ತಲೆ ಕಡಿಯದೆ ಪ್ರಾಣ ಉಳಿಸಿದ್ದಕ್ಕೆ. ನನ್ನದೊಂದು ಆಸೆ ಇದೆ. ಆವೊತ್ತು ಮೊಗಲಿ ಕಣಿವೇಲಿ ಏನು ನಡೀತು ಅಂತ ಹೇಳಪ್ಪ. ಅದೇ ನಿನಗೆ ಕ್ಷಮೆ. ಅವರು ದುಡ್ಡು ಸಂಪಾದಿಸಿದ್ರಾ, ಅಂಗಾದ್ರೆ ನನ್ಕ ಕೊಟ್ಟ ಮಾತು ಉಳಿಸ್ಕಂಡಿದ್ರು ಅಲ್ವಾ

ಬುಟ್ಟಪ್ಪ : ನೀನು ಕಳ್ಳ ಅಲ್ಲವೋ ನಮ್ಮ ಗುರುವಿನ ಗುರುತು ನೀನು.

ಯೋಧರು : ಅವೊತ್ತು ಏನಾಯ್ತು?

ಕಳ್ಳ : ಆವೊತ್ತು ಒಂದು ದಿನ ನಾನು ನನ್ನ ಸ್ನೇಹಿತ, ಯಾವೊತ್ನಂಗೆ ಮೊಗಲಿ ಕಣಿವೆನಾಗ ಯಾರಾನ ವ್ಯಾಪಾರಸ್ಥರು, ಯಾತ್ರಿಕರೂ ಬಂದ್ರೆ ದೋಚ್ಕೋಬೇಕಂತ ಕಾಯ್ತಾ ಇದ್ವಿ, ಆಗ...

●

ದೃಶ್ಯ – ೬

[ಮೊಗಲಿ ಕಣಿವೆ ನದಿಯ ದಡದಲ್ಲಿ ಮಲ್ಲಾರವನ್ನು ಇಳಿಸಿ ನೀರು ಕುಡಿದು ಬಂಡೆಗಲ್ಲಿನ ಮೇಲೆ ವಿಶ್ರಮಿಸುತ್ತಾ ಮರೆಯಲ್ಲಿ ಇಬ್ಬರು ಮುಸುಕುದಾರಿಗಳು ಜೊತೆಗೆ ನಡೆದು ಬರುತ್ತಿರುತ್ತಾರೆ.]

ಕಳ್ಳನ ಹಿಡಿಯುವ ಕಾರಣವಿರುವುದು ಮುಚ್ಚೋ ಬಾಗಿಲ ಓ ಅಣ್ಣಾ
ಕಳ್ಳನ ರೀತಿ ಬಂಧಿಯಾಗನು ಬಲು ದೃಢಚಿತ್ತನು ಆಗಣ್ಣಾ
ಮನೆಮೇಲೊಂದು ಮನೆಯನು ಮಾಡಿ ಸಂತಸದಿಂದಿರು ಓಯಣ್ಣಾ
ಚಿಟ್ಟಿಮೇಳಗಳು ಘಂಟೆ ನಾದಗಳು ಕೇಳುತಲಿರು ನೀ ಓಯಣ್ಣಾ!
ಅಡಗಿದನೆಲ್ಲಿ ಸುಂದರ ಚೋರನು ಕೈಯಿಗೆ ಸಿಕ್ಕದೆ ಓಯಣ್ಣಾ
ಮಾಯೆ ಮಾಡಿ ಮರುಳಾಗಿಸಿ ಮಂದಿ ಮಂತ್ರವ ಮಾಡುವನಣ್ಣಾ

ನಾರಾಯಣಪ್ಪ :	ಈ ಬೆಣಚುಕಲ್ಲು ಐತ್ತಲ್ಲ. ಇದು ಬೆಲ್ಲ. ಅದೊಂದು ದೊಡ್ಡ ಕಥೆ. ಇದು ಹೊಟ್ಟೆ ಹಸಿದಾಗ ತಿನ್ನೋಕೆ ಏನೂ ಇಲ್ಲಾಂದ್ರೆ ಬೆಣಚ ಕಲ್ಲನ್ನ ಬಾಯಲ್ಲಿಟ್ಟುಕೊಂಡು ಚೀಪು ಹಸಿವು ಹೊಂಟೋಯ್ತದೆ ಅಂತ ನಮ್ಮ ಅಮ್ಮ ಹೇಳ್ತಾ ಇದ್ಲು. ಆದರೆ ನನ್ನ ಮಕ್ಕಳು ಹಸಿದಿರೋವಾಗ ಈ ಬೆಣಚುಕಲ್ಲು ಕೊಡೋಕೆ ಹೋದ್ರೆ ಇವಳು ಕಲ್ಲ ನೆಕ್ಕಿ ಹೊಟ್ಟೆ ನೀಗಿಸಿಕೊಳ್ಳೋದು ನಿನ್ನ ತಲಾಂತರಕ್ಕೆ ಸಾಕು. ನನ್ನ ಮಕ್ಕಳಿಗೆ ಆ ಭ್ರಾಂತಿ ಕಲಿಸಬ್ಯಾಡ ಅಂತಾಳೆ. ಹು.... ಅವಳಿಗೇನು ಗೊತ್ತು ಅದ್ರ ಗಮ್ಮತ್ತು. ನಿಜ ಹೇಳ್ತೀನಿ ನನಗೆ ಹೊಟ್ಟೆ ತುಂಬಿದ್ರೂನು ಬೆಣಚುಕಲ್ಲು ನೋಡಿದ್ರೆ ಹೊಟ್ಟೆ ಚುರ್ ಚುರ್ ಅನ್ನೋಕೆ ಶುರುವಾಗ್ತದೆ.
ಜೊತೆಯವನು :	ಹೌದ! (ಸನ್ನೆ ಮಾಡುವನು)
ನಾರಾಯಣಪ್ಪ :	ಒಂದು ದಿನಾನು ಸುಖ ಕಂಡೋಳಲ್ಲ. ಈ ಸರಿನಾದ್ರು ಈ ದುಡ್ಡನ್ನ ನೋಡಿ ಸಂತೋಷ ಪಡಬಹುದು. ಅಬ್ಬ ಬಡವರ

ಕೇರಿಗಳತ್ತ ಕಾಲು ಎಳೀತಾ ಇದ್ರು ಕಷ್ಟ ಪಟ್ಟು ಮನಸ್ಸನ್ನ ನಿಗ್ರಹಿಸ್ಕಂಡು ರೆಡ್ಡಿಗಳ ಮನೆಗಳ ತಾವಕ್ಕೆ ಹೋಗಿ ವ್ಯಾಪಾರ ಮಾಡಿದ್ದು ಮನಸ್ಸಿಗೆಷ್ಟು ಕಷ್ಟ ಆಯ್ತು ಅಂತೀರಿ.. ಬಳೆ ತೊಡಿಸ್ಕಂಡು ಹೆಂಗಸ್ರು ಕಣ್ಣಾಗ ಬಳೆ ಬಣ್ಣ ತೇಲಿಕೊಂಡು ಬರಬೇಕು. ಆದ್ರೆ ಈ ರೆಡ್ಡಿಗಳ ಹೆಂಗಸರೇನೋ ಶ್ರೀಮಂತರು, ಪಾಪ ನಗಾಕ ಬಡತನ. ಅಬ್ಬ ಈ ದುಡ್ಡು ಇಷ್ಟು ವಜ್ಜೆ ಅಂತ ನನಗೆ ಗೊತ್ತೇ ಇರಲಿಲ್ಲ. ಆ ಪುಣ್ಯಾತ್ಮ ಶೆಟ್ಟಿ ದುಡ್ಡನ್ನ ಹೇಗೆ ಸಂಬಾಳಿಸ್ತಾನೋ ಏನೋ. ಅವನ ಸಾಲ ತೀರಿದ್ರೆ ಸಾಕು. (ಲೆಕ್ಕ ಹಾಕುವೊತ್ನಾಗ ಮರೆಯಲ್ಲಿ ಈವರೆಗೆ ಜೊತೆ ಇದ್ದವರು ಇದ್ದಕ್ಕಿದ್ದಂತೆ ಕತ್ತಿಗಳನ್ನ ಹಿಡಿದು ಧುತ್ತನೆ ಕಾಣಿಸಿಕೊಳ್ಳುತ್ತಾರೆ)

ಮುಸುಕುಧಾರಿ : ಲೇ ಬಳೆಗಾರ ಆ ದುಡ್ಡನ್ನ, ಗಂಟನ್ನ ಇತ್ತ ಕೊಡು.

ಮುಸುಕುಧಾರಿ 2 : ಹೇಳಿದ್ದು ನಿನಗೆ, ಮಾತಿಗೆ ಬಗ್ಗಿದ್ರೆ ಕತ್ತಿಗೆ ಕೆಲ್ಸ ಇರಲ್ಲ.

ನಾರಾಯಣಪ್ಪ : (ಬೆಚ್ಚಿ) ಈ ಹಣ ನಂದಲ್ಲ ಸಾಲ ಕೊಟ್ಟಿರೋ ಶೆಟ್ಟಿದು. ನಿಮ್ಮನ್ನ ದಮ್ಮಯ್ಯ ಅಂತಿನಿ.

ಮುಸುಕುಧಾರಿ : ಒಳ್ಳೇ ಮಾತ್ನಾಗೆ ಕೊಡ್ತೀರೋ ಇಲ್ಲ ನೀರು ಪಾಲಾಯ್ತಿಯೋ!

ನಾರಾಯಣಪ್ಪ : (ಹಣ ಎದೆಗವಚಿ) ಈ ಹಣ ಊರು ಸೇರಿಲ್ಲಾಂದ್ರೆ ನನ್ನ ಸಂಸಾರಾನೇ ನೀರು ಪಾಲಾಯ್ತದೆ. ದಯಮಾಡಿ ನನ್ನ ಬಿಟ್ಟುಬಿಡಿ. ನಾಳೇನೆ ಪೂರ್ಣಮಿ. ಸಾಲ ತೀರ್ಸಕ ಕಡೇ ವಾಯಿದೆ. ಜೊತೆನಾಗ ನ್ಯಾಸ್ತಗಾರಂಗೆ ಬಂದು ನೀವು ಹಿಂಗೆ ಮಾಡ್ಬಾರದು!

ಮುಸುಕುಧಾರಿ : ಕಳ್ಳತನ ಮಾಡೋವಾಗ ಜಾಸ್ತಿ ಮಾತಾಡಬಾರದಂತೆ. ಅದು ನಮ್ಮ ಕಳ್ಳತನದ ರೂಲ್ಸು.

ಮುಸುಕುಧಾರಿ 2 : ಒಳ್ಳೆ ಮಾತಿಗೆ ಬಗ್ಗೋ ಹಂಗೆ ಕಾಣ್ತಿಲ್ಲ. ಎಳೆದು ಬಿಡ್ಲೇನು?

ಮುಸುಕುಧಾರಿ 1 : ಟೈಮು ಮೀರ್ತದೆ ಕೊಡು ಗಂಟು (ಕಿತ್ತುಕೊಳ್ಳಲು ಹೋಗುತ್ತಾನೆ)

ನಾರಾಯಣಪ್ಪ : ನನ್ನ ಪ್ರಾಣ ಬೇಕಿದ್ರೆ ತೆಗೀರಿ. ಈ ಹಣ ಮಾತ್ರ ಕೊಡಲ್ಲ.

ಮುಸುಕುಧಾರಿ 2 : ನಿನ್ನ ಪ್ರಾಣ ಯಾರಿಗೆ ಬೇಕು. ಪ್ರಾಣ ತೆಗಿಯೋದು ಅಂದ್ರೆ ನಮಗೆ ಮಕ್ಕಳ ಆಟ ಇದ್ದಂಗೆ..

ಮುಸುಕುಧಾರಿ 1 : ಲೇ ಯಾರೋ ನೀನು? ಪ್ರಾಣ ತೆಗಿಯೋ ಕಟುಕರ ಮುಂದೆ ಹಿಡಿ ದುಡ್ಡಿಗೆ ಪ್ರಾಣ ಕೊಡ್ತೀನಿ ಅಂತಿಯಲ್ಲಾ. ನಿನಗೇನು ಬುದ್ದಿ ಇಲ್ವಾ

ನಾರಾಯಣಪ್ಪ : ಹಣ ಕೊಡದಿದ್ರೆ ಈ ಕಾಡಾಗ ಸಾಯ್ತೀನಿ. ಹಣ ನಿಮ್ಗೆ ಕೊಟ್ರೆ ಊರಾಗ ಸಾಯ್ತೀನಿ. ಇಲ್ಲಾದ್ರೆ ಒಂಟಿ ಸಾವು. ಮನೆಗೋದ್ರೆ ಸಂಸಾರದ ಸಾವು. ಇಲ್ಲ ಕೊಡಲ್ಲ.

ಮುಸುಕುಧಾರಿ 1 : ಏಯ್ ನಾವೇನು ಭಿಕ್ಷೇನ ಕೇಳ್ತೀವಿ. ಕಳ್ಳರಾದವರಿಗೆ ಇಷ್ಟು ಸೈರಣೆ ಇರಬಾರದು. (ಕೈ ಎತ್ತುವನು)

ಮುಸುಕುಧಾರಿ 2 : ಯಾಕೋ ಒಂದೇಟಿಗೆ ಎಗರ್ರೋದಲ್ವಾ ನಡಿ ಬೇಗ. ಗಂಟ ಕಸಿದುಕೊಂಡು ಹೋಗುವರು.

ಮುಸುಕುಧಾರಿ : ಯಾಕೋ ಗೊತ್ತಿಲ್ಲ ಅವನ ಮುಖ ನೋಡಿದ್ರೆ ಕೈಯೇ ಮೇಲಕ್ಕೆ ಏಳಲಿಲ್ಲ. ಓಡು ಬೇಗ ಬೇಗ. (ಕಳ್ಳರು ಕಣ್ಮರೆಯಾಗುತ್ತಾರೆ)

ನಾರಾಯಣಪ್ಪ : ಈ ಕಳ್ಳರ ಎದೆನಾಗ ಯಾಕಿಷ್ಟು ಕನಿಕರ ಹುಟ್ಸಿದೆ ದೇವರೆ. ಅಮ್ಮ ಗಂಗಮ್ಮ ದಣಿವಾರಬೌದು ಅಂತ ಬೊಗಸೆ ನೀರು ಕುಡಿದ್ರೆ ಹೊಟ್ಟೆ ತುಂಬುವಷ್ಟು ಕಿಚ್ಚು ಹಾಕಿಬಿಟ್ಯಲ್ಲಾ ತಾಯೇ. ಈಗ ಬರಿಗೈಲಿ ಗೌರಮ್ಮನ್ನ ಕಳ್ಕಂಡು ಯಾವ ಮುಖಹೊತ್ತು ಊರಿಗೆ ಹೋಗಲಿ. ಶೆಟ್ಟಿ, ಶ್ಯಾನುಭೋಗರಿಗೆ ಏನಂಥ ಹೇಳಲಿ. ಹೆಂಡ್ತಿಗೆ ನನ್ನ ಮುಖ ಹೆಂಗೆ ತೋರಿಸ್ಲಿ. ಮೊಗಲಿ ಕಣಿವೆನಾಗ ಕಳ್ಳರ ಕಾಟ ಅಂದ್ರೆ ನಂಬಿದಾರ. ನಾಳೆ ರಾತ್ರಿ ಒಳಗೆ ಶೆಟ್ಟಿ ಸಾಲ ತೀರ್ಸದೆ ಹೋದ್ರೆ ಪೂರ್ವಿಕರ ಕಾಲ್ದಾಗಿನಿಂದ ಬಂದ ಕೈತೋಟ ಕೈಬಿಟ್ಟು ಹೋಯ್ತದಲ್ಲ. ಕನಸುಗಳನ್ನೆಲ್ಲ ಒಂದೇ ಗಳಿಗೆನಾಗ ತೊಳೆದು ಬಿಟ್ಟೆಯಲ್ವಾ! ಈ ಸುದ್ದಿ ಹೇಳಿದ್ರೆ ನನ್ನ ಹೆಂಡ್ತಿ ಎದೆ ಒಡೆದು ಸತ್ತಾಳು.. ಹತ್ತೂ ಜನರ ಮುಂದೆ ಅನ್ನ ಕೊಟ್ಟ ಈ ತಾಯಿ ಗೌರಮ್ಮನ್ನ ತಿರ್ಗಿ ಹರಾಜು ಹಾಕಿದ್ರೆ, ಈಗ ಏನು ಮಾಡ್ಲಿ. (ಕುಸಿದು ಬೀಳುವನು)

ಅನಾಮಿಕ (ಕಳ್ಳ) : ಆ ದುಡ್ಡು ತಕ್ಕಂಡು ಬಚ್ಚಿಟ್ಟು ನಾವು ತಿರ್ಗಿ ಬೇಟೆ ಸಿಕ್ಕಬೌದು ಅಂತ ಬಂದು ಮರೆಯಲ್ಲಿ ಹೊಂಚ್ತಾ ಇದ್ವಿ. ಆದ್ರೆ ಈ ಮನುಷ್ಯ ಆ ಬಂಡೆಗಲ್ಲಿನ ಮ್ಯಾಲೆ ದೆವ್ವದಂಗೆ ಹಂಗೆ ಕುಂತಿದ್ದ.

ನಮಗೆ ಅಚ್ಚರಿ ಆಯ್ತು. ಕಳ್ಳತನ ಮಾಡಿದಾಗ ಸತ್ತೆವೋ ಬದುಕಿದೆವೋಂತ ಓಡಿ ಹೋದವರ್ನ ನೋಡಿದ್ವಿ. ಮರೆಯಾಗಿ ನಿಂದ ನೋಡ್ತಾ ಇನ್ನೊಂದು ಬೇಟೆಗೆ ಕಾಯ್ತಾ ಇದ್ವಿ. ಒಂದಿನ ಆಯ್ತು. ಕತ್ತಲಾಯ್ತು ರಾತ್ರಿ ಮುಗಿದು ಮಾರನೇ ದಿನ ಆದ್ರೂ ಕುಂತವ್ನೆ. ಬೆಳಗ್ಗೆ ಒಂದು ಸಾರಿ ರಾತ್ರಿ ಒಂದು ಸಾರಿ ಬೆಣಚು ಕಲ್ಲನ್ನು ಎತ್ತಿ ಬಾಯಾಗ ಹಾಕ್ಕಂಡದ್ದು ಬಿಟ್ರೆ ಮತ್ತೇನು ಮುಟ್ಟಲಿಲ್ಲ. ಏನೋ ತನಗೆ ತಾನೇ ಮಾತನಾಡಿಕೋತಾ ಇದ್ದ.

ನಾರಾಯಣಪ್ಪ : ಇವೊತ್ತೇ ಹುಣ್ಣಿಮೆ. ಸಾಲ ತೀರ್ಸಕೆ ಕೊನೆ ದಿನ. ಅಯ್ಯೋ ದೇವರೆ, ಎಲ್ಲಿಗೆ ಹೋಗಲಿ ಏನಾದ್ರೂ ದಾರಿ ಹುಡುಕಬೇಕು. ಎಂಗಾದ್ರು ಮಾಡಿ ನನ್ನ ಸಂಸಾರಾನ ಉಳಿಸ್ಕೋಬೇಕು. ಊರು ಮುಂದೆ ನನ್ನ ಮರ್ಯಾದಿನ ಉಳಸ್ಕೋಬೇಕು. ಅಮ್ಮ ಗೌರಮ್ಮ ನೀನೆ ದಾರಿ ತೋರಿಸ್ಬೇಕು ತಾಯಿ.

ಏನು ಏನಮ್ಮ ಗಂಗಾಭವಾನಿ
ನಂಬಿದೆ ನಿನ್ನ ಶಂಕರನ ರಾಣಿ ॥ಪಲ್ಲವಿ॥

ಹಡೆದವಳೆ ತೋರು ಕರುಣೆ ಕಂದನಲ್ಲಿ ಕಪಟವೇಕೆ
ಒಲಿದು ಬಾರೆ ಗಂಗೆ ತಾಯಿ ನೆಲೆಯೂರೆ ನಿತ್ಯ ಮಾಯಿ ॥ಅನು॥

ಪರಮ ಪಾವನ ಬಿಂದುವೇ
ಶ್ರೀ ಪಾದ ಸಂಭವ ಸಿಂಧುವೇ
ಆಪತ್ತು ನನ್ನ ಬೆನ್ನ ಹತ್ತಿದೆಯವ್ವ
ಸೆಲೆಯೊಡೆದು ಚಿಮ್ಮಿ ಆಧರಿಸೇ ಆದಿಶಕ್ತಿ ॥ಪ॥

ಮುನಿಸೇಕೆ ದಾಸನಲ್ಲಿ ನಂಬಿದವರ ನೋಯಿಸಬಹುದೇ
ಹನಿಯೊಡೆದು ಬರಲಿ ಅನುಮಾನ ಕಳೆಯಲಿ
ಬಾ ಎಂದರೆ ಬಂದು ಕೋ ಎಂದು ವರ ನೀಡಿ
ಹರಿಸು ನನ್ನವ್ವ ಜುಳುಜುಳನೆ ಹರಿದು ॥ಪ॥

ರೂಪರೂಪಗಳೆಲ್ಲ ಜಲ ರೂಪವೇ ತಾಯಿ
ಜೀವಜೀವಗಳಲ್ಲಿ ಜಲವೇ ಪ್ರಾಣವು ತಾಯಿ
ಲೋಕ ಲೋಕಗಳೆಲ್ಲಾ ಜಲಬಂಧವಮ್ಮ
ಭುವಿ ಭಾನು ನಿನ್ನ ಕನಿಕರವಮ್ಮ॥

ಅನಾಮಿಕ : ತಿರ್ಗಿ ಆವೊತ್ತು ರಾತ್ರಿ ಬಂತು ಹಾಲು ಚೆಲ್ಲಿದಂಗೆ ಬೆಳ್ದಿಂಗಳು. ರಾತ್ರಿ ಪೂರ ಯಾರಾದ್ರು ವ್ಯಾಪಾರಸ್ಥರು ಕಣಿವೆ ಇಳಿದು ಬರಬಹುದಾಂತ ಎಣ್ಣೆ ಕಣ್ಣಾಗ ಬಿಟ್ಕಂಡು ಕಾಯ್ತಾ ಇದ್ವಿ ಯಾವಾಗ ಜೋಂಪು ಹತ್ತಿತ್ತೋ ನಾ ಕಾಣೆ. ಚೆನ್ನಾಗಿ ಬೆಳಕು ಹರಿತಾ ಇದ್ದಾಗ ಎಚ್ಚರ ಆಯ್ತು. ಆ ವಿಚಿತ್ರ ಮನುಷ್ಯ ಅಲ್ಲೇ ಕುಂತವನೆ. ನನಗೆ ಯಾಕೋ ಅನುಮಾನ ಶುರುವಾಯ್ತು. ಇರ್ಲಿ ಮಧ್ಯಾಹ್ನ ಒಂದು ಕೈ ನೋಡಾನ ಅನ್ನೋವಷ್ಟರಲ್ಲಿ ಒಂದು ನಾಲ್ಕೈದು ಜನ ಮಾತಾಡ್ಕಂಡು ಹೊಳೆ ಹತ್ತಿರಕ್ಕೆ ಬರ್ತಿದ್ದರು.

(ಜನ ಮಾತ್ನಾಡ್ಕಂಡು ಬರುವುದನ್ನು ದೂರದಿಂದ್ಲೇ ಗಮನಿಸಿ ನಾರಾಯಣಪ್ಪ)

ನಾರಾಯಣಪ್ಪ : ಓ ಕೆಲಸ ಕೆಡ್ತಲ್ಲ. ಯಾರೋ ಯಾತ್ರಿಕರು ಅಂತ ಯಾಮಾರಿದ್ನಲ್ಲ. ಈಗ ಏನು ಮಾಡೋದು. ಹಾಂ ಗುರ್ತು ಸಿಕ್ಕದಂಗೆ ಇದ್ದುಬಿಡ್ತೀನಿ. ಅದೇ ಸರಿಯಾದ ಉಪಾಯ. ಇಲ್ಲಾಂದ್ರೆ ಊರಿಗೆ ಎಳಕಂಡೋಗಿ ಬಿಡ್ತಾರೆ.

ಜನರು : ಲೇ ಅಲ್ಲಿ ನೋಡ್ರೋ. ನಾರಾಯಣಪ್ಪ. ಲೇ ಶೆಟ್ಟರ ಸಾಲ ನೀರಾಗ ಬಿತ್ತು ಅನ್ಕಂಡ್ರೆ ನಾರಾಯಣಪ್ಪ ಗುಂಡು ಕಲ್ಲಂಗೆ ಕುಂತವನೆ.

ಒಬ್ಬ : ಸಧ್ಯ ಪ್ರಾಣದಾಗ ಅವ್ನಲ್ಲ.

ಇನ್ನೊಬ್ಬ : ಯಾಕೆ ಹೆಣ ಹೊರಬೇಕಾಗಿ ಬರಬಹುದು ಅಂಥ ಒಳಗೊಳಗೆ ದಿಗಿಲಿತ್ತೇನು?

ಒಬ್ಬ : ಖಂಡಿತವಾಗಿ ನಾರಾಯಣಪ್ಪನ್ನ ಜೀವಂತವಾಗಿ ನೋಡ್ತೀನಿ ಅಂದಕಂಡು ಇರಲಿಲ್ಲ ಬಿಡು. ಪಾಪ ಈತನ ಹೆಂಡ್ತಿ ಅಲ್ಲಿ ಗಂಡನಿಗೆ ಏನೋ ಆಗೋಗಿದೆ ಅಂತ ಅನ್ಕಂಡು ಬಾಯಿ ಬಡುಕೋತಾವಳೆ. ಈ ಪುಣ್ಯಾತ್ಮ ಒಳ್ಳೆ ಋಷಿ ತರ ತಪಸ್ಸಿಗೆ ಕುಂತಂಗೆ ಕುಂತವ್ನಲ್ಲ.

ಮತ್ತೊಬ್ಬ : ನಾರಾಯಣಪ್ಪ.... ನಾರಾಯಣಪ್ಪ.... ಏನು ಮಾಡ್ತಿದ್ದೀಯಾ!

ನಾರಾಯಣಪ್ಪ : ಯಾರಪ್ಪ ನೀನು? ಈ ಕಾಡಿಗೆ ಯಾಕಪ್ಪ ಬಂದೆ. ಇಲ್ಲಿ ಬಂದೋರೆಲ್ಲ ಕಳಕೊತಾರೆ. ಹೊರಟು ಬಿಡಿ.

ಇನ್ನೊಬ್ಬ : ನಮ್ಮ ಗುರ್ತು ಸಿಕ್ಕಲಿಲ್ಲವಾ!

ಒಬ್ಬ : ಏನು ನಾವು ಯಾರಂತ ನಿನಗೆ ತಿಳೀದಾ.

ನಾರಾಯಣಪ್ಪ : ಇಲ್ಲವಲ್ಲ. ನಿಮ್ಮನ್ನ ಎಲ್ಲಿಯೂ ನೋಡದ ನೆನಪು ಇಲ್ಲ.

ಮತ್ತೊಬ್ಬ : ಕೈವಾರ, ಶೆಟ್ಟಿ, ಸಾಲ, ಹೊಸಹಳ್ಳಿ. ಯಾವುದು ಗುರುತಿಲ್ಲವಾ!

ನಾರಾಯಣಪ್ಪ : ಗುರುತು ಇರೋದು ದೇವರಿಗೆ ಮಾತ್ರನಪ್ಪ.

ಒಬ್ಬ : ಅಲ್ಲಿ ಹೆಂಡ್ರು.... ಮಕ್ಕಳು.... ಸಾಯ್ತಾವರೆ ಇಲ್ಲಿ ಕುಂತಕಂಡು ನೀನು ಏನು ಮಾಡ್ತಾ ಇದ್ದೀಯಾ!

ನಾರಾಯಣಪ್ಪ : ಕಳಕೊಂಡಿದ್ದನ್ನ ಹುಡುಕ್ತಾ ಇದ್ದೀನಿ.

ಮತ್ತೊಬ್ಬ : ಏನು ಕಳಕಂಡಿದ್ದು.

ನಾರಾಯಣಪ್ಪ : ಗುರುತು. ಬಂದ ದಾರಿ ಗುರುತು ಹುಡುಕ್ತಾ ಇದ್ದೀನಿ.

ಮತ್ತೊಬ್ಬ : ಲೇ ಈ ಮೊಗಲಿ ಕಣಿವೆನಾಗ ಕಳ್ಳರು ಜಾಸ್ತಿ. ಸಿಕ್ಕಸಿಕ್ಕವರೆನೆಲ್ಲಾ ತಲೆ ಕಡಿದು ಹಾಕುವರಂತೆ. ಯಾವುದೋ ದೆವ್ವ ನಾರಾಯಣಪ್ಪನ್ನ ಹಿಡ್ಕಂಡಿರಬೇಕು.

ಇನ್ನೊಬ್ಬ : ಇದು ದೆವ್ವದ ಕಾಟ ಅಲ್ಲ. ನೋಡಿದ್ರೆ ಬೇರೆ ತರನೆ ಕಾಣ್ತದೆ. ಇದೇನೋ ದೈವದ ಮಾಯೇ ಇರಬೇಕು.

(ಅಷ್ಟರಲ್ಲಿ ತನ್ನ ಮುಂದೆ ಬಿದ್ದಿದ್ದ ಬೆಣಚುಕಲ್ಲನ್ನು ಬಾಯಲ್ಲಿ ಹಾಕಿಕೊಂಡ ನಾರಾಯಣಪ್ಪನನ್ನ ಕಂಡು)

ಅಲ್ಲಿ ನೋಡ್ರೋ. ಕಲ್ಲನ್ನ ಬೆಲ್ಲತರ ತಿಂತಾ ಅವ್ನೆ.

ಒಬ್ಬ : ಹೌದು. ಈಗೇನು ಮಾಡೋದು..

ಇನ್ನೊಬ್ಬ : ಹೆಂಗೂ ಬಂದಿದ್ದೀವಿ ಬಲವಂತವಾಗಿ ಕರ್‍ಕಂಡು ಹೋಗೋಣ. ದುಡ್ಡುಕೊಟ್ಟು ಕಳಿಸಿರೋ ಶೆಟ್ಟಿಗೆ ಸಾಲ ಮುಳುಗಿ ಹೋಗಿದ್ದಾದ್ರೂ ಗೊತ್ತಾಗಲಿ. ಏನಂತೀರ.

ಮತ್ತೊಬ್ಬ : ಅವರ್‍ನ ಮುಟ್ಟಿ ನಮಗೇನಾದ್ರು ಆದ್ರೆ! ದೆವ್ವ ಆಗಲಿ, ದೇವರೆ ಆಗಲಿ ಇಬ್ಬರ ಸಹವಾಸ ಕೂಡ ಕಷ್ಟ ಅದಕ್ಕೆ ರವಷ್ಟು ಯೋಜನೆ ಮಾಡಿ.

ಒಬ್ಬ : ಅಂಗಂತ ಪುಕ್ಕಲರ ತರ ಬರಿ ಕೈಯಲ್ಲಿ ಹೋಗಬೇಕಾ. ಎಳಕಂಡು ನಡೀರೋ ಊರಾಗ ಪಂಚಾಯ್ತಿದಾರರು ಏನಾದ್ರೂ ಮಾಡ್ಲಿ. ಶೆಟ್ಟಿ ಹಣ ಏನು ಪುಗಸಟ್ಟೆನಾ!

(ದೃಶ್ಯ ಬದಲು)

ಕಳ್ಳ : ಗುಂಪು ನಾರಾಯಣಪ್ಪನ ಕಡೆಗೆ ಮುನ್ನುಗ್ಗುತ್ತಿರುವಾಗ ಪೊದೆಯಲ್ಲಿ ಅಡಗಿದ್ದ ನಾವು ತಮಾಶೆ ನೋಡೋದಿಕ್ಕೇಂತ ಅವರಿಗೆ ಕಾಣದಾಗೆ ಕಲ್ಲುಗಳನ್ನ ಮೇಲಿಂದ ಎಸೆದ್ವಿ, ಕಲ್ಲು ಬೀಳೋದು ನೋಡಿ ಬಂದೋರಿಗೆ ಇದೇನೋ ಮಾಯ ಅನ್ಕಂಡು ನಿಜವಾಗಿಯೂ ಈತನಿಗೆ ಏನೋ ಆಗೋಗದೆ ಅಂತ ಎದ್ದು ಬಿದ್ದು ಓಡಿಹೋದ್ರು. ನಾವು ಆ ತಮಾಷೆನ ನೋಡಿ ನಕ್ಕಿದ್ದೇ ನಕ್ಕಿದ್ದು. ನಾರಾಯಣಪ್ಪ ಕೂಡ ಅವರು ಓಡಿ ಹೋದದ್ದು ನೋಡಿ ನಗ್ತಾ ಇದ್ದದ್ನ ಕಂಡ ಮ್ಯಾಲೇನೆ ನಮಗೆ ಗೊತ್ತಾಗಿದ್ದು ಆತ ಗೆಪ್ತಿ ಇಲ್ದೋನಂಗೆ ನಾಟಕ ಆಡಿ ಸಾಲಗಾರರ್ನ ಬರಿಗೈಲಿ ಕಳಿಸಿದ್ದರು ಅಂತ.

ಯೋಧ–1 : ಏನು ನಾರಾಯಣಪ್ಪ ನಾಟಕ ಆಡಿದ್ರೆ.

ಕಳ್ಳ : ಅದೇ ಯಡವಟ್ಟಾಗಿದ್ದು.

ಯೋಧ–2 : ಅಂದ್ರೆ ಏನು ನಿಮ್ಮ ಮಾತಿನ ಅರ್ಥ.

ಕಳ್ಳ : ಎರಡು ದಿನ ಆ ಬಳೆಗಾರ್ನ ನೋಡ್ತಾ ನೋಡ್ತಾ ನಮಗೆ ಅಯ್ಯೋಪಾಪ ಅನ್ನಿಸ್ತಾ ಇತ್ತು. ಬಂದವರು ಆತನ ಸಾಲ, ಹೆಂಡ್ರು ಮಕ್ಕಳು, ಬಡತನದ ಬಗ್ಗೆ ಮಾತನಾಡಿದ್ದು ಕೇಳಿಸ್ಕಂಡು ಬೇಸರ ಆಯ್ತು. ಆತ್ನ ದುಡ್ಡನ್ನ ವಾಪಸ್ ಕೊಟ್ಬು ಬಿಡಾನ ಅಂತ ಅನ್ನಿಸಿ ನನ್ನ ಸ್ನೇಹಿತನಿಗೆ ಆತನ ದುಡ್ಡನ್ನ ಎತ್ತಕಂಡು ಬರಾಕ ಕಳುಹಿಸಿ ನಾನು ಅಲ್ಲೇ ಕಾವ್ಲು ಕಾಯ್ತಿದ್ದೆ. ಅವಾಗ. ಅವಾಗ ನಾರಾಣಪ್ಪ ಬೆಣಚು ಕಲ್ಲನ್ನ ಬಾಯ್ಗೆ ಹಾಕ್ಕಳ್ಳೋದು ನೋಡಿ. ನಾನು ಹಾಕಿಕೊಂಡೆ. ನಿಜ ಹೇಳ್ತೀನಿ ಬೆಲ್ಲ ಹಾಕ್ಕೊಂಡಂಗೇ ಇತ್ತು. ಆವಾಗ ಇದ್ದಕ್ಕಿದ್ದಂಗೆ.

ಯೋಧ–1 : ಏನಾಯ್ತು. ನಾರಾಯಣಪ್ಪನಿಗೆ ಏನೂ ಆಗ್ಲಿಲ್ಲಾ ತಾನೆ?

ಕಳ್ಳ : ನಾರಾಯಣಪ್ಪನಿಗೆ ಏನು ಆಗ್ಲಿಲ್ಲ ಯಾರದೋ ಕೈ ನನ್ನ ಭುಜದ ಮ್ಯಾಲೆ ಬಿತ್ತು. ಬೆಚ್ಚಿ ಕತ್ತಿ ಹಿರಿದು ನಿಂತ್ರೆ ಒಬ್ಬ ಮುದುಕ ನಗ್ತಾ ನಿಂತವ್ನೆ. ನಶ್ಯೆ ಇದ್ದರೆ ಕೊಡ್ತೀಯಾ ಅಂದ. ನಾನು ದಿಕ್ಕು ತೋಚದೆ ನದಿ ದಂಡೆ ಮೇಲೆ ಇದ್ದ ನಾರಾಯಣಪ್ಪನ ತೋರ್ಸಿದೆ.

ಯೋಧ-2 : ಆಮೇಲೆ ಏನಾಯ್ತು.

(ದೃಶ್ಯ ಬದಲು)

ಮುದುಕ : ಏನಯ್ಯ, ನೀನು ಮಾಡಿದ್ದು ಸರಿಯಲ್ಲ.

ನಾರಾಯಣಪ್ಪ : ನನಗೆ ಬೇರೆ ದಾರಿ ಕಾಣಲಿಲ್ಲ. ಹತ್ತು ಜನರ ಮುಂದೆ ಮಾನ ಉಳಿಸಿಕೊಳ್ಳೋದಿಕ್ಕೆ ಆ ಗಳಿಗೆ ಹೆಂಗ್ ತೋಚ್ತೋ ಅಂಗೆ ಮಾಡ್ದೆ.

ಮುದುಕ : ಹತ್ತೂ ಜನರ ಕಣ್ಣು ಮುಂದೆ ಹೋಗದಲ್ಲೋ ಮಾನ ಲೇ ದಡ್ಡ ತನ್ನ ಕಣ್ಣಾಗೇ ಹೋಯ್ತುದಲ್ಲ ಅದೇ ದೊಡ್ಡ ಮಾನ!

ನಾರಾಯಣಪ್ಪ : ನಾನು ಬೇಕೂಂತ ಮಾಡ್ಲಿಲ್ಲ. ಕಳ್ಳರು ಹಣ ಕದ್ದು ಬಿಟ್ರು.

ಮುದುಕ : (ನಕ್ಕು) ಸಣ್ಣ ಸಾಲ ತೀರ್ಸಕೋಗಿ ದೊಡ್ಡ ಸಾಲ ಮಾಡ್ಕಂಡ್ಬಿಟ್ಟ್ಯಲ್ಲೋ.

ನಾರಾಯಣಪ್ಪ : ಸಣ್ಣದೇ ತೀರ್ಸಕಾಗದೆ ನಾಯಿ ಪಾಡು ಪಡುತ್ತಿದ್ದೀನಿ. ಇನ್ನು ದೊಡ್ಡ ಸಾಲ ಹೆಂಗೆ ತೀರಿಸ್ಲಿ. ಅಂದಂಗೆ ನಾನು ಮಾಡಿರೋ ದೊಡ್ಡ ಸಾಲಾನಾದ್ರೂ ಯಾವುದು?

ಮುದುಕ : ಅದ್ನ ಮಾಡಿದವರು ನೀನು; ನಿನಗೆ ಗೊತ್ತಾಗಬೇಕು. ನನ್ನ ಕೇಳಿದ್ರೆ.

ನಾರಾಯಣಪ್ಪ : ನೀವು ಯಾರು? ನನಗೆ ಯಾಕೆ ಇದ್ನೆಲ್ಲ ಹೇಳ್ತಾ ಇದ್ದೀರಿ.

ಮುದುಕ : ನೀನು ಮಾಡಿದ ಸಾಲ ಯಾವುದು ಅಂತ ನಿನಗೆ ತಿಳಿದ ದಿನ ನಾನು ಯಾರೂ ಅಂತಾನೂ ತಿಳಿತದೆ. ನಾನಿನ್ನು ಬರ್ತೀನಿ. ಎಲ್ಲಾ ದೈವದ ಇಚ್ಛೆ.

ನಾರಾಯಣಪ್ಪ : ನನ್ನನ್ನ ಅಗ್ನಿ ಕುಂಡದಾಗ ತಳ್ಳಿಬಿಟ್ಟು ಹೋಗ್ತಾ ಇದ್ದೀರಿ.

ಮುದುಕ : ಸುಡೋದು ಕಿಚ್ಚಿನ ಸ್ವಭಾವ. ಬೆಂಕಿಗೆ ಬೀಳೋ ಮೊದಲು ಯೋಚ್ನೆ ಮಾಡ್ಬೇಕು. ಬಿದ್ದ ಮ್ಯಾಲೆ ಆಕ್ಷೇಪಣೆ ಮಾಡಿದ್ರೆ ಹೆಂಗೆ. ಹಾ. ಈ ತೊಟ್ಟಿರೋ ವೇಷಗಳು ಒಂದೊಂದೇ ಸುಡುತ್ತಾ ಹೋಗಬೇಕು. ವೇಷಕ್ಕೊಂದೊಂದು ಗುರುತು ಅಳಿಸ್ತಾ ಹೋಗಬೇಕು. ಹಿಂಗೆ ಸುಡ್ತಾ ಅಳಿಸ್ತಾ ಹೋದ್ರೆ ಒಂದು ದಿನ ಸುಡದೇ ಇರೋ ವೇಷ, ಅಳಿಸ್ದೆ ಇರೋ ಗುರುತು ಸಿಕ್ಕೇ ಸಿಕ್ಕತೈತೆ. ನೀನಾಗೆ ಬೆಂಕಿಗೆ ಬಿದ್ದಿದ್ದೀಯಾ. ನಾನು ಬರ್ತೀನಿ.

ನಾರಾಯಣಪ್ಪ : ಎಲ್ಲಿಗೊಂಟ್ರೆ ನಾನು ಬರ್ತೀನಿ. ನಿಮ್ಮ ಹಿಂದೆ.

ಮುದುಕ : (ನಕ್ಕು) ನಾನು ಬಂದ ದಾರಿ ಗುರುತು ಅಳಿಸ್ಕಂಡು ಹೋಯ್ತಾ ಇದ್ದೀನಿ. ನೀನು ನಡೆದ ಹೆಜ್ಜೆ ಗುರುತು ಅಳಸ್ಕಂಡು ಬರೋ ಹಂಗಿದ್ರೆ ಬಾ. (ಹೊರಡುತ್ತಾನೆ)

ನಾರಾಯಣಪ್ಪ : ಗುರುವೇ ನನ್ನ ಕೈ ಬಿಡಬೇಡಿ.

ದಾರಿ ತಿಳಿಯದೆ ಕಾಳಕತ್ತಲೆಯಲ್ಲಿರಲು
ಶಿಷ್ಯನನು ಆದರಿಸಿ ದಾರಿ ತೋರಿದ ಗುರುವೇ
ಬ್ರಹ್ಮನೆಂದು ತಿಳಿ ನಾದ ಬ್ರಹ್ಮಾನಂದ ನಾರೇಯಣ॥

(ದೃಶ್ಯ ಬದಲು)

ಕಳ್ಳ : ನಾನು ಅವರ ಮಾತು ಕೇಳಿ' ತಲೆ ಬುಡ ಅರ್ಥ ಆಗ್ದೆ ತಲೆ ಕೆಟ್ಟವರು ಅನ್ಕಂಡೆ. ನನ್ನ ನ್ಯಾಸ್ತಗಾರ ಸ್ವಲ್ಪ ಹೊತ್ತಾದ ಮ್ಯಾಲೆ ಬಂದ. ಅವನ ಮುಖ ನೋಡಬೇಕಿತ್ತು ಅವನ್ಯಾರೋ ಬೇರೆಯವನೇನೋ ಅನ್ನೊಂಗಿದ್ದ. ಯಾಕ್ಲಾ ಏನಾಯ್ತು ಅಂದೆ. ನಾನು ದುಡ್ಡ ತಕ್ಕಂಡು ಬರ್ತಿದೆ. ಗುರುವು ಸಿಕ್ಕಿದ್ರು, ಏನದು ಅಂದ್ರು, ದುಡ್ಡು ನಾರಾಯಣಪ್ಪನಿಂದ ಕದ್ದದ್ದು ವಾಪಸು ಕೊಡತೀನಿ ಅಂದೆ. ಅದಕ್ಕೆ ಅವರು ಕೊಡು ನಾನು ಕೊಡುತೀನಿ ಅಂದ್ರು, ಅವರ ಮುಖ ನೋಡಿದೆ ಎದುರಾಡೋದಿಕ್ಕೆ ನಾಲಿಗೆ ಏಳಲಿಲ್ಲ. ಕೊಟ್ಟೆ. ಅವರು ಅದನ್ನ ನದಿಗೆ ಎಸೆದು ನನ್ನ ಮುಖ ನೋಡಿ ನಕ್ಕು 'ಅವರವರು ಮಾಡಿದ ಸಾಲ ಅವರೇ ತೀರ್ಸಬೇಕು' ಅಂತೇಳಿ ಹೊಂಟೋದ್ರು ಅಂದ. ನನ್ಗೆ ಭಯ ಆಯ್ತು ಅವನ ಮಾತು ಕೇಳಿ. ಇದ್ದಕ್ಕಿದ್ದಂಗೆ ನನ್ನ ಸಾಲದ ಲೆಕ್ಕ ಹೇಳು ಅಂದ. ನಾನು ಕಣ್ಮುಚ್ಚಿಕೊಂಡೆ. ನನ್ನ ಸಾಲ ಮನಸ್ಸಿಗೆ ಬಂತು. ಕಣ್ಣ ಬಿಟ್ರೆ ನ್ಯಾಸ್ತಗಾರನು ಇಲ್ಲ; ನದಿಯ ಬಂಡೆ ಮ್ಯಾಲೆ ನಾರಾಯಣಪ್ಪನು ಇರಲಿಲ್ಲ. ಅವರ್ನ ಹುಡಕ್ಕಂಡು ಹುಡಕ್ಕಂಡು ನಾನು ಇಲ್ಲಿಗೆ ಬಂದು ಸೇರ್ದೆ.

ಬುಟ್ಟಪ್ಪ : ಲೇ ಮಾರ.... ನೀನೇನೋ.

ಅನಾಮಿಕ(ಕಳ್ಳ) : ನೀನು.... ನೀನು.... ಕಾಳ ಇಷ್ಟು ದಿನ ಜೊತೆಗಿದ್ರು ಗುರುತು ಸಿಕ್ಕಿಲ್ಲ.

ಹೆಂಗಸು : ಬುಟ್ಟಪ್ಪ ನೀನು

ಬುಟ್ಟಪ್ಪ : ಆ ಇನ್ನೊಬ್ಬ ಕಳ್ಳ ನಾನೇ ತಾಯಿ. ನಿಮ್ಮ ಸಾಲದ ಋಣಾನ ತೀರಿಸ್ತಾ ಇದ್ದೀನಿ.

ಯೋಧರು : ಹಾಗಾದರೆ ನಿಮಗೆ ನಾರಾಯಣಪ್ಪನ ಗುರುತು ಇರ್ಲೇಬೇಕು. ದಯಮಾಡಿ ಅವರು ಇರೋ ಜಾಗ ತೋರ್ರಿ. ತಿರುಮಲೆಯ ಬ್ರಹ್ಮರಥ ಕದಲುವ ದಾರಿ ತೋರ್ರಿ.

ಬುಟ್ಟಪ್ಪ : ಅವರಂಗೆ ನಾವು ಬಂದ ದಾರಿ ಗುರುತು ಅಳಿಸ್ಕಂಡು ನಡೀಬೇಕು. ಅಕಸ್ಮಾತಾಗಿ ಆ ದಾರಿನಾಗ ಕೈವಾರ ತಾತಯ್ಯ ಸಿಕ್ಕರು ಸಿಗಬೌದು. ಹುಂ. ನಡೀರಿ. ಹುಡುಕಿ.

ಹುಡುಕಿ ಹುಡುಕಿ ಹುಡುಕಿ ಬೇಸರಿಸಿದರೆ
ದೇವನು ಸಿಗುವನೇ ಸಿದ್ಧವಾಗಿ
ಹುಡುಕುವುದ ಕಲಿತವರು ಯಾರೂ ಇಲ್ಲ
ನಾದ ಬ್ರಹ್ಮಾನಂದ ನಾರೇಯಣ॥

●

ದೃಶ್ಯ – ೭

[ಗುಹೆಯ ಬಳಿ ಒಂದಷ್ಟು ಜನ ಕುಳಿತು ತಾತಯ್ಯನವರ ಭಜನೆ ಮಾಡುತ್ತಿದ್ದಾರೆ. ಅಲ್ಲಿಗೆ ಗೂಢಚಾರರು ಬರುತ್ತಾರೆ. ಆಗ ಅಲ್ಲಿಗೆ ದೊಡ್ಡ ಶ್ರೀಮಂತ ಬರುತ್ತಾನೆ ಮತ್ತು ಅಲ್ಲಿನ ಭಕ್ತರನ್ನು ಕಂಡು ಸಿಡುಕುತ್ತಾನೆ.]

ಶ್ರೀಮಂತ : ಏ ಮ್ಯಾನೇಜರ್, ಈ ಕೊಳಕರನ್ನ ಜಾಗ ಖಾಲಿ ಮಾಡಿಸು ಅಂತ ಹೇಳಿದ್ದೆನಲ್ಲಯ್ಯ. ಛೀ.... ಛೀ.... ದರಿದ್ರಗಳು ದೊಡ್ಡ ಸ್ವಾಮಿಗಳ ಕಣ್ಣಿಗೆ ಬಿದ್ದರೆ..

ಮ್ಯಾನೇಜರ್ : ಏನು ಮಾಡಿದರು ಹೋಗ್ತಾ ಇಲ್ಲ ಸಾರ್. ಈ ಜಾಗ ನಮ್ಮದು ತಾತಯ್ಯನೋರು ತಪಸ್ಸು ಮಾಡಿದ್ದು ಬಿಲ್‌ಕುಲ್ ಬಿಡೋದೇ ಇಲ್ಲ ಅಂತಾರೆ ಸಾರ್.

ಶ್ರೀಮಂತ : ಯಾವೋನು ಅಂಗೆ ಮಾತನಾಡಿದ್ದು. ಒದ್ದು ಹೊರಗಾಕ್ತೀನಿ ಏನಂಥ ತಿಳಕಂಡಿದ್ದೀರಿ. ಮಠದಲ್ಲಿ ಬಿಟ್ಟಿ ಕೂಳು ತಿಂದು ಕೊಬ್ಬು, ಸೋಮಾರಿಗಳನ್ನ ತಂದು. ನೋಡಿ ಇವೊತ್ತು ಜಗದ್ಗುರುಗಳು ಬರ್ತಾವರೆ ಅವರ ಕಣ್ಣಿಗೆ ಬೀಳ ಕೂಡದು ಹೊರಡಿ.

ಒಬ್ಬ : ಹುತ್ತದಲ್ಲಿ ಬಂದು ಇಲಿ ಸೇರಕಂಡಿತು. ಈಗ ಹಾವುನು ಬರುತ್ತೆ ಅಂತಾಯ್ತು.

ಮ್ಯಾನೇಜರ್ : ಯಾವೋನ್ಲೆ ತಲಹರಟೆ. ಮಠದ ಯಜಮಾನ್ರಿಗೆ ಎದುರಾಡಿದವನು.

ಶ್ರೀಮಂತ : ಏನಂದ ಅವನು?

ಮ್ಯಾನೇಜರ್ : ಏನಿಲ್ಲ ಸಾರ್. ಏನೋ ಹುಚ್ಚು ಮಾತು.

ಒಬ್ಬ : ಹುಚ್ಚು ಮಾತಲ್ಲವೋ ಇದ್ದ ಮಾತೇ. ತಾತಯ್ಯನವರಿಗೆ ಅವಮಾನ ಮಾಡಿಸ್ತಾ ಇದ್ದೀರಿ.

ಶ್ರೀಮಂತ : ಏನು ನಾವು ತಾತಯ್ಯನವರಿಗೆ ಅವಮಾನ ಮಾಡ್ತಾ ಇದ್ದೀವಾ.

ಕಣ್ಣು ಕಪಾಳ ಕಾಣ್ತೇನೀ ಮೂಳ. ನಾವು ಕೈ ಹಾಕುವುದಕ್ಕೆ ಮೊದಲು ಹೆಂಗಿತ್ತು ಈ ಜಾಗ.

ಮ್ಯಾನೇಜರ್ : ಏನಿತ್ತು ತೆಂಗಿನ ಗರಿ ಚಪ್ಪರ. ಮಳೆ ಬಂದರೆ ಸುರೀತಿದ್ದ ಸಮಾಧಿ ಅಮಾವಾಸೆ ಹುಣ್ಣಿಮೆಗೆ ಯಾರಾದ್ರೂ ಊರುಗಳಿಂದ ಬಂದು ಹಾಕಿದರೆ ಒಂದಿಡಿ ಕೂಳು. ತಿಪ್ಪೆ ತಿಪ್ಪೇ ಇದ್ದಂಗಿತ್ತು.

ಶ್ರೀಮಂತ : ನಿನ್ನಂಥ ಅಲ್ಪ ಮತಿಗಳಿಗೆ ಇದೆಲ್ಲ ಅರ್ಥವಾಗೊಲ್ಲೋ, ಅದಕ್ಕೆ ದೊಡ್ಡ ಸ್ವಾಮಿಗಳ್ನ ಕರಸ್ತಾ ಇರೋದು.

ಇನ್ನೊಬ್ಬ : ಆವೊತ್ತು ಒಬ್ಬ ಸ್ವಾಮಿ ಬಂದು ತಾತಯ್ಯನವರ ಕೈಲೇ ಮಂಗಳಾರತಿ ಮಾಡಿಸಿಕಂಡು ಹೋಗಿದ್ದ. ಈಗ ಇನ್ನೂ ದೊಡ್ಡ ಸ್ವಾಮಿ ಬಂದು ಇನ್ನು ದೊಡ್ಡ ಮರ್ಯಾದಿ ಮಾಡಿಸ್ಕಂಡು ಹೋಗ್ತಾನೆ. ಹೋಗ್ಲಿ ಬಿಡಿ. ಅವರವರ ಪಾಲಿನ ಪುಣ್ಯ ತಪ್ಪಕಾಯ್ತದ.

ಮ್ಯಾನೇಜರ್ : ನೋಡಿ, ಸ್ವಾಮಿಗಳು ಇಲ್ಲಿಗೆ ಬರ್ತಿರೋದು ಕಾಲಜ್ಞಾನಿ ತಾತಯ್ಯ ನವರಿಗೆ ಬ್ರಹ್ಮಜ್ಞಾನ ಪದವಿ ಕೊಡೋದಿಕ್ಕೆ. ಈ ಕಾರ್ಯಕ್ಕೆ ವಿಘ್ನ ಬರಕೂಡದು. ಇಲ್ಲಾಂದ್ರೆ.

ಒಬ್ಬ : ಏನು ಮಾಡ್ತೀರಾ ಪೋಲೀಸರಿಗೆ ಇಡುಕೊಡುತ್ತೀರಾ. ಇಲ್ಲ ಮರ್ಡರೇ ಮಾಡಸ್ತೀರಾ. ಇವು ನಿಮಗೆ ಹೊಸತೇನು ಅಲ್ವಲ್ಲ.

ಶ್ರೀಮಂತ : ನಿಮ್ಮನ್ನ ಖಾಲಿ ಮಾಡಿಸಾಕ ಪೋಲೀಸು ಪೌಜು ಯಾವುದು ಬೇಕಾಗಿಲ್ರೋ; ಮೂರು ದಿನ ಅನ್ನಛತ್ರ ಬಂದ್ ಮಾಡಿದ್ರೆ ಸಾಕು. ನೀವೇ ಜಾಗ ಖಾಲಿ ಮಾಡ್ತೀರ.

ಒಬ್ಬ : (ನಕ್ಕು, ಜೇಬಿನಿಂದ ಒಂದು ಕಲ್ಲು ತೆಗಿತಾನೆ) ಇದೇನು ಗೊತ್ತಾ ಬೆಣಚು ಕಲ್ಲು. ಇದು ಸಾಕು ಜೀವಮಾನ ಬದುಕೋದಿಕ್ಕೆ ನಿಮ್ಮ ದೊಡ್ಡ ಸ್ವಾಮಿನ ಈ ಕಲ್ಲು ತಿನ್ಕಂಡು ಮೂರು ದಿನ ಬದಿಕಿರಾಕೆ ಹೇಳು. ತಾತಯ್ಯನವರಿಗೆ ಬ್ರಹ್ಮಪದವಿ ಕೊಡುತ್ತಾನಂತಾ. ಕಳ್ಳರು. ಸ್ವಾಮಿ ಬರೋದಿಕ್ಕೆ ಒಂದು ದಿನ ಮೊದಲೇ ಅವ್ನ ಅಡಿಗೆ ಪರಿವಾರದವರು ಬಂದು ಇಲ್ಲಿ ಠಿಕಾಣಿ ಹೂಡಿರೋದು ನಮಗೆ ಗೊತ್ತಿಲ್ಲ ಅನ್ಕಂಡ್ಯ. ಥೂ ನೂರೊಂದು ಜಾತಿ ಹೂ ಗಿಡ ನೆಟ್ಟಿದ್ದರು ತಾತಯ್ಯನೋರು. ಅದೇ ಜಾಗದಾಗ ನೀವೇನು ಮಾಡಿದ್ರಿ ಅವನ್ನೆಲ್ಲ ಬೇರುಸಹಿತ ಕಿತ್ತು ಜಾತಿ ಗಿಡ ನೆಟ್ಟಿದ್ದೀರಿ. ಹಣ ಸುರ್ದು ಬಯಲಿಗೆ ಮಠ ಕಟ್ಟಿದ್ರಿ ತಾತಯ್ಯನವರಿಗೆ ಅವಮಾನ ಮಾಡಿದ್ರಿ. ತಾತಯ್ಯನೋರ ಮಠಕ್ಕೆ

ಬರಬೇಕು ಅಂದ್ರೆ ಜನರಿಗೆ ದಿಗಿಲು ಬರೋವಂಗೆ ಮಾಡಿದ್ರಿ, ಸರ್ಪ ಕಾವಲು ಇಟ್ಟಿರಿ.

ಶ್ರೀಮಂತ : ಎಲ್ರಿ ಸೆಕ್ಯೂರಿಟಿ ಗಾರ್ಡ್‌ಗಳು. ಈ ತಲೆ ಹರಟೆ ಮುದುಕನ್ನ ಎತ್ತಿ ಹೊರಗಾಕಿ. (ಇಬ್ಬರು ಕಾವಲುಗಾರರು ಬರುತ್ತಾರೆ)

ಇನ್ನೊಬ್ಬ : ಅವರ್‍ನ ಅಷ್ಟು ಸುಲಭವಾಗಿ ಆಚೆ ಹಾಕೋದಿಕ್ಕೆ ಆಗಲ್ವೊ ಮೂರ್ಖ.

ಮ್ಯಾನೇಜರ್ : ಯಾಕೆ?

ಮತ್ತೊಬ್ಬ : ಅವರ್‍ನ ಯಾರಂತ ಅನ್ಕಂಡಿದ್ದೀರ.

ಶ್ರೀಮಂತ : ಇವನು ಯಾವೂರ ದೊಣ್ಣೆ ನಾಯಕ?

ಇನ್ನೊಬ್ಬ : ಅವರು. (ಹೇಳಬೇಡ ಅನ್ನುವಂತೆ ಸೈಗೆ ಮಾಡುತ್ತಾನೆ)

ಮ್ಯಾನೇಜರ್ : ಅವರು ಋಷಿನಾ. ಮುನಿನಾ.

ಇನ್ನೊಬ್ಬ : ಹೌದರೋ ದೊಣ್ಣೆ ನಾಯಕನೇ ಹೆಸ್ರೇನು ಗೊತ್ತೇನ್ರೋ. ಗುಟ್ಟಹಳ್ಳಿ ಆಂಜನಪ್ಪ ಅಂತಾ. ಕೇಳಿದ್ದೀರಾ.

ಶ್ರೀಮಂತ : ಯಾವ ಜಾತಿ.

ಮ್ಯಾನೇಜರ್ : ಗೊತ್ತಿಲ್ಲ ಸಾರ್.

ಇನ್ನೊಬ್ಬ : ಅವರ್‍ನ ಆಚೆಗೆ ಎಸೀಬೇಕು ಅಂದ್ರೆ ಒಂದು ದಾರಿ ಅದೆ.

ಶ್ರೀಮಂತ : ಏನದು?

ಇನ್ನೊಬ್ಬ : ತಾತಯ್ಯನೋರು ಕುಂತ ಕಲ್ಲು ಅದ್ಯಲ್ಲ ಅದನ್ನ ಎತ್ತಿ ಬಿಸಾಕಿಸಿ. ಅವ್ನೆ ಹೊಯ್ತಾನೆ.

ಒಬ್ಬ : ತಾತಯ್ಯನೋರ್‍ನ ಆಚೆಗೆ ಹಾಕ್ದೋರಿಗೆ ಕಲ್ಲನ್ನ ಎತ್ತಿ ಹಾಕಿಸೋದು ಏನು ಕಷ್ಟ. (ಕಾವಲಿನವರು ಅವಸರವಾಗಿ ಬಂದು)

ಕಾವಲಿನವ : ಸ್ವಾಮಿಗಳು ಎಚ್.ಕ್ರಾಸ್. ಬಿಟ್ಟಿದ್ದಾರಂತೆ ಸಾರ್.

ಶ್ರೀಮಂತ : ಇವರ್‍ನ ಕ್ಲಿಯರ್ ಮಾಡಿಸು. ನಾನು ಎಂಟ್ರೆನ್ಸ್‌ಗೆ ಸ್ವಾಗತಕ್ಕೆ ಹೋಗ್ತೀನಿ. (ಹೊರಡುತ್ತಾನೆ)

ಮ್ಯಾನೇಜರ್ : ಏಯ್ ಏನು ನೋಡ್ತಾ ಇದ್ದೀರಿ ಆಚೆ ತಳ್ಳರೋ. ಈ ನನ್ನ ಮಕ್ಕಳನ್ನ. (ಕಾವಲಿನವರು ಆಂಜನಪ್ಪನ್ನ ಹೊರದೂಡಲು ಅನುವಾಗುವಾಗ ಯೋಧರು ಬಂದು ಆತನನ್ನ ಹಿಡಿದುಕೊಳ್ಳುತ್ತಾರೆ)

ಯೋಧ-1 : ಖಬರ್‌ದಾರ್ ಯಾರಾದ್ರು ಈ ಸಂತರ ಮೇಲೆ ಕೈ ಮಾಡಿದರೆ ಅವರ ಆಯಸ್ಸು ಇಲ್ಲೇ ತೀರಿತೆಂದು ತಿಳಿಯಿರಿ.

ಯೋಧ-2 : ನೋವಾಯಿತೆ?

ಆಂಜನಪ್ಪ : ಸುಖದ ಭ್ರಮೆಯಲ್ಲಿದವನಿಗೆ ತಾನೆ ನೋವು.

ಯೋಧ-1 : ನಾವು ಚಂದ್ರಗಿರಿಯ ಅರಸನ ಆಳು ಮಕ್ಕಳು. ತಿರುಮಲೆಯಲ್ಲಿ ಸಂತನೊಬ್ಬನಿಗೆ ಆದ ಅವಮಾನದಿಂದ ಬ್ರಹ್ಮರಥ ಕದಲದೆ ನಿಂತು ಬಿಟ್ಟಿದೆ. ಆ ಕಾರಣದಿಂದ ಆ ಸಂತನ ದಾರಿ ಹುಡುಕಿ ಬಂದಿದ್ದೇವೆ. ತಾವು ದಯಮಾಡಿ ಸಹಾಯ ಮಾಡಬೇಕು.

ಆಂಜನಪ್ಪ : ನಾನೇ ದಿಕ್ಕು ತಪ್ಪಿದ್ದೇನೆ, ನಿಮಗೆ ನಾನೇನು ಸಹಾಯ ಮಾಡಬಲ್ಲೆ.

ಯೋಧ-1 : ನೀವು ಆಗ್ಲೆ ತಾತಯ್ಯನವರು ಸ್ವಾಮಿಯೊಬ್ಬರನ್ನು ಇಲ್ಲಿಂದ ಓಡಿಸಿದ ಬಗ್ಗೆ ಹೇಳ್ತಾ ಇದ್ದಿರಿ.

ಆಂಜನಪ್ಪ : ಗುಂಪಲ್ಲಿ ಇದ್ದಾಗ ಒಂಟಿ ಅಂತ ಅನ್ನಿಸುತ್ತೆ ಆದ್ರೆ ಒಂಟಿಯಾಗುತ್ತಾ ಹೋದಾಗ್ಲೇ ಗೊತ್ತಾಗೋದು ನಮ್ಮೊಳಗೆ ಇರೋದು ಒಂದು ಗುಂಪು ಅಂತಾ.

ಯೋಧ-2 : ನಮಗೆ ಅರ್ಥ ಆಗಲಿಲ್ಲ, ತಾವು ತಪ್ಪು ತಿಳಿಯದಿದ್ದರೆ....

ಆಂಜನಪ್ಪ : ನಾರಾಯಣಪ್ಪ ಮೊಗಲಿ ಕಣಿವೆಯಿಂದ ಹೊರಟ ಮೇಲೆ ಮಾಡಿದ ದೊಡ್ಡ ಸಾಲ ಯಾವುದು ಅಂತ ಮನಸ್ಸು ಲೆಕ್ಕ ಹಾಕ್ತಾ ನಡಿತಾ ಇದ್ದರೆ ಅವರ ಕಣ್ಣು ಗುರುತು ಕಳಕಂಡಿತೇ ಹೊರತು ಕಾಲು ದಾರಿ ಗುರುತು ಕಳಕಂಡಿರಲಿಲ್ಲ. ಅದಕ್ಕೆ ಸೀದಾ ಈ ಕೈವಾರ, ಈ ಬೆಟ್ಟಕ್ಕೆ ಬಂದ್ರು. ಇಲ್ಲಿಗೆ ಬರೋವಷ್ಟರಲ್ಲಿ ಶರೀರ ಸೋತೋಗಿತ್ತು. ಇಲ್ಲೇ ಕುಂತು ಬಿಟ್ಟರು. ಅದು ಎಷ್ಟು ದಿನ ಮೂರು ವರ್ಷ ಕುಂತು ಧ್ಯಾನದಾಗ ಇದ್ದರು.

ಯೋಧ-1 : ತಾತಯ್ಯನೋರು ಇಲ್ಲಿ ದ್ಯಾನ ಕುಂತವರೆ ಅಂತ ಊರೋರಿಗೆ ತಿಳಿಲಿಲ್ಲವಾ!

ಆಂಜನಪ್ಪ : ಯಾಕೆ ತಿಳೀಲಿಲ್ಲ, ತಿಳೀತು. ಗೊಡ್ಡುಗ್ವಾದೆ ಮೇಯ್ಸಕೆ ಬಂದ ಐಕಳು ಊರಾಗ ಹೇಳಿದ್ರು. ಎಲ್ಲರು ಬಂದು ನೋಡಿದ್ರು ಮಾತನಾಡಸಿದ್ರು, ಆದರೆ ಕಣ್ಣು ಗುರುತು ಕಳಕಂಡಿದ್ವಲ್ಲ, ಒಬ್ಬರ್ನು ಗುರುತು ಹಿಡಿಯಾಕೆ ಆಗಲಿಲ್ಲ. ಶೆಟ್ಟಿ-ಶ್ಯಾನಭೋಗರು

ಸಾಲಗಾರರಿಂದ ತಪ್ಪಿಸಿಕೊಳ್ಳಕ ಆಡ್ತಿರೋ ನಾಟಕ ಅಂದ್ರು, ಅಷ್ಟೇ ಅಲ್ಲ ಗುಟ್ಟಾಗಿ ಈ ಗವಿ ಹತ್ತಿರ ಪಹರೆ ಇಟ್ಟಿದ್ದರು. ರಾತ್ರಿ ಏನಾದರು ಊಟಗೀಟ ಬರಬಹುದು ಅಂತಾ. ಆದ್ರೆ ನಾರಾಣಪ್ಪ ಆಗ್ಲೆ ತಾತಯ್ಯ ಆಗಿಬಿಟ್ಟಿದ್ದರು.

ಯೋಧ–2 : ಅವರ ತಪಸ್ಸು ಮಾಡುವಾಗ ಅವರ ತೊಡೆ ಮ್ಯಾಲೆ ಹುಲಿ ಸಿಂಹ ಕುಳಿತಿರುತ್ತಿದ್ದವಂತೆ ಹೌದೆ?

ಅಂಜನಪ್ಪ : ಹೌದು ಇರತ್ತಿದ್ದವು. ಅವರ ತೊಡೆ ಮ್ಯಾಲೆ ಅಲ್ಲ ನೋಡೋರ ಕಣ್ಣಾಗ ಕುಂತಿರುತ್ತಿದ್ದವು. ಕಂಡಿದ್ದು ತಮ್ಮೊಳಗಿನದ್ದೇ ಅನ್ನೋ ಮರ್ಮ ಗೊತ್ತಾಗದೆ ತಾತಯ್ಯನವರ ತೊಡೆ ಮ್ಯಾಲೆ ಹುಲಿಸಿಂಹ ಕಂಡೆವು ಅಂತ ಪುಕಾರು ಮಾಡಿದರು ಅಷ್ಟೆ.

ಯೋಧ–1 : ಆ ಕುಲದ ಸ್ವಾಮಿ ಅವಮಾನ ಮಾಡಕ ಬಂದಿದ್ದು.

ಯೋಧ–2 : ಮರದ ಮೇಲೆ ಇಟ್ಟಿದ್ದ ಮಣ್ಣಿನ ಗಿಡುಗನಿಗೆ ಜೀವ ಬರಸಿದ್ದು ಸುಳ್ಳೇನು?

ಆಂಜನಪ್ಪ : ಮರದ ಮೇಲಿನ ಗಿಡುಗ ಕಟ್ಟು ಕತೆ. ಆದರೆ ಕುಲದ ಗುರುವಿನದು ಮಾತ್ರ ನಡೆದಿದ್ದೇ. ಆವೊತ್ತು ಒಂದು ಸಾರಿ.

ವೇಷ ಧರಿಸುವ ಯೋಗಿ ಗುರು ಪಟ್ಟಕ್ಕೆ ಕಳಂಕ
ಶಾಸ್ತ್ರದವನು ಕವಿಕುಲಕ್ಕೆ ಕಡುಕಳಂಕ
ಕಳ್ಳ ಜಂಗಮರಿಗೆ ಎಂಜಲೇ ಕಳಂಕವಯ್ಯಾ
ನಾದ ಬ್ರಹ್ಮಾನಂದ ನಾರೇಯಣ ॥

●

ದೃಶ್ಯ – ೮

[ನಡೆಮುಡಿ ಹಾಸಿ ಸ್ವಾಮಿಗಳನ್ನ ಕರೆತರುತ್ತಾರೆ. ಸ್ವಾಮಿಗಳಿಗೆ ಜಯಕಾರ ಹಾಕ್ತಾ ಇರ್ತಾರೆ. ವೇದಿಕೆ ಮೇಲೆ ಸ್ವಾಮಿಗಳ ಪಾದಪೂಜೆಗೆ ಎಲ್ಲಾ ಸಿದ್ಧವಾಗಿರ್ತದೆ]

ಶ್ಯಾನುಭೋಗ : ಭಕ್ತ ಮಹಾಶಯರೇ ನಮ್ಮ ಊರಿಗೆ ಕುಲ್ದ ಸ್ವಾಮಿಗಳು ವರ್ಷಂಪ್ರತಿ ಭಿಕ್ಷೆಗೆ ಬರುವಂತೆ ಈ ಬಾರಿಯು ಬಂದವರೆ ಪ್ರತಿಯೊಂದು ಮನೆಯವರು ತಮ್ಮ ಭಕ್ತಿಗನುಸಾರವಾಗಿ ಶ್ರೀಮಠಕ್ಕೆ ದಾನ ಮಾಡಿ ಸ್ವಾಮಿಗಳ ಪಾದ ಪೂಜೆ ಮಾಡಿ ಆಶೀರ್ವಾದ ಪಡಕಂಬೇಕು.

ಸ್ವಾಮಿ : ನಿಲ್ಲಿಸಿ. ಪಾದ ಪೂಜೆಯ ಮಾತು ಆ ನಂತರ ಇರಲಿ ಮೊದಲು ನಿಮ್ಮ ಊರಿನಿಂದ ಮಠಕ್ಕೆ ಬರ್ತಾ ಇದ್ದ ಮಾಮೂಲಿ ಅರ್ಧಕರ್ಧ ಈ ವರ್ಷ ಕಮ್ಮಿಯಾಗಿದೆ ಅಂತ ನಮ್ಮ ಮಠದ ಪಾರುಪತ್ಯಗಾರ ಹೇಳಿದ. ಅದು ಯಾಕೆ ಅಂತ ನಮಗೆ ತಿಳೀಬೇಕು ಆಮೇಲೆನೇ ಪಾದ ಪೂಜೆ.

ಶ್ಯಾನುಭೋಗ : ಸ್ವಾಮಿಗಳೆ ಅದು ಯಾಕಾತ್ತು ಅಂದ್ರೆ, ಗೌಡ್ರೆ ನೀವೆ ಹೇಳಿ.

ಸ್ವಾಮಿ : ಏನು ಮುಚ್ಚಿಡ್ತಾ ಇದ್ದೀರಿ. ನಮ್ಮ ದಿವ್ಯ ಚಕ್ಷುಗಳಿಂದ ನಾವು ಅದನ್ನ ತಿಳಿಯಲಾರೆವು ಅಂದುಕೊಂಡಿದ್ದಿರೇನು?

ಗೌಡ : ಸ್ವಾಮಿ ಬಳೆ ನಾರಾಯಣಪ್ಪ ಊರಾಚೆ ಬೆಟ್ಟದ ಗವಿಯಲ್ಲಿ ಕುಂತು ಮೂರುವರ್ಷದಿಂದ ಧ್ಯಾನ ಮಾಡ್ತಿದ್ದ. ಈಗ ಒಂದು ವರ್ಷದಿಂದ ಯಾವಾಗ್ಲೋ ಒಂದೊಂದು ಸಾರಿ ಆಚೆ ಬಂದು ದಾರಿನಾಗ ಹೋಗೋರ್ನ ಕರೆದು ದೇವರ ಬಗ್ಗೆ, ಪೂಜೆ ಬಗ್ಗೆ ಏನೇನೋ ಹೇಳ್ತಾನಂತೆ. ಅದರಿಂದಾಗಿ ವರಮಾನದಲ್ಲಿ ಏರುಪೇರು ಆಗಿದೆ.

ಸ್ವಾಮಿ : ಅದನ್ನ ನಂಬಿ ನಿಮ್ಮ ಊರಿನ ಜನ ದೈವಕ್ಕೆ ದ್ರೋಹ ಬಗಿತ್ತೀರಿ. ಊರಿನಲ್ಲಿ ಯಾರೋ ಒಬ್ಬ ಅಧಿಕ ಪ್ರಸಂಗಿ ದೈವ ಕಾರ್ಯಕ್ಕೆ ಅಡ್ಡಿ ಪಡಿಸ್ತಾ ಇದ್ದರೆ ನೀವೂ ನೋಡಕಂಡು ಸುಮ್ಮನೆ ಇರತ್ತೀರಿ.

ಶ್ಯಾನುಭೋಗ : ಸ್ವಾಮಿ ಬಳೆ ನಾರಾಯಣಪ್ಪ ಮೊದಲಿಗೆ ಒಳ್ಳೆಯವನಂತಿದ್ದ. ತುಂಬಾ ದೈವ ಭಕ್ತ. ಆದರೆ ಇತ್ತೀಚೆಗೆ ಯಾಕೋ ದೇವಸ್ಥಾನ, ದೇವರು, ಪೂಜೆ ಅಂದ್ರೆ ಉರಿದು ಬೀಳ್ತಾನೆ.

ಸ್ವಾಮಿ : ಅವನಿಗೆ ಬೀಜಾಕ್ಷರ ಕಲಿಸಿದ ಗುರು ಯಾರು?

ಗೌಡ : ಗೊತ್ತಿಲ್ಲ ಸ್ವಾಮಿ. ಅಲ್ಲ ಸ್ವಾಮಿ ಅಂಗಂದರೆ ಏನು?

ಸ್ವಾಮಿ : ಕೆಳಜಾತಿಗಳವರು ಅದನ್ನ ಕೇಳಬಾರದು ನಾವು ಹೇಳಬಾರದು. ಅದು ಬ್ರಹ್ಮಗುಟ್ಟು.

ಗೌಡ : ನನ್ನ ತಪ್ಪನ್ನ ಹೊಟ್ಟೆನಾಗ ಹಾಕಳ್ಳಿ ಬುದ್ದಿ.

ಸ್ವಾಮಿ : ನೀವೆ ನೋಡಿ ಶೂದ್ರ ಜಾತಿಯವನಿಗೆ ಸಿಕ್ಕ ಅಲ್ಪ ಜ್ಞಾನಕ್ಕೆ ಇಷ್ಟು ಅಹಂಕಾರ ಬಂದರೆ ಇನ್ನೇನಾದರು ನಮ್ಮಂಥ ಬ್ರಹ್ಮಜ್ಞಾನ ಪ್ರಾಪ್ತವಾದರೆ ಲೋಕದಲ್ಲಿ ಪ್ರಳಯವಾಗದೆ ಇರುತ್ತೆಯೆ? ಅದಕ್ಕೆ ರಾಕ್ಷಸರನ್ನ ವಿದ್ಯೆ ಜ್ಞಾನಗಳಿಂದ ದೇವರುಗಳು ದೂರ ಇಟ್ಟಿದ್ದು. ಇರಲಿ ಅವನ ಅಹಂಕಾರವನ್ನ ಮುರಿಯೋದಿಕ್ಕೆ ಇಂದು ದೈವ ಸಂಕಲ್ಪ ಆದಂತಿದೆ. ಇವೊತ್ತಿನ ಪಾದಪೂಜೆ ಅವನಿಂದಲೇ ಆಗ್ಲಿ. ಕರೆಸಿಬಿಡಿ ಅವನನ್ನ.

ಗೌಡ : ಲೇ ತಳವಾರ ಹೋಗಿ ಕುಲ್ದ ಸ್ವಾಮಿಗಳು ಕರಿತಾರೆ ಅಂತ ಕರಕಂಡು ಬಾ ಹೋಗು.

(ದೃಶ್ಯ ಬದಲು)

ಆಂಜನಪ್ಪ : ಅವನು ಅಲ್ಲಿ ಹೋಗಿ ಹೆಂಗೆ ಹೇಳದು ಅಂತ ಯೋಚ್ನೆ ಮಾಡಬೇಕಾದ್ರೆ ಕಣ್ಣಬಿಟ್ಟು ನಾರಾಣಪ್ಪನೋರು 'ನಾನು ಬರಲ್ಲ ಬೇಕಾದ್ರೆ ಅವರನ್ನೆ ಇಲ್ಲಿಗೆ ಬರಾಕ ಹೇಳು' ಅಂತ ಹೇಳಿ ಕಳಿಸಿದ್ರಂತೆ.

ಯೋಧ–1 : ಸ್ವಾಮಿ ಪಿತ್ತ ನೆತ್ತಿಗೇರಿರಬೇಕು.

ಯೋಧ–2 : ಬೆಟ್ಟದಾಗಿರೋ ನಮ್ಮ ಸ್ವಾಮಿಗಳು ಹಿಂಗೆ ಆಡ್ತಾರಲ್ಲವಾ.

ಯೋಧ–1 : ಮುಂದೇನಾಯ್ತು.

ಆಂಜನಪ್ಪ : ಮುಂದೇನಾಯ್ತು ತಳವಾರ ಹೋಗಿ ಹಿಂಗಿಂಗೆ ಅಂತ ಹೇಳಿದ. ಸ್ವಾಮಿಗಳಿಗೆ ಎಲ್ಲಿಲ್ಲದ ಕ್ವಾಪ ಬಂತು. ಜನ ಎಲ್ಲಿ ಊರಕ ಶಾಪ

ಹಾಕ್ತಾರೋ ಅಂತ ಹೆದರಿದ್ರು, ಸ್ವಾಮಿ ಸರಿ, ದುಷ್ಟಶಕ್ತಿ ಅವ್ನ ಅಂಗೆ ಆಡಸ್ತಾ ಅದೆ. ನಡೀರಿ ಅಲ್ಲಿಗೆ ಹೋಗೋಣ ಅಂತ ಮಡಿ ಬಟ್ಟೆ ಮೇಲೆ ನಡೆಸಿಕೊಂಡ ಬಂದ್ರಂತೆ. ಗವಿ ಹತ್ತಿರ ಬರೋವಷ್ಟರಲ್ಲಿ ನಾರಾಣಪ್ಪ ಎರಡು ದೊಡ್ಡ ಗುಳಿಗಳನ್ನ ತೋಡ್ತಾ ಇದ್ದರಂತೆ. ಸ್ವಾಮಿಗಳು 'ಯಾರನ್ನ ಹೂಳಕೆ ಗುಳಿತೋಡ್ತಾ ಇದ್ದೀಯ' ಅಂದ್ರಂತೆ ಅದಕ್ಕೆ ತಾತಯ್ಯನೋರು 'ನಮಗೇನೆ. ಒಂದು ನನಗೆ, ಇನ್ನೊಂದು ನಿಮಗೆ' ಅಂದ್ರಂತೆ. ಏನಯ್ಯ ನಿನ್ನ ಉದ್ದಟತನ ಅಂದ್ರಂತೆ. ಅದಕ್ಕೆ ತಾತಯ್ಯನೋರು ಒಂದರಲ್ಲಿ ನನ್ನ ಅಹಂಕಾರವನ್ನ ಇನ್ನೊಂದ್ರಲ್ಲಿ ನಿಮ್ಮ ಅಹಂಕಾರವನ್ನ ಹೂಳನ ಬನ್ನಿ ಅಂದ್ರಂತೆ. ಸ್ವಾಮಿಗಳು ಕ್ಷಣ ನಿಂತಿದ್ರೆ ಕೇಳಿ. ಬೇಟೆನಾಯಿನ ಕಂಡು ಗುಳ್ಳೆನರಿ ಕಾಲಕಿತ್ತಂಗೆ ಆವೊತ್ತು ಓಟಕಿತ್ತವರು ಈ ಊರ ಕಡೆ ಮತ್ತೆ ತಲೇನೆ ಹಾಕಿಲ್ಲ ಆವೊತ್ತಿಂದ.

ಯೋಧ–1 : ಅಲ್ಲಾ ನಾರಣಪ್ಪನವರು ಸ್ವಾಮಿಗಳಿಗೆ ಜೀವಂತವಾಗಿ ಮಣ್ಣೊಳಗೆ ಮೂರು ದಿನ ಇದ್ದು ಬರೋಣ ಬನ್ನಿ ಅಂತ ಸವಾಲ್ ಹಾಕಿ ತಾವು ಸಮಾಧಿಗೋದ್ರು, ಆಗ ಸ್ವಾಮಿ ಹೆದರಕಂಡು ಓಡಿ ಹೋದ್ರು ಅಂತ ಜನ ಮಾತ್ನಾಡ್ತಾರಲ್ಲ..

ಆಂಜನಪ್ಪ : ಎರಡು ಗುಳಿಗಳು ಇದ್ವಲ್ಲ ಅವುಗಳ್ನ ಕಂಡ ಜನ ತಮಗೆ ತೋಚಿದಂಗೆ ಅಂದಕಂಡ್ರು, ಪರೀಕ್ಷೆಗೆ ತೋಡಿದ್ದು ಅಂತ ಕೆಲವರು ಅಂದರು, ಇಲ್ಲ ನಾರಣಪ್ಪ ಮೂರು ದಿನ ಇದ್ದು ಬಂದ್ರಂತೆ ಅಂತ ಇನ್ನು ಕೆಲವರು ಅಂದ್ರು, ಲೋಕದ ನಾಲಿಗೆ ಅಂದ್ರೆ ಹೀಗೇನೆ. ತನಗೆ ರುಚಿಕಂಡಂತೆ ಚಪ್ಪರಿಸಿಕೊಳ್ಳುತ್ತೆ.

(ಅಷ್ಟರಲ್ಲಿ ಜಯಕಾರದ ಸದ್ದು ಕೇಳುತ್ತದೆ) ಇವೊತ್ತು ಇನ್ನು ದೊಡ್ಡ ಸ್ವಾಮಿ ಬರತಾನೆ. ಇನ್ನೇನು ನಾಟಕ ನಡಿತಾದೋ ನಡ್ರಿ ನೋಡಾನ.

ಸಿಂಹ ವಾಹನಗಳ ಚಿತ್ತಾರ ಬರೆಯುತ್ತಾರೆ
ಸಿಂಹವನು ಯಾರು ಕಾಣುವುದಿಲ್ಲ
ಇದು ಬರೇ ಉಪಮೆ ಕಂಡವರ್ಯಾರಿಲ್ಲ ಜಗದಲ್ಲಿ
ನಾದ ಬ್ರಹ್ಮಾನಂದ ನಾರೇಯಣ.

ದೃಶ್ಯ – ೯

[ವೇದಿಕೆಯ ಮೇಲೆ ಸ್ವಾಮಿಗಳು ಹಸನ್ಮುಖರಾಗಿ ಕುಳಿತಿದ್ದಾರೆ]

ಶ್ರೀಮಂತ : ಲೇ ಮ್ಯಾನೇಜರ್. (ಜೇಬಿನಿಂದ ಒಂದು ಕಾಗದ ತೆಗೆದು) ಇದ್ನ ಆ ಪಂಡಿತಶಾಸ್ತ್ರಿಗಳ ತಾವ ತಾನೇ ಡ್ರಾಫ್ಟ್ ಹಾಕಿಸಿದ್ದು.

ಮ್ಯಾನೇಜರ್ : ಹೌದು ಸಾರ್. ಒಂದಲ್ಲ ಎರಡು ಸಾರಿ ಚೆಕ್ ಮಾಡಿಕೊಟ್ಟವರೆ.

ಶ್ರೀಮಂತ : ಭಕ್ತಾದಿಗಳೆ ನಿಮ್ಮ ನಮ್ಮ ಪೂರ್ವ ಜನ್ಮದ ಪುಣ್ಯದ ಫಲ. ಇಂದು ಜಗದ್ಗುರುಗಳಾದ ಸಾಕ್ಷಾತ್ ದೈವ ಸ್ವರೂಪಿಗಳೂ ಆದ ಶ್ರೀ ಶ್ರೀ ಶ್ರೀ ನಿರಹಂಕಾರಾಚಾರ್ಯ ಸ್ವಾಮಿಗಳವರು ತಮ್ಮ ಲೋಕ ಕಾರುಣ್ಯದಿಂದ ಈ ನೆಲದ ಮೇಲೆ ಕಾಲು ಇಟ್ಟಿದ್ದಾರೆ. ಶೂದ್ರರಿಗೆ ಬೀಜಾಕ್ಷರ ಬೋಧಿಸಿದ ತಪ್ಪಿಗೆ ಶಿಕ್ಷೆಯಾಗಿ ಶ್ರೀ ರಾಮಾನುಜಚಾರ್ಯರೇ ಶೂದ್ರ ಜಾತಿಯಲ್ಲಿ ಬಳೆ ನಾರಾಯಣಪ್ಪನಾಗಿ ಜನ್ಮತಾಳಿ ಇದೇ ನೆಲದಲ್ಲಿ ನೀವು ನಿಂತ ಈ ಮಣ್ಣಿನಲ್ಲೇ ತಮ್ಮ ಪೂರ್ವ ಜನ್ಮದ ಪುಣ್ಯದಿಂದಾಗಿ ಸಂತರಾಗಿ ಬಾಳಿ ಹೋಗಿದ್ದಾರೆ. ಅವರು ಬರೆದಿರುವ ಕೀರ್ತನೆ, ಕಾಲಜ್ಞಾನ ಗಳನ್ನು ನೋಡಿದರೆ ಸಾಕು ಅವು ಜೀವನದ ನಶ್ವರತೆಯನ್ನು ಹಾಗೂ ಪರಲೋಕವನ್ನು ಕುರಿತು ಸೊಗಸಾಗಿ ಹೇಳಿವೆ. ನಾರಾಯಣಪ್ಪನವರ ಹೆಸರಿನಲ್ಲಿ ಅನಾಥವಾಗಿದ್ದ ಈ ಮಠವನ್ನು ನಾವು ಶ್ರದ್ಧೆ ಭಕ್ತಿಗಳಿಂದ ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆಸಿದ್ದೇವೆ. ಅದಕ್ಕೆ ಸ್ವಾಮಿಗಳು ದೂರದಿಂದ್ಲೇ ಮಾರ್ಗದರ್ಶನ ಮಾಡಿದ್ದಾರೆ. ಇವೊತ್ತು ಸ್ವಾಮಿಗಳು ಇಲ್ಲಿವರೆಗೆ ಪಾದ ಬೆಳೆಸಿದ್ದಕ್ಕೆ ಮುಖ್ಯವಾದ ಕಾರಣವೇನೆಂದರೆ.

(ಗುಂಪಿನಿಂದ)

ಒಬ್ಬ : ಕಾರಣ ಜಾತಿ ಪ್ರೇಮ ಸ್ವಾಮಿ. ಜಾತಿ ಪ್ರೇಮ.

ಶ್ರೀಮಂತ : ತಪ್ಪೇನು ಅಂತ? ಎಲ್ಲ ಜಾತಿಗೊಂದೊಂದು ಮಠ ಇಲ್ವೇ?

ಸ್ವಾಮಿ : ಶ್ರೀಮಂತರೆ. ದೈವ ಕಾರ್ಯದಲ್ಲಿ ಶಾಂತಿ. ಶಾಂತಿ ಕಾಪಾಡ್ಕೊಬೇಕು. ಮುಂದುವರೆಸಿ.

ಶ್ರೀಮಂತ : ಇತ್ತೀಚೆಗೆ ಕುರುಬ ಜಾತಿಯಲ್ಲಿ ಹುಟ್ಟಿದ ಕನಕದಾಸರಿಗೆ 'ಬ್ರಹ್ಮಜ್ಞಾನಿ' ಪದವಿಯನ್ನು ಶ್ರೀಮಠ ನೀಡಿದ್ದನ್ನು ಕೇಳಿ ಸಂತೋಷಪಟ್ಟವರಲ್ಲಿ ನಾನೂ ಒಬ್ಬ. ಆಗ್ಲೇ ನನ್ನ ಮನಸ್ಸಿನಲ್ಲಿ ನಮ್ಮ ಕೈವಾರ ತಾತಯ್ಯನವರು ಕನಕದಾಸರಿಗಿಂತ ಯಾವುದ್ರಲ್ಲಿ ಕಡಿಮೆ, ನಮ್ಮಂಥ ಸಣ್ಣ ಪ್ರಮಾಣದ ಜಾತಿಯಲ್ಲಿ ಹುಟ್ಟಿದ ಕಾರಣಕ್ಕೆ ತಾತಯ್ಯನವರಿಗೆ ಬ್ರಹ್ಮಜ್ಞಾನ ಪದವಿ ತಪ್ಪಿಹೋಗಬಾರದು ಅಂತ ಸ್ವಾಮಿಗಳಿಗೆ ಅರಿಕೆ ಮಾಡಿಕೊಂಡ ಫಲವಾಗಿ ಇಂದು ಸ್ವಾಮಿಗಳು ಬ್ರಹ್ಮಜ್ಞಾನ ಪದವಿ ಕೊಡೋದಿಕ್ಕೆ ಒಪ್ಪಿ ಬಂದವರೆ. ಅದು ನಿಮ್ಮ ಪುಣ್ಯ. ತಾತಯ್ಯನವರ ಪುಣ್ಯ. ಜೈಕಾರ.... ಜೈಕಾರ... (ಜನ ಚಪ್ಪಾಳೆ ತಟ್ಟುವರು) ಈಗ ಸ್ವಾಮಿಗಳವರು ಬ್ರಹ್ಮಜ್ಞಾನ ಪದವಿ ನೀಡಬೇಕು ಅಂತ ಕೇಳಿಕೊಳ್ಳುತ್ತೇನೆ.

ಸ್ವಾಮಿ : ಭಕ್ತರೆ, ನಾರಾಯಣನ ಅಭಿಮಾನಿಗಳೇ. ಮನುಷ್ಯ ತನ್ನ ಪೂರ್ವ ಜನ್ಮದ ಲೆಕ್ಕಾಚಾರಗಳ ಮೇಲೆ ವಿವಿಧ ಜಾತಿಗಳಲ್ಲಿ ಹುಟ್ಟುತ್ತಾನೆ. ಎಲ್ಲೋ ದೈವದ ಕಣ್ಣು ತಪ್ಪಿ ಪುಣ್ಯ ಪುರುಷರು ಕೆಳ ಜಾತಿಗಳಲ್ಲಿ ಹುಟ್ಟುತ್ತಾರೆ. ಕನಕನ ಹಾಗೆ ಈ ನಾರಾಯಣನ ಹಾಗೆ. ಆದರೆ ಅವರು ತಮ್ಮ ಜೀವನದಲ್ಲಿ ತಾವು ಹುಟ್ಟಿದ ಜಾತಿಯ ಗುರುತುಗಳನ್ನು ದಾಟಿ ಬ್ರಾಹ್ಮಣರ ಸಾಧನೆಗಳನ್ನು ಪಡೆದುಬಿಡುತ್ತಾರೆ. ವರ್ತಮಾನ ಕ್ರಿಯೆಯನ್ನ ಪೂರ್ವಜನ್ಮದ ನೆನಪು, ಸಂಸ್ಕಾರ ನಿರ್ದೇಶನ ಮಾಡುತ್ತಿರುತ್ತದೆ. ಈ ನಾರಾಯಣನು ಅಷ್ಟೆ.. ಆದರೆ ಈತನ ಪುಸ್ತಕಗಳನ್ನು.. ಯಾವುದ್ರೀ ಅದು..

ಒಬ್ಬ : ಕಾಲಜ್ಞಾನ.... ಶತಕ.... ಶತಕ...

ಸ್ವಾಮಿ : ಹೂಂ ಈ ಪುಸ್ತಕಗಳನ್ನು ಓದಿದ ಮೇಲೆ ಗೊತ್ತಾಯಿತು. ಈತನಿಗೆ ಬ್ರಹ್ಮಜ್ಞಾನ ಪದವಿ ನೀಡುವುದಕ್ಕೆ ಅರ್ಹ ಅಂತ. ನಾವು ಧರ್ಮ ಸಂಸ್ಥಾನದಲ್ಲಿ ಪೂರ್ವಾಪರಗಳನ್ನ ಗುಣಿಸಿ, ಲೆಕ್ಕ ಹಾಕಿ ಜನ್ಮದಲ್ಲಿ ಶೂದ್ರನಾದರೂ ಹಿಂದಿನ ಜನ್ಮದಲ್ಲಿ ಈತ ಬ್ರಾಹ್ಮಣನಾಗಿದ್ದರಿಂದ ಮತ್ತು ಪ್ರಸ್ತುತ ಜನ್ಮದಲ್ಲೇ ಧರ್ಮಭಿಕ್ಷುವಾಗಿ ಬದುಕಿದ್ದರಿಂದ

ನಮ್ಮ ಜಗದ್ಗುರು ಸಂಸ್ಥಾನ ಈ ನಾರಾಯಣನಿಗೆ ಬ್ರಹ್ಮಜ್ಞಾನ ಪದವಿ ನೀಡಲು ತೀರ್ಮಾನಿಸಿದ್ದೇವೆ. ಕನಕನ ಬಗ್ಗೆ ಚರ್ಚೆ ನಡೆದಾಗಲೇ ನಾರಾಯಣನ ಹೆಸರು ನಮ್ಮ ಕಿವಿಗೆ ಬಿದ್ದಿತ್ತು. ಅದೇ ಸಮಯಕ್ಕೆ ಶ್ರೀಮಂತರು ತಮ್ಮ ಜಾತಿ ಪ್ರೇಮದಿಂದ ಈ ಕಾರ್ಯವಾಗಬೇಕು ಅಂತ ಬೇಡಿಕೆ ಇಟ್ಟರು. ಹಾಗಾಗಿ ಯೋಗಾನುಯೋಗ ಕೂಡಿ ಇಂದು ನನ್ನ ಕೈ ಮೇಲೆ ನಾರಾಯಣನಿಗೆ ಬ್ರಹ್ಮಜ್ಞಾನ ಪದವಿ ಕೊಡಲ್ಪಡುತ್ತಿದೆ. ನನ್ನ ಆಸೆ ಏನೆಂದರೆ ಯಾರಾದರೂ ನಾರಾಯಣನ ಅನುಯಾಯಿಗಳು ಬಂದು ಈ ಪದವಿ ಒಪ್ಪಿಸಿಕೊಳ್ಳಬೇಕು. ಇದು ಶ್ರೀಮಠದ ನಿರೀಕ್ಷೆ.

ಮ್ಯಾನೇಜರ್ : ಸ್ವಾಮಿ ಮಠದ ಯಜಮಾನ್ರು ಒಪ್ಪಿಕೊಳ್ಳಬಾರದೇ.

ಸ್ವಾಮಿ : ಇದೇನು ವ್ಯಾಪಾರ ಮುದ್ರೆ ಎಂದುಕೊಂಡಿರಾ. ಇದು ಬ್ರಹ್ಮಜ್ಞಾನ ಪದವಿ. ಇದನ್ನು ಸದಾಚಾರಿಯಾದ ನಾರಾಯಣನ ಅನುಯಾಯಿ ಮಾತ್ರ ಸ್ವೀಕಾರ ಮಾಡಬೇಕು. ಯಾರಿದ್ದೀರಿ ಕಾಯ ವಾಚ ಪರ ವಸ್ತುವನ್ನು ಸ್ವೀಕರಿಸಬಲ್ಲವರು.

(ಗುಂಪಿನಿಂದ ಒಬ್ಬ ಎದ್ದು ನಿಲ್ಲುವನು.)

ಕಾವಲಿನವನು : ಎಯ್ ಕುಳಿತುಕೊಳ್ಳಯ್ಯ. ಹೋ ಹೋ ದೊಡ್ಡ ಮನುಷ್ಯರೇ ಸುಮ್ಮನಿರುವಾಗ ಇವನ್ಯಾರೊ ಎದ್ದು ಬಿಟ್ಟ.

ಹುಚ್ಚನಂತವನು: ಸ್ವಾಮಿಗಳೇ ನಾನು ತಗೋತಿನಿ. ಪರ ವಸ್ತುವನ್ನು ನಾನು ಹಿಡೀತಿನಿ.

ಶ್ರೀಮಂತ : ನೂಕ್ರೋ ಅವ್ನ. ಈ ತಿರುಬೋಕಿಗಳನ್ನ ಬಿಡಬಾರದು ಅಂತ ಹೇಳಿದ್ರೂ ಮಂಟಪಕ್ಕೆ ಯಾರು ಇವ್ನ ಬಿಟ್ಟಿದ್ದು.

ಸ್ವಾಮಿ : ನಿಲ್ಲಿ. ನಿನಗೆ ಬ್ರಹ್ಮಜ್ಞಾನ ಹಿಡಿಯುವ ಯೋಗ್ಯತೆ ಇದೆಯೊ?

ಹುಚ್ಚ : ಬ್ರಹ್ಮಜ್ಞಾನ ಪದವಿ ಕೊಡುವ ಯೋಗ್ಯತೆ ನಿಮಗಿದ್ದರೆ ತೆಗೆದುಕೊಳ್ಳುವ ಯೋಗ್ಯತೆ ನನಗೆ ಇಲ್ವೆ, ನಾನು ನಾರಾಣಪ್ಪನ ಅನುಯಾಯಿ. (ಗಲಾಟೆ.... ಸದ್ದು)

ಸ್ವಾಮಿ : ಸದ್ದು. ಆತನನ್ನು ಇಲ್ಲಿ ಬಿಡಿ. ಆತನಿಗೆ ನಾವು ಈ ಪದವಿಯ ಗಾಂಭೀರ್ಯವನ್ನು ತಿಳಿಸಿ ಹೇಳಬೇಕಿದೆ. ಬಿಡಿ....ಬಿಡಿ....

ಶರೀಫ : ಸ್ವಾಮಿ ನೀವು ತುಂಬಾ ಒಳ್ಳೆಯವರು. ಇಲ್ಲಾಂದ್ರೆ ಅವರು ಕೇಡಿಗಳು ಒಳಗೆ ಬಿಡುತ್ತಿರಲಿಲ್ಲ. ಹೂಂ..

ಸ್ವಾಮಿ : ನಿನ್ನ ಜಾತಿ?

ಶರೀಫ : ಮುಸಲ್ಮಾನ ಸ್ವಾಮಿ.

ಸ್ವಾಮಿ : ಹೆಸರು?

ಹುಚ್ಚ : ಶರೀಫ

ಸ್ವಾಮಿ : ಗುರು ಯಾರು?

ಹುಚ್ಚ : ಗುರುಗೋವಿಂದ ಭಟ್ರು

ಸ್ವಾಮಿ : ಹಾಂ. ಗುರುಗೋವಿಂದನ ಶಿಷ್ಯ? ನಿನ್ನ ದೈವ ಯಾವುದು?

ಹುಚ್ಚ : ದ್ಯಾಮವ್ವ ನನ್ನ ದೈವಾ ಸ್ವಾಮಿ

ಶಾಸ್ತ್ರಿ : ಗುರುಗೋವಿಂದನ ಶಿಷ್ಯ ಅಂದ್ರೆ ಶಿಶುನಾಳ ಶರೀಫ ಸ್ವಾಮಿ (ಕಿವಿಯಲ್ಲಿ ಮೆಲ್ಲಗೆ ಹೇಳುವನು)

ಸ್ವಾಮಿ : ಅವನ ಕಣ್ಣುಗಳನ್ನು ನೋಡಿದರೆ ಹುಲಿ ಕಣ್ಣು ಕಂಡಂಗಾಯ್ತಲ್ಲ.

ಮ್ಯಾನೇಜರ್ : ಏಯ್ ಇಲ್ಲ ಸ್ವಾಮಿ. ಅವನೊಂದು ಪಾಪದ ಪ್ರಾಣಿ.

ಸ್ವಾಮಿ : ಛೀ.... ಛೀ.... ಇದು ಕಲ್ಲು ಬಂಡೆ ಅಲ್ಲ. ನಿನಗೆ ಪರ ವಸ್ತುವನ್ನು ಸ್ವೀಕಾರ ಮಾಡುವ ಅರ್ಹತೆ ಇಲ್ಲ.

(ಗುಂಪಿನಿಂದ ಮತ್ತೊಬ್ಬ ಎದ್ದು ನಿಲ್ಲುವನು)

ವೇಮನ : ದೇವುಡು ನೇನು ತೀಸುಕೊಂಟಾನು ನಾಕಿ ಈಯಂಡಿ ಪರ ವಸ್ತುನಿ ನೇನು ಭರಿಸ್ತಾನು.

ಮ್ಯಾನೇಜರ್ : ಈ ತಿರುಬೋಕಿ ಯಾರು?

ವೇಮನ : ನಾ ಪೇರು ವೇಮನ್ನ.

ಸ್ವಾಮಿ : ಬಿಡಿ ಆತನ ಮೇಲೆ ಕೈ ಮಾಡ್ಬೇಡಿ.. ಬಾರಪ್ಪ ನೀನು.

ಮ್ಯಾನೇಜರ್ : ಯಾವ ಜಾತಿ?

ವೇಮನ : ರೆಡ್ಡಿಲು ಸ್ವಾಮಿ ರೆಡ್ಡಿಲು.

ಸ್ವಾಮಿ : ದೀಕ್ಷೆ ಕೊಟ್ಟಿದ್ದು ಯಾರು?

ವೇಮನ : ಮಾ ವದಿನಾ ಚಾಲ ಮಂಚಿದಿ ತೆಲುಸಾ.

ಮ್ಯಾನೇಜರ್ : ಸ್ವಾಮಿ ಅವನ ಅತ್ತಿಗೆ ಅವನಿಗೆ ದೀಕ್ಷೆ ಕೊಟ್ಟಿದ್ದಂತೆ.

ಸ್ವಾಮಿ : ಏನು ಯಶ್ಚಿತ್ ಹೆಂಗಸಿನಿಂದ ಜ್ಞಾನಬೋಧೆ. ಪರ ವಸ್ತುವೆಂದರೆ ತಿಪ್ಪೆಯ ಗೊಬ್ಬರವೆಂದು ತಿಳಿದೆ ಏನು? ಓ ದೇವರೆ ಇದೆಂತಹ ಪರೀಕ್ಷೆ.

ವೇಮನ : ಈಯಿಂಡಿರಾ ಬ್ರಹ್ಮ ಪದವಿ ಈಯಂಡ್ರಾ

ಮ್ಯಾನೇಜರ್ : ಏಯ್ ಸೆಕ್ಯುರಿಟಿ ಈ ದರಿದ್ರನ ಎಳಕೊಂಡು ಹೋಗ್ರೋ ಆಚೆ.

ಸ್ವಾಮಿ : ನಾರೇಯಣನ ಪರವಾಗಿ ಪರ ವಸ್ತುವನ್ನ ಸ್ವೀಕರಿಸಲು ಗುಣ ಧರ್ಮ ಸಾಧಕರಿಲ್ಲವೆ? ನಾರೇಯಣನ ಬಗ್ಗೆ ನನಗೆ ಕನಿಕರ ವಾಗುತ್ತಿದೆ.

(ಆಗ ಗುಂಪಿನಿಂದ ಹುಚ್ಚನಂತವನೊಬ್ಬ ಎದ್ದು ನಿಲ್ಲುತ್ತಾನೆ)

ಹುಚ್ಚ : ಸ್ವಾಮಿಯೇ ನಾನೂ ಇದ್ದೀನಿ ನನ್ಗೆ ಕೊಡಿ.

ಮ್ಯಾನೇಜರ್ : ಇವನ್ಯಾರೋ ಕುಡಿದೇ ಬಂದಂತಿದೆ ಬಿಡ ಬ್ಯಾಡಿ ತಳ್ಳಿ ಆಚೆ.

ಸ್ವಾಮಿ : ಅಡ್ಡಿ ಪಡಿಸಬೇಡಿ ಇದು ದೈವಕ್ಕೆ ಪರೀಕ್ಷೆ.

ಹುಚ್ಚ : ಸ್ವಾಮಿಯೇ ಚಿಟಿಕೆ ನಶ್ಯೆ ಇದ್ದರೆ ಕೊಡ್ತೀರಾ!

ಸ್ವಾಮಿ : ಏನು? ನಶ್ಯವೇ!

ಶ್ರೀಮಂತ : ಲೇ.... ಲೇ.... ನೀನು ಯಾರ್ನ ನಶ್ಯೆ ಕೇಳ್ತಾ ಇದ್ದೀಯ ಅನ್ನೋ ಪರಿಜ್ಞಾನ ಇದೆಯಾ! ಎಂಜಲು ಕೈಯಿಂದ ಸ್ವಾಮಿಗಳನ್ನ ಮುಟ್ಟಬೇಡ.

(ಹಾಡು)

ಎಂಜಲೆಂದು ಜನ ಎಗ್ಗು ಮಾಡಬಾರದು
ಎಂಜಲಲ್ಲದಿರುವುದು ಏನಿದೆ
ಎಲ್ಲವೂ ಎಂಜಲೆಂದು ಸರಿದಿದ್ದಬೇಕಯ್ಯ
ನಾದ ಬ್ರಹ್ಮಾನಂದ ನಾರೇಯಣ ॥

ಹುಚ್ಚ : ಸ್ವಾಮಿ.... ಸ್ವಾಮಿ.... ಎಂಜಲು ತಿಂದಿದ್ದೀರಾ. (ಸ್ವಾಮಿ ಮ್ಯಾಲೆ ಸೀನುತ್ತಾನೆ) ಈ ನಶ್ಯೆ ಬೋ ಘಾಟ್, ಎಂಜಲು ಬೋ ರುಚಿ ಸ್ವಾಮಿ.. ತಿಂಟಾರಾ! ಎಂಗಲಿ ತಿಂಟಾರ.

ಸ್ವಾಮಿ : ಛೀ.... ಛೀ.... ನಶ್ಯೆ.... ಎಂಜಲು.. ಈ ಅಸಹ್ಯ ಮಾತುಗಳನ್ನು ನಾನು ಕೇಳುವಂತಾಯಿತೆ. ಹರಿ ನಾಮಾಮೃತ ಸವಿದ ಕಿವಿ ಈ ಮಾತುಗಳಿಂದ ಮೈಲಿಗೆಯಾಯಿತು. ಈತ ನಿಜಕ್ಕೂ ಹುಚ್ಚನಿರಬೇಕು.

ಹುಚ್ಚ : ಇರಬೇಕು ಅಲ್ಲ.. ಇದ್ದೀನಿ ನಾನು ಹುಚ್ಚನೇ.

ಸ್ವಾಮಿ : ನಿನ್ನ ಹಾಗೆ ನಶ್ಯೆ ಹಾಕಿಕೊಂಡರೆ ಜ್ಞಾನ ಹತ್ತಿಬಿಡುತ್ತಾ. ತಾಯಿ ಸರಸ್ವತಿ ಒಲಿದಾಳಾ. ನನ್ನ ಮಾತು ಕೇಳು. ದೇವರು ಅಮಂಗಲದಲ್ಲಿ ನೆಲಸುವುದಿಲ್ಲ. ಆತ್ಮ ಶುದ್ಧವಾಗಬೇಕಾದರೆ ಆತ್ಮನಿಗೆ ಆಶ್ರಯವಾದ ದೇಹ ಶುದ್ಧವಾಗಿರಬೇಕು. ನನ್ನ ಮಾತು ಕೇಳು ಈ ಕೆಟ್ಟ ಚಟವನ್ನು ಬಿಡು. ಸರಿದಾರಿಗೆ ಬಾ. ಮನದ ಮಾಯೆಗಳನ್ನು ಭಕ್ತಿಚಾಟಿಯಿಂದ ಹೊಡೆದೋಡಿಸು.

ಹುಚ್ಚ : ಅಂಗೇ ಆಗಲಿ ಸ್ವಾಮಿ. ಇದೋ ಬಿಸಾಕುತ್ತೀನಿ. ಇದು ಏನು ಗೊತ್ತ ತಂಬಾಕಿನ ಎಸಳು. (ಉದ್ದಕ್ಕೆ ತೆಗೆಯುತ್ತಾನೆ)

ಸ್ವಾಮಿ : ಅಯ್ಯೋ ಹಾವು.... ನಾಗರ.... ನಾಲಿಗೆ ಸವರಾಕ ನನ್ನತ್ತಲೇ ನುಗ್ಗುತ್ತಾ ಇದೆ.. ಅಯ್ಯೋ ಕಾಪಾಡಿ.... ಕಾಪಾಡಿ.... ನಾಗರ (ಎದ್ದು ಬಿದ್ದು ಓಡ ತೊಡಗುವನು)

ಹುಚ್ಚ : ಬ್ರಹ್ಮಜ್ಞಾನದ ಪದವಿ ಕೊಡಿ ಸ್ವಾಮಿ. ಅದ್ಯಾಕೆ ಅಂಗೆ ಓಡ್ತಾ ಇದ್ದೀರಿ.... ನಿಲ್ಲಿ. ಸ್ವಲ್ಪ ನಶ್ಯದ ರುಚಿ ನೋಡಿ. ಇದು ಹಾವಲ್ಲ. ತಂಬಾಕಿನ ಕಡ್ಡಿ. (ಅವರನ್ನು ಹಿಂಬಾಲಿಸಿ ಓಡಿದಂತೆ ಮಾಡುವನು)

ಇನ್ನೊಬ್ಬ : ತಾತಯ್ಯನವರ ಬ್ರಹ್ಮಜ್ಞಾನ ಪದವಿ ಏನಾಯ್ತು.

ಹುಚ್ಚ : ಕೊಡಿ ಪದವಿ ಕೊಡಿ. ನಾನೇ ನಾರಾಣಪ್ಪನಿಗೆ ತಲುಪಿಸ್ತೀನಿ.

(ಕೋಲಾಹಲ.... ಜನರು ಗಾಬರಿಯಾಗುತ್ತಾರೆ)

ಯೋಧ–1 : ಸ್ವಾಮಿ ನಾವು!

ಹುಚ್ಚ : ಚಂದ್ರಗಿರಿಯ ಗೂಡಾಚಾರರು. (ನಕ್ಕು) ನಶ್ಯೆ ಮಾಡಾಕಬರ್ರಾ!

ಯೋಧ–2 : ಯಜಮಾನ್ರೆ

ಹುಚ್ಚ : ಏನು? ನಾರಾಯಣಪ್ಪನ್ನ ಹುಡಕ್ಕಂಡು ಬಂದಿರಿ. ಅಲ್ವಾ!

ಯೋಧ–1 : ತಿರುಮಲೆಯಲ್ಲಿ ಬ್ರಹ್ಮರಥ ಕದಲದೆ ತುಕ್ಕು ಹಿಡಿದಿರಬಹುದು. ಗಾಲಿಗಳಿಗೆ ತಿರುಗುವ ನೆನಪೇ ಅಳಿಸಿ ಹೋಗಿರಬೇಕು.

ಹುಚ್ಚ : ರಥ.... ನಿಲ್ಲಕಾಯ್ತದೇನೋ ಭ್ರಾಂತು.... ಭ್ರಾಂತು.... ನೆಲಕ್ಕೆ ಕಿವಿ ಹಿಡಿದು ನೋಡು. ಗುಡುಗುಡು ಶಬ್ದ ಏನದು?

ಯೋಧ–1 : ಚಕ್ರ ಉರುಳೋ ಸದ್ದು.

ಹುಚ್ಚ : ಗುಡುಗುಡ ಶಬ್ದ

ಯೋಧ–2 : ಹೌದು ರಥ ಉರುಳೋವಾಗ ಇಂತಾದ್ದೇ ಸದ್ದು.... ಅಂದ್ರೆ....

ಹುಚ್ಚ : ಥೂ ಘಾಟಿದ್ರೆ, ಖಾರ ಇಲ್ಲ. ಖಾರ ಇದ್ರೆ ಮತ್ತಿಲ್ಲ. ಅವನು ಸಿಕ್ಕಿದ್ರೆ ಒಳ್ಳೆ ನಶ್ಯೆ ಮಾಡಿಸ್ಕೋಬೇಕು.... ಬಿಡ್ರಪ್ಪ ದಾರಿ.... ನಾನು ಹೋಗಬೇಕು.

ಯೋಧ–1 : ಸ್ವಾಮಿ ನಾವು ಯಾವಾಗ ತಿರುಮಲೆ ಬಿಟ್ಟಿ ಇಳಿದ್ವೋ. ಎಷ್ಟು ಯುಗ, ದಾರಿ ನಡೆದ್ವೋ ನಮಗೇ ಅರಿವಿಲ್ಲ. ನಾರಾಯಣಪ್ಪನನ್ನು ಹುಡುಕಿ ಬಂದ ದಾರಿನಾಗ ಎಲ್ಲಿ ನಿಂತು ನೋಡಿದ್ರು, ತಾತಯ್ಯ ಇದ್ದಂಗಿತ್ತು. ಆದರೆ ರಥ ಜ್ಞಾಪಕಕ್ಕೆ ಬಂದ ತಕ್ಷಣ ಹಿಂಬಾಲಿಸುತ್ತಿದ್ದ ದಾರಿ ತಪ್ಪುತ್ತಿತ್ತು. ನೆನಪಿನ ಗುರುತು ಅಳಿಸಿತ್ತು.

ಹುಚ್ಚ : ಅಳಿದಿತ್ತು ಅನ್ನೋ ಜ್ಞಾನವ ಅಳಿಬೇಕು ಕಣ್ರಪ್ಪ. ಹಿಂಗೆ ಹುಡುಕಿ ನೀವು ಕಳಿಬೇಕಾದ್ದು ಅಳಿಬೇಕಾದ್ದು ಮುಗಿದಾಗ ಎಲ್ಲ ಖುಲ್ಲಂಖುಲ್ಲ. ಲೇ. ಗಟ್ಟಹಳ್ಳಿ. ಅಯ್ಯೋ ನುಡಿದರೆ ಸಾಕು ಈ ಶಬ್ದಗಳ್ನ ಗುರುತುಗಳು ಅಂಗೇ ಮೆತ್ತಿಗಂತವೆ. ನಾನು ಬರ್ತೀನಿ. ಮೂಗು ಪಿರಿಪಿರಿ ಅಂತಾದೆ.. (ಹೊರಡುತ್ತಾನೆ. ಅಸಹಾಯಕರಾಗಿ ನಿಲ್ಲುವರು ಯೋಧರು. ಆತನ ಹಿಂದೆ ಹೊರಟ ಗಡ್ಡದಾರಿಯನ್ನು ಹಿಡಿದು.)

ಯೋಧರು : ದೊಡ್ಡವರೆ. ನಮಗೆ ಗೊತ್ತಾಯಿತು. ಈತನೇ ತಾನೆ ಕೈವಾರ ತಾತಯ್ಯ....

ಹೆಂಗಸು : ಅಲ್ಲ. ಇವರು ಪೋತುಲೂರಿ ವೀರಬ್ರಹ್ಮನ್ನನವರು.

ಯೋಧರು : ಕಾಲಜ್ಞಾನಿ ಪೋತಲೂರು. ಅಯ್ಯೋ.... ಚಾನ್ಸ್ ಮಿಸ್ಸಾಯಿತಲ್ಲ. ಇನ್ನೆಷ್ಟು ದಿನ ಹುಡುಕಬೇಕು. ಎಲ್ಲರೂ ಬಂದರು ಎಲ್ಲರೂ ಹೋದರು ನಾವು ಉಳಿದಿದ್ದೀವಿ.

ಯೋಧ–1 : ಅಲ್ಲ ರಥ ಉರುಳ್ತಾ ಇರೋದು ನಿಜವಿದ್ದಾತ!

ಯೋಧ–2 : ಅದನ್ನ ಹೇಳಕೂ ತಾತಯ್ಯನೋರೆ ಸಿಗಬೇಕೇನೋ! ಇನ್ನ ಯಾರ್ನ ಅಡ್ರೆಸ್ ಕೇಳಾದು.

(ಅಷ್ಟರಲ್ಲಿ ಒಬ್ಬ ಹೆಣ್ಣುಮಗಳು ಧುತ್ತನೆ ಪ್ರತ್ಯಕ್ಷವಾಗುತ್ತಾಳೆ)

ಹೆಂಗಸು : ಲೇ ಅಪ್ಪಯ್ಯ.... ಎಲ್ಲರನ್ನು ಕೇಳಿದ ನೀವು ನನ್ಯಾಕೆ ಕೇಳ್ತಿಲ್ಲ.

ಯೋಧರು : ಏನು.... ಏನು ಕೇಳಬೇಕು?

ಹೆಂಗಸು : ಓ ನನಗೊತ್ತಿಲ್ಲ ಅನ್ಕಂಡ್ರಾ. ಅದೇ ಕೈವಾರ ತಾತಯ್ಯನೋರು ಎಲ್ಲವರಂತಾ?

ಯೋಧ : ಏನು ನಿನಗೆ ಗೊತ್ತ..!

ಹೆಂಗಸು : ಓ ಗೊತ್ತು ಗೊತ್ತು! ಬನ್ನಿ ತೋರಿಸ್ತೀನಿ.

(ದೃಶ್ಯ ಬದಲು)

ಹೆಂಗಸು : (ರಾಗಿ ಬೀಸುತ್ತಿದ್ದಾಳೆ) ಇದೋ ಇದೋ ನೀವು ಹುಡುಕ್ತಾ ಇದ್ದ ರಥದ ಚಕ್ರಗಳು ಹಿಂಗೆ ಯಾವಾಗಲೂ ತಿರ್ಗತಾನೇ ಅದೆ. ನಿಂತೇ ಇಲ್ಲ. ಬ್ರಹ್ಮನೋರು ಹೇಳಿದ್ದು ಕೇಳಿದ್ರಲ್ಲ.. ಹಿಂಗೆ ರಾಗಿ ಬೀಸ್ತಾ ಇದೆ.

ಯೋಧರು : ಹುಂ

ಹೆಂಗಸು : (ಹಾಡು)

ಮನೆಯ ಒಳಗೆ ಒಲೆಯ ಮುಂದೆ ಕುಂತಿದ್ದೆ.
ಕರೆದಂಗಾಯ್ತು. ಮನೆ ಮುಂದೆ ಬಂದು ನೋಡಿದರೆ
ಹೊರಗೆ ಮರದ ಮೇಲೆ ಹಂಸ ಪಕ್ಷಿಯಾಗಿ ಕೂತಿದ್ದ.
ಮನೆಯಾಗೆ ಬಂದರೆ ದೀಪದ ಗೂಡಲ್ಲಿ ಇದ್ದ.
ಒಲೆ ಮೇಲೆ ಇದ್ದ. ಹಸುಗಳ ಗೊತ್ತಲ್ಲಿ ಇದ್ದ.
ಇಗೋ ನನ್ನ ಕೈ ಬಳೆಯ ಸದ್ದಾಗಿ ಅವ್ನೆ ತಾತಯ್ಯ
ಅವ್ನೆ ಕೈವಾರ ತಾತಯ್ಯ

ಸಹಜ ಗುರುವಿಗೆ ಶರಣು
ಸಹಜ ಯೋಗಿಗೆ ಶರಣು
ಸಹಜ ವರಕವಿಗೆ ಶರಣು
ಭೂಲೋಕದಲ್ಲಿರುವ
ಸಕಲ ಬುಧ ಜನರಿಗೆ ಶರಣು
ನಾದ ಬ್ರಹ್ಮಾನಂದ ನಾರೇಯಣ

ನಾಟಕ–೫

ವಿಸುರ ವೇಮನ

ದೃಶ್ಯ - ೧

[ಸಡಗರದಿಂದ ಯಾರನ್ನೋ ಸ್ವಾಗತಿಸಲು ಜನ ಕಾಯುತ್ತಿದ್ದಾರೆ. ಬ್ರಾಹ್ಮಣ ಪಂಡಿತರು, ಅಧಿಕಾರಿಗಳು ಮತ್ತು ವಾದ್ಯಗಾರರು ಇದ್ದಾರೆ]

ಪಂಡಿತರು : ರಾಹುಕಾಲ ಸಮೀಪಿಸುತ್ತಿದೆ. ಸಾಹೇಬರು ಇನ್ನೂ ಬರಲಿಲ್ಲವಲ್ಲ.

ಅಧಿಕಾರಿ : ಇನ್ನೇನು ಬರ್ತಾರೆ... ಎಲ್ಲಾ ಸಿದ್ಧವಾಗಿರಿ... ಹೇಳಿದ್ದು ನೆನಪಿದೆ ತಾನೆ?

ಜನಸಾಮಾನ್ಯ: ಅಲ್ಲಾ ಸ್ವಾಮಿ ಯಾರು ಬರ್ತಾರೆ? ನಾವು ಅವರು ಬಂದಾಗ ಜಯವಾಗಲಿ ಅಂತ ಕೂಗಿದ್ರೆ ಸಾಕೇ?

ಅಧಿಕಾರಿ : ಶ್ರೀಮಾನ್ ಬ್ರೌನ್ ಸಾಹೇಬರಿಗೆ ಅಂತೀನಿ. ಆಕಾಶಕ್ಕೆ ಕೇಳಿಸಬೇಕು ಹಾಗೆ ಕೂಗಬೇಕು. ಎಲ್ಲಿ ವಾದ್ಯಗಾರರು, ಹಲಗೆ ಮೇಳ ತಂದಿದ್ದೀರಿ ಅಲ್ವೇ.... ಅವರಿಗೆ ನಮ್ಮ ಹಳ್ಳಿ ಪದ್ಧತಿ ಕಂಡರೆ ತುಂಬಾ ಇಷ್ಟವಂತೆ.

ಪಂಡಿತ : ಸ್ವಾಮಿ.... ಸ್ವಲ್ಪ ಈ ಕಡೆ ಬರುತ್ತೀರಾ.... (ಪಕ್ಕಕ್ಕೆ ಬರುತ್ತಾನೆ)

ಅಧಿಕಾರಿ : ಹೇಳಿ ಮತ್ತೇನಾದ್ರೂ ದೈವ ದೋಷವಿದೆಯೆ?

ಪಂಡಿತ : ಇಲ್ಲ ಇಲ್ಲ. ತಮ್ಮ ಹಾಗೂ ಮನೆಯವರ ಹೆಸರಿನಲ್ಲಿ ಮೃತ್ಯುಂಜಯ ಹೋಮವನ್ನು ಮಾಡಿಸಿದೆ.

ಅಧಿಕಾರಿ : ಹೌದೆ? ಬಹಳ ಸಂತೋಷ. ತಮ್ಮ ಈ ಆಶೀರ್ವಾದಕ್ಕಾಗಿ ಋಣಿ. ತಮ್ಮ ಉಪಕಾರವನ್ನು ಸೂಕ್ತವಾಗಿ ಸ್ಮರಿಸಲಾಗುತ್ತದೆ.

ಪಂಡಿತ : ಉಪಕಾರ ಅಂದಾಗ ನೆನಪಾಯ್ತು. ಈಗ ಬರುವ ಅಧಿಕಾರಿಗೆ ತೆಲುಗು ಪಾಠಕ್ಕೆ ನನ್ನನ್ನೇ ತಾವು ಶಿಫಾರಸ್ಸು ಮಾಡಬೇಕು.

ಜನಸಾಮಾನ್ಯ: ಸ್ವಾಮಿ ಅಗೋ.... ಅಲ್ಲಿ ಯಾವುದೋ ಕುದುರೆ ಬರ್ತಾ ಇರೊಂಗಿದೆ.

ಪಂಡಿತ : ಹೌದೆ. ದೂರ ನಡಿರಿ. ಭೂಮಿ ಪೂಜೆ.... ಭೂಮಿ ಪೂಜೆ ಆಗ್ಬೇಕು. (ಮುಂದೆ ಬರುತ್ತಾನೆ)

ಅಧಿಕಾರಿ : ವಾದ್ಯದವರು ಮುಂದೆ ಬನ್ನಿ.... ಮೊದಲಾಗಲಿ.... ಮಂಗಳ ವಾಧ್ಯ

ವಾದ್ಯಗಾರರು : ಆಗಲಿ ಸ್ವಾಮಿ. (ನಾಗಸ್ವರ ಹಾಗೂ ಹಲಗೆಗಳನ್ನು ನುಡಿಸುತ್ತಾರೆ)

ಅಧಿಕಾರಿ : ಶ್ರೀ ಬ್ರೌನ್ ಸಾಹೇಬರಿಗೆ.... ಶ್ರೀ ಬ್ರೌನ್ ಸಾಹೇಬರಿಗೆ.

ಜನರು : (ಒಕ್ಕೊರಲಿನಿಂದ) ಜಯವಾಗಲಿ.... ಜಯವಾಗಲಿ....

ಪಂಡಿತ : ಅವರ ಹೆಸರು ಏನಂದ್ರಿ..?

ಅಧಿಕಾರಿ : ಸಿ.ಪಿ. ಬ್ರೌನ್... ಅಂದ್ರೆ ಚಾರ್ಲ್ಸ್, ಪಿಲಿಫ್, ಬ್ರೌನ್ ಇವರನ್ನು ನಮ್ಮ ಕಡಪ ಜಿಲ್ಲೆಗೆ ಡೆಪ್ಯುಟಿ ಕಲೆಕ್ಟರ್ ಆಗಿ ಕಂಪೆನಿ ಸರ್ಕಾರ ನೇಮಕ ಮಾಡಿದೆ.

ಪಂಡಿತ : ಈ ಹೆಸರಿಗೆ ಫಲರಾಶಿಗಳು ದಿವ್ಯವಾಗಿವೆ.... (ಲೆಕ್ಕ ಹಾಕಿ) ದೇವಗಣ. ದೈವದ ಕೃಪೆ ಅವರ ಮೇಲೆ ನೇರವಾಗಿ ಬೀಳುವುದರಿಂದ ಅವರು ಮೆಟ್ಟುವ ನೆಲಕ್ಕೂ ಒಳ್ಳೆಯದಾಗುತ್ತದೆ..

ಜನಸಾಮಾನ್ಯ: ಸ್ವಾಮಿ ಬಂದರು. ಬಿಳಿದೊರೆ (ಎಲ್ಲ ಅತ್ತ ಓಡಿ ಹೋಗುವರು)

(ವಾದ್ಯ ಮೊಳಗುವುದು. ಜನ ಸುತ್ತುವರೆದು ಹೂವಾಲೆಗಳಿಂದ ಎದಿರುಗೊಳ್ಳುವರು)

ಅಧಿಕಾರಿ : ಸ್ವಾಮಿ ಇತ್ತ ಬನ್ನಿ.ಇವರು ಪಟ್ಟಣದ ಪಂಡಿತರು.

ಪಂಡಿತ : ಸ್ವಾಮಿ ತಮ್ಮಲ್ಲಿ ಒಂದು ಬಿನ್ನಹ. ನಾನು ಈ ಪಟ್ಟಣದಲ್ಲಿರುವ ಮಾತು ನಿಜ. ಆದರೆ ನಾನು ಈ ನಾಡಿನ ಪಂಡಿತ ಸ್ವಾಮಿ. ಛಂದಸ್ಸು, ವ್ಯಾಕರಣ, ಜ್ಯೋತಿಷ್ಯ ಶಾಸ್ತ್ರ ಅಲ್ಲದೆ ಏನೋ ಪೂರ್ವ ಜನ್ಮದ ಸುಕೃತದಿಂದ ವೇದಗಳು ಕಂಠಸ್ಥವಾಗಿವೆ.

ಬ್ರೌನ್ : ಮಹಾ ಸಂತೊಷ. ತಮ್ಮಂತಹ ಪಂಡಿತರ ಪರಿಚಯವಾಗಿದ್ದು ನನ್ನ ಸುಕೃತಿಯೆಂದೇ ಹೇಳಬೇಕು.

ಅಧಿಕಾರಿ : ಸ್ವಾಮಿ ತಾವು ಅನುಮತಿಸಿದರೆ ಪಟ್ಟಣ ಪ್ರವೇಶಕ್ಕೆ ಎಲ್ಲಾ ಸಿದ್ಧವಾಗಿದೆ.

(ವಾದ್ಯಗಾರರು ನುಡಿಸುತ್ತಾರೆ)

ಬ್ರೌನ್ : ಯಾಕೆ ಈ ಸಿದ್ಧತೆ?

ಪಂಡಿತ : ಇದು ಸಿದ್ಧತೆ ಅಲ್ಲ ಸ್ವಾಮಿ. ಇದು ಇಲ್ಲಿನ ಪದ್ಧತಿ.

ಬ್ರೌನ್ : ಓ ಪದ್ಧತಿ... ಯೂ ಮೀನ್ ಟ್ರಡಿಷನ್... ನಡೆಯಲಿ... ಗೋ ಹೆಡ್.

ಅಧಿಕಾರಿ : ವಾದ್ಯದವರು ಶುರು ಮಾಡಿ ಶುರುಮಾಡಿ.

ವಾದ್ಯದವನು : (ವಾದ್ಯ ನುಡಿಸುವುದನ್ನು ನಿಲ್ಲಿಸಿ)

ವೇಮನ ಪದಕ್ಕೆ ಎದುರು ಪದ್ಯವಿಲ್ಲ
ರಾಮಲಕ್ಷ್ಮಣರಿಗಿಂತ ರಾಜರಿಲ್ಲ
ಸೂರ್ಯಚಂದ್ರರಿಗಿಂತ ದೇವರಿಲ್ಲ
ಸತಿಪತಿಗಳಿಗಿಂತ ಮಿಗಿಲು ಸಂಗಾತಿಗಳಿಲ್ಲ
ವಿಶ್ವದಾಭಿರಾಮ... ಕೇಳೈ ವೇಮ.

ಅಂದಹಾಗೆ... ಇವೊತ್ತು ನಮ್ಮ ಪಟ್ಟಣಕ್ಕೆ ಬಂದಿರುವ ಬ್ರೌನ್ ದೊರೆಗಳು ಅಷ್ಟೈಶ್ವರ್ಯಗಳಿಂದ ಸುಖವಾಗಿರಬೇಕೆಂದು ಪಟ್ಟಣದ ಶ್ರೀಮಂತರು ಹತ್ತು ಬೆಳ್ಳಿ ನಾಣ್ಯ ಕೊಟ್ಟು ಹೊಗಳಿಕೆಯನ್ನು ಅರ್ಪಿಸಿದ್ದಾರೆ ಮಹಾಪ್ರಭು.

ಪಂಡಿತ : ಅಧಿಕಾರಿಗಳೇ ಏನು ಈ ಅಮಂಗಲ.... ಛೀ.... ಛೀ.... ಇಂತಹ ಹೊಲಸು ಮಾತು ಅವರ ಕಿವಿಗೆ ಬಿದ್ದರೆ ಉಂಟೆ.

ಅಧಿಕಾರಿ : (ವಾದ್ಯದವರನ್ನು ಉದ್ದೇಶಿಸಿ) ಪೊಗಡಿಂಪು ಬೇಡ. ಸಾಹೇಬರಿಗೆ ಬೇಸರವಾಗುವುದು.

ಬ್ರೌನ್ : ನೋ.... ನೋ.... ಈ ಪದ್ಧತಿ ಚೆನ್ನಾಗಿದೆ. ಅದನ್ನು ಮುಂದುವರೆಸಿ. ಇಂಟರೆಸ್ಟಿಗ್. ವಾಟ್ ಡು ಯು ಸೇ.

ಅಧಿಕಾರಿ : ಯಸ್ ಯಸ್ ಯುವರ್ ಹಾನರ್.

ಪಂಡಿತ : (ಪೆಚ್ಚಾಗುವನು) ನಮ್ಮ ಮಂತ್ರಗಳು ಇನ್ನೂ ಚೆನ್ನಾಗಿವೆ ಪ್ರಭು.

ವಾದ್ಯಗಾರರು : **ಸಂಕಟದ ಸಮಯದಲಿ ಅರಸಿ ನೆಂಟರ ನೋಡು**
ಭಯದ ವೇಳೆಯಲಿ ನೋಡು ಬಂಟನ ಗುಣವ
ಬಡತನದಿ ನೋಡು ಸತಿಯ ಗುಣವ
ವಿಶ್ವಾದಾಭಿರಾಮ ಕೇಳೈ ವೇಮ

ಅಂದಹಾಗೆ ಬ್ರೌನದೊರೆಯುವರಿಗೆ ಸಕಲ ಭಾಗ್ಯಗಳು ದೊರೆಯಲೆಂದು ಪಟ್ಟಣ ವರ್ತಕರು ಹತ್ತು ವರಹ ಕೊಟ್ಟು ಹೊಗಳಿಕೆಯನ್ನು ಸಮರ್ಪಿಸಿದ್ದಾರೆ ಮಹಾಪ್ರಭು.

ಬ್ರೌನ್ : ಮಿಸ್ಟರ್ ಪಂಡಿತ್. ಅವರು ಹೇಳುತ್ತಿರುವುದೇನು?

ಪಂಡಿತ : ಹೊಗಳಿಕೆ ಸ್ವಾಮಿ. ಫ್ಲಾಟಿರಿಂಗ್...

ಬ್ರೌನ್ : ನೋ.... ನೋ.... ವಾದ್ಯಗಾರರು ಹೇಳುತ್ತಿರುವುದು. ಅದು ಕವಿತೆ ಅಲ್ವೆ?

ಪಂಡಿತ : ಬಿನ್ನಹ ಏನೆಂದರೆ ಸ್ವಾಮಿ ಅದು ಕವಿತೆಯಲ್ಲ. ಹಾದಿ ಬೀದಿಯ ಮಾತು. ಕವಿತೆ ಎಂದರೆ (ತೆಲುಗಿನ ತಿಕ್ಕನ ಮಹಾಕಾವ್ಯದಿಂದ ಉದಾಹರಿಸುತ್ತಾನೆ)

ಆಂದ್ರಾವಳಿಮೋದಮುಂ ಬೊರೆಯುನಟ್ಲುಗಾ
ಸಾತ್ಯವತೇಯ ಸಂಸ್ಕೃತಿ ಶ್ರೀವಿಭವಾಸ್ಪದಂಬೈನಾ
ಚಿತ್ತಮುತೋಡ ಮಹಾ ಕವಿತ್ವ ದೀಕ್ಷಾವಿಧಿ ಪದ್ಯಮುಲನ್
ಗದ್ಯಮುಲನ್ ರಚಿಯಿಂಚಿದನ್ ಕೃತುಲ್

ಅಧಿಕಾರಿ : ಸ್ವಾಮಿ ಇವರು ಪ್ರಚಂಡ ಪಂಡಿತರು. ತೆಲುಗು ಭಾಷೆಯನ್ನು ಅರೆದು ಕುಡಿದುಬಿಟ್ಟಿದ್ದಾರೆ ಸ್ವಾಮಿ. ವೇದ ಪಾರಂಗತರು.

ಬ್ರೌನ್ : ಗೊತ್ತಾಗುತ್ತಿದೆ. ಅದಕ್ಕೆ ಅವರಿಗೆ ವೇದ ಬಿಟ್ಟು ಬೇರೆ ಗೊತ್ತಾಗುವುದಿಲ್ಲ ಅನ್ನಿಸುತ್ತೆ ಅಲ್ವೆ?

ಪಂಡಿತರು : ಬಿನ್ನಹ ಏನೆಂದರೆ ಸ್ವಾಮಿ. ತಮಗೆ ತೆಲುಗಿನ ಮಹಾಕಾವ್ಯಗಳನ್ನು ಪರಿಚಯಿಸುವುದಿದ್ದರೆ ಅದು ನನ್ನ ಭಾಗ್ಯ ಎಂದು ಪರಿಗಣಿಸುತ್ತೇನೆ.

ಬ್ರೌನ್ : (ಅಧಿಕಾರಿಯನ್ನು ಉದ್ದೇಶಿಸಿ) ಈ ವಾದ್ಯಗಾರರು ಹೇಳಿದ್ದು ಕವಿತೆಯಂತೆ ಕೇಳಿಸುತ್ತೆ ನಿಮ್ಮಲ್ಲಿ ವಾದ್ಯಗಾರರು ಕೂಡ ಕವಿಗಳೇ ಏನು?

ಅಧಿಕಾರಿ : ಇಲ್ಲ ಸ್ವಾಮಿ.ಇವರು ಕವಿಗಳಲ್ಲ. ಅವರು 'ವೇಮನ' ಪದ್ಯಗಳನ್ನು ಕಂಠಸ್ಥವಾಗಿ ಹೇಳುತ್ತಿದ್ದಾರೆ.

ಬ್ರೌನ್ : ವೇಮನ... ನನಗೆ ಈತನ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿದೆ. ನಾಳೆಗೆ ನನ್ನ ಕೋರ್ಟಿಗೆ ಪಂಡಿತರು ಬರಲಿ. ಅಂದಹಾಗೆ ಆ ವಾದ್ಯಗಾರರಿಗೆ ನನ್ನ ಬಹುಮತಿಯಾಗಿ ಈ ನಾಣ್ಯಗಳನ್ನು ನೀಡಿ.

ಅಧಿಕಾರಿ : ಆಗಲಿ ಮಹಾಸ್ವಾಮಿ. ಕರೆ ಕಳಿಸುತ್ತೇನೆ.

ವಾದ್ಯಗಾರರು : ಬ್ರೌನ್ ದೊರೆಗಳಿಗೆ ಜಯವಾಗಲಿ

ಚಂಪದಗಿನ ಶತ್ರುವು ತನ ಚೇತ
ಚಿಕ್ಕಿನ ಕೀಡು ಚೇಯರಾದು
ಪಾಸಗ ಮೇಲುಜೇಸಿ ಪೊಮ್ಮಂಟೆ ಚಾಲು ॥ವಿ॥
ಕೊಲ್ಲಬಯಸುವ ವೈರಿ ಕೈಗೆ ಸಿಕ್ಕರೂ
ಕೇಡು ಮಾಡಲುಬೇಡ
ಪ್ರೀತಿಯಿಂದ ಒಳಿತು ಮಾಡಿ ಹೋಗೆನ್ನು ಅಷ್ಟೆ ಸಾಕು
ವಿಶ್ವದಾಬಿರಾಮ ಕೇಳ್ಳೈ ವೇಮ
(ಎಂದು ಮತ್ತೊಮ್ಮೆ ಹೊಗಳಿ ವೇಮನನ ಪದ್ಯ ಹೇಳಿತ್ತಾರೆ)

ಬ್ರೌನ್ : ವಿದ್ವತ್ ಇಲ್ಲದೆಯೇ ಜನರ ನಾಲಿಗೆ ಮೇಲೆ ಇರೋದು ಎಂಥ ಅದ್ಭುತ. ಆತ ಜೀನಿಯಸ್ ಇರಬೇಕು. ಅಂದಹಾಗೆ ಇವೊತ್ತು ನಾನು ಪ್ರಯಾಣದಿಂದ ಬಳಲಿದ್ದೇನೆ. ವಿಶ್ರಮಿಸುತ್ತೇನೆ. ನಾಳೆ ನಾವು ಈ ವಿಷಯವಾಗಿ ಚರ್ಚಿಸೋಣ.

ಅಧಿಕಾರಿ : ಸ್ವಾಮಿ ತಮ್ಮ ವಸತಿ ಸಿದ್ಧವಾಗಿದೆ. ನಾನು ಇಲ್ಲಿಯೇ ಹೊರಗೆ ತಮ್ಮ ಸೇವೆಗಾಗಿ ಸಿದ್ಧವಿರುತ್ತೇನೆ. (ಬ್ರೌನ್ ಒಳ ಹೋಗುತ್ತಾನೆ)

ಬ್ರೌನ್ : ಥ್ಯಾಂಕ್ಸ್. (ಎಂದು ಬಂದವರೆ ಪಂಡಿತರ ಕೈ ಹಿಡಿದು ಕುಲುಕುತ್ತಾರೆ) ವಿವಿಲ್ ಮೀಟ್ ಟುಮಾರೋ.

ಪಂಡಿತ : ಅಯ್ಯಯ್ಯೋ.... ಮಡಿ ಕೆಡ್ತು.... ಮತ್ತೆ ಸ್ನಾನ. ಈಗಲೇ ಹೊತ್ತು ಮೀರಿ ಹೊಟ್ಟೆ ತಾಳ ಹಾಕ್ತಿದೆ. ಇಂತಹ ಸಮಯದಲ್ಲಿ ಈ ಬಿಳಿ ಹಂದಿಯು ನನ್ನ ಸೋಕಿತಲ್ಲ.

ಅಧಿಕಾರಿ : ಪಂಡಿತರೆ ಏನಾಯ್ತು. ಸಾಹೇಬರ ಕಣ್ಣಿಗೆ ಬಿದ್ದಿರ್ಲಿಲ್ಲ.

ಪಂಡಿತ : ಎಲ್ಲಾ ಸಮಯ ನೋಡಿ. ಬ್ರೌನ್ ಸಾಹೇಬರಿಗೆ ಹೇಳಿ 'ವೇಮನ' ವೇಮನ ಅಂತ ಆ ಹುಚ್ಚನ ಹಿಂದೆ ಬಿದ್ದಿದ್ದಾರೆ. ನೀವು ವಾದ್ಯಗಾರರಿಗೆ ಮೊದಲೇ ಹೇಳಬೇಕಿತ್ತು.

ಅಧಿಕಾರಿ : ಏನಾಯ್ತು. ಬ್ರೌನ್ ಅವರಿಗೆ ಅದರಿಂದ ಸಂತೋಷವಾಯ್ತಲ್ಲ.

ಪಂಡಿತ : ಬ್ರೌನ್ ಅವರಿಗೇನೊ ಸಂತೋಷವಾಯ್ತು.. ಆದರೆ ದೈವಕ್ಕೆ.... ಆ ಪಾಪಿ ವೇಮನನ ಹೆಸರು ಹೇಳಿದರೆ ದೈವಕ್ಕೆ ಕೋಪ ಬರುವುದಿಲ್ಲವೆ? ಬ್ರೌನ್ ರಾಹು ಕಾಲದಲ್ಲಿ ಈ ತೆಲುಗು ನೆಲದಲ್ಲಿ ಕಾಲಿಟ್ಟ ಪರಿಣಾಮ ಇದು, ನಾನು ಹೇಳಲಿಲ್ಲವೆ? ಅಂದಹಾಗೆ ನಾಳೆ ಯಾರು ಯಾರನ್ನು ಕರೆಯುತ್ತೀರಿ.

ಅಧಿಕಾರಿ : ತಮಗೆ ಆಹ್ವಾನ ಸಾಹೇಬರೇ ಕೊಟ್ಟಿದ್ದಾರಲ್ಲವೆ?

ಪಂಡಿತ : ಸುಮ್ಮನೆ ಕೇಳಿದೆ. ನಾನು ಹೇಳಿದ್ದು ನೆನಪಿನಲ್ಲಿರಲಿ.

ತಪ್ಪುಲೆನ್ನುವಾರು. ತಂಡೋಪ ತಂಡಮುಲು
ಊರ್ವಿಜನಲಕೆಲ್ಲಾ ಉಂಡು ತಪ್ಪು
ತಪ್ಪುಲೆನ್ನುವಾರು ತಮ ತಪ್ಪುಲೆರಗರು ॥ ವಿ॥
ತಪ್ಪೆನ್ನುವವರು ದಂಡಿ ದಂಡಿ
ಜಗದ ಜನಕ್ಕೆಲ್ಲಾ ಉಂಟು ತಪ್ಪು
ತಪ್ಪೆನ್ನುವವರು ತಮ್ಮ ತಪ್ಪನರಿಯರು
ವಿಶ್ವದಾಭಿರಾಮ ವಿನುರ ವೇಮ

ದೃಶ್ಯ – ೨

[ಬ್ರೌನ್ ದೊರೆಯ ಕೋರ್ಟ್‌ನಲ್ಲಿ ಪಂಡಿತರು, ವಿದ್ವಾಂಸರು ಮತ್ತು ಅಧಿಕಾರಿವರ್ಗ ಸೇರಿದ್ದಾರೆ]

ಪಂಡಿತ : ಅಲ್ಲ ಸ್ವಾಮಿ ಈ ಬ್ರೌನ್ ಸಾಹೇಬರಿಗೇಕೆ ಇಂಥ ಹುಚ್ಚು ಕಾಣಿಸಿಕೊಂಡಿತು. ಹೋಗಿ ಹೋಗಿ ಅಂಥಾ ಪಾಪಿಷ್ಟನ ಹುಚ್ಚು ಮಾತಿಗೆ ಮರುಳಾಗಿದ್ದಾರಲ್ಲ.

ಇ.ಪಂ. : ಈ ಬಿಳಿಯರಿಗೆ ಒಳ್ಳೆಯದು ಮತ್ತು ಕೆಟ್ಟದರ ನಡುವೆ ವ್ಯತ್ಯಾಸ ಗೊತ್ತಾಗುವುದಿಲ್ಲ.

ವಿದ್ವಾಂಸ : ಅಂದ ಹಾಗೆ ನಾವು ಪೋತನ, ತಿಕ್ಕನ, ನನ್ನಯ್ಯನ ಕಾವ್ಯ ಭಾಗಗಳನ್ನು ಹಾಡಿ ತೋರಿಸಿ 'ವೇಮನ' ಮಾತು ಮರೆತು ಹೋಗುವ ಹಾಗೆ ಮಾಡಿದರೆ ಆಯಿತು. ಏನಂತೀರಿ?

ಪಂಡಿತ : ಅಲ್ಲ ಆ ವ್ಯಭಿಚಾರಿಯ ಹೆಸರನ್ನು ನಮ್ಮಂಥವರ ನಾಲಿಗೆಯಲ್ಲಿ ನುಡಿಯುವಂತಾಯಿತೆ ಅಂತ. ಛೇ.

ಇ.ಪಂ. : ಕಾಲಧರ್ಮ... ಕಾಲಧರ್ಮ ಏನು ಮಾಡಕಾಗುತ್ತೆ? ಯಾವಾಗಲೂ ಅಧರ್ಮಕ್ಕೆ ಬಲ ಜಾಸ್ತಿ. ರಾಕ್ಷಸರು ದೇವತೆಗಳಿಗಿಂತ ಶಕ್ತಿವಂತರಲ್ಲವೇ.

ವಿದ್ವಾಂಸ : ನೋಡಿ ಭಯವೇತಕೆ? ಯಾವ ಧರ್ಮಗ್ರಂಥದಲ್ಲಿ ಅಥವಾ ಯಾವ ಮಹಾಕಾವ್ಯದಲ್ಲಿ ಕೊನೆಗೆ ರಾಕ್ಷಸರಿಗೆ ಜಯವಾಗಿದೆ ಹೇಳಿ. ಅಂತಿಮ ವಿಜಯವೇನಿದ್ದರೂ.

ಪಂಡಿತ : ದೈವ ಬಲವಿದ್ದವರದು.

ಇ.ಪಂ : ನಾವು ನಮ್ಮ ಸಾತ್ವಿಕ ನಡೆಯಿಂದಲೇ ದೈವಗಳಿಗೆ ಎಂದೂ ಬೇಕಾದವರಾಗಿದ್ದೇವೆ.

ಅಧಿಕಾರಿ : ಈಗ ಬಿಳಿಯ ದೊರೆಗೂ ಬೇಕಾದವರು ಆಗಿ. ನಿಮ್ಮ ಭಾಗ್ಯ ಕುಲಾಯಿಸುವುದು. ಅವರು ಮನಸ್ಸು ಮಾಡಿದರೆ ನಿಮ್ಮ ಪ್ರತಿಯೊಬ್ಬರಿಗೆ ನೂರು ಎಕರೆ ಭೂಮಿಯ ಒಡೆತನ ಸಿಕ್ಕೀತು.

(ಅಷ್ಟರಲ್ಲಿ ಒಬ್ಬ ಸೇವಕ ಒಳಬಂದು ಬ್ರೌನ್ ದೊರೆ ಬರುತ್ತಿರುವುದಾಗಿ ಹೇಳುತ್ತಾನೆ.)

ಬ್ರೌನ್ : ಓ ನಿಮ್ಮನ್ನು ತುಂಬಾಹೊತ್ತು ಕಾಯಿಸಿದ್ದರೆ ಕ್ಷಮಿಸಿ.

ಪಂಡಿತ : ಹಾಗೇನಿಲ್ಲ. ನಿಮ್ಮನ್ನು ಭೇಟಿಯಾಗಿದ್ದು ನಮಗೆ ಸಂತೋಷ. (ಕುಳಿತುಕೊಳ್ಳಿ)

ಬ್ರೌನ್ : ನೋಡಿ, ನಿನ್ನೆ ಆ ವಾದ್ಯಗಾರರು ಹೊಗಳಿದಾಗಿನಿಂದಲೂ ಪಂಡಿತರು ತೆಗಳಿದಾಗಿನಿಂದಲೂ ನನ್ನಲ್ಲಿ ಆ ವೇಮನ ಬಗೆಗೆ ಕುತೂಹಲ ಜಾಸ್ತಿ ಆಗುತ್ತಲೇ ಇದೆ. ಯಾರು ವೇಮನ?

ಪಂ.1 : ಮಹಾಸ್ವಾಮಿ... ಅವನ ಕುರಿತು ನಿಮಗೆ ಗೊತ್ತಿಲ್ಲದಿರುವುದರಿಂದಲೇ ಆತನ ಹೆಸರನ್ನು ನೀವು ಉಚ್ಚರಿಸುತ್ತಿದ್ದೀರಿ.

ಪಂಡಿತ : ಆತ ನೀವು ತಿಳಿದಿರುವ ಹಾಗೆ ಕವಿಯಲ್ಲ. ಹೆಚ್ಚೆಂದರೆ ಆತ ಹುಚ್ಚ.

ಬ್ರೌನ್ : ಯು ಆರ್ ರೈಟ್ ಲೋಕದ ಹುಚ್ಚನ್ನು ಕುರಿತು ಆತ ಹೇಳುತ್ತಿದ್ದಾನೆ ಅಂದ ಮೇಲೆ ಆತ ಹುಚ್ಚನಿರಲೇಬೇಕು.

ಪಂಡಿತ : ತಾವು ಕ್ಷಮಿಸಬೇಕು. ತೆಲುಗುಭಾಷೆ–ಸಂಸ್ಕೃತಿಯ ಮಹೋನ್ನತ ವಿಷಯಗಳನ್ನು ತಿಳಿಸಿಕೊಟ್ಟ ಮಹಾನುಭಾವರ ಮಹಾಕಾವ್ಯಗಳನ್ನು ತಂದಿದ್ದೇವೆ. ತಾವು ಅನುಮತಿಕೊಟ್ಟರೆ.... ಅವುಗಳನ್ನು ನಾವು....

ಬ್ರೌನ್ : ನೋಡಿ ನನಗೆ ವೇಮನನ ಬಗ್ಗೆ ಮಾಹಿತಿ ಬೇಕು. ನಾನು ಗಮನಿಸಿದ ಹಾಗೆ ನಿಮಗೆ ಆತನ ಬಗ್ಗೆ ಯಾಕಿಂತಹ ಅಸಹನೆ?

ಅಧಿಕಾರಿ : ಸ್ವಾಮಿ ಆತ ಶೂದ್ರ ಜಾತಿಗೆ ಸೇರಿದವನು.

ಬ್ರೌನ್ : ಜಾತಿ ನಿಮ್ಮ ತಕರಾರೇನು?

ಪಂಡಿತ : ನಮ್ಮದಲ್ಲ ದೇವರದ್ದು, ಧರ್ಮದ್ದು. ಕೈನ ಐದು ಬೆರಳು ಒಂದೇ ಸಮವಿಲ್ಲ.

ಬ್ರೌನ್ : ಅಂದಹಾಗೆ ವೇಮನ ಯಾರು? ಅವನು ಹೀಗೆ ಜನಸಾಮಾನ್ಯರನ್ನು

ಪ್ರಭಾವಿಸಿರುವುದು ಅಚ್ಚರಿಯಲ್ಲವೆ ಪಂಡಿತರೆ? (ಅಧಿಕಾರಿಯ ಮುಖ ನೋಡುತ್ತಾನೆ)

ಅಧಿಕಾರಿ : ಸ್ವಾಮಿ ಕ್ಷಮಿಸಬೇಕು. ಜನ ಮಾತ್ರ ಮಾತುಮಾತಿಗೂ ವೇಮನನ ಪದ್ಯವೊಂದನ್ನು ಉದಾಹರಿಸದೆ ಮಾತನಾಡುವುದೇ ಇಲ್ಲ. ಇದು ಮಾತ್ರ ಸತ್ಯ.

ಪಂಡಿತ : ಸ್ವಾಮಿ.... ನಮಗೆ ಗೊತ್ತಿರುವುದು ಆತನೊಬ್ಬ ವ್ಯಭಿಚಾರಿ.

ಪಂ.1 : ಆತನೊಬ್ಬ ಅನಾಚಾರಿ.

ಪಂಡಿತ : ಅಷ್ಟೇ ಅಲ್ಲ ಅನಾಗರಿಕ.

ಬ್ರೌನ್ : ನಿಮ್ಮ ಆಪಾದನೆಗಳನ್ನು ನೋಡಿದರೆ ಆತ ಬದುಕಿದ್ದರೆ ಮರಣ ದಂಡನೆಗೆ ಗುರಿಯಾಗುತ್ತಿದ್ದ ಅಲ್ವೇ?

ಪಂಡಿತ : ಹೌದು ಸ್ವಾಮಿ ಅದಕ್ಕಿಂತ ಘೋರ ಶಿಕ್ಷೆಗೂ ಆತ ಅರ್ಹನಾಗಿಯೇ ಇರುತ್ತಿದ್ದ.

ಪಂ.1 : ಅಂತಹವನನ್ನು ನೀವು ಯುರೋಪ ದೇಶದ ಚರಿತ್ರೆಯಲ್ಲಿ ಎಲ್ಲೂ ನೋಡಲೂ, ಕೇಳಲೂ ಸಾಧ್ಯವಿಲ್ಲ.

ಬ್ರೌನ್ : ನೀವು ಏನೇ ಹೇಳಿ ಈ ಪಾಪಿಗಳ ಬದುಕು ಬಹಳ ಆಸಕ್ತಿಯನ್ನು ಹುಟ್ಟಿಸುತ್ತದೆ. ನಾನು ಧರ್ಮಶಾಸ್ತ್ರಗಳನ್ನು ಕಷ್ಟಪಟ್ಟು, ಇಂಥವರ ಕಥೆಗಳನ್ನು ಇಷ್ಟಪಟ್ಟು ಓದಿದ್ದೇನೆ. ನಿಮ್ಮ ಪ್ರಕಾರ ನಾನೂ ಕೂಡ ಪಾಪಿಯೇ ಇರಬೇಕಲ್ಲ?

ಪಂಡಿತ : ಛೇ.... ಛೇ.... ನೀವು ದಂಡಾಧಿಕಾರಿಗಳು. ಶಿಕ್ಷೆ ನೀಡುವ ಅಧಿಕಾರವನ್ನು ದೈವ ನಿಮಗೆ ನೀಡಿದೆ. ಆದ್ದರಿಂದ ನೀವು ಪುಣ್ಯವಂತರು.

ಬ್ರೌನ್ : ತಾವು ಅನ್ಯಥಾ ಭಾವಿಸದಿದ್ದರೆ ನನಗೆ ವೇಮನ ವಿಷಯದಲ್ಲಿ ಉಂಟಾಗಿರೋ ಕುತೂಹಲವನ್ನು ನೀವು ಅಳಿಸಲು ನಡೆಸಿರೋ ಈ ಪ್ರಯತ್ನವನ್ನು ಕೈಬಿಡಬೇಕೆಂದು ಪ್ರಾರ್ಥಿಸುತ್ತೇನೆ. ಯು ನೋ ಒನ್ ಥಿಂಗ್, ನೋಡಿ ಈ ಪುಸ್ತಕ. ಎ.ದುಬಾಯ್ ಬರೆದಿರೋ 'ಹಿಂದೂ ಕಸ್ಟಮ್ಸ್, ಮ್ಯಾನರ್ಸ್ ಮತ್ತು ರಿಚ್ಯುವಲ್ಸ್' ಈತ ಫ್ರೆಂಚ್ ವಿದ್ವಾಂಸ. ಆಗಲೇ ವೇಮನನ ಕುರಿತು ಹೇಳಿದ್ದಾನೆ. ಯುರೋಪಿನಲ್ಲಿ ಫ್ರೆಂಚರೇ ನಮಗಿಂತಲೂ ಬೇರೆ ಎಲ್ಲರಿಗಿಂತಲೂ

ಬುದ್ಧಿವಂತರು. ಯಾಕೆ ಹೇಳಿ! ನಾವು ಕೂಡ ನಿಮ್ಮಂತೆ ಪಾಪಿಗಳ ವಿಚಾರಣೆಯಲ್ಲಿ ಕಾಲ ವ್ಯರ್ಥ ಮಾಡ್ತಾ ಇರ್ತೀವಿ. ಆದರೆ ಆ ಫ್ರೆಂಚರು ಪಾಪಿಗಳನ್ನು ಬಿಟ್ಟು ಪಾಪವನ್ನು ಹುಡುಕಿ ಹೋಗ್ತಾರೆ. ಆದ್ದರಿಂದಲೇ ಜ್ಞಾನದ ವಿಷಯದಲ್ಲಿ ತತ್ವಜ್ಞಾನದಲ್ಲಿ ಅವರು ನಮಗಿಂತ ಒಂದು ಹೆಜ್ಜೆ ಯಾವಾಗಲೂ ಮುಂದೆ ಇರುತ್ತಾರೆ. ನನಗೆ ಈ ಹುಚ್ಚನ ಅರ್ಥಾತ್ ಪಾಪಿಯ ಬಗೆಗಿನ ಮಾಹಿತಿ ಬೇಕು.

ಅಧಿಕಾರಿ : ನೋಡಿ ಸಾಹೇಬರಿಗೆ ವೇಮನ ಜೀವನ, ಆತನ ತತ್ವಬೋಧನೆ ಮುಂತಾದ ಸಂಗತಿಗಳು ಬೇಕಾಗಿವೆ. ಆ ಮಾಹಿತಿಗಳು ನಿಮ್ಮಲ್ಲಿ ಇದ್ದರೆ ನೀಡಿ. ಇಲ್ಲದೆ ಹೋದರೆ ಅಂತವರನ್ನು ನಾವು ನಮ್ಮ ಪೊಲೀಸರ ಮೂಲಕ ಹುಡುಕಿಸುತ್ತೇವೆ.

ಪಂಡಿತ : ಸ್ವಾಮಿ ನಮ್ಮ ಉದ್ಧಟತನವನ್ನು ಕ್ಷಮಿಸಬೇಕು. ವೇಮನ ಕವಿಯಲ್ಲ; ಸಂತನೂ ಅಲ್ಲ.

ಪಂ.1 : ನಿಮಗೊಂದು ವಿಷಯ ಗೊತ್ತೆ? ಅವನು ಮೈಮೇಲೆ ಒಂದೆಳೆ ನೂಲು ಇಲ್ಲದ ನಿರ್ಲಜ್ಜ.

ಪಂಡಿತ : ಊರೂರು ತಿರುಗುತ್ತಾ ತಿರುಪೆ ಎತ್ತುತ್ತ ಪಾಳು ಗೋಡೆಗಳಲ್ಲಿ ವಾಸಮಾಡ್ತಾ ಬಾವಲಿ ತರ ತಲೆಕಿಂದಲಾಗಿ ಬದುಕಿದವನು ಅಂತ ನಮ್ಮ ಸೈನಿಕರು ಹೇಳುತ್ತಿದ್ದರು. ಹಾಗೂ.....

ಪಂ.1 : ಈ ಹುಚ್ಚ ಶೂದ್ರ ಜನ ಅವನು ಹೇಳಿದ್ದು ಅಂತ ಹೇಳುವ ಮಾತು. ಅದೇನೋ 'ವಿಶ್ವಾದಾಭಿರಾಮ... ವಿನುರ ವೇಮ' ಅನ್ನೋ ಜಾತಿಯಿಲ್ಲದ ಪದ್ಯಗಳನ್ನು ಹಾಡುತ್ತಿದ್ದರು. ನಾನು ದೂರದಿಂದಲೇ ಕೇಳಿದ್ದು.

ಬ್ರೌನ್ : ತುಂಬಾ ಧನ್ಯವಾದಗಳು ಪಂಡಿತರೆ. ವೇಮನ ಕುರಿತಾದ ನಿಮ್ಮ ತಿಳುವಳಿಕೆ ಅದ್ಭುತ. ಅಧಿಕಾರಿಗಳೇ, ಈ ಪಂಡಿತರಿಗೆ ಸೂಕ್ತ ಬಹುಮಾನಗಳನ್ನು ಕೊಟ್ಟು ಕಳುಹಿಸಿರಿ.

ಪಂಡಿತ : ಮಹಾಸ್ವಾಮಿ ತಾವು ರಾಮಾಯಣ-ಮಹಾಭಾರತವೇನಾದರೂ ಅಭ್ಯಾಸ ಮಾಡುವವರೇನೋ ಎಂದು ನಾವು ಕಾವ್ಯಗಳನ್ನು ಜೊತೆಗೆ ತಂದಿದ್ದೆವು.

ಬ್ರೌನ್ : ಪಂಡಿತರೆ ತಾವೇಕೆ ಇಂತಹ ಅಪರಾಧ ಮಾಡಿದಿರಿ?

ಪಂಡಿತರು : ನಮ್ಮಿಂದ ಅಪರಾಧವೇ?

ಬ್ರೌನ್ : ನೀವು ಪಾಪಿಗಳು ಬರೆದಿದ್ದು ಮುಟ್ಟುವುದಿಲ್ಲ ಅಲ್ವೆ?

ಪಂಡಿತರು : ನಿಶ್ಚಯವಾಗಿಯೂ ಪ್ರಭು.

ಬ್ರೌನ್ : ಆ ರಾಮಾಯಣ ಬರೆದ ವಾಲ್ಮೀಕಿಯೂ ಕೂಡ ವೇಮನ ತರಹದ ಪಾಪಿಜನ್ಯನು ತಾನೆ?

ಪಂಡಿತ : ಅದು... ಪ್ರಭು... (ಬೆಕ್ಕಸ ಬೆರಗಾಗುತ್ತಾರೆ)

ಪಂಡಿತರು : (ತಮ್ಮೊಳಗೆ) ಇವನು ನಾವು ತಿಳಿದುಕೊಂಡಷ್ಟು ಅಮಾಯಕನಲ್ಲ. ಬಲೇ ಘಾಟಿ ಇದ್ದಂಗವನೆ.

ಬ್ರೌನ್ : ಏನಂದಿರಿ?

ಪಂ.1 : ಸ್ವಾಮಿ ತಾವು ಬಲು ಚೂಟಿ. ಚೂಟಿ ಅಂದರೆ ಇಂಟಲಿಜೆಂಟ್.

ಪಂಡಿತ : ತುಂಬಾ ಸೆನ್ಸಿಟಿವ್.

ಅಧಿಕಾರಿ : ನಮ್ಮ ಭಾರತದೇಶದ ಬಗ್ಗೆ ಸಾಕಷ್ಟು ತಿಳಿದುಕೊಂಡೇ ಬಂದಿದ್ದೀರಿ ತಾವು.

ಬ್ರೌನ್ : ನಾನು ಪಾಸು ಮಾಡಿರೋ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗಾಗಿ ಓದುವಾಗ ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದೇನೆ.

ಪಂಡಿತ : ತಮ್ಮಲ್ಲಿ ಒಂದು ಬಿನ್ನಹ. ನಮಗೊಂದು ಅವಕಾಶ ಕೊಟ್ಟರೆ ನಮ್ಮ ಭಾಷೆಯಲ್ಲಿರುವ ಜ್ಞಾನದ ಆಳ ಅಗಲಗಳನ್ನು ತೋರಿಸಿಕೊಡುವೆವು.

ಬ್ರೌನ್ : ಅಧಿಕಾರಿಗಳೆ ಇಂದೇ ವೇಮನನ ಬಗ್ಗೆ, ಆತನ ಜೀವನ ವೃತ್ತಾಂತ ಗೊತ್ತಿರುವ ಜನಪದ ಗಾಯಕರನ್ನು ಕರೆಸಿ. ಪಾಪಿಯ ಕತೆಗಳು ಪಾಪ ಪಂಡಿತರಿಗೇನು ಗೊತ್ತಿರುತ್ತದೆ.

ಸೇವಕ : ಪ್ರಭು ತಮ್ಮನ್ನು ಭೇಟಿ ಮಾಡಲು ರೈತರು ಬಂದಿದ್ದಾರೆ.

ಬ್ರೌನ್ : ಒಳಗೆ ಕಳುಹಿಸು.

ರೈತ : (ನಮಸ್ಕರಿಸುತ್ತಾ) ಅಡ್ಡಬಿದ್ದೆ ಪ್ರಭು.

ಬ್ರೌನ್ : ಯಾರು ನೀವು? ಯಾವ ಕಾರ್ಯದ ಮೇಲೆ ಬಂದಿರಿ?

ರೈತ : ಸರ್ಕಾರಕ್ಕೆ ಮನವಿ ಸಲ್ಲಿಸಲು ಬಂದಿದ್ದೀವಿ ಪ್ರಭು.

ಅಧಿಕಾರಿ : ಅದಕ್ಕೆ ನೀವು ತಾಲ್ಲೂಕು ಕಚೇರಿಗೆ ಹೋಗಬೇಕು. ನೇರವಾಗಿ ಇಲ್ಲಿಗೆ ಬರುವಂತಿಲ್ಲ.

ಬ್ರೌನ್ : ಇರಲಿ ಹೇಳಿ. ಏನು ನಿಮ್ಮ ತೊಂದರೆ.

ರೈತ : ಈ ಸರ್ತಿ ಒಳ್ಳೆ ಮಳೆಯಾಗಿ ಬೆಳೆ ಬಂದಿದೆ ಪ್ರಭು. ಆದರೆ ಕಾಡು ಮೃಗಗಳ ಹಾವಳಿಯಿಂದ ನಷ್ಟವಾಗ್ತಾ ಇದೆ.

ಬ್ರೌನ್ : ಕ್ರೂರಮೃಗಗಳನ್ನು ಬೇಟೆಯಾಡಬೇಕು. ಈ ಬೇಟೆಯಾಡೋದಿಕ್ಕೆ ಧರ್ಮಶಾಸ್ತ್ರಗಳು ಅಡ್ಡ ಬರುವುದಿಲ್ಲ ತಾನೆ? ಪಂಡಿತರೆ?

ಪಂಡಿತ : ಹ್ಹಿಹ್ಹಿಹ್ಹಿ... ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ಪ್ರಭುಗಳ ಹೊಣೆ ಪ್ರಭು...

ಬ್ರೌನ್ : ವೇಮನ ಹೆಸರು ಕೇಳಿದ್ದೀರಾ?

ರೈತ : ಸ್ವಾಮಿ ಅವರು ನಮ್ಮ ಪಾಲಿನ ದೇವರು. ಅವರ ಪದಗಳನ್ನ ಕೇಳಿಕೊಂಡು ಬೆಳದಿದ್ದೀವಿ. ಹೇಳುಕೊಂಡು ಬದುಕಿದ್ದೀವಿ ಸ್ವಾಮಿ.

ಬ್ರೌನ್ : ಒಬ್ಬರಿಗೆ ದೇವರು ಮತ್ತೊಬ್ಬರಿಗೆ ದುಷ್ಟರು ವೆರಿ ಇಂಟರೆಸ್ಟಿಂಗ್ ಏನು ಪಂಡಿತರೆ.

ಪಂಡಿತರು : ಹ್ಹಿ ಹ್ಹಿ ಹ್ಹಿ... ಅದು ಪ್ರಭೂ..

ಬ್ರೌನ್ : ನಿಮ್ಮ ಊರಿನಲ್ಲಿ ವೇಮನ ಕತೆ ಹೇಳುವ ಪಂಡಿತರು ಇದ್ದಾರೆಯೇ?

ರೈತ : ಪಂಡಿತರಿಲ್ಲ ಸ್ವಾಮಿ. ಜಾನಪದ ಗಾಯಕರು ಅವರೆ. ಅವರೆ ವೇಮನ ಕತೆ ಹೇಳುವುದು.

ಬ್ರೌನ್ : ಕಳುಹಿಸಿಕೊಡಿ ಅವರ್ನ. ನಾನು ವೇಮನನ ಕತೆ ಕೇಳಬೇಕು. ಹೂಂ... ನಿಮಗೆ ತೊಂದರೆ ಕೊಡುತ್ತಿರುವ ಆ ದುಷ್ಟ ಮೃಗಗಳನ್ನು ನಾನು ವಿಚಾರಿಸಿಕೊಳ್ಳುತ್ತೇನೆ. ನೀವಿನ್ನು ನಡೀರಿ. ಹೇಳಿದ್ದು ನೆನಪಿರಲಿ.

(ಹೋಗುವರು– ತೆರೆ ಬೀಳುವುದು)

●

ದೃಶ್ಯ – ೩

[ವೇದಿಕೆಯ ಒಂದು ಭಾಗದಲ್ಲಿ ಬುರ್ರಕತೆಯ ಕಲಾವಿದರು ತಮ್ಮ ವೇಷಗಳನ್ನು ತೊಡುತ್ತಿರುವಂತೆ ದೃಶ್ಯ ಆರಂಭವಾಗುತ್ತದೆ. ಬುರ್ರಕಥಾ ಪ್ರಾರ್ಥನಾ ಗೀತೆಯನ್ನು ಹಾಡುವಾಗ ಬ್ರೌನ್ ಮತ್ತು ಇತರರ ಪ್ರವೇಶವಾಗುತ್ತದೆ.]

ಕಲಾವಿದರು : ಬಿಳಿ ದೊರೆಗಳಿಗೆ ದೀರ್ಘದಂಡ ನಮಸ್ಕಾರಗಳು ಪ್ರಭು.

ಬ್ರೌನ್ : ನಮಸ್ಕಾರ.... ನೀವು?

ಕಲಾವಿದ : ಸ್ವಾಮಿ ವಂಶಪಾರಂಪರಿಕವಾಗಿ ಕತೆಯನ್ನು ಹೇಳಿಕೊಂಡು ಬದುಕೋ ಜನ ಸ್ವಾಮಿ ನಾವು. ವರ್ಷದಲ್ಲಿ ಆರು ತಿಂಗಳು ಊರೂರು ತಿರುಗುತ್ತಾನು ಇರ್ತೀವಿ.

ಬ್ರೌನ್ : ವೇಮನನ ಕತೆಯನ್ನು ನೀವು ಯಾರಿಂದ ಕಲಿತಿರಿ.

ಕಲಾವಿದ : ಸ್ವಾಮಿ ನಾನು ನಮ್ಮಪ್ಪನಿಂದ ಅವನು ಅವನಪ್ಪನಿಂದ.

ಬ್ರೌನ್ : ಇವರು?

ಕಲಾವಿದ : ಸ್ವಾಮಿ ಇವಳು ನನ್ನ ಹೆಂಡ್ತಿ, ಅವನು ನನ್ನ ಮಗ ಚಿಕ್ಕವನು, ಆಕೆ ಅವನ ಹೆಂಡ್ತಿ.

ಬ್ರೌನ್ : ಸಂತೋಷ. ಕತೆ ಆರಂಭವಾಗಲಿ.

ಕಲಾವಿದರು : ಅಪ್ಪಣೆ ಸ್ವಾಮಿ.

(ಬ್ರೌನ್ ಮತ್ತು ಕೆಲ ಆತನ ಸಹಾಯಕರು, ಪಂಡಿತರು ಒಂದು ಬದಿಗೆ ಹೋಗಿ ಕುಳಿತುಕೊಳ್ಳುತ್ತಾರೆ)

ಕಲಾವಿದ : **ಕೇಳು ಕೇಳು ಓ ಸೋದರ**
ಕೇಳೋ ನಮ್ಮ ಕಥೆಯ.
ಭೋಗಿ ಆದ ಆ ವೇಮನರೆಡ್ಡಿ ॥ತಂದಾನ ತಾನ॥
ಯೋಗಿ ಆದ ಕಥೆಯ... ॥ತಂದಾನ ತಾನ॥

ಕಲಾಕಾರ : (ಮಾತು) ನಮ್ಮ ವೇಮರೆಡ್ಡಿ ಅವರ ಪೂರ್ವಿಕರು ಮೊದಲಿಗೆ, ಪೂರ್ವಿಕರೆಂದರೆ ನಮ್ಮ ಯೋಗಿ ವೇಮನನ ಮುತ್ತಾತಂದಿರು ಅನುಮಕೊಂಡ ಎಂಬ ಊರಿನಲ್ಲಿ ದೊಡ್ಡ ರೈತಾಪಿಯಾಗಿ ಬಾಳು ಸಾಗಿಸುತ್ತಿದ್ದರು. ಈತನಿಗಾದರೋ ಮೂರು ಜನ ಗಂಡು ಮಕ್ಕಳು.

(ಹಾಡು) **ಹೆಸರೇನು ಅಳಿಯರೆಡ್ಡಿ ಅಂತ**
ಊರಿಗೆ ಹತ್ತು ಅಂಕಣದ ಮನೆ
ಭೂಮಿ ನಂಬಿ ಬಾಳುತಲಿದ್ದರು ॥ತಂದಾನ ತಾನ॥

(ಮಾತು) ಈ ಅಳಿಯರೆಡ್ಡಿ ಒಮ್ಮೆ ಭೂಮಿಯನು ಉಳುವಾಗ ಸಿಕ್ಕುಬಿಟ್ಟಿತು ಬಂಗಾರದ ಕೊಪ್ಪರಿಗೆ. ವಜ್ರ, ನಗ, ನಾಣ್ಯ, ವೈಢೂರ್ಯಗಳು.

(ಹಾಡು) **ನೆಗಿಲ ಗುಳದಲ್ಲಿ ನಿಧಿ ಎದ್ದು ಬಂತೊ**
ನಾಡಿನ ದೊರೆತನ ಹೆಗಲಿಗೆ ಬಿತ್ತೋ ॥ತಂದಾನ ತಾನ॥

(ಮಾತು) ದೈವ ಕೊಟ್ಟ ಹಣ ಐಶ್ವರ್ಯಗಳಿಂದಾಗಿ ಅಳಿಯರೆಡ್ಡಿ ತನ್ನ ಆಸ್ತಿಯನ್ನು ದಿನೆ ದಿನೆ ವಿಸ್ತಾರ ಮಾಡಿಕೊಂಡು ತನ್ನದೇ ಆದ ಪಾಳ್ಯ ಪಟ್ಟುವನ್ನು ಸ್ಥಾಪಿಸಿದ.

(ಹಾಡು) **ಮಣ್ಣಿನ ಕೈಯಿ ಹೊನ್ನಿನ ಕೈಯಾಯ್ತು**
ಆಳಂತೆ ದುಡಿದವನು ಅರಸಾಗಿ ಮೆರೆದ ॥ತಂದಾನ॥
ಆತನ ವೈಭೋಗ ಆತನ ಸಿರಿತನ
ಆತನ ಠೀವಿ ಆತನ ಶೌರ್ಯ
ಹೇಳಲು ಸಾಲವು ಏಳು ನಾಲಿಗೆ
ಹೊಗಳಲು ಸಾಲವು ಪದಗಳು ॥ತಂದಾನ॥

(ಮಾತು) ಹೀಗೆ ಅನುಮಕೊಂಡದಲ್ಲಿ ತನ್ನ ಅದೃಷ್ಟ ಬಲದಿಂದ ದೈವದ ಕೃಪೆಯಿಂದ ಅಳಿಯರೆಡ್ಡಿ ನೆಲಸಿದ್ದವನು ತನ್ನ ರಾಜ್ಯವನ್ನು ವಿಸ್ತಾರ ಮಾಡುವ ಆಸೆಯಿಂದ ಅನುಮಕೊಂಡವನ್ನು ಬಿಟ್ಟು ಕೊಂಡವೀಟಕ್ಕೆ ಬಂದನು.

(ಹೀಗೆ ಹೇಳುತ್ತಿರುವಂತೆ ಹಿಮ್ಮೇಳದಲ್ಲಿ ತಂದೆಗೆ ಸಾತ್ ನೀಡುತ್ತಿದ್ದ ಮಗ ನೋಡುನೋಡುತ್ತಿದ್ದಂತೆ ರೌದ್ರರೂಪಕ್ಕೆ ತಿರುಗಿ ಕೈಯಲ್ಲಿದ್ದ ತಂಬೂರಿಯನ್ನು ಗಧೆಯಂತೆ ತಿರುಗಿಸುತ್ತಾ)

ಮಗ : ಏಯ್ ನಿಲ್ಲಿಸೋ ನಿನ್ನ ಕಟ್ಟುಕತೆಯನ್ನು. ಇಲ್ಲದೆ ಹೋದರೆ ನಿನ್ನ ಖಂಡವನ್ನು ಕಡಿದು ರಕ್ತವನ್ನು ಹೀರಿ ಬಿಡುತ್ತೇನೆ ಬಡವ.

ತಂದೆ : ಲೇ ಚಿಕ್ಕೋನೆ ಏನಾಯ್ತೋ ನಿನಗೆ? ನಾನೋ ನಿಮ್ಮ ಅಪ್ಪ. ದೊರೆಗಳು ಆಟ ನೋಡ್ತಾವರೆ ಬಿಡೋ.

ತಾಯಿ : ಮಗ ಇವೊತ್ತು ದೊರೆಗಳ ಮುಂದೆ ಆಟ, ಕುಡೀಬ್ಯಾಡಾಂತ ಹೇಳಿದ್ರೂ ಕುಡಿದು ಬಂದಿದ್ದೀಯಲ್ಲಾ.

ಮಗ : ಏಯ್ ದೂರ ಸರಿ ದೂರ್ತಳೆ. ಯಾರು ತಂದೆ ಯಾರು ಮಗ.... ನಾನು ಯಾರು ಗೊತ್ತ.... ನಾನು ಯಾರು ಗೊತ್ತ? (ಏರಿ ಹೋಗುತ್ತಾನೆ)

ತಂದೆ : ನೀನು ನಮ್ಮ ಚಿಕ್ಕೋನು. ನನ್ನ ಮಗ.

ಮಗ : ಅಲ್ಲ. ನಾನು ನಿನ್ನ ಮಗ ಅಲ್ಲ. ನಾನು ವೇಮನ. ವೇಮನ ಕತೆಯ ಮೂಲಪುರುಷ. ನನ್ನನ್ನು ಬಿಟ್ಟು ಅಳಿಯರೆಡ್ಡಿ ಕತೆ ಹೇಳ್ತೀಯ. ಕೊಂದು ಬಿಡ್ತೇನೆ.

ತಂದೆ : ತಪ್ಪಾಯಿತು ಅಪ್ಪ. ನನ್ನಪ್ಪ ನನಗೆ ಕಲಿಸಿದ ಕತೆ ಹೇಳ್ತಾ ಇದ್ದೀನಿ.

ಮಗ : ನಿಜವನ್ನು ಯಾರು ಸುಳ್ಳು ಮಾಡೋದಿಕ್ಕೆ ಸಾಧ್ಯವಿಲ್ಲ.

ತಂದೆ : ಸ್ವಾಮಿ ತಾವು ಯಾರು? ಯಾಕೆ ಇಲ್ಲಿ ಬರೋಣವಾಯ್ತು. ತಮ್ಮ ಊರು, ನಾಮ, ಕುಲ ಗೋತ್ರವನ್ನು ಹೇಳುವಂತವರಾಗಿ.

ಕೋಮಟವೇಮನ: (ಪಾತ್ರ ಬದಲಾಗುತ್ತದೆ; ಶಾಂತನಾಗುತ್ತಾನೆ) ನಾನು ಕೋಮಟಿ ವೇಮನ. ನಾನು ಶಿವಭಕ್ತ. ಶ್ರೀಶೈಲದಲ್ಲಿ ದೇವರ ದರ್ಶನಕ್ಕೆ ಹೋಗಿದ್ದೆ. ಅಯ್ಯೋ ದೈವವೇ ನಿನ್ನ ನಂಬಿ ಬಂದ ಭಕ್ತನನ್ನು ನೀನು ಮೋಸ ಮಾಡುವುದು ಉಚಿತವೆ?

ತಾಯಿ : ಸ್ವಾಮಿ ಯಾಕೆ ಅಳುತ್ತಿದ್ದೀರಿ ಏನಾಯ್ತು?

ಕೋ.ವೇ. : ಏನಾಗಬಾರದೋ ಅದೇ ಆಯ್ತು. ಜಾತ್ರೆ ಮುಗೀತು. ಯಾತ್ರೆ ಮುಗಿದಿರಲಿಲ್ಲ. ಪೂಜೆಗೆ ಹೋದೆ, ಪ್ರಸಾದಕ್ಕೆ ಹೋದೆ. ಆ ಪಾಪಿ ಪೂಜಾರಿಗಳು ದೇವಸ್ಥಾನ ಬಿಟ್ಟು ಹೋಗು ಅಂದ್ರು, ದೇವರನ್ನು ಸ್ತುತಿಸಿ ಹೋಗುತ್ತೀನಿ ಅಂದೆ. ಆಗ ಅವರು ಇಲ್ಲ ಹೊರಟು ಹೋಗು ಅಂತ ಓಡಿಸಿ ಬಿಟ್ಟಿದ್ರೆ ಚೆನ್ನಾಗಿರುತ್ತಿತ್ತು. ಆದ್ರೆ ಉತ್ತರದ ಕಾಡಿಗೆ ಹೋಗಬೇಡ ಅಂತ ತಾಕೀತು ಮಾಡಿದ್ರು.

ತಂದೆ : ಮುಂದೆ ಏನಾಯ್ತು ತಂದೆ?

ಕೋ.ವೇ. : ಕಣ್ಣು ಮುಚ್ಚಿದ್ರೆ ಸಾಕು ಶ್ರೀಶೈಲದ ಉತ್ತರ ದಿಕ್ಕಿನ ಕಾಡಿಂದ ಯಾರೋ ನನ್ನ ಕರಿತಿದ್ದಾರೆ ಅನ್ನಿಸ್ತು. ಒಂದು ದಿನ ಪೂಜಾರಿಗಳ ಕಣ್ಣಿಗೆ ಬೀಳ್ದಂಗೆ ಕಾಡಿನೊಳಗೆ ಪ್ರವೇಶ ಮಾಡ್ದೆ. ಎಷ್ಟು ದೂರ ನಡ್ದೆ ಏನೇನು ನೋಡ್ದೆ. ಅದೊಂದು ದೊಡ್ಡ ಕತೆ. ಬಾಯಾರಿಕೆ ಆಯ್ತು ಅಂತ ನೀರು ಕುಡಿಯಲು ಬಂದು ದೋಣಿಯ ಹತ್ತಿರ ಹೋಗಿ. ನೀರಿಗೆ ಕೈಯಿಟ್ಟೆ. ಕೈಯಲ್ಲಿದ್ದ ರಾಗಿ ಉಂಗುರ ಬಂಗಾರ ಆಯ್ತು. ಓಹೋ ಇದು ಪರುಷವೇದಿ. ಬಂಗಾರ ನೀರು. ಆ ಘಳಿಗೆನಾಗ ನನ್ನ ಭಕ್ತಿ ನೀರಲ್ಲಿ ತೊಳದೋಯ್ತು. ಬಂಗಾರ ಕಣ್ಣಲ್ಲಿ ತುಂಬಿಕಳ್ತು. ಓಡಿದ್ದೆ ಎರಡು ಬಿದಿರು ಬೊಂಬು ಕಡೆದು ತೊರೆ ಮಾಡ್ಕಂಡು ನೀರು ತುಂಬಿಕಂಡು ಊರ ಕಡೆ ಓಡ್ದೆ.. ಓಡ್ದೆ.... ಬಾಯಾರಿಕೆ ಆದ್ರು ತೊಟ್ಟು ನೀರು ಮುಟ್ಟದೆ ಬಂದೆ. ಅನುಮಕೊಂಡ ಮುಟ್ಟುವಷ್ಟರಲ್ಲಿ ಕತ್ತಲಾಯ್ತು. ನನ್ನ ಕಷ್ಟ ಕಣ್ಣೀರು ಎಲ್ಲಾ ನಾಶವಾಗಿ ಹೋಯ್ತು.

ತಂದೆ : ದುಃಖಿಸಬೇಡಿ ಮಾತಾಡಿ. ಯಾಕೆ ಅಳ್ತಾ ಇದ್ದೀರಿ.

ಮಗ : ನಿನಗೆ ಗೊತ್ತಿಲ್ಲ ಅಲ್ವಾ? ನಿನಗೆ ಗೊತ್ತಿಲ್ಲ ಅಲ್ವಾ? ಯಾಕೆ ಸುಳ್ಳು ಹೇಳ್ತಿ... ಏ... ಅಳಿಯರೆಡ್ಡಿ ನೀನು ಹೊಲ ಉಳುವಾಗ ನಿನಗೆ ಕೊಪ್ಪರಿಗೆ ಕೊಪ್ಪರಿಗೆ ಹಣ ಸಿಕ್ತಾ ನಿಜ ಬೊಗಳು. ಇಲ್ಲದೆ ಹೋದ್ರೆ.. ನಿನ್ನ ವಂಶವನ್ನು ನಿರ್ವಂಶ ಮಾಡ್ತೀನಿ. (ಆತನನ್ನು ಕೆಳಕ್ಕೆ ಹಾಕಿ ತುಳಿದು ಹೇಳುತ್ತಾನೆ.)

ಅಳಿಯರೆಡ್ಡಿ : (ನೋಡ ನೋಡುತ್ತಿದ್ದಂತೆ ಬುರ್ರಕತೆಯ ತಂದೆ ಪಾತ್ರದವನು ಬದಲಾಗುತ್ತಾನೆ) ಅಯ್ಯೋ ಕೊಲ್ಲಬೇಡಿ. ನಾನು ತಪ್ಪು ಮಾಡಿಬಿಟ್ಟೆ. ಅಯ್ಯೋ.... ಅಂತ ಅನ್ಯಾಯಕ್ಕೆ ಕೈ ಹಾಕಬೇಡಿ. ನಿಮ್ಮ ದಮ್ಮಯ್ಯ.

ಕೋ.ವೇ. : ಹೇಳು ಆವೊತ್ತು ಬಂದು ನಾನು ನಿನ್ನಲ್ಲಿ ರಾತ್ರಿ ಕಳೆಯೋದಿಕ್ಕೆ ಅವಕಾಶ ಕೇಳ್ದೆ.

ರೆಡ್ಡಿ : ದನದ ದೊಡ್ಡಿಯಲ್ಲಿ ಇದ್ದು ಹೋಗಿ ಅಂದೆ.

ಕೋ.ವೇ. : ನಾನು ಪರುಷದ ನೀರು ತುಂಬಿದ ಬೊಂಬುಗಳನ್ನು ಗೋಡೆಗೆ ನೇತು ಹಾಕಿ ಊಟ ಅರಿಸಿಕೊಂಡು ಕೋಮಟಿಗರ ಬೀದಿಗೆ ಹೋದೆ.

ರೆಡ್ಡಿ : ದನಗಳಿಗೆ ಹುಲ್ಲು ಹಾಕಲು ನಾನು ದೊಡ್ಡಿಗೆ ಹೋದೆ. ನೀವು ನೇತು ಹಾಕಿದ್ದ ಬೊಂಬಿನಿಂದ ನೀರು ತೊಟ್ಟಿಕ್ಕುತ್ತಿತ್ತು. ಕೆಳಗೆ ಇದ್ದ ನೇಗಿಲ ಮೇಲೆ ಆ ನೀರು ಬಿದ್ದು ಆ ನೇಗಿಲ ಗುಳಗಳೆಲ್ಲಾ ನಿಗಿನಿಗಿ ಹೊಳೆಯುತ್ತಿದ್ದ ಬಂಗಾರವಾಗಿತ್ತು. ನನ್ನ ಚಿತ್ತ ವಿಕಾರವಾಗತೊಡಗಿತು.

ಕೋ.ವೇ. : ನಿನ್ನ ದೊಡ್ಡಿಗೆ ಬೆಂಕಿ ಬಿದ್ದದ್ದು ಆಕಸ್ಮಿಕ ಅಲ್ಲ. ಹೌದೋ ಅಲ್ವೋ? ಹೇಳು.

ರೆಡ್ಡಿ : ನಾನೇ ದೊಡ್ಡಿದನಗಳ ಹಗ್ಗ ಕತ್ತರಿಸಿ ಹೊರಗೆ ಬಿಟ್ಟೆ, ಬಿದಿರಿನ ಬೊಂಬುಗಳನ್ನ ತಂದು ಮನೆ ದೇವರ ಕೋಣೇಲಿ ಇಟ್ಟೆ.

ಕೋ.ವೇ. : ಮನೆಗೆ ಬೆಂಕಿ ಇಟ್ಟೆ. ಹೊಟ್ಟೆ ಹಸಿವಿನಿಂದ ಸುಡ್ತಾ ಇತ್ತು. ಊರ ಕ್ವಾಮಟಿಗರ ಮನೆ ಹುಡುಕಿ ಊಟಕ್ಕೆ ಕುಂತಿದ್ದೆ. ಇನ್ನೇನು ತುತ್ತು ಬಾಯಿಗಿಡಬೇಕು, ಅಷ್ಟರಲ್ಲಿ ಧಗಧಗ ಉರೀತಿತ್ತು. ನನ್ನ ಕನಸು.

ರೆಡ್ಡಿ : ನಾನು ಅಳುವಂತೆ ನಾಟಕ ಆಡ್ದೆ. ನೀವು ಓಡಿ ಬಂದ್ರಿ. ನಾನು ತಡೆಯೋ ಪ್ರಯತ್ನಪಟ್ಟೆ. ನೀವು ನನ್ನನ್ನು ತಳ್ಳಿ ಆ ಬೆಂಕಿಯೊಳಗೆ ನುಗ್ಗಿ ಹೋದ್ರಿ.

ಕೋ.ವೇ. : ಅಯ್ಯಯ್ಯೋ ಉರಿ. ಸುಡ್ತಾ ಇದೆ. ನನ್ನ ಬೊಂಬು, ನನ್ನ ಬಂಗಾರ, ನನ್ನ ಕನಸು, ಆಸೆ... ನನ್ನ ಹೆಂಡ್ತಿ, ನನ್ನ ಮನೆ, ದೇಹ ಸತ್ತಿತ್ತು ಆದರೆ ಆಸೆ ಸಾಯಲಿಲ್ಲ. ಭೂತ ಆದೆ. ಅಂತರ ಪಿಶಾಚಿಯಾದೆ. ನಿನ್ನ ವಂಶ ನಿರ್ವಂಶ ಮಾಡ್ದೆ ಬಿಡುವುದಿಲ್ಲ.

ರೆಡ್ಡಿ : ಸ್ವಾಮಿ ನನ್ನದು ಮಹಾಪರಾಧವಾಯಿತು. ಈ ಸಿರಿತನ ನಿಮ್ಮ ಭಿಕ್ಷೆ. ಆ ಘಳಿಗೆ ನಾನು ಇಂಥ ವಿಘ್ನಕಾರ್ಯ ನಡೆಯುತ್ತೆ ಅಂತ ಊಹೆ ಮಾಡಲಿಲ್ಲ. ನನಗೆ ಪ್ರಾಯಶ್ಚಿತ್ತ ಬೇಕು. (ಅವನ ಪಾದದಲ್ಲಿ ಕುಸಿಯುತ್ತಾನೆ.)

ಕೋ.ವೇ. : ನನ್ನ ಆಸೆ ಸಾಯಬೇಕು ಅಂದ್ರೆ, ನೀನು ನನ್ನಷ್ಟು ಎತ್ತರದ ಬಂಗಾರದ ಪ್ರತಿಮೆ ಮಾಡಿಸಿ ಪೂಜೆ ಮಾಡ್ಬೇಕು. ನಿನ್ನ ವಂಶದಲ್ಲಿ ಹುಟ್ಟುವ ಎಲ್ಲಾ ಮಕ್ಕಳಿಗೂ ನನ್ನ ಹೆಸರೇ ಇಡ್ಬೇಕು. ನಿನ್ನ ವಂಶ ಇನ್ನು ಮುಂದೆ ವೇಮನ ವಂಶ ಆಗ್ಬೇಕು.

ರೆಡ್ಡಿ : ನಿಮ್ಮ ಮೇಲಾಣೆ ನಿಮ್ಮ ಆಸೆಯನ್ನು ಪೂರೈಸುತ್ತೇನೆ. ನನ್ನ ಎಲ್ಲಾ ಮಕ್ಕಳ, ಮೊಮ್ಮಕ್ಕಳಿಗೂ ವೇಮನ ಅಂತಲೇ ಹೆಸರಿಡುತ್ತೀನಿ.

ಕೋ.ವೇ. : ಬಂಗಾರದ ನೀರು. ಮಲ್ಲಿಕಾರ್ಜುನ... ನಿನ್ನ ಮಾಯದಾಟದಲ್ಲಿ ನನ್ನನ್ನು ಒಂದು ಪಾತ್ರ ಮಾಡ್ಬಿಟ್ಟೆಯಲ್ಲಪ್ಪ. (ಕುಸಿದು ಬೀಳುತ್ತಾನೆ)

ತಾಯಿ : ಲೇ ಅಮ್ಮಯ್ಯ.. ನೀರು ತಗಂಡು ಬಾರೆ. (ಗಾಳಿ ಹಾಕುತ್ತಿರುವ ತಾಯಿ-ಹೆಂಡ್ತಿಯನ್ನು ನೋಡಿ)

ಬ್ರೌನ್ : ಫೆಂಟಾಸ್ಟಿಕ್. ವಾಟ್ ಎ ಪರ್‌ಫಾರ್ಮೆನ್ಸ್. ಅದ್ಭುತ ನಿಮ್ಮ ಅಭಿನಯ. ನಿಮಗೆ ಸೂಕ್ತ ಬಹುಮಾನವನ್ನು ಕೊಡಲಾಗುವುದು.

ಪಂಡಿತರು : (ಸ್ವಗತ) ಎಲ್ಲಾ ನಾಟಕ, ನನ್ನ ಮಕ್ಕಳು ಚಾನ್ಸ್ ಹೊಡೆದುಬಿಟ್ರು, ಇರ್‍ಲಿ ಇವರ ಬಂಡವಾಳ ಮುಂದೆ ಬಯಲಾಯ್ತದೆ.

ಮಗ : ಅಪ್ಪ ಯಾಕೆ ಕತೆ ನಿಲ್ಲಿಸಿಬಿಟ್ರಿ? ನನಗೇನೋ ತಲೆ ಚಕ್ಕರ್ ಬಂದಂಗೆ ಆಯ್ತು.

ತಂದೆ : ಹೌದೌದು ಈಗ ಸರಿ ಹೋದೆಯಾ? ಕತೆ ಮುಂದುವರೆಸೋಣ. (ಮತ್ತೆ ಕಥೆ ಆರಂಭಿಸುತ್ತಾನೆ)

ಹೀಗೆ ಸಂಪಾದನೆ ಮಾಡಿದ ಹಣವನ್ನು ಬಳಸಿಕೊಂಡು ಹುಟ್ಟಿದ ಊರಲ್ಲಿಯೇ ಇದ್ದರೆ ಜನಕ್ಕೆ ಅನುಮಾನ ಬರ್ತದೆ ಅಂತ ಕೊಂಡವೀಡು ನಾಡಿಗೆ ಬಂದು ಮಂಡಲೀಕನನ್ನು ಸ್ಥಾಪನೆ ಮಾಡಿಕೊಂಡು ಅಳಿಯರೆಡ್ಡಿ ರಾಜ್ಯಭಾರವನ್ನು ಮಾಡುತ್ತಿದ್ದ. ತರುವಾಯ..

ಮಗ : (ಹಾಡು) **ಅವನ ಮಕ್ಕಳು ಪಟ್ಟಕ್ಕೆ ಬಂದರು**
ಮೊದಲಿಗೆ ಪುಲ್ಲಯ್ಯರೆಡ್ಡಿ ವೇಮನ ॥ತಂದಾನ ತಾನ॥
ಎರಡನೆಯವನೆ ಅನುಪೋತರೆಡ್ಡಿ ವೇಮನ ॥ತಂದಾನ ತಾನ॥
ಮೂರನೆಯವನೇ ಅನುವೇಮನರೆಡ್ಡಿ ॥ತಂದಾನ ತಾನ॥

ತಂದೆ : ಮೊದಲಿಬ್ಬರಿಗೆ ಪುತ್ರ ಸಂತಾನವಿಲ್ಲದಿರಲು ಮೂರನೆಯವನಾದ ಅನುಮವೇಮನ ರೆಡ್ಡಿಗೆ ದೈವದ ಕೃಪೆಯಿಂದ ಕೊಮಟಗಿರಿ ವೇಮನ ಎಂಬ ಪುತ್ರ ಇದ್ದ. ಈತನಿಗೂ ಮೂರುಜನ ಮಕ್ಕಳಾದರು.

ಮಗ : ಮೊದಲನೆಯುವ ವೆಂಕಾರೆಡ್ಡಿ ವೇಮನ; ಎರಡನೆಯುವ ರಾಚವೇಮನ; ಮೂರನೆಯುವನೆ ವೇಮನರೆಡ್ಡಿ. ಆತನೆ ನಮ್ಮ ಕಥಾ ನಾಯಕ.

(ಹಾಡು) **ಯೋಗಿಯಾಗಲೆಂದು ಹುಟ್ಟಿದನಯ್ಯ**
ಭೂಮಿಯ ಮೇಲೆ ರಾಗಿಯಾಗಿ
ಅನುರಾಗಿಯಾಗಿ ಮಾಗಿ ಮಾಗಿ
ಭೋಗಿಯಾಗಿಯೇ ಬಾಳಿದವನಯ್ಯಾ ॥ತಂದಾನ ತಾನ॥

ತಂದೆ : ಕೊಮಟಗಿರಿ ವೇಮನ ಮೂರನೆಯ ಮಗನಾದ ವೇಮನರೆಡ್ಡಿ ಬಾಲ್ಯದಲ್ಲಿ ಮಾಡದೇ ಇದ್ದ ಕೆಲಸವಿಲ್ಲ ಆಡದೇ ಇದ್ದ ಆಟವಿಲ್ಲ.

(ಹಾಡು) **ಕೇಳಿ ಕೇಳಿ ಓ ಕೇಳಿರಣ್ಣ ಕತೆಯಾ**
ಕತೆಯ ಕಾಡಿದ ಲೋಕದ ವ್ಯಥೆಯಾ
ಹುಡುಗುತನವ ಕಳೆಯುತ್ತಲಿ ॥
ತಂಟೆಕೋರತನ ಬೆಳೆಯುತಲಿ ॥ತಂದಾನ ತಾನ॥
ಆಡಲು ಹೋಗಿ ಬುಗುರಿಯ ಹೊಡೆದ
ನೀರೆಯ ನೀರಿನ ಅರಿವೆಯ ಹೊಡೆದ ॥ತಂದಾನ ತಾನ॥
ನಿತ್ಯವು ನೂರು ದೂರೋ ದೂರು
ರೋಸಿ ಹೋದರು ತಂದೆ ತಾಯಿ
ಕೋಪಗೊಂಡರು ಅಣ್ಣಂದಿರು
ದೊರೆಯ ಮಗನೆ ದುಷ್ಟನಾದರೆ
ಬಂತು ಪ್ರಜೆಗಳಿಗೆ ಸಂಕಷ್ಟದ ಕಾಲ

ಮಗ : (ಮಾತು) ಹೀಗೆ ಬೆಳೆದು ದೊಡ್ಡವನಾದ ಚಿಕ್ಕಮಗನ ಬಗ್ಗೆ ಚಿಂತಾಕ್ರಾಂತರಾದ ರಾಜ ರಾಣಿ ದೊಡ್ಡ ಮಗ ವೆಂಕವೇಮನರೆಡ್ಡಿ ವಿಜಯನಗರದ ಪರವಾಗಿ ಯುದ್ಧಮಾಡಿ ಮಡಿದ ಸುದ್ದಿ ಬಂತೋ. ಆಗಲೂ ವೇಮನ ರೆಡ್ಡಿ ಶವ ಸಂಸ್ಕಾರಕ್ಕು ಬರದೇ ಹೋದ. **ತಂದಾನ ತಾನಾ.**

ತಾಯಿತಂದೆಗಳಲ್ಲಿ ದಯೆ ಇಲ್ಲದ ಪುತ್ರಾ
ಹುಟ್ಟಿದ್ದರೇನು ಅವನು ಸತ್ತರೇನು
ಹುತ್ತದಲಿ ಗೆದ್ದಿಲು ಹುಟ್ಟಿ ಲಯವಾದಂತೆ
ವಿಶ್ವದಾಭಿರಾಮ ವಿನುರ ವೇಮ

ಮಾತು : ಹೀಗೆ ತಂದೆ ತಾಯಿಗಳ ಕೇಡು ಹೊಟ್ಟೆಯಲ್ಲಿ ಹುಟ್ಟಿದಂತೆ

ಆಯಿತಲ್ಲಾ ಅಂತ ನೋಯುತ್ತಿರುವಾಗ ಆ ಭೋಗಿಯಾಗಿದ್ದ ವೇಮನನ್ನು ಆ ನಾಗಸಾನಿಯಾದರೋ ವೇಮನನ ಅತ್ತಿಗೆಯ ಮೂಗುನತ್ತನ್ನ ಕೇಳಿದಳಂತೆ. ಅದನ್ನ ತರಲೋದ ವೇಮನನ್ನ ಅವರಿಗೆ ಅತ್ತಿಗೆ ನರಸಾಂಬ ಆದರೋ ಏನು ಹೇಳಿದರಪ್ಪ....

(ಹಾಡು) **ಮೈದುನ ವೇಮಣ್ಣ**
ನಾಗಸಾನಿಯೂ ಬೆತ್ತಾಲಾಗಿ
ನಿಮ್ಮ ಮುಂದೆಯೇ ಹಿಂದಕೆ ಬಾಗಿ
ತೊಡಬೇಕೋ ಮೂಗುನತ್ತನು
ಬಲ್ಲಿನಂತೆಯೆ ಹಿಂದೆಕೆ ಬಾಗಿ
ನಾಗಸಾನಿಯೂ ನಗ್ನವಾಗಿದಳೋ
ಭೋಗಿಯ ಬದುಕು ಭಗ್ನವಾಯಿತೋ
ಮೂಗುನತ್ತನು ಕೊಟ್ಟವನೆ ಅನುರಕ್ತಿ ಜೀವನ ಬಿಟ್ಟವನೆ.
ಬೆತ್ತಲು ದಾರಿಲಿ ನಡೆದವನೆ...ಯೋಗಿಯಾದನು ವೇಮನ.

ಲೋಕದ ಬೆಳಕು ನೀನಣ್ಣ. (ಹಾಡು ನಡೆಯುವಾಗ ಯೋಗಿ ವೇಮನ ಪಾತ್ರದಾರಿ ವೇದಿಕೆ ಮೇಲೆ ಬಂದಿರುತ್ತಾನೆ)

ಬ್ರೌನ್ : ಒನ್ ಮಿನಿಟ್. ಮಿ ಪಂಡಿತ್ ಈ ಕಥಾ ಭಾಗದಿಂದ ನಾನು ಗ್ರಹಿಸಿದ್ದೇನೆಂದರೆ ವೇಮನ ಒಬ್ಬನಲ್ಲ. ವೇಮನ ಅನ್ನೊದು ಒಂದು ಪರಂಪರೆ ಇದ್ದಿರಬೇಕು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಅನೇಕ ವೇಮನರು ಇದ್ದಿರಬೇಕು? ಜನ ನೆಪ್ಪಿನಿಂದ ಹಾಡುತ್ತಿರುವ ಪದ್ಯಗಳನ್ನು ನೋಡಿದರೆ ಇವು ಒಬ್ಬ ವೇಮನ ಹೇಳಿದ್ದೋ ಅಥವಾ ಹಲವು ವೇಮನರೋ? ಇರಲಿ. ಅಂದ ಹಾಗೆ ವೇಮನ ಈ ಭವದ ಅನುರಕ್ತಿಗಳಿಂದ ವಿಮುಖಿಯಾಗಿ ಜ್ಞಾನ ಮಾರ್ಗದಲ್ಲಿ ನಡೆಯಲು ಈ ಮೂಗುನತ್ತಿನ ನಗ್ನ ಕಾರಣಕ್ಕಿಂತ ಬಲವಾದ ಕಾರಣ ಇದ್ದಿರಬೇಕು. ಆ ವಿಷಯುವನ್ನು ಮೊದಲು ಕಂಡುಕೊಳ್ಳಬೇಕು. ಅರೆ ಎಲ್ಲಿ ವೇಮನ? ಆತನ ಬೆನ್ನು ಹತ್ತಬೇಕು.

•

ದೃಶ್ಯ – ೩೭

ಊರನಿಂದೆಯ ತಾಳಲಾರದೆ
ಜನರಶಾಪವ ಕೇಳಲಾರದೆ
ಕೊರಗುತ್ತಾರೆ ತಂದೆ ತಾಯಿ ಕುಟ್ಟುಬಿದ್ದ ಮರದಂಗೆ
ಮರುಗುತ್ತಾರೆ ಅಣ್ಣಂದಿರು ಕುದಿಯುವ ನೀರಂಗೆ

ಮಾತು : ಇಂತಹ ಪರಸ್ಥಿತಿಯಲ್ಲಿ ವೇಮನರೆಡ್ಡಿಯನ್ನು ಕಂಡು ಎಲ್ಲರೂ ಛೀ.. ಥೂ.. ಅಂತ ಈಕರಿಸುವಾಗ ರಾಜವೇಮನನ ಹೆಂಡತಿ ಅಂದರೆ ಅತ್ತಿಗೆ ನರಸಾಂಬೆ ಮಾತ್ರ ಮೈದುನನ ಬೆನ್ನಿಗೆ ನಿಂತು ಅವನ ಕಷ್ಟ ಸುಖಗಳನ್ನು ವಿಚಾರಿಸಿಕೊಳ್ಳುತ್ತಿದ್ದಳು. ಹೆತ್ತ ತಾಯಿಯೇ ದೂರ ಮಾಡಿರುವ ಸಂದರ್ಭದಲ್ಲಿ ಅತ್ತಿಗೆ ತನ್ನ ಪರವಾಗಿ ನಿಂತದ್ದು ವೇಮನನಿಗೆ ದೈವವೇ ತನ್ನ ಜೊತೆಗಿರುವಂತೆ ಆಯಿತು. ಆದ್ದರಿಂದಲೇ ಯಾರ ಮಾತು ಕೇಳದ ವೇಮನ ಅತ್ತಿಗೆಯ ಮಾತಿಗೆ ಬಗ್ಗುತ್ತಿದ್ದ. ಹೀಗಿರುವಾಗ ವೇಮನ ಯಾವಾಗಲೂ ನಾಗಸಾನಿಯರ ಮನೆಯಲ್ಲಿಯೇ ಕಾಲ ಕಳೆಯುತ್ತಿರಲು ಅತ್ತಿಗೆ ಅವನನ್ನು ಕಷ್ಟದಿಂದ ಒಪ್ಪಿಸಿ ಮದುವೆ ಮಾಡಿದಳು.

ಏನು ಚಂದ ಏನು ಅಂದಾ
ರತಿಯಂಗಿದ್ದಳು ರಾಣಿ
ಅಚ್ಚಿಗೆ ಹೋಯ್ದ ಹುಣ್ಣಿಮೆ ಪಾಕ
ಮುಟ್ಟಿದರೆ ಮಾಸುವಳು ವಾಣಿ

ಮಾತು : ಮದುವೆಯಾಗಿ ಮೂರು ವರ್ಷವಾದರೂ ಒಂದು ಸಾರಿಯಾದರೂ ವೇಮನ ಹೆಂಡತಿಯನ್ನ ಕಣ್ಣೆತ್ತಿ ನೋಡಲಿಲ್ಲ. ಒಂದು ದಿನವಾದರೂ ಮನೆಯತ್ತ ಬರಲಿಲ್ಲ.

ಕಾದು ಕಾದು ಕೆಂಡವಾದಳು
ನೊಂದು ನೊಂದು ಗಾಯವಾದಳು

ನಿಂದೆ ಬಂದರೆ ಬರಲಿ ಎಂದು
ಗಂಡನ ಹುಡುಕಿ ಬಂದಳೋ
ನಾಗಸಾನಿಯ ಮನೆಯತ್ತ.
ಅಲ್ಲಿಗೆ ಆಕೆ ಬಂದಾಗ. ಏನಾಯತ್ತಪ್ಪ. ಅಂದ್ರೆ.

ಅತ್ತೆ (ಚಂಚಲೆ) : ಅಯ್ಯೋ.. ನೀವು ಗರತಿ ಇಲ್ಲಿ ಬರಬಾರದು.

ಸೊಸೆ (ಹೆಂಡ್ತಿ) : ನಿನಗೆಷ್ಟು ಹಣ ಬೇಕು? ನಿನ್ನ ತೂಕದ ಬಂಗಾರ ಕೊಡ್ತಿನಿ. ನನಗೆ ನನ್ನ ಗಂಡನ ಕೊಡು.

ಅತ್ತೆ (ಚಂಚಲೆ): ಓಹೋ ಕೊಳ್ಳಲು ಬಂದೆಯಾ? ಲೇ ಹುಡುಗಿ ನಿನ್ನ ಗಂಡನಿಂದ ಒಂದೆಸಳು ಮಲ್ಲಿಗೆಯನ್ನು ತೆಗೆದುಕೊ ಸಾಕು. ನಾನೇ ನಿನಗೆ ನಿಮ್ಮ ತೂಕದ ಚಿನ್ನ ಕೊಡುತ್ತೇನೆ. ಇದು ಬೆವರಿನಿಂದ ಸಂಪಾದಿದ್ದು. ಮೈ ಬೆವರಿನಿಂದ ತಿಳಿಯತಾ ಹೊರಡು. ರಾತ್ರಿ ಕತ್ತಲು ಹುಷಾರ್.

ನಾಗಸಾನಿಯ ಮಾತು
ನಾಗರ ವಿಷದಂತೆ ಏರಿ
ಮಾನಾಪಮಾನ ಮೀರಿ
ಬದುಕಿನ ಆಸೆಯ ತೂರಿ
ಒತ್ತರಿಸಿ ಬಂತೋ ದು:ಖ
ಉಕ್ಕುವ ನದಿಯಂಗೆ. ॥ತಂದಾನೋ ತಾನಿ ತಂದಾನೋ॥

ಮಾತು : ವೇಮನನ ಹೆಂಡ್ತಿ ನಾಗಸಾನಿಯ ಮನೆಯಿಂದ ಬಂದವರೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರು. ಆ ವಾರ್ತೆ ಅತ್ತಿಗೆ ನರಸಾಂಬೆಯವರಿಗೆ ತಲುಪಿ ಅವರಾದರೋ ದಡಬಡಸಿ ಬಂದರು. ತಂಗಿ ನೀನು ಇಂತಹ ಅಕಾರ್ಯಕ್ಕೆ ಕೈ ಹಾಕಬಾರದು ಅಂತ ಪರಿಪರಿಯಾಗಿ ಸಮಾಧಾನ ಹೇಳುತ್ತಾರೆ. ಆಗ ಆ ವೇಮನನ ಹೆಂಡ್ತಿ ನೀನು ನನ್ನ ಬಾಳನ್ನ ಹಾಳು ಮಾಡಿದೆ. ನಿನ್ನಿಂದಲೇ ನನ್ನ ಗಂಡ ನನಗೆ ದಕ್ಕದೇ ಹೋದ. ನಿನಗೂ ಅವನಿಗೂ ಏನು ಸಂಬಂಧ? ಅಯ್ಯೋ ಆಡಬಾರದ ಮಾತನ್ನ ಗರ್ಭ ಕತ್ತರಿಸಿದಂಗೆ ಆಡಿಬಿಟ್ಟಳು. ಈ ಮಾತು ಕೇಳಿದವಳೆ ನರಸಾಂಬ ತತ್ತರಿಸಿ ಹೋದ್ಲು. ಎಂತಾ ಮಾತು ಅಂತ ಆಡಿದೆ ನೀನು? ನಿನ್ನ ಗಂಡ ಅಂದ್ರೆ ನನಗೆ ಮಗನಿದ್ದಂಗೆ ಅಂದ್ಲು. ಆ ಮಾತಿಗೆ ರಾಣಿ ಆದರೂ ಏನಂದ್ಲು. ನನ್ನ ಗಂಡನಿಂದ ನನಗೆ ಒಂದೆಸಳು ಮಲ್ಲಿಗೆ ಹೂ

ಕೊಡಿಸು ಅಂತ ಶರತ್ತು ಹಾಕಿದ್ಲು. ಆಯ್ತು ವೇಮನ ನನ್ನ ಮಾತು ತೆಗೆದು ಹಾಕುವನಲ್ಲ. ಒಂದು ಹೂ ಏನು? ಮಲ್ಲಿಗೆಯ ಗಿಡವನ್ನೇ ಕೊಡುಸುತೀನಿ ನಾಳೆ ಹೊತ್ತು ಹುಟ್ಟುವ ಮುನ್ನ ಅವನು ನಿನ್ನ ಮೊಗ್ಗಲಿನಲ್ಲಿ ಇರತ್ತಾನೆ ಅಂತ ಮಾಡಿಕೊಂಡು ಅಲ್ಲಿಂದ ದುಡುದುಡು ಹೊರಟಳಪ್ಪೋ ರಾಣಿ ನರಸಾಂಬಾ. ಆ ರಾತ್ರಿ ಕತ್ತಲು ಕೌದ ಮೇಲೆ ಯಾರಿಗೂ ಗೊತ್ತಾಗದ ಹಾಗೆ ರಾಣಿಯವರು ನಾಗಸಾನಿಯ ಮನೆಗೆ ಗುಟ್ಟಾಗಿ ಬಂದರು.

ದೃಶ್ಯ – ೪

[ನಾಗಸಾನಿಯ ಮನೆ ರಾತ್ರಿ ಸಣ್ಣಗೆ ದೀಪ ಉರಿಯುತ್ತಿದೆ. ಚಂಚಲೆ ಕುಳಿತಿದ್ದಾಳೆ. ಹಿಮ್ಮೇಳವಾಗಿ ದುಃಖಗೀತೆಯೊಂದು ಕೇಳಿ ಬರುತ್ತದೆ]

ಸೇವಕ : ಊರು ಫಲಗಳನ್ನು ಹುಡುಕಿದ್ದಾಯಿತು. ಎಲ್ಲ ಬಾವಿ ಕೆರೆಗಳನ್ನು ಶೋಧಿಸಿದ್ದಾಯಿತು. ಎಲ್ಲೂ ವೇಮನರ ಸುಳಿವಿಲ್ಲ.

ಚಂಚಲೆ : (ಸ್ವಗತ) ಏನಾಗಿ ಹೋಯ್ತು... ಎಲ್ಲಾ ರೊಟ್ಟಿ ತಿರುಗಿಸಿದಂತೆ ಅದಲು ಬದಲಾಯಿತು. ಈ ಮನೆಹಾಳು ಮುದುಕಿ ಮಾತು ಕೇಳಿ ಅಂದು ಹಾಲಿಗೆ ಆ ಮತ್ತಿನ ಮದ್ದನ್ನು ಬೆರಸದೇ ಇದ್ದಿದ್ದರೆ. ಆ ರಾಣಿ ನರಸಾಂಬ ಅಪಮಾನವನ್ನು ಬೆನ್ನಹತ್ತಿ ಬರದಿದ್ದರೆ. ಎಲ್ಲಾ ಆಗಿಹೋದ ಮೇಲೂ... ಹೂಂ ಹೀಗೆ ಆಗಿಲ್ಲದಿದ್ದರೆ ಎಷ್ಟು ಚೆನ್ನಿತ್ತು. ಈಗಲೂ ನಡೆದಿರುವುದನ್ನು ನಂಬಲು ನನ್ನ ಮನಸ್ಸು ಸಿದ್ಧವಿಲ್ಲ. ಹೆಂಡ್ತಿ ಬಂದು ಹೋದ ಮಾರನೆಯ ದಿನ ರಾತ್ರಿ ವೇಮನ ಚಡಪಡಿಸುತ್ತಿದ್ದರು. ಹೆಂಡ್ತಿಯನ್ನು ಅಪಮಾನಿಸಿದ್ದು ಒಳಗೆಲ್ಲೋ ಅವರಿಗೆ ಮುಳ್ಳು ಚುಚ್ಚಿದಂತೆ ಆಗಿತ್ತೇನೋ, ನೃತ್ಯ ಬೇಡವೆಂದರು ಹಾಡು ಬೇಡವೆಂದರು, ನಿನ್ನ ಮಡಿಲಿನಲ್ಲಿ ನಿದ್ದೆ ಮಾಡುವೆನೆಂದರು. ಒಂದು ಲೋಟ ಹಾಲು ತರುತ್ತೇನೆ ಅಂತ ಅಡುಗೆ ಮನೆಗೆ ಬಂದೆ. ಯಾರಿಗೆ ಗೊತ್ತು ಅಲ್ಲಿಯೇ ಕಾಯುತ್ತಿತ್ತು ಗ್ರಹಚಾರವೆಂದು. (ದೃಶ್ಯ ಬದಲಾಗುವುದು)

ಮುದುಕಿ : ನಿಲ್ಲು ಚಂಚಲೆ. ಬಾ ಇಲ್ಲಿ

ಚಂಚಲೆ : ಅಮ್ಮ ಕರೆದಿಯೇನು?

ಮುದುಕಿ : ವೇಮನರೆಡ್ಡಿಯ ಹೆಂಡ್ತಿ ಬಂದಿದ್ದಳಂತೆ?

ಚಂಚಲೆ : ಹೌದಮ್ಮ ನನ್ನ ಮುಂದೆ ಮಂಡಿಯೂರಿ ಗಂಡನ ಭಿಕ್ಷೆ ಕೇಳಿದಳು.

ನೀಡಿ ಅಭ್ಯಾಸವಿದ್ದವಳು ಬೇಡುವಾಗ ಅವಳನ್ನು ನೋಡಲು ನನಗೆ ಅಯ್ಯೋ ಅನ್ನಿಸಿತು.

ಮುದುಕಿ : ಅಯ್ಯೋ ಪೆದ್ದು ಕಳ್ಳನಿಗೆ ಕನಿಕರ ನಾಗಸಾನಿಗೆ ಮಮಕಾರ ಹುಟ್ಟಿದರೆ ಮುಗಿತು. ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆಯೇ ಗತಿ. ಕರಗುವುದಕ್ಕೆ ಇದು ಸಂಸಾರವಲ್ಲ ವ್ಯಾಪಾರ.

ಚಂಚಲೆ : ಅವರ ಮೋಹ ದಿನದಿನವಲ್ಲ ಕ್ಷಣಕ್ಷಣವೂ ಹೆಚ್ಚೇನು ಹುಚ್ಚಾಗ್ತಾ ಇದೆ.

ಮುದುಕಿ : ದೀಪ ಧಗಧಗ ಉರಿತಿದೆ ಅಂದರೆ ಎಣ್ಣೇ ಬೇಗ ತೀರಿಹೋಗುತ್ತೆ, ಆರಿಹೋಗುತ್ತೆ. ಆಮೇಲೆ ಕತ್ತಲು ಆಗುವುದು ನಮ್ಮ ಬದುಕು ಮಾತ್ರ

ಚಂಚಲೆ : ನನಗಾಗಿ ಅವರು ಹೆಂಡತಿಯ ಮೈಮೇಲಿನ ಒಡವೆ ತಂದುಕೊಟ್ಟರು. ಅತ್ತಿಗೆಯ ಮೂಗುನತ್ತನ್ನು ಕದ್ದು ಕೊಟ್ಟರು. ಅವರು ನನ್ನನ್ನು ಆರಾಧಿಸ್ತಾರೆ ಅನ್ನಿಸುತ್ತೆ. ಅದಕ್ಕೆ ಒಂದೊಂದು ಸಾರಿ ಅವರನ್ನ ಅವರ ಮನೆಗೆ ಕಳಿಸಿಬಿಡೋಣ ಅನ್ನಿಸುತ್ತೆ.

ಮುದುಕಿ : ನಿನ್ ಬುದ್ಧಿಗಿಷ್ಟು ಕರೆಯೋ ಹಸುವಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಾಲು ಹಿಂಡ್ಕೋಬೇಕು. ನಮ್ಮ ಕಸುಬು ಅಂದ್ರೆ ಕರುವನ್ನು ಮುಂದೆ ಬಿಟ್ಟು ಹಸಿವಿನಿಂದ ಹಾಲು ಕರ್ಕಂಡಂಗೆ ಗೊತ್ತಾಯಿತಾ. ಎಲ್ಲಿ ಆ ಹಾಲು ಕೊಡು ಇಲ್ಲಿ (ತೆಗೆದುಕೊಂಡು ಏನೋ ಬೆರೆಸುವಳು) ಇದು ಕಾಮಬಾಣ ಗಿರಾಕಿ ರೂಢಿಗೆ ಬಿದ್ದು ಇನ್ನೇನು ನಮ್ಮ ಮೇಲೆ ಕಯಾಲು ಕಡಿಮೆ ಆಗುವಾಗ ಕೊಡೋ ಔಷಧಿ. ಮತ್ತಿನ ಮದ್ದು. ಇದು ಕುಡಿಸು ಅಮೇಲೆ ನೋಡು ನಮ್ಮ ಈ ಮದ್ದಿನ ಮಹಿಮೆ. (ಚಂಚಲೆ ಚಂಚಲೆ. ಒಳಗಿಂದ ಕೂಗು ಕೇಳಿಸುವುದು) ನೋಡು ಗಾಳಿಯಲ್ಲಿ ಬೆರತ ಈ ಮದ್ದಿನ ಪರಿಳಮಳದ ಘಾಟು ಆಗ್ಲೆ ಪ್ರತಾಪ ತೋರಿಸ್ತಾ ಇದೆ ಹೋಗೋಗು. (ದೃಶ್ಯ ಬದಲು)

ಚಂಚಲೆ : ಆ ಮದ್ದು ಕೊಟ್ಟಿದ್ದು ವೇಮನನಿಗೋ ನನಗೋ ಅಂತ ನನಗೆ ಈಗಲೂ ಅನುಮಾನ. ನಾನು ಏನು ಕೊಟ್ಟರು ಎಂದೂ ಬೇಡ ಎನ್ನದ ಅವರು ಅಂದು ಬೇಡ ಅಂದರು. ನನಗೆ ಭಯ ಆಯ್ತು. ನಿಮಗೆ ಶಕ್ತಿ ಬೇಕು ಇದು ಕುಡಿಯಿರಿ ಅಂದೆ ನೀನೆ ನನ್ನ ಶಕ್ತಿ ಅಂದ್ರು, ನೀನು ವಿಷಕೊಟ್ಟರು ಕುಡಿತೀನಿ ಅಂದ್ರು, ನನಗೆ ದುಃಖ

ಆಯ್ತು. ನಾಗಸಾನಿಯರ ಕಣ್ಣಲ್ಲಿ ಕಣ್ಣೀರು ಅಂತ ಯಾರದ್ರು ನಗಬೌದು. ಕುಡಿದವರೇ ಯಾಕೋ ತಲೆ ಸುತ್ತುತ್ತಾ ಇದೆ ಅಂತ ಕಳವು ಸೊಕ್ಕಿದವರ ಹಾಗೆ ಮಲಗಿದರು. ನನ್ನ ದುರಾದೃಷ್ಟ ಆ ಘಳಿಗೆ ಬಾಗಿಲು ಬಡಿಯಿತು. ಸೇವಕ ಭಯದ ಮುಖ ಹೊತ್ತು ಅವಸರವಸರದಲ್ಲಿ ಬಂದು ರಾಣಿಯವರು ಬಂದಿದ್ದಾರೆ ಅಂದ. ಬಂದವಳು ವೇಮನನ ಹೆಂಡ್ತಿ ಅಂತ ಅಂದುಕೊಂಡೆ. ಆದರೆ ಬಂದವರು ರಾಣಿ ನರಸಾಂಬ ಅಂತ ಗೊತ್ತಿರಲಿಲ್ಲ. ಒಳಗೆ ಬಂದ ರಾಣಿ ಕಂಡು ನನಗೆ ಭಯ ಸಂತೋಷಗಳು ಒಟ್ಟಿಗೆ ಆದವು. ದೇವಾಲಯದಿಂದ ನೇರ ನಡೆದು ಬಂದ ದೇವತೆಯಂತೆ ಕಾಣುತ್ತಿದ್ದರು. ಬನ್ನಿ ಕುಳಿತುಕೊಳ್ಳಿ. ಅಂದೆ ಆಕೆ ನನ್ನ ಮುಖವನ್ನೇ ನೋಡುತ್ತಿದ್ದರು. ಅವರು ನನ್ನ ಮೂಗುತಿಯನ್ನು ನೋಡುತ್ತಿದ್ದಾರೆ ಅಂದು ಕೊಂಡು.

ಚಂಚಲೆ : ಈ ಮೂಗುತಿ ನಿಮ್ಮದೆ. ಒಮ್ಮೆ ದೇವಾಲಯದಲ್ಲಿ ಕಂಡಿದ್ದೆ.

ನರಸಾಂಬ : ನನ್ನ ತಂಗಿ ಅಂದರೆ ವೇಮನನ ಹೆಂಡತಿಯೂ ಇದನ್ನು ಇಷ್ಟ ಪಟ್ಟಿದ್ದಳು. ನಿನ್ನ ಮೂಗಿಗೂ ಚನ್ನಾಗಿ ಒಪ್ಪುತ್ತದೆ.

ಚಂಚಲೆ : ತಾವು ಈ ವೇಳೆಯಲ್ಲಿ ಇಲ್ಲಿ.

ನರಸಾಂಬ : ನಿಮ್ಮ ಮನೆಯಲ್ಲಿ ಮಲ್ಲಿಗೆ ಗಿಡವೊಂದಿದೆಯಂತೆ. ಅದನ್ನು ತೆಗೆದು ಕೊಂಡು ಹೋಗೋಣವೆಂದು ಬಂದೆ. ಒಂದೆಸಳು ಮಲ್ಲಿಗೆಯನ್ನು ಕೊಡು ಸಾಕು. ವೇಮನನ್ನ ಬಿಟ್ಟು ಬಿಡುತ್ತೇನೆ ಎಂದೆಯಂತೆ.

ಚಂಚಲೆ : ಅವರು ಹಣದ ಮಾತಾಡಿ ನನ್ನನ್ನು ಹಂಗಿಸಿದರು ಆ ಆವೇಶದಲ್ಲಿ ನಾನು ಬಾಯಿ ತಪ್ಪಿ...

ನರಸಾಂಬ : ತಪ್ಪೇನು ನುಡಿದಿಲ್ಲ ನೀನು. ಆವೇಶದಲ್ಲಿ ನುಡಿದಾಗ ಸತ್ಯ ಕಾಣಿಸಿಕೊಳ್ಳುತ್ತದೆ. ಇರಲಿ ನಾನು ವೇಮನನ ಜೊತೆ ಮಾತನಾಡಬೇಕಿತ್ತು. ಅದಕ್ಕೆ ನಿನ್ನ ಅನುಮತಿ ಇದೆ ತಾನೆ?

ಚಂಚಲೆ : ತಾವೆಂದರೆ ಅವರಿಗೆ ದೈವ ಸಮಾನ. ಅವರ ಜಗತ್ತಿನಲ್ಲಿ ಇರುವ ಏಕೈಕ ದೈವವೆಂದರೆ ನೀವು ಮಾತ್ರ.

ನರಸಾಂಬ : ಹಾಗಾದರೆ ಅವನಿರುವ ಕೋಣೆ ತೋರಿಸು ಸಾಕು.

ಚಂಚಲೆ : ಅದರೆ ಅವರು ತಲೆನೋವೆಂದು ಈಗ ತಾನೆ ಮಲಗಿದ್ದಾರೆ. ನಾನು ಹೋಗಿ ನೀವು ಬಂದಿರುವುದನ್ನು ತಿಳಿಸಿ ಬರುತ್ತೇನೆ.

ನರಸಾಂಬ : ಬೇಡ ನಾನೇ ಎಬ್ಬಿಸುತ್ತೇನೆ. ನಾನು ಪ್ರತ್ಯೇಕವಾಗಿ ಮಾತನಾಡಬೇಕು. ಅಂದ ಹಾಗೆ ನೀನು ಒಂಟಿಯಾಗಿರುವುದನ್ನು ಕಲಿಯಬೇಕು. ಅವಳು ಅರಮನೆಯಲ್ಲಿ ಒಂಟಿಯಾಗಿದ್ದದ್ದು ಸಾಕು.

ಚಂಚಲೆ : ತಾವು ತಿಳಿದವರು. ಅವರು ಇಲ್ಲಿ ಬರುವಾಗ ನನ್ನ ಅನುಮತಿ ಕೇಳಲಿಲ್ಲ. ಇನ್ನು ಹೋಗುವಾಗ ಕೇಳತ್ತಾರೆ ಎಂದು ಹೇಗೆ ಭಾವಿಸಲಿ? ಇನ್ನು ನನ್ನಂತಹ ನಾಗಸಾನಿಯರಿಗೆ ಒಂಟಿತನಕ್ಕಿಂತ ಮಿಗಿಲಾದ ನಮ್ಮ ಸಂಗಾತಿ ಎಲ್ಲಿ ಸಿಕ್ಕುತ್ತಾರೆ.

ನರಸಾಂಬ : ನಿನ್ನ ನೋಯಿಸುವುದು ನನ್ನ ಉದ್ದೇಶವಲ್ಲ. ಅಂದ ಹಾಗೆ ನಾನು ಗುಟ್ಟಾಗಿ ಬಂದಿದ್ದೇನೆ. ಇದು ಗುಟ್ಟಾಗಿರಲಿ.

(ನರಸಾಂಬ ಹೋಗುತ್ತಾರೆ ದೃಶ್ಯ ಬದಲು)

ಚಂಚಲೆ : ನಾನು ಸುಮ್ಮನೆ ಯಾಕೆ ಶಿಲೆಯಂತೆ ನಿಂತುಬಿಟ್ಟೆ. ಬಹುಶಃ ವೇಮನ ಇನ್ನು ನನ್ನ ಕೈಬಿಟ್ಟುಹೋದ ಅಂತ ಒಳಗೆಲ್ಲೋ ಅನ್ನಿಸಿದ್ದರಿಂದಲೇ ಆಗಾಗಿರಬೇಕು. ಆದರೆ ನಾನು ವೇಮನ ಇಲ್ದೆ ಬದುಕುವುದು ಹೇಗೆ? ಅತ್ತಿಗೆ ಮೈದುನರು ಏನು ಮಾತನಾಡುತ್ತಿರಬಹುದು ಎಂದು ಇಣುಕಿ ನೋಡಿದೆ. ಏನೋ ಶಬ್ಧ ಕೇಳಸುತ್ತಿತ್ತು. ಅಯ್ಯೋ ಆ ದೃಶ್ಯವನ್ನು ಕಲ್ಪಿಸಿಕೊಳ್ಳಲು ನನಗೆ ಭಯ-ಹೇಸಿಗೆಯಾಗುತ್ತದೆ. ಒಳಗೆ ಏನೋ ಅನಾಹುತ ವಾಗಿರಬೇಕೆಂದು ದಿಕ್ಕು ತೋಚದೆ ಬೊಬ್ಬೆಯಿಟ್ಟೆ. ಜನ ಮನೆಯ ಮುಂದೆ ಜಮಾಯಿಸ ತೊಡಗಿದರು. ವೇಮನ ಮನುಷ್ಯ ಮೃಗದ ಹಾಗೆ ಅವರ ಮೈಮೇಲಿನ ಒಂದೊಂದೇ ವಸ್ತ್ರವನ್ನು ಸನ್ನಿ ಹಿಡಿದವರಂತೆ ಸೆಳೆದು ಬಿಸಾಡುತ್ತಿದ್ದ. ನರಸಾಂಬ ಅವರ ಆರ್ತತೆಯ ಶಬ್ಧಗಳು ಕೇಳಿಸ ತೊಡಗಿದವು. ಆ ಘೋರವನ್ನು ನೋಡಿಯೂ ನನ್ನ ಕಣ್ಣು ಹೊಡೆದು ಹೋಗದೆ ಇರುವುದು ನನಗೆ ಅಚ್ಚರಿ. ನನಗೆ ಅರ್ಥವಾಯಿತು ನಮ್ಮ ಮುದುಕಿ ಕೊಟ್ಟಿದ್ದ ಮದ್ದಿನ ಪರಿಣಾಮ ಇದು. ಅಯ್ಯೋ ಎಂಥಹ ಅನಾಹುತ ನಡೆಯುತ್ತಿದೆ. ತಡೆಯ ಬನ್ನಿ ಎಂದು ಬಾಯಿಬಾಯಿ ಬಡೆದುಕೊಂಡೆ. ನಾನು ಕಿರುಚಿದ ಶಬ್ಧಕೇಳಿ ರಾತ್ರಿಯಲ್ಲಿ

ನಾಗಸಾನಿ ಮನೆಗೆ ಕಳ್ಳರು ನುಗ್ಗಿರಬೇಕು ಎಂದು ಸುತ್ತ ಮುತ್ತಲಿನವರು ನಮ್ಮ ಮನೆಯ ಸುತ್ತ ಜಮಾಯಿಸ ತೊಡಗಿದರು. ನಮ್ಮ ಸೇವಕರ ಸಹಾಯದಿಂದ ಕೋಣೆಯ ಬಾಗಿಲು ತೆರೆದರೆ ಒಂದು ಎಳೆ ಬಟ್ಟೆ ಇಲ್ಲದೆ ಹುಟ್ಟ ಬಟ್ಟೆಯಲ್ಲಿ ನಿಂತಿದ್ದಾರೆ ರಾಣಿಯವರು. ವೇಮನ ಮುನ್ನುಗಿ ಬರುತ್ತಿದ್ದಾನೆ. ನಾನು ಒಳ ಬಂದವಳೆ ಆವೇಶ ಬಂದವಳಂತೆ ವೇಮನನಿಗೆ ಎದುರು ನಿಂತೆ. ಕಪಾಳಕ್ಕೆ ಬಾರಿಸಿದೆ. ವೇಮನ ಕುಸಿದುಬಿದ್ದ. ಆ ಘಳಿಗೆ ಮನೆ ಮುಂದೆ ದೊಡ್ಡ ಜನ ಸೇರಿದ್ದರು. ನನ್ನ ಸೀರೆಯೊಂದನ್ನು ನರಸಾಂಬ ಅವರಿಗೆ ಸುತ್ತಿ ಅವರನ್ನ ಹಿಂಬಾಗಿಲಿನಿಂದ ಕತ್ತಲಿಗೆ ಕಳುಹಿಸಿ ಮನೆ ಮುಂದಿನ ಬಾಗಿಲು ತೆರದು ಕಳ್ಳ ಓಡಿ ಹೋದನೆಂದೆ. ಏನಾದರು ಕೊಳ್ಳೆಯಾಯಿತೆ? ನಾಗಸಾನಿ ಮನೆಯಲ್ಲಿ ಕೊಳ್ಳೆಹೊಡೆಯಲು ಏನು ಉಳಿದಿರುತ್ತೆ? ಅಂತೆಲ್ಲ ಕಟಕಿ ಮಾತನಾಡುತ್ತಿದ್ದರು ಥೂ ಎಂದು ಅವರ ಮುಖಕ್ಕೆ ಉಗಿಯಬೇಕೆನಿಸಿದರೂ ನಾಲಿಗೆಯ ಮೇಲೆ ಪಸೆ ಆರಿ ಹೋಗಿತ್ತು. ಇದೆಲ್ಲ ಇನ್ನೂ ಕನಸಿನಂತೆ ಇರುವಾಗ ಎಷ್ಟೋ ಹೊತ್ತಿನ ಮೇಲೆ ವೇಮನ ಎಚ್ಚರಗೊಂಡ. (ದೃಶ್ಯ ಬದಲು)

ವೇಮನ : ಚಂಚಲೆ ಚಂಚಲೆ ನಾನೊಂದು ಸ್ವಪ್ನ ಕಂಡೆ. ರಂಬೆ ಕನಸಿನಲ್ಲಿ ಬಂದು ಮಲಗಿದ್ದ ನನ್ನ ಎಬ್ಬಿಸಿದಳು. ನಾನು ನೀನಿರಬೇಕೆಂದು ತಬ್ಬಿಕೊಳ್ಳಲು ಹೋದೆ. ಆಕೆ ತಪ್ಪಿಸಿಕೊಂಡಳು ಹಿಡಿಯಹೋದೆ. ಸಿಗದೆ ಓಡಿದಳು. ಮುಟ್ಟು ನೋಡುವ ಅಂದಳು. ಮುಟ್ಟೀದೆ ಬಿಟ್ಟಾನೆಯೇ. ಓಡಿ ಓಡಿ ಹಿಡಿಯ ಹೋದೆ. ಆಕೆ ಸೀರೆಯ ಸೆರಗು ಸಿಕ್ಕಿತ್ತು. ಆಕೆ ಓಡುತ್ತಿದ್ದಳು ನಾನು ಸೀರೆಯನ್ನು ಪೂರ್ತಿಯಾಗಿ ಸೆಳೆದು ಬಿಟ್ಟೆ. ಆಕೆ ನಾಚಿಕೆಯಿಂದ ಮುಖ ಮುಚಿಕೊಂಡಿದ್ದಳು. ನೋಡಿದೆಯಾ ಕನಸಿನಲ್ಲೂ ನಾನೇ ಗೆದ್ದೆ.

ಚಂಚಲೆ : ನೀನು ಸೋತು ಹೋದೆ. ನೀನು ಪಾಪಿ. ಅಲ್ಲಲ್ಲ ನಾನು ಪಾಪಿ. ನಾನು ಹಾಳಾಗಿ ಹೋದೆ.

ವೇಮನ : ಏನಾಯಿತು ಯಾಕಿಗೇ ಕಂಪಿಸುತ್ತಿರುವೆ. ಕನಸಿಗೆ ಭಯ ಪಡುವರೇನು? ಅಯ್ಯೋ ಹುಚ್ಚಿ ನೋಡಿಲ್ಲಿ....

ಚಂಚಲೆ : ಇದೇ ಏನು ಆ ಸೀರೆ. ಇದು ನಿನ್ನ ಪಾಲಿನ ನೇಣಿನ ಹಗ್ಗ. ನಿನ್ನ ಅತ್ತಿಗೆಯ ಸೀರೆ. ಈವರೆಗೆ ನಡೆದಿದ್ದು ಕನಸಲ್ಲ. ಬಂದವಳು

ಅಪ್ಸರೆಯೂ ಅಲ್ಲ. ಆಕೆ ನಿನ್ನ ಅತ್ತಿಗೆ, ನಿನ್ನ ಪಾಲಿನ ದೈವ ನರಸಾಂಬೆ.

ವೇಮನ : ಏನು ನಾನು ನನ್ನ ಅತ್ತಿಗೆ ಸೀರೆ ಸೆಳೆದನೆ. ಅಯ್ಯೋ ಸುಳ್ಳು. ಇರಲಾರದು. ದೈವ ನಿನ್ನ ಬಾಯಿಂದ ಸುಳ್ಳು ನುಡಿಸುತ್ತಿರಬೇಕು. ನನಗೂ ಅಪಮಾನಗಳಿಗೂ ಮಧ್ಯೆ ತೆರೆಯಾಗಿದ್ದ ಆ ನನ್ನ ಅತ್ತಿಗೆಯ ಮಾನಭಂಗಕ್ಕೆ ನಾನು ಮುಂದಾದೇನೆ. ಹಾ... ದುರ್ವಿಧಿಯೇ ಈ ಘೋರ ಕೃತ್ಯಕ್ಕೆ ಕೈ ಇಕ್ಕುವ ಮುನ್ನ ಸಾವೇಕೆ ನನ್ನ ಮುಕ್ಕದೆ ಸುಮ್ಮನಿತ್ತು. ಈಗೆಲ್ಲಿ ಹೋದಳು ನನ್ನ ತಾಯಿ. ಅವರು ನನ್ನನ್ನು ಶಪಿಸಿರಬೇಕಲ್ಲವೆ? ನಾನೇಕೆ ಮೃಗವಾದೆ.

ಚಂಚಲೆ : ನನ್ನ ದೊರೆಯೇ ದಯಮಾಡಿ ನಿಮ್ಮ ಕೈಯಾರ ಕೊಂದು ಬಿಡಿ ನನ್ನ. ನೀವೆಲ್ಲಿ ನನ್ನ ಕೈ ತಪ್ಪಿ ಹೋಗುತ್ತಿರೋ ಎಂದು ಮತ್ತಿನ ಔಷಧಿಯನ್ನು ಹಾಲಿನಲ್ಲಿ ಕೊಟ್ಟಿದ್ದೆ ನಿಮಗೆ.

ವೇಮನ : ಛೀ ವಂಚಕಿ, ನನಗೆ ಮೋಸ ಮಾಡಿದೆ. ನಾನು ಎಷ್ಟು ನಂಬಿದ್ದೆ ನಿನ್ನ.. ನಾನೀಗಲೇ ಹೋಗಿ ನನ್ನ ಅತ್ತಿಗೆ ಪಾದದ ಮೇಲೆ ಬಿದ್ದು ಕ್ಷಮಾಪಣೆಯನ್ನು ಕೇಳಬೇಕು. **(ಅಷ್ಟರಲ್ಲಿ ಸೇವಕ ಓಡಿ ಬರುತ್ತಾನೆ)**

ಸೇವಕ : ಘಾತವಾಯಿತು. ಪ್ರಭು ಘಾತವಾಯಿತು.

ವೇಮನ : ಏನಾಯಿತು ಬೊಗಳು.

ಸೇವಕ : ನಿಮ್ಮ ಅತ್ತಿಗೆ ನರಸಾಂಬೆಯವರು ಮೈಗೆ ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಮಂತ್ರಿಗಳು ಸುದ್ದಿ ತಿಳಿಸಲು ಹೇಳಿದರು.

ವೇಮನ : ಅಯ್ಯೋ ಅತ್ತಿಗೆ ನಾನು ಪಾಪಿ ಕೊಲೆಗಾರ. ನಾನು ವಿಶ್ವಾಸ ದ್ರೋಹಿ. ನಿನ್ನ ಕ್ಷಮೆಗೂ ನಾನು ಅರ್ಹನಾಗದೆ ಹೋದೆ. **(ಕುಸಿದು ಬೀಳುತ್ತಾನೆ ದೃಶ್ಯ ಬದಲು)**

●

ದೃಶ್ಯ – ೫

[ಬುರ್ರ ಕತೆಯವರು ಮತ್ತೆ ಕಥೆ ಮುಂದುವರೆಸಿದ್ದಾರೆ.]

ಏನು ಏನಾಯಿತೋ ವೇಮನ
ಹೂ ದಂಡೆ ಯಾಕೆ ಹಾವಾಯಿತೋ
ತಂದಾನಿ ತಾನೋ ತಾನಿ ತಂದಾನ ॥
ಕನಸು ಕತ್ತರಿಸಿ ಬೀದಿಗೆ ಬಿದ್ದವನೆ
ಕಣ್ಣಾ ದೀಪಾವ ಆರಿಸಿಕೊಂಡವನೆ
ಅಲಕಾವತಿಯಾದಿ ತಪ್ಪಿಸಿಕೊಂಡವನೆ
ಆಡಾಡುತ್ತಾಲೇ ಆಟ ಮಟಮಾಯವಾದನೆ
ಏನು ಎನಾಯಿತೋ ವೇಮನ
ಹೂ ದಂಡೆ ಯಾಕೆ ಹಾವಾಯಿತೋ॥

ಮಾತು : ಆ ರಾತ್ರಿ ಕಲ್ಲು ಕಲ್ಲು ಕರಗೋ ಹೊತ್ತಿನಲ್ಲಿ ನಾಗಸಾನಿಯ ಮನೆಯಿಂದ ಮೈ ಮನಸ್ಸು ಅಪವಿತ್ರಗೊಂಡಂತೆ ಆ ಕರಾಳ ಕತ್ತಲಿಗೆ ಬಂದ ವೇಮನ. ಜೀವನದಲ್ಲಿ ಮೊತ್ತಮೊದಲ ಬಾರಿಗೆ ದಿಕ್ಕುಗಳ ನಡುವೆ ನಿಂತು ದಿಕ್ಕು ತಪ್ಪಿಸಿಕೊಂಡಿದ್ದ. ಕತ್ತಲ ದಾರಿಯಲ್ಲಿ ನಡೆಯುತ್ತಿದ್ದ ಅವನಿಗೆ ಗೊತ್ತಿಲ್ಲದೆಯೇ ಬೆಳಕಿನ ದಾರಿಯನು ಅರಿಸಿ ಬರುತಲಿದ್ದ. ಅವನ ಅತ್ತಿಗೆಯ ಬೆತ್ತಲೆಯ ರೂಪ ನೆನಪಿಗೆ ಬಂದಂತೆ ಅಂಗಾಲಿನಲ್ಲಿ ಮುಳ್ಳು ಚುಚ್ಚಿದಂತೆ ಅಯ್ಯೋ ಎಂದು ಕನಲುತಿದ್ದ. ಆಕೆ ಅಪಮಾನ ಸಹಿಸದೆ ಬೆಂಕಿಯಲ್ಲಿ ಸಾಯುತ್ತಿರುವ ಚಿತ್ರ ನೆನಸಿಕೊಂಡರೆ ಕಾಲ ಕೆಳಗಿನ ದಾರಿ ಕೊಂಡವಾದಂತೆ ಕೆಂಡದ ಮೇಲೆ ನಡೆಯುವಂತೆ ಎನೋ ಮನಸ್ಸಿಗೆ ಬಂದು ಎತ್ತಲೋ ಹಿಂತಿರುಗಿ ಓಡುತ್ತಿದ್ದ. ಹೀಗೆ ಎಷ್ಟು ಹಗಲು ಎಷ್ಟು ರಾತ್ರಿ ನಡೆದ ವೇಮನನ ಮೈಮೇಲಿನ ಬಟ್ಟೆಗಳು ಹರಿದು ಹೋಗಿದ್ದವು. ಸುಖವನ್ನು ಮೊಗೆಮೊಗೆದು ಕುಡಿದ ಮೈಯಿಂದ ಕೀವು ರಕ್ತಗಳು ಹರಿಯುತ್ತಿದ್ದವು.

ಅವನ ಮನಸ್ಸು ಮುಳ್ಳು ಕಂಪೆಯ ಮೇಲೆ ಬಿದ್ದು ಬಟ್ಟೆಯಂತಾಗಿತ್ತು. ಚಿಂದಿಯಾಗಿತ್ತು. ಒಳಗೆ ಛಿದ್ರವಾಗಿ ಹೋಗಿದ್ದವನು ದೈವ ಇಚ್ಛೆಯೆಂಬಂತೆ ಶ್ರೀಶೈಲದ ಬೆಟ್ಟಗಳಿಗೆ ಬಂದು ಬಿಟ್ಟಿದ್ದ.

(ಶ್ರೀಶೈಲದ ಬೆಟ್ಟ ದಟ್ಟ ಕಾಡು ಗಿರಿಶಿಖರದ ಮುಂದೆ ನಿಂತಿರುವ ವೇಮನನ ಬೆನ್ನ ಹಿಂದೆ ಅಕ್ಕಮಹಾದೇವಿಯ ಛಾಯೆ ನಿಂತಿದೆ)

ವೇಮನ : ಎಂಥ ಪಾಪಿ ನಾನು ಸುಖವನ್ನು ಮೊಗೆ ಮೊಗೆದು ಕುಡಿಯಲೋಗಿ ಎಂಥ ಪಾಪಕ್ಕೆ ಕೈಹಾಕಿದೆ. ಯಾರು ನನ್ನನ್ನು ಮಗುವಿನಂತೆ ಕ್ಷಮಿಸುತಿದ್ದಳೋ ಆಕೆಯನ್ನು. ಛೀ ದಿಕ್ಕಾರವಿರಲಿ ಈ ಚಂಡಾಲ ಬದುಕಿಗೆ ಇನ್ನು ನಾನು ಜೀವಂತವಿದ್ದರೆ ಈ ಭೂತಾಯಿ ಕೂಡ ನನ್ನ ಪಾಪದಿಂದ ತಾನು ಅಪವಿತ್ರಳಾದಾಳು. ಎಲ್ಲ ಪಾಪಗಳನ್ನು ತೊಳೆಯುವ ಗಂಗೆ ನನ್ನ ಸೋಂಕಿನಿಂದ ತಾನು ಪಾಪಿಯಾದಾಳು. ಇಲ್ಲ ಕೊನೆಗಾಣಿಸಬೇಕು ಈ ಜೀವ ಬದುಕಲು ಅರ್ಹತೆಯನ್ನು ಕಳೆದುಕೊಂಡಿದೆ. ಯಾರೂ ಕಾಣದ ಈ ಎತ್ತರದ ಶಿಖರದ ತುದಿಯಿಂದ ಈ ಮಹಾ ಪ್ರಪಾತಕ್ಕೆ ಹಾರುತ್ತೇನೆ. **(ಇನ್ನೇನು ಹಾರಬೇಕು ಅಷ್ಟರಲ್ಲಿ ಹಿಂದಿನಿಂದ ಯಾರೋ ತಡೆದಂತಾಗುತ್ತದೆ)**

ಅಕ್ಕ : ನಿಲ್ಲು ಹಿಂತಿರುಗಿ ನೋಡಬೇಡ. ಆತ್ಮಹತ್ಯೆ ಮಹಾಪಾಪ.

ವೇಮನ : ಹಿಂತಿರುಗಲಾರದಷ್ಟು ದೂರ ಬಂದು ಬಿಟ್ಟಿದ್ದೇನೆ. ನಾನು ಮಹಾಪಾಪಿ.

ಅಕ್ಕ : ಪಾಪಕ್ಕೆ ಸಾವು ಪರಿಹಾರವಲ್ಲ.

ವೇಮನ : ನನಗೆ ನನ್ನ ನೆನಪುಗಳಿಂದ ಪರಿಹಾರಬೇಕು. ಅದಕ್ಕೆ ಸಾವನರಸಿ ಬಂದಿದ್ದೇನೆ.

ಅಕ್ಕ : ಸಾವನರಸಿ ಹೊಸ ಹುಟ್ಟುಗಳ ಜಾಗಕ್ಕೆ ಬಂದಿರುವೆ. ಇದು ಚನ್ನಮಲ್ಲಿಕಾರ್ಜುನ ಶಿಖರ.

ವೇಮನ : ನಿನ್ನ ನುಡಿ ಕೇಳಿದರೆ ಸುಟ್ಟಗಾಯದ ಮೇಲೆ ತಣ್ಣೀರು ಚಲ್ಲಿದಂತೆ ಅನಿಸುತ್ತದೆ. ನಾನು ಮಾಡಿರುವ ಪಾಪವನ್ನು ಕೇಳಿದರೆ ಕನಿಕರಿಸುವ ನೀನೇ ಈ ಶಿಖರದಿಂದ ನನ್ನನ್ನು ಆ ಪ್ರಪಾತಕ್ಕೆ ತಳ್ಳಿ ಬಿಡುವೆ ತಾಯಿ.

ಅಕ್ಕ : ನೀನೀಗ ಆ ಪಾಪದ ಆಳದ ಪ್ರಪಾತದಿಂದ ಎದ್ದು ಬೆಳಕಿನ ಶಿಖರವನ್ನು

ಏರಿಬಂದಿರುವೆ. ಕತ್ತಲೆಯಲ್ಲಿದ್ದಾಗ ಬದುಕಬೇಕೆಂದಿದ್ದೆ. ನೀನು ಬೆಳಕು ಬಂದಾಗ ಸಾಯುವ ಮಾತನಾಡುತ್ತಿರುವೆ.

ವೇಮನ : ಪಾಪಲೇಪಿತ ಮೈಯಿದು. ನಾನು ಅಳಿದು ಹೋಗಬೇಕು ತಾಯಿ.

ಅಕ್ಕ : ಪಾಪಿ ಅಳಿದರೆ ಪಾಪ ಅಳಿಯುವುದೆ? ನಿನಗಿಂತ ಮೊದಲೇ ಎಷ್ಟೋ ಜನ ಪಾಪಿಗಳು ಅಳಿದು ಹೋಗಿದ್ದಾರೆ. ಆದರೆ ಪಾಪ ಅಳಿದಿಲ್ಲ ಲೋಕದಲ್ಲಿ.

ವೇಮನ : ನಾನು ಹೆತ್ತವರ ಹೊಟ್ಟೆ ಉರಿಸಿದೆ. ಕಟ್ಟಿಕೊಂಡವಳ ಅಪಮಾನಿಸಿದೆ. ನೆರೆಹೊರೆಯವರ ಪೀಡಿಸಿದೆ. ಸೋದರ ಸತ್ತಾಗ ಸಂಭ್ರಮಿಸಿದೆ. ಮೇಲಾಗಿ ಅಹಂಕಾರಿಯಾಗಿ ತಾಯಂತ ನನ್ನ ಅತ್ತಿಗೆಯನ್ನ.

ಅಕ್ಕ : ಬೆತ್ತಲುಗೊಳಿಸಿದೆ. ಆಕೆ ಅಗ್ನಿಗೆ ಆಹುತಿಯಾದಳು.

ವೇಮನ : ಆ ಬೆಂಕಿ ನನ್ನನ್ನು ದಹಿಸುತ್ತಿದೆ ತಾಯಿ. ಒಲೆಯ ಮೇಲೆ ಉರಿದಂತಿದೆ ನನ್ನ ಪಾಡು. ನೀವು ನನ್ನನ್ನು ಏಕೆ ತಡೆಯುತ್ತಿದ್ದೀರಿ.

ಅಕ್ಕ : ನೀನು ಸುಡಬೇಕಿರುವುದು ಪಾಪವನ್ನ. ಅದು ಇನ್ನೂ ಬೇಕಾದಷ್ಟಿದೆ. ನೀನು ಪಾಪದ ಬೆನ್ನು ಹತ್ತಿ ಸುಡಬೇಕು. ಅಲ್ಲಿಯವರಿಗೆ ನಿನಗೆ ಮುಕ್ತಿಯಿಲ್ಲ.

ವೇಮನ : ಗಡ್ಡೆ ಕಟ್ಟಿಕೊಂಡು ಬಾದಿಸುತ್ತಿದ್ದ ಕುರು ಹೊಡೆದು ಕೀವು ರಕ್ತ ಹರಿಯುತ್ತಿರುವಂತೆ ಅನಿಸುತ್ತಿದೆ. ತಾಯಿ ನಿನ್ನ ಮಾತು ನನ್ನ ಅತ್ತಿಗೆ ಮಾತಂತಿದೆ. ನಾನೊಮ್ಮೆ ನಿಮ್ಮನ್ನು ನೋಡಬಹುದೇ?

ಅಕ್ಕ : ನೀನು ನನ್ನ ನೋಡಲಾರೆ. ಬೆತ್ತಲನು ಕಲ್ಪಿಸಿಕೊಂಡಿದ್ದಕ್ಕೇ ಇಷ್ಟು ದುಃಖಕ್ಕೆ ತುತ್ತಾಗಿರುವೆ.

ವೇಮನ : ಇಲ್ಲ ಇಲ್ಲ ನಾನು ನೋಡಲಾರೆ. ನನ್ನ ಅತ್ತಿಗೆಯ ಬೆತ್ತಲನ್ನು ನಾನು ನೋಡಿದ್ದರೆ ನನ್ನ ಕಣ್ಣುಗಳನ್ನು ಅಲ್ಲಿಯೇ ಕಿತ್ತುಕೊಳ್ಳುತ್ತಿದ್ದೆ.

ಅಕ್ಕ : ನೀನು ಇನ್ನು ಬಟ್ಟೆಯ ಹಂಗಿನಿಂದ ಪಾರಾಗಿಲ್ಲದಿರುವುದರಿಂದ ಬೆತ್ತಲಿಗೆ ನಾಚುತ್ತಿರುವೆ. ಲೋಕವನ್ನು ಮುಚ್ಚಿಕೊಂಡಿರುವ ಮಾನವೆಂಬ ಬಟ್ಟೆಯೇ ಮಾಯೆ. ಮೊದಲು ಆ ಮಾಯೆಯಿಂದ ಮುಕ್ತಿ ಪಡೆಯಬೇಕು. ಹೊಸ ಗುರುತು ಹುಡುಕಬೇಕು. ಲೋಕದ ಕತ್ತಲು ಕಾಣಬೇಕೆಂದರೆ ಬೆಳಕಿನ ಬೆತ್ತಲ ಮಾರ್ಗದಲ್ಲಿ ನಡೆಯಬೇಕು. ನಡೆಯುತ್ತೀಯೇ ಏನು?

ವೇಮನ : ಪ್ರಾಯಶ್ಚಿತ್ತದ ಹಾದಿಯಲ್ಲಿ ನಡೆಯುತ್ತೇನೆ. ಗುರಿಯಿಂದ ಗೊತ್ತು ಗುರಿಯಿಲ್ಲದ ಕಡೆ ನಡೆಯುತ್ತೇನೆ. ಆದಿಯಿಂದ ಅನಾದಿಯ ಕಡೆಗೆ.

ಅಕ್ಕ : ಬೆತ್ತಲಾಗದೆ ಬಯಲು ಸಿಕ್ಕದಿಲ್ಲಿ. ಬೆತ್ತಲೆಂದರೆ ಬೆಳಕಿನ ದಾರಿಯಲ್ಲಿ ಪಯಣ ದೀಪ ರಮಿಸಲು ಕ್ರಮಿಸುವ ಚಿಟ್ಟೆಯ ಮಾರ್ಗವದು. ಬೆಳಕೆಂಬ ಕತ್ತಲಿಂದ ಕತ್ತಲೆಂಬ ಬೆಳಕಿಗೆ ಹೊರಳುವ ಕಾಲಸಂಧಿ.

ವೇಮನ : ತಾಯಿ ನೀನು ಯಾರು? ಈ ಬೆಟ್ಟ ಶಿಖರದಲ್ಲಿ ಏನು ಮಾಡುತ್ತಿರುವೆ?

ಅಕ್ಕ : ಈರುಳ್ಳಿಯ ಸಿಪ್ಪೆಯಂತೆ ಎಲ್ಲಾ ಗುರುತುಗಳನ್ನು ಸುಲಿದು ಬಿಟ್ಟಿದ್ದೇನೆ. ಬಹಳ ವರ್ಷಗಳೇ ಆಯಿತು, ಹೆಸರು ಮರೆತಿದ್ದೇನೆ. ಗುರುತಿರುವುದು ಒಂದೇ, ಚನ್ನಮಲ್ಲಿಕಾರ್ಜುನ. ಅವನನ್ನು ಹುಡುಕುತ್ತಿದ್ದೇನೆ.

ವೇಮನ : ಮನದ ಕುದಿ ತಹಬಂದಿಗೆ ಬಂತು. ನನ್ನ ಮಾರ್ಗ ಹತ್ತುವುದಲ್ಲ. ಪ್ರಪಾತಕ್ಕೆ ಇಳಿಯುವುದು. ನೀನೆ ನನ್ನ ಗುರು. ನಿನ್ನಿಂದ ನಾನು ಮತ್ತೆ ಬದುಕಿದೆ.

ಅಕ್ಕ : ಬೆಳಕಿನ ದಾರಿಯಲ್ಲಿ ನಡೆದವರೆಲ್ಲಾ ಮತ್ತೆ ಬದುಕಿದವರೇ. ನಿನ್ನ ಗುರು ನಾನಲ್ಲ. ತಾನು ಬೆಂದು ನಿನಗೆ ಬೆಳಕ ತೋರಿದ ನಿನ್ನ ಅತ್ತಿಗೆ ನರಸಾಂಬೆ ನಿನ್ನ ಗುರು. ಪಾಪವಿರದ ಲೋಕವೇ ನಿನ್ನ ಗುರಿ. **(ಹಿಂದಿನಿಂದ ಅವನ ತಲೆ ಮೇಲೆ ಕೈ ಇಟ್ಟು ಆಶೀರ್ವಾದ ಮಾಡುತ್ತಾಳೆ. ಅಕ್ಕನ ವಚನದ ಸಾಲು ಕೇಳುತ್ತಿರುವಂತೆ ಆಕೆ ಹಿಂದೆ ಸರಿಯುತ್ತಾಳೆ)**

ವನವೆಲ್ಲ ಕಲ್ಪತರು ಗಿಡವೆಲ್ಲಾ ಮರುಜೇವಣಿ
ಶಿಲೆಗಳೆಲ್ಲ ಪರುಷ ನೆಲವೆಲ್ಲ ಅವಿಮುಕ್ತ ಕ್ಷೇತ್ರ
ಆಲವೆಲ್ಲ ನಿರ್ಜರಾಮೃತ ಮೃಗವೆಲ್ಲ ಪುರುಷ ಮೃಗ
ಎಡರುವ ಹರಳೆಲ್ಲ ಚಿಂತಾಮಣಿ
ಚನ್ನಮಲ್ಲಿಕಾರ್ಜುನಯ್ಯನಗಿರಿಯ ಸುತ್ತಿ
ನೋಡುತ್ತಾ ಬಂದು ಕದಳಿಯ ಬನವ ಕಂಡೆ ನಾನು.

ವೇಮನ : ಸಾಯಲು ಬಂದವನು ಹೊಸ ಹುಟ್ಟು ಪಡೆದೆ ತಾಯಿ. ನಿನ್ನ ಪಾದದ ಗುರುತುಗಳನ್ನು ಮಿಂಚುಹುಳುಗಳು ಹೂವನ್ನು ಮುತ್ತಿಕೊಂಡಿರುವ ಹಾಗೆ ಮುತ್ತಿಕೊಂಡಿದ್ದವು. ಆ ಪವಿತ್ರ ಪಾದಗಳನ್ನು ಮುಟ್ಟಲೋದೆ. ತಕ್ಷಣ ಮಿಂಚುಹುಳುಗಳು ಗುಪ್ಪನೆದ್ದು ಆಕಾಶದ ನೂರಾರು ದಿಕ್ಕಿನತ್ತ ಸಾವಿರ ದಾರಿಗಳಾಗಿ ಹಾರಿ ಹೋದವು. ಆ ಕ್ಷಣದಲ್ಲಿ ಹೊಳೆಯಿತು. ಸತ್ಯವನ್ನು ಕಾಣಲು ಬತ್ತಲೆಯ ಮಾರ್ಗ

ಹಿಡಿಯಬೇಕೆಂದು ನನ್ನ ಅತ್ತಿಗೆಯು ಬತ್ತಲಾಗಿ ಅನುಭವಿಸಿದ ಅಪಮಾನಕ್ಕೆ ಪ್ರಾಯಶ್ಚಿತ್ತವು ಕೂಡ ಬತ್ತಲೆಯೆಂದು ಹೊಳೆಯಿತು.

ತಾಯಿ ಹೊಟ್ಟೆಯಿಂದ ತಾ ಹೊರಗೆ ಬಂದಾಗ
ಮೊದಲು ಬಟ್ಟೆಯಿಲ್ಲ ಕಡೆಗೂ ಇಲ್ಲ
ನಡುವೆ ಅರಿವೆಯನುಡುವುದು ನಗೆಚಾಟು
ವಿಶ್ವಾದಾಭಿರಾಮ ವಿನರ ವೇಮ

ಮನಸ್ಸನ್ನು ಮುಸುಕಿದ ಮರೆಯ ಮಾಯೆಯೇ ಹರಿದ ಬಳಿಕ ಈ ಕಾಯವನ್ನು ಸುತ್ತಿರುವ ಈ ತುಂಡುಬಟ್ಟೆಯ ಹಂಗು ಇನ್ನೇಕೆ? **(ಬೆತ್ತಲಾಗುತ್ತಾನೆ).**

●

ದೃಶ್ಯ – ೬

[ಬುರ್ರಕತೆಯವರು ಮಾತು ಕತೆ ಮುಂದುವರೆಸುತ್ತಾರೆ.]

ಶ್ರೀಶೈಲದ ಕದಳಿವನದೊಳಗೆ
ಮೂಡತಲಿತ್ತು ಬೆಳಕು
ಅರಿವಿನ ನದಿಯಾಗಿ
ಬತ್ತಲೆ ಮೈಯೊಂದು ಇಳಿಯುತ ನಿಧಾನ
ಯೋಗಿ ಬಂದಾನ ವಿಶ್ವದಾಭಿರಾಮ
ವಿನರ ವೇಮ ಎಂದಾನ ॥ತಂದಾನ ತಾನ॥

ಈ ಪ್ರಕಾರವಾಗಿ ಮನದೊಳಗೆ ಮನೆ ಮಾಡಿಕೊಂಡಿದ್ದಂತಹ ಮೋಹಾನುರಾಗಗಳನ್ನು ಹಾವು ಪೊರೆ ಬಿಡುವಂತೆ ಒಂದೊಂದನ್ನೆ ತೊರೆಯುತ್ತಾ. ಬೆಳಕಿನ ತೊರೆಯಂತೆ ಹರಿಯುತ್ತಾ. ಲೋಕದ ದುಃಖದ ಬೇರನ್ನು ಅಗೆಯುತ್ತಾ. ಪಾಪವನು ಹುಡುಕಿ ಊರೂರು ಅಲೆಯುತ್ತಿರುವ ವೇಮನನ್ನು ಕಂಡು ತಮಗೆ ತೋಚಿದ ಹಾಗೆ ತಮ್ಮ ಕಲ್ಪನೆಯ ಕತೆಗಳನ್ನು ಕಟ್ಟಿಕೊಂಡರು.

ಬ್ರೌನ್ : ಸ್ವಲ್ಪ ನಿಲ್ಲಿಸಿ (ಟಿಪ್ಪಣಿ ಒಬ್ಬ ಪಂಡಿತ ಓಡಿ ಬಂದು ಬರೆದುಕೊಳ್ಳುತ್ತಾನೆ) ನಾನು ರಾಯಲ ಸೀಮೆಯನ್ನು ಕಳೆದ ಎಳೆಂಟು ವರ್ಷಗಳಿಂದ ಅಲೆಯುತ್ತಿದ್ದೇನೆ. ವೇಮನನ ಬೆನ್ನು ಹತ್ತಿದ್ದ ನನ್ನ ಹುಚ್ಚಿಗೆ ನನಗೇ ಅಚ್ಚರಿ. ದೇವರ ಮಗನಾದ ಯೇಸು ಕೂಡ ಜನರ ಮಧ್ಯೆ ಹೀಗೆಯೇ ಓಡಾಡಿದವನು ಎಂಬ ಸಮೀಕರಣವೋ ಅಥವಾ ದೇವಾಲಯ ಮತ್ತು ದೇವರನ್ನ ಬಂಧಿಯಾಸಿಗಿಕೊಂಡಿದ್ದ ವ್ಯಾಟಿಕನ್ ಮೇಲಿನ ನನ್ನೊಳಗಿನ ಪ್ರೊಟೆಸ್ಟೆಂಟ್ ಸಿಟ್ಟೋ. ಅಥವಾ ವೇಮನನ ಅತ್ಯಂತ ಸರಳವೂ ವೈಚಾರಿಕವೂ ಆಗಿರುತ್ತಿದ್ದ ಕವಿತೆಗಳ ಬಗೆಗಿನ ಮೋಹವೋ. ಅಥವಾ ಪಂಡಿತ ವರ್ಗ ಆತನನ್ನು ಹುಚ್ಚನೆಂದು ಜರಿದು ಜನಮಾನಸದಿಂದ ದೂರವಿಡಲು ನಡೆಸುತ್ತಿದ್ದ ಹುನ್ನಾರಗಳೋ.

ನನ್ನನ್ನು ಆತನ ಬಗೆಗೆ ಹುಚ್ಚನನ್ನಾಗಿ ಮಾಡಿದ್ದವು. ಶ್ರೀ ಶೈಲದ ಬೆಟ್ಟದಿಂದ ಹಿಂತಿರುಗಿ ಮತ್ತೆ ಜನರತ್ತ ಬಂದ ವೇಮನ ಸಾಮಾನ್ಯ ಜನರ ಬದುಕಿನಲ್ಲಿ ಬಿರುಗಾಳಿ ಎಬ್ಬಿಸಿರಬೇಕು. ಆದರೆ ನನಗೆ ಸಿಕ್ಕಿರುವ ಮಾಹಿತಿಯ ಪ್ರಕಾರ ವೇಮನ (ಬೆತ್ತಲಿಗೆ ಅಂಜಿದ್ದು ಪ್ರಭುತ್ವ, ವ್ಯವಸ್ಥೆ ಪರವಾಗಿದ್ದವರು.) ಎಲ್ಲಾ ಬಗೆಯ ಅಧಿಕಾರಗಳು ಸೃಷ್ಟಿಸಿದ್ದ ಸಾಮಾಜಿಕ ಹಾಗೂ ಜ್ಞಾನದ ರಚನೆಗಳನ್ನು ವೇಮನ ತನ್ನ ಪದ್ಯಗಳ ಮೂಲಕ ಈಡಾಡುತ್ತಿದ್ದ. ರೂಢಿಗೆ ಬಿದ್ದ ಮನಸ್ಸುಗಳನ್ನು ಕದಲಿಸಲು ಆತನ ಬೆತ್ತಲು ಕೂಡ ಪ್ರಯೋಜನಕ್ಕೆ ಬಂದಂತೆ ತೋಚುತ್ತಿದೆ. ವೇಮನ ಬಹು ದೊಡ್ಡ ಪ್ರದೇಶವನ್ನು ಓಡಾಡಿರುವಂತೆ ತೋರುತ್ತದೆ. ನಾನು ಕ್ಷೇತ್ರ ಕಾರ್ಯದಲ್ಲಿ ವೇಮನ ಮಾಡಿದ್ದಾರೆ ಎಂದು ಜನ ನಂಬಿರುವ ಎಷ್ಟೋ ಘಟನೆಗಳನ್ನು ಸಂಗ್ರಹಿಸಿದ್ದೇನೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಆಯ್ದು ಕೊಡುತ್ತಿದ್ದೇನೆ. ಇವು ಹೇಗೆ ನಡೆದವೋ ಗೊತ್ತಿಲ್ಲ. ಆದರೆ ಜನ ಗ್ರಹಿಸಿಕೊಂಡ ರೀತಿಯಲ್ಲಿ ಇಲ್ಲಿ ದಾಖಲಿಸಲಾಗಿದೆ.

(ಒಂದು ಆಶ್ರಮದಲ್ಲಿ ಗುರು ಕುಳಿತು ಭಕ್ತರಿಗೆ ಉಪದೇಶವನ್ನು ಬೋಧಿಸುತ್ತಿರುತ್ತಾನೆ ಅಲ್ಲಗೆ ವೇಮನ ಬಂದರಂತೆ)

ಕಳ್ಳ ಬೆಕ್ಕು ಮೆಳ್ಳೆಗಣ್ಣು ಬಿಡ್ತು
ಅರೆನೇತ್ರನಾಗಿ ಕುಳಿತಿದ್ದ ಗುರುವು
ಮಿಳಿಮಿಳಿ ಕಣ್ಣು ಪಿಳಿಪಿಳಿ ಬಿಡುತ್ತಾ
ಗುಯಿಗುಯಿ ಎಂದು ಗೊಣಗುತ್ತಾ
ಪರಲೋಕದೊಂದಿಗೆ ಪರಮಾತ್ಮನೊಂದಿಗೆ
ಮಾತಾನಾಡುತ್ತಿದ್ದ ಏನು ಚೋದ್ಯವೋ॥

ಜನ : ಸ್ವಾಮಿ ತಾವು ಮಹಾತ್ಮರು, ಜ್ಞಾನಿಗಳ ಸರ್ವಗುಣ ಸಂಪನ್ನರು. ತಾವು ನಮಗೆ ದೇವರ ಭಾಗ್ಯ ಕರುಣಿಸಬೇಕು.

ಶಿಷ್ಯ : ಹುಶ್ ಸದ್ದು ಮಾಡಬೇಡಿ, ಸ್ವಾಮಿಗಳು ದೇವರೊಂದಿಗೆ ಸಂಭಾಷಿಸುತ್ತಿದ್ದಾರೆ. ದೂರ ನಿಲ್ಲಿ, ನಿಮ್ಮ ಅಶುದ್ಧ ಜನ್ಮದ ನೆರಳು ಅವರ ಮೇಲೆ ಬೀಳಬಾರದು.

ಗುರು : (ನಿಧಾನ ಕಣ್ಣು ಬಿಟ್ಟು) ನಾವು ನಮ್ಮ ಪೂರ್ವ ಸಂಸ್ಕಾರದಿಂದ ಪರ ಲೋಕದ ವಸ್ತುವಾದ ಬ್ರಹ್ಮಜ್ಞಾನವನ್ನು ಕೈವಶ ಮಾಡಿಕೊಂಡಿದ್ದೇವೆ.

ಭಕ್ತ : ಬ್ರಹ್ಮ ಎಂದರೇನು?

ಗುರು : ಈ ಮನುಷ್ಯ ಪ್ರಪಂಚದಲ್ಲಿ ಇಲ್ಲ. ನಾನು ನೀನು ಈ ಮರಗಿಡ ಎಲ್ಲವನ್ನು ಅಲ್ಲಿ (ಮೇಲೆ ನೋಡುತ್ತಾ) ಅಲ್ಲಿ ಕುಂತು ಸೃಷ್ಟಿಸುತ್ತಾ ಇರುತ್ತಾನೆ? ಅವನನ್ನು ತಿಳಿಯುವುದಕ್ಕೆ ಎಷ್ಟೋ ಜನ್ಮಗಳ ಪುಣ್ಯ ಬೇಕು.

ವೇಮನ : (ಜನರಿಂದ ಮುಂದೆ ಬಂದು) ಬುರಡೆ ಎಲ್ಲಾ ಬುರುಡೆ.

ಗುರು : ಛೀ...ಛೀ... (ಹೌಹಾರಿ) ಈ ಅನಿಷ್ಟನನ್ನು ಆಶ್ರಮಕ್ಕೆ ಸೇರಿಸಿದವರಾರು. ಹೊರದಬ್ಬಿ ಈ ವಿಕಾರವನ್ನು ನೋಡಲಾರೆ.

ವೇಮನ : **ಆತ್ಮ ಶುದ್ಧಿ ಇಲ್ಲದ ಆಚಾರವೇಕೆ?**
ಭಾಂಡ ಶುದ್ಧಿ ಇಲ್ಲದ ಅಡಿಗೆಯೇಕೆ?
ಚಿತ್ತ ಶುದ್ಧಿಯಿರದ ಶಿವ ಪೂಜೆ ಏತಕೆ?
ವಿಶ್ವಾದಾಭಿರಾಮ ವಿನುರ ವೇಮ

ಗುರು : ಏನು ನನಗೆ ಚಿತ್ತ ಶುದ್ದಿಯಿಲ್ಲವೆ? ನಾನು ಅಜ್ಞಾನಿಯೇ? ವೇದಪರಾಂಗತ ಪಂಡಿತನಾದ ನಾನು ಮೂರ್ಖನೆ? ಈ ದುರ್ತನನ್ನ ಆಚೆ ತಳ್ಳಿ ಇಲ್ಲದೆ ಹೋದರೆ ಜನ್ಮಾಂತರಗಳಿಗೂ ಮುಕ್ತಿಯಿಲ್ಲದ ಬ್ರಹ್ಮ ಶಾಪವನ್ನು ನೀಡುತೇನೆ.

ಜನ : ಎಲೈ ಮೂಢ ಮತಿಯೇ ಸ್ವಾಮಿಗಳನ್ನ ಹಾಗೆಲ್ಲ. ಮಾತನಾಡಬಾರದು ಕ್ಷಮೆ ಕೇಳಿ. ನಡಿ ಹೊರಗೆ.

ಜನ : ಬ್ರಹ್ಮ ಎಂದರೇನು ಅಂತ ನೀನು ಹೇಳ್ತೀಯಾ? ನಾವು ಎಷ್ಟೋ ದಿನದಿಂದ ಕಾಯ್ತಾ ಇದ್ದೇವೆ. ಅಂತಹ ಸಮಯದಲ್ಲಿ ನೀನು ಬಂದು.

ವೇಮನ : **ಬ್ರಹ್ಮನೆಂಬ ವಸ್ತು ಪರದೇಶದಲ್ಲಿಲ್ಲ**
ಬ್ರಹ್ಮವೆನಲು ತಾನೇ ಬಟ್ಟ ಬಯಲು
ತನ್ನ ತಾನರಿಯುವುದೆ ಬ್ರಹ್ಮವು
ವಿಶ್ವಾದಾಭಿರಾಮ ವಿನುರ ವೇಮ.

ಭಕ್ತ : ಸ್ವಾಮಿಗಳೆ ಎಂತ ಮಾತು ಎಂಥ ಮಾತು ಬ್ರಹ್ಮಜ್ಞಾನದ ಗಂಟು ಬಿಚ್ಚಿದಂತಾಯಿತು.

ಗುರು : (ಸ್ವಗತ) ಎಲಾ ಇವನಾ! ಇವನಾರೋ ನನಗಿಂತಲೂ ಹೆಚ್ಚು ಅಭ್ಯಾಸ ಮಾಡಿ ನನ್ನನ್ನು ಜನರ ಮುಂದೆ ಅಪಮಾನ ಮಾಡಲು ಬಂದಿರುವ ಕಪಟಿ ಸನ್ಯಾಸಿ ಇರಬೇಕು. ಇವನಿಗೆ ತಕ್ಕ ಶಾಸ್ತಿ ಮಾಡಬೇಕು.

(ಕೇಳುವಂತೆ) ಈ ಹುಚ್ಚನನ್ನು ಹಿಡಿದು ಗುರು ನಿಂದೆ ರಾಜ ನಿಂದೆಗಳ ಅಡಿಯಲ್ಲಿ ಪ್ರಭುತ್ವಕ್ಕೆ ಒಪ್ಪಿಸಿ. ನಾನು ದೊರೆಗಳ ಜೊತೆ ಮಾತನಾಡುತ್ತೇನೆ. (ಸೇವಕರು ವೇಮನನನ್ನು ಸುತ್ತುವರಿಯುತ್ತಾರೆ.)

ವೇಮನ : ಸ್ವಾಮಿಗಳೇ ದೊರೆ ಯಾಕೆ? ನೀವು ಆ ಪರದ ದೇವರೊಂದಿಗೆ ಮಾತನಾಡಿ. ಅಹ್ಹಹ್ಹ. (ಎಳೆದೊಯುತ್ತಾರೆ).

ತನುವು ಅಸ್ಥಿರವೆಂದು ಧನವು ಅಸ್ಥಿರವೆಂದು
ತಿಳಿಸಬಲ್ಲ ತಾನು ತಿಳಿಯಲಾರ
ನುಡಿಯಬಹುದು ಜನ ನಡೆಯುವುದು ಅತಿ ಕಷ್ಟ
ವಿಶ್ವದಾಬಿರಾಮ ವಿನುರ ವೇಮ.

●

ದೃಶ್ಯ – ೭

[ಬುರ್ರ ಕತೆಯವರು ಮುಂದುವರೆಸುತ್ತಾರೆ.]

ಊರೂರು ತಿರುಗುತ್ತಾರೆ ವೇಮಣ್ಣನವರು
ಹಗಲಕ್ಕೊಂದಿರುಳು ಇರುಳಕ್ಕೊಂದಗಲು
ಕಷ್ಟ ಕಂಡರೆ ಮಮ್ಮುಲ ಮರುಗುತ್ತಾರೆ
ಅರ್ಥಪರ್ಥವಿಲ್ಲದ ಆಚಾರವ ಕಂಡು
ಒಡಿಮಿಡಿ ಒಡಿಮಿಡಿ ಮಾಡುತ್ತಾರೆ
ದಾರಿ ಕರೆದತ್ತ ಬರುತ್ತಾರೆ ವೇಮಣ್ಣ ಬರುತ್ತಾರೆ.

(ಊರ ಚಾವಡಿಯ ಬಳಿ ನ್ಯಾಯ ಪಂಚಾಯ್ತಿ ನಡೆಯುತ್ತಿದೆ. ನೋಡಲು ಕೃಶಾಂಗನಾಗಿರುವವನು. ಕೈ ಕಟ್ಟಿ ನಿಂತಿರುತ್ತಾನೆ. ಅಲ್ಲಿಗೆ ವೇಮನ ಬರುತ್ತಾನೆ)

ಪಂಚಾಯ್ತಿದಾರ : ಈಚಾರಣೆ ಏನ್ರಪ್ಪಾ. ಏನು ನ್ಯಾಯ?

ಪಿರ್ಯಾದಿ : ಸ್ವಾಮಿ ನಮ್ಮ ಮನೆಗೆ ಕಳ್ಳ ಬಂದು ಸಿಕ್ಕಿ ಬಿದ್ದವನೆ ಸ್ವಾಮಿ. ಅವನನ್ನು ಶಿಕ್ಷಿಸಿ ನನಗೆ ನ್ಯಾಯ ಕೊಡಬೇಕು.

ಪಂಚಾಯ್ತಿದಾರ : ಏನಾದರು ನಗನಾಣ್ಯ ಹೊತ್ತುಕೊಂಡು ಹೊಗಿದ್ದಾನೆ ಏನು?

ಪಿರ್ಯಾದಿ : ಇಲ್ಲ ಸ್ವಾಮಿ, ಹೋದದ್ದು ವಸ್ತುವಲ್ಲ ಸ್ವಾಮಿ ನನ್ನ ಪಾವಿತ್ರ್ಯ ಹಾಳಾಯಿತು. ಪಿತೃಲೋಕದಲ್ಲಿ ನನ್ನ ಪೂರ್ವಜರು ಕೋಪಗೊಂಡಿರುತ್ತಾರೆ. ಪಂಚಮನೊಬ್ಬ ನನ್ನ ಹೊಸಿಲು ತುಳಿದು. ಅಪವಿತ್ರಗೊಳಿಸಿದ ಸ್ವಾಮಿ. ಅವನನ್ನು ಅಲ್ಲೇ ಕೊಂದುಬಿಡುತ್ತಿದ್ದೆ.

ಒಬ್ಬ : ಕೊಲ್ಲಬೇಕಾದರೆ ಆ ಪಂಚಮನ ಮೈ ಮುಟ್ಟಬೇಕಲ್ಲ ಎನ್ನುವ ಒಂದೇ ಕಾರಣದಿಂದ ಪಾಪ ಬಿಟ್ಟಿದ್ದಾರೆ.

ಪಿರ್ಯಾದಿ : ನಗನಾಣ್ಯ ಹೋಗಿದ್ದರೂ ಚಿಂತೆ ಇರಲಿಲ್ಲ. ಆದ್ರೆ ಜಾತಿ ಕೆಟ್ಟಿತಲ್ಲ.

ಪಂಚಾಯ್ತಿ : ಯಾಕೋ ಹೊಲೆಯ ನೀನು ಈ ಶ್ರೀಮಂತರ ಮನೆಗೆ ನುಗ್ಗಿದ್ದು?

ಆರೋಪಿ : ಸ್ವಾಮಿ ಮೂರು ದಿನದಿಂದ ಊಟ ಇಲ್ಲ ಕೆಲಸಾನೂ ಇಲ್ಲ. ಭಿಕ್ಷೆ ಬೇಡಬಾರದು ಅಂತ ಕದಿಯಾಕೆ ಹೋದೆ ಸ್ವಾಮಿ.

ಪಿರ್ಯಾದಿ : ನೋಡಿದಿರಾ ನೋಡಿದರಾ. ಈ ಕುಲಗೆಟ್ಟವನ ಮಾತು. ಶಿಕ್ಷೆ ಪ್ರಕಟಿಸಿ. ಇದು ಸಮಾಜಕ್ಕೆ ಒಳ್ಳೆಯ ಪಾಠವಾಗಬೇಕು.

ಪಂಚಾಯ್ತಿದಾರ : ಇವನಿಗೆ ಹತ್ತು ಕೊರಡ ಏಟುಗಳನ್ನು ಹೊಡೆಯಿರಿ. (ಕಂಬಕ್ಕೆ ಕಟ್ಟಿದ್ದವನನ್ನು ಹೊಡೆಯುತ್ತಾರೆ)

ವೇಮನ : ಹೊಡೆಯಿರಿ. ಹೊಡೆಯಿರಿ ಹಸಿವನ್ನ ಸಾಯಿಸಲಂತೂ ನಿಮ್ಮ ಕೈಯಲ್ಲಿ ಆಗಲಿಲ್ಲ. ಕನಿಷ್ಟ ಹಸಿದವನನ್ನಾದರೂ ಸಾಯಿಸಿ.... ಹೊಡೆಯಿರಿ.

ಹುಲ್ಲ ಹುಡುಕಿ ತಿಂಬ ಹಸುವ ತಿಂಬುವರ
ಹೊಲೆಯ ಎಂಬರು ಅವನಿಯಲ್ಲಿ
ಹಂದಿಕೋಳಿ ತಿಂಬುವರನು ಪ್ರಾಜ್ಞರೆಂಬುವರೇ?
ವಿಶ್ವಾದಾಭಿರಾಮ ವಿನುರ ವೇಮ

ಪಂಚಾಯ್ತಿದಾರ : ಅವನ ಪರವಾಗಿ ಇವನನ್ನು ಕಟ್ಟಿ ಹೊಡಿಯಿರಿ. ಆಗ ಇವನಿಗೆ ಕುಲದ ಮಹಿಮೆ ಗೊತ್ತಾಗಲಿ. **(ಆಳುಗಳು ವೇಮನನ್ನು ಹಿಡಿದು ಕಂಬಕ್ಕೆ ಕಟ್ಟಿ ಹೊಡೆಯುವರು. ಅವರು ವೇಮನನಿಗೆ ಹೊಡೆಯುತ್ತಿದ್ದರೆ ಪಂಚಾಯ್ತಿದಾರರಿಗೆ ಮೈ ಮೇಲೆ ಬಾಸುಂಡೆಗಳು ಮೂಡುತ್ತಿರಲು)**

ಪಂಚಾಯ್ತಿದಾರರು: ಅಯ್ಯೋ ಅಯ್ಯೋ ನಿಲ್ಲಿಸಿರೋ ನಿಲ್ಲಿಸಿರೋ ಹೊಡಿಬ್ಯಾಡಿ.

ವೇಮನ : ಯಾಕರಪ್ಪ ಹೊಡಿರಿ. ಮೈಯೆಲ್ಲಾ ತುರಿಕೆ, ನಚ್ಚಗಿದೆ. ಇನ್ನೊಂದೆರಡು ಹಾಕಿ.

ಪಂಚಾಯ್ತಿದಾರರು: ಇವರು ಯಾರೋ ಮಹಾತ್ಮರು ಇದ್ದಾರೆ. ಇವರ ಮೈಮೇಲೆ ಬಿದ್ದ ಏಟುಗಳು ನಮಗೆ ತಗಲ್ತಾ ಇದ್ದವು.

ವೇಮನ : ಹೊಲೆಯ ಹೊಲೆಯಂತಾ ಎಷ್ಟೋ ವರ್ಷಗಳಿಂದ ಇವನ ಹೊಡಿತಾ ಇದ್ದೀರಿ.

ಪಂಚಾಯ್ತಿದಾರು : ಸ್ವಾಮಿ ನಮ್ಮ ತಪ್ಪನ್ನು ಮನ್ನಿಸಿ. ಇನ್ನು ಮುಂದೆ ನಾವು ಇಂತಹ ತಪ್ಪು ಮಾಡುವುದಿಲ್ಲ. ನಮ್ಮನ್ನು ನಂಬಿ.

ಹೊಲೆಯ : ಸ್ವಾಮಿ ದೇವರಂಗೆ ಬಂದು ಕಾಪಾಡಿದಿರಿ.

ವೇಮನ : ಕಾಪಾಡಲು ದೇವರು ಬರುವುದಿಲ್ಲ. ಅನ್ನವೇ ದೇವರು. ಸೂರ್ಯ ಚಂದ್ರ ದೇವರು. ಈ ಭೂಮಿ, ನೆಲ ನಿನ್ನ ದೇವರು. ತನ್ನ ತಾನು ಕಾಪಾಡಿಕೊಳ್ಳಬೇಕು.

ಹೊಲೆಯನೆಂದವನ ನಿಂದಿಪರು ಭುವಿಯೊಳು (ಮಾಲವಾನಿ ನೇಲ ಮರಿಮೇರಿ ನಿಂದಿಂಪ)

ಒಡಲು ರಕ್ತ ಮಾಂಸ ಒಂದೇ ತಾನೇ?
ಅಂತರಂಗದಲಿರುವವನ ಕುಲವಾವುದು?
ವಿಶ್ವಾದಾಭಿರಾಮ ವಿನುರ ವೇಮ

ದೃಶ್ಯ – ೮

[ನದಿಯ ದಡದಲ್ಲಿ ಎಡೆಯಿಟ್ಟು ವ್ಯವಸ್ಥೆ ನಡೆಯುತ್ತಿದೆ. ಜನರು ಆ ಸಿದ್ಧತೆಯಲ್ಲಿ ಇದ್ದಾರೆ. ಅನ್ನ ಪ್ರಸಾದಕೆ ಭಿಕ್ಷುಕರು ಕಾಯುತ್ತಿದ್ದಾರೆ]

ನದಿಯ ದಡದಲ್ಲಿ ಎಡೆಯ ಇಟ್ಟುಕೊಂಡು
ಕಾಯುತ್ತಾರೆ ಜನರು ಕಾಗೆಗಳಿಗೆ
ಅವರ ಒಳಗೆ ಇದ್ದಾವೆ ಕಾವ್ ಕಾವ್ ಎನ್ನುವ ಕಾಗೆ
ಕೂಗುಗಳನ್ನು ಕೇಳದವರು ಕರೆಯುತ್ತಾರೆ
ಕಾಗೆಗಳನ್ನ.

ಪೂಜಾರಿ : ನೋಡಿ ಈ ನದಿಯಲ್ಲಿ ಪುಣ್ಯ ಪಕ್ಷದಲ್ಲಿ ಸ್ನಾನ ಮಾಡಿ ಒಂದೇ ಮನಸ್ಸಿನಿಂದ ಎಡೆಯಿಟ್ಟರೆ.... ಸ್ವಾಹ. ಮೇಲಿನ ಲೋಕದಲ್ಲಿರುವ ನಿಮ್ಮ ಪೂರ್ವಿಕರ ಆತ್ಮಗಳು ಕಾಗೆಯ ರೂಪದಲ್ಲಿ ಬಂದು.... ಸ್ವಾಹ. ಈ ಪ್ರಸಾದವನು ತಿಂದು ನಿಮ್ಮನ್ನು ಆಶೀರ್ವದಿಸಿ ಹೋಗುತ್ತವೆ. ಸ್ವಾಹ. ಇದರಿಂದ ನಿಮಗೂ ಪುಣ್ಯ ಲಭಿಸುತ್ತದೆ. ಸ್ವಾಹ.

ಕರ್ತ : ನಮ್ಮ ಪಿತೃಗಳಿಗೆ ಮತ್ತಷ್ಟು ಸಂತೋಷವಾಗುವುದಕ್ಕೆ ನಾವೇನು ಮಾಡಬೇಕು ಸ್ವಾಮಿ?

ಪೂಜಾರಿ : ನೋಡಿ ಯಾರಾದರೂ ಬ್ರಹ್ಮಣರಿಗೆ ಗೋದಾನ ಮಾಡಿದರೆ ನಿಮ್ಮ ಪಿತೃಗಳಿಗೆ ಒಂದು ಸ್ವರ್ಗದ ಪುಣ್ಯ ಲಭಿಸುತ್ತದೆ. ಸ್ವಾಹ.

ಮರಿ ಪೂಜಾರಿ: ಭೂ ದಾನ ಮಾಡಿದರೆ ಏನು ಪುಣ್ಯ ಲಬಿಸುತ್ತದೆ. ಸ್ವಾಹ....

ಪೂಜಾರಿ : ಎರಡು ಸ್ವರ್ಗ ಪುಣ್ಯ ದಕ್ಕುತ್ತದೆ. ಸ್ವಾಹ.

ಮರಿಪೂಜಾರಿ: ಹೊನ್ನು ದಾನ ಮಾಡಿದರೆ... ಸ್ವಾಹ...

ಪುಜಾರಿ : ಮೂರುಸ್ವರ್ಗ ಪುಣ್ಯ ಲಭಿಸುವುದು ಸ್ವಾಹ...

ಕರ್ತ : ಸ್ವಾಮಿ ಹೊನ್ನೇ ದಾನ ಮಾಡುತ್ತೇನೆ. ಪಿಂಡ ತಿನ್ನಲು ಕಾಗೆಗಳನ್ನು ಕರೆಯಿರಿ ಸ್ವಾಮಿ.

ಪೂಜಾರಿ : ನಿಮ್ಮಂಥ ದಾನವಂತರ ಸಂಖ್ಯೆ ಭೂಮಿಯ ಮೇಲೆ ಜಾಸ್ತಿ ಆಗಲಿ.

ಮರಿ ಪೂಜಾರಿ: ನಾವು ಸ್ವಲ್ಪ ದೂರದ ಆಗೋ ಆ ಮರದ ಮರೆಯಲ್ಲಿ ಇರಬೇಕು. ಸ್ವಾಹ. ಇಲ್ಲದೆ ಹೋದರೆ ಆತ್ಮಗಳು ಸ್ವರ್ಗದಿಂದ ಇಳಿದು ಬರುವುದನ್ನು ನಾವು ನೋಡ ಬರದು ಸ್ವಾಹ. ನಡ್ರಿ ನಡ್ರಿ..

ಕರ್ತ : ಕಾಗೆ ಬರುತ್ತಾವ ಸ್ವಾಮಿ.

ಪೂಜಾರಿ : ಯಾಕೆ ನಿಮ್ಮ ಪಿತೃಗಳಿಗೆ ನಿಮ್ಮ ಮೇಲೆ ಕೋಪವೇ? ಸ್ವಾಹ ನೋಡ್ತಾ ಇರಿ.

(ಎಲ್ಲರೂ ಮರಗೆ ಹೋಗುತ್ತಾರೆ)

(ಸ್ವಲ್ಪ ಹೊತ್ತಿನಲ್ಲಿ ಆ ಮಾರ್ಗವಾಗಿ ಒಬ್ಬ ಭಿಕ್ಷುಕ ಬರುತ್ತಾನೆ)

ಭಿಕ್ಷುಕ : ಈ ದೇವರ ಮನೆ ಹಾಳಾಗಿ ಹೋಗ್ಲಿ. ಹಸಿಯೋ ಹೊಟ್ಟೆ ಕೊಟ್ಟ ಮೇಲೆ ಹೊತ್ತಿಗೆ ಒಂದಿಡಿ ಅನ್ನ ಕೋಡೊಕೇ ಏನಿವನಿಗೆ ದಾಡಿ. (ಪಿಂಡದ ಎಲೆ ನೋಡಿ) ಅಹಾ.. ದೇವರೆ ನೀನು ಇಷ್ಟು ದಯಾಮಯನೆಂದು ತಿಳಿಯಲಿಲ್ಲ. ಕ್ಷಮಿಸಪ್ಪ. (ಸುತ್ತಲು ನೋಡಿ) ಅಹಾ... ಪಯಸಾ ಪರುಮಾನ್ನ. ಇಂತ ಊಟ ತಿಂದು ಎಷ್ಟು ದಿನ ಆಗಿತ್ತು. (ಎಲೆಯ ಬಳಿ ಕುಳಿತು ಇನ್ನೇನು ತಿನ್ನಬೇಕು ಅಷ್ಟರಲ್ಲಿ)

ಮರಿ ಪೂಜಾರಿ: ಕರ್ತರೆ ನಿಮ್ಮ ಪೂರ್ವಿಕರು ಭಿಕ್ಷುಕನ ರೂಪದಲ್ಲಿ ಬಂದು ಪಿಂಡ ತಿಂತಾ ಇದೆ. ಸ್ವಾಹ..

ಪೂಜಾರಿ : ಅಯ್ಯೋಯ್ಯೋ ಅನಿಷ್ಟವೇ ಮುಟ್ಟಬೇಡವೋ ಪಾಪಿ. ಅದು ಮೇಲಿನ ಲೋಕದ ಪಿತೃಗಳಿಗೆ ಇಟ್ಟ ಪಿಂಡ. ಕರ್ತರೆ ಒದ್ದು ಓಡಿಸಿ ಅನಿಷ್ಟವನ್ನ. ಇಲ್ಲದೆ ಹೋದರೆ ನಿಮ್ಮ ಪಿತೃಗಳು ನರಕಕ್ಕೆ ಹೋಗುತ್ತಾರೆ.

ಕರ್ತ : (ಓಡಿ ಬಂದವನೆ ಆ ಭಿಕ್ಷುಕನನ್ನು ಒದೆಯುತ್ತಾನೆ) ಅಯ್ಯೋ ಚಂಡಾಲ ಅದು ಪಿತೃಪಿಂಡ. ಮುಟ್ಟಿ ಅಮಂಗಲ ಮಾಡಿದೆಯಲ್ಲೋ ನಿನ್ನ ಹಸಿವು ಮನೆ ಹಾಳಾಗ.

ಭಿಕ್ಷುಕ : (ಹಾರಿ ಬಿದ್ದವನೆ) ಅಯ್ಯೋ ಪಾಪಿಗಳ ಅನ್ನಕ್ಕೆ ಕೈಯಿಕ್ಕಿದ್ದರೆ ಪ್ರಾಣ ತೆಗಿತೀರಲ್ಲೋ.

ಪೂಜಾರಿ : ಕರ್ತರೆ ಆ ಪಾಪಿಯನ್ನು ಆ ಹರಿವ ನದಿಗೆ ತಳ್ಳಿ, ಪೀಡೆ ತೊಲಗಲಿ. ಇಂತವರು ಭೂಮಿಯ ಮೇಲೆ ಯಾಕೆ ಇದ್ದಾರೋ.

ಮರಿಪೂಜಾರಿ: ವ್ರತ ಹಾಳು ಮಾಡೋಕೆ. ಸ್ವಾಹ.

ಕರ್ತ : ನಡಿಯೋ ದರಿದ್ರವೇ. (ನೂಕುತ್ತಾನೆ. ಆತ ಹೋಗಿ ಅತ್ತಣಿಂದ ಬರುತ್ತಿದ್ದ ವೇಮನ ಅವರ ಕಾಲ ಬಳಿ ಬೀಳುತ್ತಾನೆ).

ವೇಮನ : ಯಾರಪ್ಪ ನೀನು ಏಳು. ಬಡವನಿಗೆ ಬಾಧೆ ತಪ್ಪದು. ಎಲವೋ ಮೂರ್ಖ ನಾನೊಂದು ಮಾತು ಕೇಳ್ತಿನಿ ನೀವು ತಿಳಿದವರು ಹೇಳಿ.

ಪಿಂಡಮುಲು ಚೇಸಿ ಪಿತುರುಲ ದಲಪೋಸಿ
ಕಾಕುಲಕನು ಬೆಟ್ಟು ಗಾಡ್ದಲಾರ
ಪೆಂಟದಿನೆಡುಗಾಕಿ ಪಿತಯೆಟ್ಟುಲಯನೋ
ವಿಶ್ವಾದಾಭಿರಾಮ ವಿನುರಾ ವೇಮ.
ಪಿತೃಗಳನು ನೆನೆದು ಪಿಂಡಗಳನಿಟ್ಟು
ಕಾಗೆಗಳನು ಕೂಗಿ ಕರೆವ ಕತ್ತೆಗಳಿರಾ
ಮಲ ತಿನ್ನುವ ಕಾಗೆ ಪಿತನಾದುದು ಹೇಗೋ
ವಿಶ್ವದಾಭಿರಾಮ ವಿನುರ ವೇಮ
(ಪೂಜಾರಿಗಳು ಜಾರಿಕೊಳ್ಳುವರು)

ವೇಮನ : ಎಲ್ಲಿ ಪೂಜಾರಿಗಳು ಆತ್ಮಗಳನ್ನು ಹುಡುಕಿ ಹೋದರೋ ಹೇಗೆ?

ಕರ್ತ : ಸ್ವಾಮಿ ಹಸಿದವನ್ನ ಅಪಮಾನ ಮಾಡಿದೆ ನನ್ನನ್ನು ಕ್ಷಮಿಸಿ. (ಭಿಕ್ಷುಕನ ಹತ್ತಿರ ಹೋಗಿ). ದಯಮಾಡಿ ಈ ಪ್ರಸಾದವನು ಸ್ವೀಕರಿಸಿ ನನ್ನನ್ನು ಹರಿಸಿ.

ದೃಶ್ಯ - ೯

[ಒಂದು ಸಂತೆ ನಡೆಯುತ್ತಿರುತ್ತದೆ. ತರಾವರಿ ವಸ್ತುಗಳು ವ್ಯಾಪಾರದಲ್ಲಿ ಮಗ್ನರಾಗಿರುತ್ತಾರೆ. ಮಾರವವರು ಕೊಳ್ಳುವವರು ಗಲಿಬಿಲಿ ಸದ್ದು.]

ಮೂರು ದಾರಿಯು ಕೂಡುವಡೆ
ಸಂತೆ ನಡೆದೈತೆ ಸಂತೆ ನಡೆದೈತೆ
ಸದ್ದು ಗದ್ದಲ ಕೇಳಿರೋ
ಆಸೆಗಳನ್ನು ಮಾರ ಬನ್ನಿರೋ
ಕನಸುಗಳನ್ನು ಕೊಳ್ಳಬನ್ನಿರೋ
ಸಂತೆ ನಡೆದೈತೆ.

(ಅಲ್ಲೊಂದು ಬೊಂಬೆಗಳ ಅಂಗಡಿ ಬಡಗಿ ಬೊಂಬೆಯನ್ನು ಚೆಕ್ಕುತ್ತಾ ಕುಳಿತಿರುತ್ತಾನೆ. ನೋಡಲು ಶ್ರೀಮಂತನಂತೆ ಕಾಣುವ ಕೈ ತುಂಬಾ ಬಂಗಾರದ ಒಡವೆ ತೊಟ್ಟಿರುವವನು ಬರುತ್ತಾನೆ ಬೊಂಬೆಗಳನ್ನು ನೋಡುತ್ತಾ ಒಂದನ್ನ ಕೈಗೆತ್ತಿಕೊಂಡು)

ಶ್ರೀಮಂತ : ಎಲೋ ಬಡಗಿ ಈ ಬೊಂಬೆಗೆ ಎಷ್ಟೋ ದುಡ್ಡು.

ಬಡಗಿ : ಹತ್ತು ವರಹ ಸ್ವಾಮಿ.

ಶ್ರೀಮಂತ : ಎನಂದೆ ಹತ್ತು ವರಹ! ದುಡ್ಡೇನು ಗಿಡದಿಂದ ಬಿಡಿಸಿ ಕೊಡುವ ಎಲೆಯೇ ಸರಿಯಾಗಿದರ ಬೆಲೆ ಹೇಳು.

ಬಡಗಿ : ಸ್ವಾಮಿ ಕಾಡಿನಿಂದ ಮರ ಕಡಿದು ತಂದು ಈ ರೂಪ ಕೊಡೋಕೆ ಹ್ಹತ್ತು ದಿನ ಕೆಲಸ ಮಾಡಿದ್ದಿನಿ. ಹೋಗಲಿ ಒಂಬತ್ತು ವರಹ ಕೊಡಿ

ಶ್ರೀಮಂತ : ಓಹೋ ಏನು ಘನಂದಾರಿ ಕೆಲಸ ಅದು, ಉಳಿ ಬಾಚಿ ಹಿಡಕಂಡು ಮರದ ತುಂಡು ಚೆಕ್ಕುವುದೇನು ಬ್ರಹ್ಮ ವಿದ್ಯೆ ಏನು?

ಬಡಗಿ : ನೋಡಿ ನಿಮಗೆ ಇಷ್ಟವಿದ್ದರೆ ಕೊಳ್ಳಿ, ಇಲ್ಲದೆ ಹೋದರೆ ಬಿಡಿ. ಆದರೆ ನನ್ನ ಕಸುಬಿನ ಬಗ್ಗೆ ಹೀನವಾಗಿ ಮಾತನಾಡಬೇಡಿ.

ಶ್ರೀಮಂತ : ಏನೋ ಮೂರು ಕಾಸಿನ ಬಡಗಿ ನಾನು ಯಾರು ಗೊತ್ತ? ಈ ಪಟ್ಟಣದ ದೊಡ್ಡ ವ್ಯಾಪಾರಿ. ಮಹಾರಾಜರು ನನಗೆ ವರ್ತಕರತ್ನ ಹೊನ್ನುಶೆಟ್ಟಿ ಅಂತ ಪ್ರಶಸ್ತಿ ಕೊಟ್ಟಿದ್ದಾರೆ. ಅಂತಾದ್ರಲ್ಲಿ ನೀನು ಒಬ್ಬ ಯಕಶ್ಚಿತ್ ಬಡಗಿ ನನಗೆ ಅಪಮಾನ ಮಾಡುವಂಗೆ ಮಾತನಾಡುತ್ತೀಯಾ? ಏನ್ರಿ ನೋಡ್ತಾ ಇದ್ದೀರಾ ಈ ಬಡಗಿ ಆಡ್ತಿರೋ ಮಾತನ್ನ ನೀವು ಸಾಕ್ಷಿ ಹೇಳಬೇಕು ನಾನು ಕೊತ್ವಾಲನ ಕರೆಸ್ತೀನಿ.

ಬಡಗಿ : ಸ್ವಾಮಿ ತಾವು ಗಲಾಟೆ ಮಾಡಬೇಡಿ. ನನ್ನ ಅಂಗಡಿಯಲ್ಲಿ ಇನ್ನು ಬೇರೆ ಬೇರೆ ಬೊಂಬೆಗಳಿವೆ. ನೀವು ಎಷ್ಟು ವರಹ ಕೊಡ್ತೀರಿ ಹೇಳಿ. ಅದಕ್ಕೆ ತಕ್ಕ ಬೊಂಬೆಯನ್ನೇ ಕೊಡ್ತಿನಿ.

ಶ್ರೀಮಂತ : ನೀನು ಮಾರಾಟ ಮಾಡೋಕೆ ಅನುಮತಿ ಪಡಕೊಂಡಿದ್ದೀಯಾ. ಎಲ್ಲಿ ಪ್ರವೇಶ ಸುಂಕ ಕಟ್ಟಿದ ರಸೀದಿ ತೋರಿಸು. ಇಲ್ಲದೆ ಹೋದರೆ ನಿನ್ನನ್ನು ಕೊತ್ವಾಲನಿಗೆ ಹಿಡುದ್ದು ಕೊಡ್ತಿನಿ.

ಬಡಗಿ : ನನ್ನ ವ್ಯಾಪಾರ ಕೆಡಿಸಬೇಡಿ. ಬೇಕಾದರೆ ಒಂದು ಬೊಂಬೆ ಪುಕ್ಕಟೆ ಕೊಡ್ತಿನಿ. (ಅಷ್ಟರಲ್ಲಿ ಇಬ್ಬರು ರಾಜಭಟರು ಆ ಮಾರ್ಗವಾಗಿ ಬರುತ್ತಾರೆ)

ಶ್ರೀಮಂತ : ನನಗೆ ಭಿಕ್ಷೆ ನೀಡುವಷ್ಟು ಸೋಕ್ಕೆ ನಿನಗೆ. ಮಾಡ್ತಿನಿ ಇರು. (ಗಟ್ಟಿಯಾಗಿ) ರಾಜ ಭಟರೆ ರಾಜಭಟರೆ ಬನ್ನಿ ನಿಮ್ಮ ಮೇಲೆ ಕೊತ್ವಾಲರ ಬಳಿ ದೂರು ಕೊಡ್ತೀನಿ. ಈ ಅರೆಕಸುಬಿ ಬಡಗಿ ನನ್ನನ್ನ ಈ ಹತ್ತುಜನರ ಮುಂದೆ ಅವಮಾನಿಸಿದ್ದಾನೆ. ನಾನು ದೂರು ಕೊಡ್ತಿನಿ ಖೈದು ಮಾಡಿ ಇವನನ್ನ.

ರಾಜಭಟ : ಎಲೋ ಬಡಗಿ, ಪಟ್ಟಣ ಶ್ರೀಮಂತರನ್ನು ಅಪಮಾನಿಸುವಷ್ಟು ಅಹಂಕಾರವೇ ನಿನಗೆ? (ಬಡಗಿಯ ಕೈಗೆ ಕೋಳ ತೊಡಿಸಲು ಮುಂದಾಗುತ್ತಾರೆ)

ಬಡಗಿ : ಸ್ವಾಮಿ ಮನೆಯಲ್ಲಿ ನನ್ನ ಹೆಂಡ್ತಿ ಮಕ್ಕಳು ಉಪವಾಸ ಸಾಯ್ತರೆ ನನ್ನನ್ನು ಬಿಡಿಸಿ. ಈ ಬೊಂಬೆಗಳನ್ನು ನೀವೇ ತೆಗೆದುಕೊಂಡು ಹೋಗಿ ಬೇಕಿದ್ದರೆ. (ಅಷ್ಟರಲ್ಲಿ ವೇಮನ ಅಲ್ಲಿಗೆ ಬರುತ್ತಾರೆ)

ವೇಮನ : ಬಹುಮತಿಯಿಂದ ಅಲಂಕರಿಸಬೇಕಾದ ಕೈಯಿಗಳಿಗೆ ಕೋಳ ತೊಡಸಿ. ಈ ಕೈಗಳು ಸೃಷ್ಟಿಸಿದ ವಸ್ತುವಿನ ಬೆಲೆ ಗೊತ್ತಿಲ್ಲದೆ ಖೈದು. ಅಂದ ಹಾಗೆ ಈ ಬಡಗಿ ಮಾಡಿದ ತಪ್ಪೇನು?

ಶ್ರೀಮಂತ : ನ್ಯಾಯ ಕೇಳೋಕೆ ನಿನ್ಯಾರು? ಅವನು ಈ ಮರದ ಸಣ್ಣ ತುಂಡಿಗೆ ಹತ್ತು ವರಹ ಅಂತ ಹೇಳಿ ನಮ್ಮಂತಹ ಶ್ರೀಮಂತರಿಗೆ ಅನ್ಯಾಯ ಮಾಡ್ತಾವನೆ.

ವೇಮನ : **ಸಿಗ್ಗಿಂತಯನು ಲೇಕ**
ಪರಲಸೊಮ್ಮುಲೆಲ್ಲ ಅಪರಿಂಚಿ
ವೇಷ ಭಾಷವಲನ ಮೋಸಂಬು ಜೇಯುನು
ವಿಶ್ವಾದಾಭಿರಾಮ ವಿನುರ ವೇಮ..
ಗೆಜ್ಜೆಯಷ್ಟು ಲಜ್ಜೆಯಿಲ್ಲದೆ
ಪರರಾಸ್ತಿಪಾಸ್ತಿಯನು ಅಪಹರಿಸಿ
ವೇಷಭಾಷೆ ಬಳಸಿ ಮೋಸಮಾಡುವರೆಲ್ಲಾ
ವಿಶ್ವದಾಭಿರಾಮ ವಿನುರ ವೇಮ

ನಿಮ್ಮನ್ನು ನೋಡಿದರೆ ಸಾಕು ಪಾಪ ನಿಮಗೆ ಆಗಿರೋ ಅನ್ಯಾಯಗಳು ಮೈಮೇಲೆ ಎದ್ದು ಕಾಣ್ತವೆ. ರಾಜಭಟರೆ ಖೈದಿಗೆ ರಾಜ ಮಾರ್ಯದೆ, ಬಡವರಿಗೆ ಸೆರೆ ಮನೆಯ ಸನ್ಮಾನ ಇದೇ ಏನು ನಿಮ್ಮ ರಾಜಕಾರ್ಯ. ಇಷ್ಟಕ್ಕು ವಿಚಾರಣೆ ಮಾಡಿದಿರೇನು?

ರಾಜಭಟರು : ಶ್ರೀಮಂತರು ಈತ ಅನ್ಯಾಯ ಮಾಡಿದ ಅಂತ ಹೇಳಲಾಗಿ.

ವೇಮನ : ಶ್ರೀಮಂತಿಕೆ ಮೈಮೇಲೆ ಇದ್ದರೆ ಅವನು ಆಡುವ ಮಾತು ನಿಜ. ಮೈಮೇಲೆ ಹರಿದ ಬಟ್ಟೆಯ ಬಡವನ ಮಾತು ಸುಳ್ಳು.

ಶ್ರೀಮಂತ : ಈ ಮರದ ಕೊರಡಿಗೆ ಹತ್ತು ವರಹ ಬೆಲೆ ಕೇಳಬಹುದೇ.

ವೇಮನ : ಮರದ ಕೊರಡಿಗೆ ನೀವು ಹೇಳಿದ ಬೆಲೆ ಸರಿ. ಆದರೆ ಆತ ಕೇಳಿದ್ದು ಆತ ಸೃಷ್ಟಿಸಿರುವ ಸೌಂದರ್ಯಕ್ಕೆ. ಅದಕ್ಕೆ ಬೆಲೆ ಕಟ್ಟುವುದು ಅವನಿಗೆ ಗೊತ್ತಿಲ್ಲ. ಬಡವನಿಗೆ ತನ್ನ ಬೆವರಿಗೆ ಬೆಲೆ ಕಟ್ಟುವುದು ಗೊತ್ತಾಗಿದ್ದರೆ ನೀವು ಶ್ರೀಮಂತರು ಉಪವಾಸದಿಂದ ಸಾಯಬೇಕಿತ್ತು. ನೀವು ಕೂಡ ಅನ್ನವೇ ತಿನ್ನಬೇಕಲ್ಲ.

ಶ್ರೀಮಂತ : ರಾಜಭಟರೆ ಈ ಅಧಿಕ ಪ್ರಸಂಗಿಯನ್ನ ಬಂಧಿಸಿ. ಕಳ್ಳನಿಗೊಂದು ಪಿಳ್ಳೆ ಸಾಕ್ಷಿ. ಇದೇನು ಪರುಷ ವಿದ್ಯೆ.

ವೇಮನ : (ಮರದ ತುಂಡು ಉಳಿಬಾಚಿ ಶ್ರೀಮಂತನ ಮುಂದೆ ಹಾಕಿ) ಮನೆಯಲ್ಲಿರೋ ಬಂಗಾರ ಸಾಲದ. ಇನ್ನು ಚಿನ್ನ ಬೇಕಾ? ಪರುಷ ವಿದ್ಯೆ. ಸ್ವಾಮಿ ಒಂದು ಕೆಲ್ಸ ಮಾಡಿ ಈ ಮರದ ಕೊರಡನ್ನು ಚೆಕ್ಕಿ ಬೊಂಬೆ ಮಾಡಿ. ಆಗ ನಿಮಗೆ ತಿಳಿಯುತ್ತೆ ಈ ಬೊಂಬೆಯ ಆಕಾರಕ್ಕೆ ಬರಲು ಇವನ ಮೈ ರಕ್ತ ಅದೆಷ್ಟು ಬೆವರಾಗಿ ಹರಿದಿದೆ ಅನ್ನುವುದು ಸೌಂದರ್ಯ ಅಂದರೆ ವಸ್ತುವಲ್ಲ ಶ್ರಮ. ಬಡವನ ಮೈ ಬೆವರೇ ಈ ಲೋಕವನ್ನು ಸುಂದರವಾಗಿ ಮಾಡಿರುವುದು.

ಶ್ರೀಮಂತ : ನಾನೇನು ಬಡಗಿಯಲ್ಲ ಮರ ಚೆಕ್ಕುವುದಿಕ್ಕೆ. ಈ ಹುಚ್ಚನ ಜೊತೆ ಮಾತೇಕೆ ನಡಿ ನಡಿ. (ಹೋಗುತ್ತಾನೆ)

ವೇಮನ : ಹೋಗು ಹೋಗು ಕನಿಷ್ಟ ಮನೆಯ ಮುಂದೆ ಒಂದು ಹೂ ಗಿಡವನ್ನು ಬೆಳಿ ನಿನಗೆ ಸೌಂದರ್ಯ ಅಂದರೆ ಏನು ಅಂತ ಅರ್ಥವಾಗುತ್ತದೆ.

(ಹಾಡು): ಭೂಮಿಲೋನೆ ಪುಟ್ಟು ಭೂಸಾರಮೆಲ್ಲನು
ತನುವುಲೋನ ಪುಟ್ಟು ತತ್ವಂಬುಲೆಲ್ಲನು
ಶ್ರಮಲೋನು ಪುಟ್ಟು ಸರ್ವಂಬು ತಾನವುನು॥ವಿ॥
ಭೂಮಿಯಲ್ಲಿಯೇ ಹುಟ್ಟುವುದು ಭೂಸಾರವೆಲ್ಲಾ
ತನುವೊಳಗೆ ಹುಟ್ಟುವುದು ತತ್ವಶಾಸ್ತ್ರಗಳೆಲ್ಲಾ
ಬೆವರೊಳಗೆ ಹುಟ್ಟಿ ಸರ್ವವೂ ತಾನಾಯ್ತು
ವಿಶ್ವದಾಭಿರಾಮ ವಿನುರ ವೇಮ

●

ದೃಶ್ಯ - ೧೦

[ವೃಕ್ಷದ ಕೆಳಗೆ ಸಂಜೆ ವೇಳೆಯಲ್ಲಿ ವೇಮನ ಕುಳಿತಿದ್ದಾನೆ. ಜನರು ಸುತ್ತುವರೆದಿದ್ದಾರೆ. ವೇಮನ ಪದ್ಯವನ್ನು ಹೇಳುತ್ತಿದ್ದಾನೆ.]

ವೇಮನ : **ಆಸೆಯನ್ನು ಬಿಡದೆ ದುಃಖವನ್ನು ದಾಟಲಾಗದು**
ಆಶೆಗಿಂತ ದೊಡ್ಡ ದುಃಖವೇನು ಇಲ್ಲ
ನೋಟ ನಿಲ್ಲದಿರಲು ಸುಖವು ಇಲ್ಲ
ಮನವು ನಿಲ್ಲದಿರಲು ಮುಕ್ತಿಯೇ ಇಲ್ಲ
ವಿಶ್ವಾದಾಭಿರಾಮ ವಿನುರ ವೇಮ

(ಗುಂಪಿನಿಂದ ವೇಮನನ ಹೆಂಡತಿ ಎದ್ದು ಬರುತ್ತಾಳೆ)

ಹೆಂಡತಿ : ಸ್ವಾಮಿ ನಾನು ಯಾರೆಂದು ಗುರುತು ಹಿಡಿದಿರೇನು?

ವೇಮನ : ಗುರುತು ಹಿಡಿದೆ. ನೀನು ದುಃಖಿ. ನಿನ್ನ ಕಣ್ಣುಗಳಲ್ಲಿ ಅದು ಕನ್ನಡಿಯ ಬಿಂಬದಂತೆ ಕಾಣುತ್ತಿದೆ.

ಹೆಂಡತಿ : ನಾನು ನಿಮ್ಮ ಹೆಂಡತಿ ಆಗಿದ್ದೆ ನೀವು ಮರೆತಿರಬಹುದು.

ವೇಮನ : ನಾನು ಗುರುತು ಮರೆತವನಲ್ಲ. ನೆನಪು ಸತ್ತವನು.

ಹೆಂಡತಿ : ನಾನು ನಿಮ್ಮನ್ನು ನಿಂದಿಸಿದೆ, ದೂರಿದೆ. ಅಕ್ಕ ನರಸಾಂಬೆಯ ಸಾವಿಗೂ ಕಾರಣಳಾದೆ. ನನಗೆ ಕ್ಷಮೆ ಬೇಕು.

ವೇಮನ : ನೀನು ಸತ್ತವನೊಂದಿಗೆ ಮಾತನಾಡಿದರೆ ಅದು ಈಗ ಬದುಕಿರುವವನಿಗೆ ಅರಿವಾಗುವುದಿಲ್ಲ. ಅಂತಹ ಪ್ರಯತ್ನ ನಿನ್ನನ್ನು ಮತ್ತಷ್ಟು ದುಃಖಕ್ಕೆ ದೂಡುವುದು.

ಹೆಂಡತಿ : ಗಂಡನ ಪುಣ್ಯದಲ್ಲಿ ಹೆಂಡತಿಗೂ ಪಾಲಿದೆ ಎನ್ನುವರು.

ವೇಮನ : ಉಪ್ಪು ತಿನ್ನದ ಮಾತ್ರಕ್ಕೆ ಉಪ್ಪಿನ ಋಣ ಕಡಿಮೆಯಾಗುವುದಿಲ್ಲ. ಬದಲಿಗೆ ಋಣದ ಹೊರೆ ಹಿರಿದಾಗುವುದು. ಆಸೆಯನ್ನು

ಪಳಗಿಸಲು ಪ್ರಯತ್ನಿಸಬಾರದು. ಅದಕ್ಕೆ ನೀನು ಆಳಾಗಬೇಕು. ಇಲ್ಲವೆ ಅದು ನಿನಗೆ ಆಳಾಗಬೇಕು.

ಹೆಂಡತಿ : ನಿಮ್ಮ ಹೆಂಡತಿ ಎಂಬ ಹೆಮ್ಮೆ ಬೇಡ. ಕನಿಷ್ಟ ನಾನು ನಿಮ್ಮ ದಾರಿಯಲ್ಲಿ ನಡೆಯಲು ಅನುಮತಿ ನೀಡಿ.

ವೇಮನ : ನನಗೆ ಕಂಡದ್ದನ್ನು ಹೇಳುವ ಸ್ವಾತಂತ್ರ್ಯವಿದೆಯೇ ಹೊರತು ತಪ್ಪನ್ನು ತಿದ್ದುವ ಅಧಿಕಾರವಿಲ್ಲ. ಒಂದೇ ದಾರಿಯಲ್ಲಿ ನಡೆದ ಮಾತ್ರಕ್ಕೆ ಎಲ್ಲರ ಗುರಿಗಳೂ ಒಂದೇ ಆಗಿರುವುದಿಲ್ಲ.

ಹೆಂಡತಿ : ನಾನು ಮತ್ತೆ ಹಿಂತಿರುಗಿ ಹೋಗಲಾರೆ. ಅಲ್ಲಿ ಕಾಡುವ ಭೂತಗಳು; ಬಿಕೋ ಎನ್ನುವ ಮನೆಗಳು ನನ್ನನ್ನು ಹಂಗಿಸುತ್ತವೆ.

ವೇಮನ : ಸ್ಮಶಾನಗಳನ್ನು ಹೊತ್ತು ತಿರುಗುವವರಿಗೆ ಭೂತಗಳ ಬಾಧೆ. ಭಯದ ಸೌಖ್ಯವನ್ನು ಸುಲಭವಾಗಿ ತೊರೆಯಲಾಗುವುದಿಲ್ಲ. ಬೇವನ್ನು ಒಮ್ಮೆಲೆ ಮೆಚ್ಚುವುದು ಕಷ್ಟ ತಿನ್ನುತ್ತಾ ತಿನ್ನುತ್ತಾ ಬೇವೂ ಕೂಡ ಸಿಹಿಯಾಗುವುದು.

ಹೆಂಡತಿ : ನಾನು ಸಿಹಿಗೆ ಬೇಸತ್ತು ಬೇವ ಬೇಡಿ ಬಂದಿದ್ದೇನೆ.

ವೇಮನ : ಫಲ ಹುಡುಕಿ ನೇಮ. ಗುರಿ ಹುಡುಕಿ ಪಯಣ ಅಪಾಯಕಾರಿ. ನಾನು ಬರುತ್ತೇನೆ. ಕರುಳು ತೊಳೆಯುವ ಹೊತ್ತಾಯಿತು.

(ಹಾಡು): ಮರವವಲೆ ಪಾಪ ಸಂಗತಿ
ಮರವಂಗಾವಲೆದು ದುರಮು ಮರಿ ವಿಶ್ವಮುಲೋ
ಮರುವವಲೆ ಪರುಲ ನೇರಮು
ಮರುವಂಗಾವಲದು ಮೇಲು ಮಹಿಲೋ ವೇಮಾ.

ಮರೆಯಬೇಕು ಪಾಪದ ಸಂಗತಿ
ಮರೆಯಬಾರದು ಕಷ್ಟಗಳನು ಲೋಕದಲ್ಲಿ
ಮರೆಯಬೇಕು ಪರರ ತಪ್ಪುಗಳನು
ಮರೆಯಬಾರದು ಭುವಿಯೊಳಗೆ ಒಳಿತು ಮಾಡಿದವರ
ವಿಶ್ವದಾಭಿರಾಮ ವಿನುರ ವೇಮ

ಬ್ರೌನ್ : ಇಂತಹ ನೂರಾರು ಘಟನೆಗಳನ್ನು, ಪಟ್ಟಿ ಮಾಡಲು ಸಾಧ್ಯವಿಲ್ಲದಷ್ಟನ್ನ ತಾವೇ ಕಂಡವರಂತೆ ಜನ ಉತ್ಸಾಹದಿಂದ

ಹೇಳುತ್ತಿದ್ದಾರೆ. ವೇಮನ ಅವರು ಊರೂರು ತಿರುಗಿದ್ದರಿಂದ ಜನರಲ್ಲಿ ವಿಶ್ವಾಸವನ್ನು ಮೂಡಿಸುತ್ತಿರುವಂತೆ ಸಮಾಜದಲ್ಲಿ ಮುಖ್ಯವಾಗಿ ಜಾತಿ ವ್ಯವಸ್ಥೆಯಲ್ಲಿ ಬಿರುಕುಗಳು ಕಾಣಿಸಿಕೊಂಡವು. ರಾಜ ಪ್ರಭುತ್ವಕ್ಕೆ ವೇಮನನ ಮೇಲೆ ದೂರುಗಳು ಬರಲಾರಂಬಿಸಿದವು. ಮೊದಲಿಗೆ ಯಾರೋ ಹುಚ್ಚನಿರಬೇಕೆಂದು ಪ್ರಭುತ್ವ ನಿರ್ಲಕ್ಷ್ಯ ಮಾಡಿತು. ಆದರೆ ದಿನ ಕಳೆದಂತೆ ವೇಮನ ಅವರು ನಡೆಸುತ್ತಿರುವ ಪ್ರಯಾಣದಲ್ಲಿ ರಾಜತ್ವ-ಧಾರ್ಮಿಕ ವ್ಯವಸ್ಥೆ-ವ್ಯಾಪಾರ ವ್ಯವಹಾರಗಳಿಗೆ ಅಡ್ಡಿಯಾಗುತ್ತಿರೋದು ಗಮನಕ್ಕೆ ಬಂತು ಅಂತ ಕಾಣುತ್ತೆ. ಈ ಪ್ರತಿರೋಧವನ್ನು ಗಿಡವಾಗಿದ್ದಾಗಲೆ ಬಗ್ಗಿಸಬೇಕೆಂದು ವೇಮನ ಅವರನ್ನು ಸಿಕ್ಕಲ್ಲಿ ಸೆರೆ ಹಿಡಿದು ತರುವಂತೆ ರಾಜರು ಆಜ್ಞೆ ಮಾಡಿದರು. ಬೆತ್ತಲೆಯೇ ವೇಮನನ ಗುರುತು ಎಂದು ಘೋಷಿಸಿದ್ದರು. ಈ ಪ್ರಕರಣ ನನಗೆ ಏಸು ಕ್ರಿಸ್ತನ ಶಿಲಬೆಗೆ ಏರಿಸಲು ನಡೆಸಿದ ವಿಚಾರಣೆಯನ್ನು ನೆನಪಿಗೆ ತರುತ್ತಿದೆ.

●

ದೃಶ್ಯ – ೧೧

[ವೇಮನನ ಸುದ್ದಿ ಹಬ್ಬಿ ನಾಡಿಗೆಲ್ಲಾ ಪಕ್ಕದ ಕನ್ನಡ ನಾಡಿನಲ್ಲಿ ವೇಮನ ಸಮಕಾಲೀನನಾದ ಸರ್ಜಜ್ಞ ಕವಿ ಕೂಡ ಭೈರಾಗಿಯಾಗಿ ಲಂಗೋಟಿಯನ್ನು ಮಾತ್ರ ಧರಸಿ ಕೈಯಲ್ಲಿ ಭಿಕ್ಷಾ ಪಾತ್ರೆ ಹಿಡಿದು ಬಾಳು ಮಾಡುತ್ತಿದ್ದವರು. ವೇಮನನನ್ನು ನೋಡಲು ರಾಯಲಸೀಮೆಗೆ ಬಂದರು.]

(ರಾಜನ ಆಸ್ಥಾನಕ್ಕೆ ರಾಜ ಭಟರು ವೇಮನನೆಂದು ತಪ್ಪಾಗಿ ತಿಳಿದು ಸರ್ವಜ್ಞನನ್ನು ಎಳೆದು ತರುತ್ತಾರೆ)

ಕೊತ್ವಾಲ : ತಮ್ಮ ಆಜ್ಞೆಯಂತೆ ಬತ್ತಲೆ ಮೈಯಲ್ಲಿ ಊರೂರು ತಿರುಗುತ್ತಾ ಜನರಿಗೆ ಬುದ್ಧಿ ಹೇಳುತ್ತಿದ್ದ ವ್ಯಕ್ತಿಯೊಬ್ಬನನ್ನು ನೆನ್ನೆಯ ರಾತ್ರಿಯೇ ಬಂಧಿಸಿದ್ದೇವೆ ಪ್ರಭು. ತಾವು ಅನುಮತಿ ಕೊಟ್ಟರೆ ನ್ಯಾಯಸ್ಥಾನದಲ್ಲಿ ಹಾಜರು ಪಡೆಸುತ್ತೇವೆ.

ಶಾಸ್ತ್ರಿ : ಕೊನೆಗೂ ಸೆರೆ ಸಿಕ್ಕನೆ ದೈವದ್ರೋಹಿ. ಪ್ರಭು ಆತನಿಗೆ ಕೊಡುವ ಶಿಕ್ಷೆ ಮುಂದಿನ ಸಮಾಜಕ್ಕೆ ಬಹುದೊಡ್ಡ ಪಾಠವಾಗಬೇಕು.

(ಸೈನಿಕರು ಸರ್ವಜ್ಞನನ್ನು ಕರೆತರುತ್ತಾರೆ)

ದೊರೆ : ವೇಮನ ಬೆತ್ತಲು ಮನುಷ್ಯ ಅಂದಿದ್ದರಿ ಅಲ್ವೇ?

ಪುರೋಹಿತ : ಸೈನಿಕರು ತಮ್ಮ ಮುಂದೆ ಹಾಜರು ಪಡಿಸಲು ತುಂಡು ವಸ್ತ್ರವನ್ನು ಸುತ್ತಿರಬೇಕು ಪ್ರಭು.

ಕೊತ್ವಾಲ : ಸ್ವಾಮಿ ಈ ತುಂಡು ವಸ್ತ್ರ ನಾವು ಉಡಿಸಿದ್ದಲ್ಲ. ಬಂಧನದ ಸಮಯದಲ್ಲಿಯೇ ಇತ್ತು ಎಂದು ನಮ್ಮ ಸೈನಿಕರು ಹೇಳಿದರು ಪ್ರಭು.

ದೊರೆ : ನೀನು ಯಾರು?

ಸರ್ವಜ್ಞ : **ಇವನಾರವ ಇವನಾರವ ಎನಿಸದಿರಯ್ಯ**
ಇವ ನಮ್ಮವ ಇವ ನಮ್ಮವ ಎನಿಸಯ್ಯ
ನನ್ನನ್ನು ಜನ ಸರ್ವಜ್ಞ ಎನ್ನುತ್ತಾರೆ ಸ್ವಾಮಿ

ಮಂತ್ರಿ : ವೇಷ ಬದಲಿಸಿಕೊಂಡಿರಬೇಕು.

ಪುರೋಹಿತ : ವೇಷ ಮಾತ್ರವಲ್ಲ ಸ್ವಾಮಿ ಹೆಸರನ್ನು ಬದಲಿಸಿಕೊಂಡಿದ್ದಾನೆ. ಇದು ನ್ಯಾಯಸ್ಥಾನವನ್ನು ತಪ್ಪುದಾರಿಗೆ ಎಳೆದು ಶಿಕ್ಷೆಯ ಪ್ರಮಾಣದಿಂದ ತಪ್ಪಿಸಿಕೊಳ್ಳುವ ಉಪಾಯ ಇದು ಪ್ರಭು. ವಿಶ್ವಾದಾಭಿರಾಮ ಎಂದರೆ ವಿಶ್ವದ ಗುರುತಾಗಿರುವವನು ರಾಮ ಎಂದು ಅರ್ಥ. ಈ ಸರ್ವಜ್ಞ ಎಂಬ ಹೆಸರು ಕೂಡ ಸರ್ವವನು ತಿಳಿದವನು ಎಂದರ್ಥ. ಈ ಎರಡು ಹೆಸರುಗಳು ಅರ್ಥ ದೃಷ್ಟಿಯಿಂದ ಒಂದೇ ಪ್ರಭು.

ದೊರೆ : ನಿನ್ನ ತಂದೆ ತಾಯಿ ಊರು?

ಸರ್ವಜ್ಞ : **ಹೆತ್ತವಳು ಮಾಳಿ ಎನ್ನನೊತ್ತಿ ತೆಗೆದವಳು ಕೇಶಿ**
ಕತ್ತು ಬೆನ್ನ ಹಿಡಿದವಳು ಕಾಶಿ–ಮೊರದೊಳೆನ್ನ
ಬತ್ತಲಿರಿಸಿದಳು ಸರ್ವಜ್ಞ

ಮಂತ್ರಿ : ಪೂರ್ವ ನೆನಪು ಸಂಪೂರ್ಣ ಅಳಸಿ ಹೊದಂತಿದೆ ಪ್ರಭು. ಅತಾರ್ಕಿಕವಾಗಿ ಏನೇನೋ ಮಾತನಾಡುತ್ತಿದ್ದಾನೆ.

ಪುರೋಹಿತ : ಈತ ಬಲೆ ಠಕ್ಕನಿರುವಂತಿದೆ ಪ್ರಭು. ನೋಡ್ತಿರಿ ತಾನು ವೇಮನನೇ ಅಲ್ಲವೆಂದರೂ ಅಚ್ಚರಿಯಲ್ಲ. ಆದರೆ ಪ್ರಭು ನನ್ನ ಭಾಷಾ ಜ್ಞಾನದಿಂದ ಹೇಳಬಲ್ಲೆ. ಅಲ್ಲಿ ಮಾಳಿ ಎಂಬ ಪದದಿಂದ ವೇಮನ ಅತಿಯಾಗಿ ಪ್ರೀತಿಸುತ್ತಿದ್ದ ಪಾತರದವಳು ಎಂಬ ಅರ್ಥವನ್ನು ಹೊರಡುತ್ತದೆ ಪ್ರಭು.

ದೊರೆ : ನಿನ್ನ ಕಾಯಕವೇನು?

ಸರ್ವಜ್ಞ : ಪಾಪವನು ಹುಡುಕಿ ಅಲೆಯುವುದು. ಕಂಡದ್ದನ್ನ ಕಂಡಂಗೆ ನುಡಿಯುವುದು.

ಪುರೋಹಿತ : ನೋಡಿದಿರಾ ಪ್ರಭು ಈ ಕಪಟಿಯ ಆಟವನ್ನು? ವೇಮನನೆಂದರೆ ಎಲ್ಲಿ ಶಿಕ್ಷೆಗೆ ಗುರಿಯಾಗಬೇಕಾದಿತೋ ಅಂತ ನಾಟಕವಾಡುತ್ತಿದ್ದಾನೆ. ಈತನನ್ನು ನಂಬಬೇಡಿ.

ಸರ್ವಜ್ಞ : ದೀನರಂ ತಿಳಿಯದ ಪ್ರಭುತ್ವವಿದ್ದೇನು?
ಯೋಗಿಯಿಂ ಅರಿಯದ ಯೋಗವೇಕೆ?
ವ್ಯಾಧಿಯಂ ತಿಳಿಯದ ವೈದ್ಯನಿದ್ದೇನು?
ವಿಶ್ವಾದಾಭಿರಾಮ ವಿನರ ವೇಮ

ಪುರೋಹಿತ : ಶಿವ ಶಿವಾ ಈ ಹೊಲಸು ನುಡಿಗಳನು ಕೇಳಲಾರೆ. ದೇವರು ಮತ್ತು ದೊರೆ ಇಬ್ಬರನ್ನು ನಿಂದಿಸುವುದೇ ಈ ಯೋಗಿಗಳ ಮುಖ್ಯ ಕಸುಬಾಗಿರುವಂತೆ ತೋರುತ್ತಿದೆ. ಈ ತಪ್ಪಿಗೆ ಘನ ಶಿಕ್ಷೆಯಾಗಬೇಕು.

ದೊರೆ : ಪ್ರಭುವಿನ ಮುಂದೆ ಪ್ರಭುತ್ವವನ್ನು ಹೀಗಳೆಯುತ್ತಿರುವುದು ಉದ್ಧಟತನದ ಲಕ್ಷಣವಲ್ಲವೆ?

ಸರ್ವಜ್ಞ : ವಿರಾಗಿ ಅಂಜಬೇಕಿರುವುದು ಸುಖಕ್ಕೆ ಕಷ್ಟಕ್ಕಲ್ಲ. ಉತ್ತಮ ಪ್ರಭುತ್ವವೆಂಬುದು ಎಂದಿಗೂ ಲೊಳಲೊಟ್ಟೆ.

ಪುರೋಹಿತ : ನೋಡಿದಿರಾ ಪ್ರಭು. ಈ ಹುಚ್ಚರನ್ನು ನಿಯಂತ್ರಿಸದಿದ್ದರೆ ಮುಂದೊಂದು ದಿನ ಆಧ್ಯಾತ್ಮಿಕ ಅರಾಜಕತೆಯನ್ನು ಸೃಷ್ಟಿಸುತ್ತಾರೆ. ಸಿಂಹಾಸನ ದೈವಾವಕೃಪೆಗೆ ತುತ್ತಾಗಬೇಕಾದೀತು.

ದೊರೆ : ಮಂತ್ರಿಗಳೆ ಈತನ ಮೇಲಿನ ಆಪಾದನೆಗಳು ಏನು?

ಮಂತ್ರಿ : ಪ್ರಭು ಇವರು ಬೆತ್ತಲು ತಿರುಗುವುದಲ್ಲದೆ ಅದನ್ನು ಸಮರ್ಥಿಸುತ್ತಿರುವುದರಿಂದ ಇಡೀ ಸಮಾಜವೇ ನಾಚಿಕೊಂಡಿದೆ. ಇವರ ಈ ಕಾರ್ಯದಿಂದಾಗಿ ಸಾಮಾಜಿಕ ಸ್ವಾಸ್ಥ್ಯವು ಕೆಡುವುದೆಂದು ಸಮಾಜದ ಗಣ್ಯರು ಭಯಗೊಂಡಿದ್ದಾರೆ. ಮಾನವಂತರು ಮುಖ್ಯವಾಗಿ ಹೆಣ್ಣುಮಕ್ಕಳು ಮನೆಗಳಿಂದ ಹೊರ ಬರದಂತಾಗಿದ್ದಾರೆ.

ದೊರೆ : ಬತ್ತಲೆಯನ್ನು ಈಗಲು ಸಮರ್ಥಿಸುತ್ತೀರೇನು?

ಸರ್ವಜ್ಞ : ಬತ್ತಲೆ ಎಂದರೆ ತೊಡುವ ಬಟ್ಟೆಯೆಲ್ಲ. ಅದು ನಡೆಯುವ ದಾರಿ.

ದೊರೆ : ಅಂದರೆ ಈ ಅರೋಪವನ್ನು ನಿರಾಕರಿಸುತ್ತೀರೇನು?

ಸರ್ವಜ್ಞ : ನಿರಾಕರಿಸಬೇಕಿರುವುದು ಆರೋಪವನ್ನಲ್ಲಾ ಪ್ರಭು. ಮೈ ಮೇಲಿನ ಬಟ್ಟೆಗಳನ್ನ. ಕಾಯ ಬೆತ್ತಲಾಗದೆ ಮನಸ್ಸು ಬೆತ್ತಲಾಗುವುದಿಲ್ಲ. ವಿಚಾರಿಸಿದರೆ ಬಟ್ಟೆ ತೊಟ್ಟವರು ಕೂಡ ಬೆತ್ತಲಾಗಿಯೇ ಇದ್ದಾರೆ.

ಪಂಡಿತ : ಏನು ನಾನು ದೊರೆಗಳು ಎಲ್ಲರೂ ಬೆತ್ತಲೆ ಎಂದರೆ ಏನರ್ಥ. ನಮ್ಮ ಮೈ ಮೇಲಿನ ಈ ರೇಷಿಮೆಯ ವಸ್ತ್ರಗಳು ಕಾಣುತ್ತಿಲ್ಲವೆ? ಇದು ವಿತಂಡವಾದ ಪ್ರಭು.

ಸರ್ವಜ್ಞ : ಮರೆಯ ಹಿಂದೆ ಇರುವುದು ಏನೆಂದು ತಿಳಿದಿರುವಾಗ ಅದನ್ನ ಮುಚ್ಚಿದ್ದೇವೆ ಎಂದು ಭ್ರಮಿಸಬಹುದೆ?

ದೊರೆ : ಇರಲಿ ಮುಂದಿನ ಆರೋಪವನ್ನು ಓದಿ.

ಮಂತ್ರಿ : ಪ್ರಭು ದೇವಾಲಯಗಳನ್ನು ಸೆರೆಗಳೆಂದೂ, ದೇವರಗಳನ್ನು ಕಲ್ಲುಗುಂಡುಗಳೆಂದು, ಅದರಲ್ಲೂ ಪುರೋಹಿತರನ್ನು ನಾಯಿಗಳೆಂದೂ ಕತ್ತೆಗಳೆಂದೂ ಜರಿದಿದ್ದಾರೆ ಇವರು ಎನ್ನುವುದು ಎರಡನೆಯ ಆಪಾದನೆ.

ಪಂಡಿತ : ಪ್ರಭು ಇದು ದೈವ ದ್ರೋಹ. ನಮ್ಮ ಸನಾತನವಾದ ಧಾರ್ಮಿಕ ವ್ಯವಸ್ಥೆಯ ಅಡಿಪಾಯವನ್ನು ಹಾಳುಗೆಡುವುವ ಪ್ರಯತ್ನ.

ಸರ್ವಜ್ಞ :

ಜೀವಲಿಂಗ ಪೂಜೆ ಚೇಸಿನ ವಾರಿಕಿ
ಶಿಲಲ ರೂಪಮಂದು ಚಿಂತಯೇಲ
ಚೆಲಗಿ ಮಧುವುಗ್ರೋಲ ಚೇದು ರುಂಚಿಚುನಾ ॥ವಿ॥

ಜೀವಲಿಂಗವ ಪೂಜೆ ಮಾಡಿದವರಿಗೆ
ಶಿಲೆಗಳ ರೂಹಿನ ಚಿಂತೆಯೇಕೆ
ಜೇನಿಗೊಲಿದ ನಾಲಿಗೆಗೆ ಕಹಿ ರುಚಿಸುವುದೇ
ವಿಶ್ವದಾಭಿರಾಮ ವಿನುರ ವೇಮ

ಸರ್ವಾಂತರ್ಯದಲ್ಲೂ ಸಂಚರಿಸುವವನನ್ನು ನಿರ್ಭಂದಿಸುವುದು, ಜಂಗಮವಾಗಿರುವ ಚೈತನ್ಯವನ್ನು ಶಿಲೆಯಾಗಿಸುವುದು, ಹೊಟ್ಟೆಯೇ ಇಲ್ಲದವನಿಗೆ ನೈವೇಧ್ಯ ಇಡುವುದು ಇವು ದೈವ ದ್ರೋಹವಲ್ಲವೆ?

ದೊರೆ : ಆಯ್ತು. ಮುಂದಿನ ಆರೋಪವೇನು?

ಮಂತ್ರಿ : ಇದು ತುಂಬಾ ಗಂಭೀರವಾದ ಪ್ರಶ್ನೆ. ಏಕೆಂದರೆ ಇದು ನಮ್ಮ ಜಾತಿ ವರ್ಣಗಳಿಗೆ ಸಂಬಂಧಿಸಿದ ಪ್ರಶ್ನೆ.

ಪಂಡಿತ : ಪೂರ್ವಜನ್ಮದ ಪಾಪ ಪುಣ್ಯಗಳ ಆಧಾರದಲ್ಲಿ ಮನುಷ್ಯರು

ಜಾತಿಗಳಲ್ಲಿ ಹುಟ್ಟುತ್ತಾರೆ. ಆದರೆ ಈ ತಲೆ ತಿರುಕ ಯೋಗಿಗಳು ಜಾತಿ ಎನ್ನುವುದೇ ಸುಳ್ಳು ಎಂದು ವಾದಿಸಿ ವರ್ಣ ಸಂಕರವನ್ನು ಪ್ರೋತ್ಸಾಹಿಸುತ್ತಿದ್ದಾರೆ. ಸಂಕರಕ್ಕೆ ನಮ್ಮ ರಾಜ್ಯದಲ್ಲಿ ಮರಣದಂಡನೆ ರೂಢಿಯಲ್ಲಿದೆ ಪ್ರಭು.

ಮಂತ್ರಿ : ವ್ಯಕ್ತಿಯನ್ನು ಕೊಂದರೆ ಆಲೋಚನೆ ಸಾಯುವುದಿಲ್ಲ ಪಂಡಿತರೆ. ಆಲೋಚನೆಯನ್ನು ಕೊಲ್ಲುವ ಉಪಾಯ ಇದ್ದರೆ ಹೇಳಿ.

ದೊರೆ : ಜಾತಿಗಳು ಬ್ರಹ್ಮ ಸೃಷ್ಟಿಯೆಂದು ಎಲ್ಲರೂ ನಂಬಿರುವಾಗ. ನೀನೇಕೆ ಅದನ್ನು ತಿರಸ್ಕರಿಸುತ್ತೀಯಾ?

ಸರ್ವಜ್ಞ : **ಜಾತಿ ಹೀನನ ಮನೆಯ ಜೋತಿ ತಾ ಹೀನವೇ**
ಜಾತಿ ವಿಜಾತಿ ಎನಬೇಡ
ಶಿವನೊಲಿದಾತನೆ ಜಾತಿ ಸರ್ವಜ್ಞ

ಪಂಚಭೂತಗಳ ಬೇಧವನಲ್ಲದೆ ಬೇರೆ ಇಲ್ಲ ಪ್ರಭು. ಜಾತಿ ಇದೆ ಎನ್ನುವುದು ಕಟ್ಟುಕತೆ. ಮನುಷ್ಯ ಮನುಷ್ಯರನ್ನು ಬೇಟೆಯಾಡಲು ಮಾಡಿಕೊಂಡಿರುವ ಮೋಸದ ಕಣ್ಕಟ್ಟು ಈ ಜಾತಿ ಈಪದ್ಧತಿ.

ಮಂತ್ರಿ : ನೀವು ಸ್ವರ್ಗದ ಪಿತೃಗಳನ್ನು ಕಾಗೆಗಳೆಂದು ಕರೆದಿರೆಂದು ನಗರ ಪ್ರಮುಖರು ಬೇಸರಗೊಂಡಿದ್ದಾರೆ. ದೇವರು ಬೇಡ ಕನಿಷ್ಟ ಸತ್ತು ಸ್ವರ್ಗದಲ್ಲಿರುವ ಹಿರಿಯರನ್ನು ನೀವು ಕಾಗೆಗಳೆಂದು ಜರೆದಿದ್ದು ಸರಿಯೆ?

ಸರ್ಜಜ್ಞ : ಒಂದು ಕಡೆ ಹಸಿದವರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗಟ್ಟೆಜೀವ ನೀಡುವ ಅನ್ನವನ್ನು ಪೋಲು ಮಾಡುವುದು ಧರ್ಮವೇ? ಇದು ಜೀವದ್ರೋಹವಲ್ಲವೆ?

ಮಂತ್ರಿ : ಪ್ರಭು ತಾನು ದೈವ ಹಂತಕ ಶಿವಯೋಗಿಯೆಂದು ತನ್ನನ್ನು ತಾನು ಕರೆದುಕೊಂಡು ಸುಳ್ಳನ್ನು ಸಾರುತ್ತಿರುವುದರಿಂದ ಜನರು ಕೂಡ ಈತನ ಮಾತಿಗೆ ಮತಿ ಕೊಡುತ್ತಿದ್ದಾರೆ ಎಂದೂ ನಮ್ಮ ರಾಜ್ಯದಲ್ಲಿ ಇರುವ ಎಲ್ಲಾ ಅಪರಾಧಗಳ ಅಡಿಯಲ್ಲೂ ಇವರ ಮೇಲೆ ಆರೋಪಗಳನ್ನು ಹೊರಿಸಲಾಗಿದೆ.

ದೊರೆ : ಏನು ಯೋಗಿಗಳೆ ನೀವು ಮಾತಿನ ಪಟ್ಟುಗಳ ಪಂಟಿಂಗರೆಂದುಕೊಂಡಿದ್ದೆ. ನೀವು ಕೊಲೆಗಾರರೇನು?

ಸರ್ವಜ್ಞ : **ಬ್ರಹ್ಮಂ ಕೊಂದು ವಿಷ್ಣುವಿನೊಳ್ ಬೆರಸಿ**
ವಿಷ್ಣುವಂ ಕೊಂದು ಶಿವನಲ್ಲಿ ಬೆರಸಿ
ಶಿವನ ಸಂಹರಸಿ ಶಿವಯೋಗಿಯಾಗಬೇಕು
ವಿಶ್ವಾದಾಭಿರಾಮ ವಿನುರ ವೇಮ

ಬ್ರಹ್ಮನ ಕೊಂದಲ್ಲದೆ ಹರಿ, ಹರಿಯ ಕೊಂದಲ್ಲದೆ ಹರ, ಹರನ ಕೊಂದಲ್ಲದೆ ಯೋಗಿಯಾಗಲಾರ. ಈ ಮೂವರನು ಕೊಂದಲ್ಲದೆ ಶಿವಯೋಗಿಯಾಗಲಾರ.

ದೊರೆ : ನಿಮ್ಮ ಸಮರ್ಥನೆಗಳು ಕೇಳಲು ಸರಿ ಎನ್ನಿಸಿದರೂ ಸಮಾಜದ ಹಿತಾಸಕ್ತಿಗೆ ಪ್ರತಿಕೂಲವಾಗಿವೆ ಎಂದು ನಮಗೆ ಅನ್ನಿಸಿದ್ದರಿಂದ ನಿಮಗೆ.

(ಹೊರಗೆ ಸದ್ದಾಗುವುದು)

ಭಟ : **(ಒಳಗೆ ಬಂದು)** ಪ್ರಭು ಇನ್ನೊಬ್ಬ ಬೆತ್ತಲೆ ವ್ಯಕ್ತಿಯನ್ನು ನಮ್ಮ ಸೈನಿಕರು ಬಂಧಿಸಿ ತಂದ್ದಿದ್ದಾರೆ. ಆತ ತಾನೇ ವೇಮನ ಎನ್ನುತ್ತಿದ್ದಾನೆ ಪ್ರಭು.

ದೊರೆ : ಏನು ಇನ್ನೂ ಒಬ್ಬ ವೇಮನ! ಕರೆದು ತನ್ನಿ.

ಭಟ : **(ಅರೆ ಹುಚ್ಚನಂತಿರುವವನನ್ನು)** ನಿಂತ್ಕೋ ಸರಿಯಾಗಿ. ಇದು ದೊರೆ ಆಸ್ಥಾನ.

ವೇಮನ : ಎಲವೋ ಹುಚ್ಚು ದೊರೆಯೇ ನಾನು ವೇಮನ. ವಿಶ್ವದಾಭಿರಾಮ.

ದೊರೆ : ಈ ಇಬ್ಬರಲ್ಲಿ ಯಾರು ವೇಮನ?

ಮಂತ್ರಿ : ಈತ ವೇಮನನಾದರೆ ಮತ್ತೆ ಇಲ್ಲಿ ನಿಂತು ಇಷ್ಟು ಹೊತ್ತು ವಿಚಾರಣೆಯಲ್ಲಿ ತಾನೇ ವೇಮನನೆಂದು ಸಮರ್ಥಿಸಿ ಮಾತನಾಡಿದವರು ಯಾರು?

ದೊರೆ : ಎಷ್ಟು ಜನರಿದ್ದಾರೆ ಇಂತಹ ಹುಚ್ಚರು ಇನ್ನು ರಾಜ್ಯದೊಳಗೆ?

ಪುರೋಹಿತ : ಎಲ್ಲಾ ಅಯೋಮಯವಾಗಿದೆ ಪ್ರಭು.

(ಸರ್ವಜ್ಞನತ್ತ ಓಡಿಬರುವ ವೇಮನ ಸರ್ವಜ್ಞನ ಕೈಹಿಡಿದು)

ವೇಮನ : ನೀವು ಯಾರು? ಎಲ್ಲಿಂದ ಬಂದಿರಿ? ನನ್ನಿಂದಾಗಿ ನೀವೇಕೆ ಇಷ್ಟು ನೊಂದಿರಿ? ನನ್ನನ್ನೇಕೆ ಹುಡುಕಿ ಬಂದಿರಿ?

ಸರ್ವಜ್ಞ : ತನ್ನ ನೋಡಲಿ ಎಂದು ಕನ್ನಡಿ ಕರೆವುದೇ, ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು ಕನ್ನಡಿಯಂತೆ. ಆಳ ಇರುವೆಡೆಗೆ ತಾನೇ ನೀರು ಹೊರಳಬೇಕು.

ವೇಮನ : ನಿಮ್ಮ ಮಾತು ಕೇಳಿದರೆ ಕನ್ನಡಿಯೇ ಬಿಂಬವನು ಬೆನ್ನಹತ್ತಿ ಬಂದಂತೆ ತೋರುತ್ತದೆ.

ದೊರೆ : ಸಾಕು ನಿಲ್ಲಿ ನಿಮ್ಮ ಅಧಿಕ ಪ್ರಸಂಗವನು. ಇದು ನ್ಯಾಯಾಲಯ. ಕುಶಲೋಪಹರಿಗೆ ಇದು ಚಾವಡಿಯಲ್ಲ.

ಸರ್ವಜ್ಞ : ಕ್ಷಮಿಸಬೇಕು ಪ್ರಭು. ತುಂಗೆಯನು ಹಿಂದಾಡಿ ಕೃಷ್ಣೆಯನು ಹುಡುಕಿ ಬಂದೆ.

ವೇಮನ : ಸರ್ವಜ್ಞನೆಂಬುವನು ಗರ್ವದಿಂದಾವನೆ ಸರ್ವರಿಂದ ಒಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ

ಪುರೋಹಿತ : ಒಬ್ಬ ಅರೆ ಹುಚ್ಚ, ಇನ್ನೊಬ್ಬ ಪೂರ್ತಿ ಹುಚ್ಚ, ಹುಚ್ಚು ಕೂಡಲ ಸಂಗಮ ಇವರದು.

ದೊರೆ : ಮಂತ್ರಿಗಳೇ ಇಬ್ಬರಲ್ಲಿ ಯಾರು ವೇಮನ. ಅವನನ್ನು ಸೆರೆಗೆ ತಳ್ಳಿ. ಇನ್ನೊಬ್ಬ ಆಡುವ ಮಾತಿನಿಂದ ನಮ್ಮ ನಾಡಿನವನಲ್ಲವೆಂದು ತಿಳಿಯುತ್ತದೆ. ಆತನನ್ನು ಗಡಿಪಾರು ಮಾಡಿ.

ವೇಮನ : ದೊರೆ ನಾನು ವೇಮನ. ನನ್ನನ್ನು ಶಿಕ್ಷಿಸಿ, ಅವರನ್ನು ಬಿಡುಗಡೆ ಮಾಡಿ.

ಸರ್ವಜ್ಞ : ನಾನು ವೇಮನ. ನನ್ನನ್ನು ಶಿಕ್ಷಿಸಿ. ಅವರನ್ನು ಬಿಡುಗಡೆಗೊಳಿಸಿ.

ದೊರೆ : ಈ ಇಬ್ಬರನ್ನು ಸೆರೆಗೆ ತಳ್ಳಿ. ಅಲ್ಲಿಯೇ ಯಾರು ವೇಮನ ಎನ್ನುವುದನ್ನು ತೀರ್ಮಾನಿಸಿಕೊಳ್ಳಲಿ.

(ಭಟರು ಬಂದು ಇಬ್ಬರನ್ನು ಎಳೆದೊಯ್ಯುತ್ತಾರೆ)

●

ದೃಶ್ಯ – ೧೨

[ಒಂದು ಊರು. ಜನ ದಿಕ್ಕಾಪಾಲಾಗಿ ಕತ್ತಲಲ್ಲಿ ಪಂಜುಗಳನ್ನು ಹೊತ್ತು ಓಡುತ್ತಿದ್ದಾರೆ. ಕತ್ತಲು ಬೆಳಕಿನಲ್ಲಿ ಅವರ ಮುಖಗಳು ಅರೆಬರೆಯಾಗಿ ಕಾಣುತ್ತಿವೆ]

ಸಾಟು : ಕೇಳ್ರಪ್ಪ ಕೇಳಿ ನಮ್ಮ ಯೋಗಿ ವೇಮನ ಅವರನ್ನು ರಾಜಪ್ರಭುತ್ವ ಸೆರೆ ಹಿಡಿದಿರುವರಂತೆ. ಕೇಳ್ರಮೋ ಕೇಳಿ.

ಕೆಳಗಿನ ಕೇರಿಯವ : ಕೇಳಿದಿರಾ ಸುದ್ದಿಯನ್ನ? ಎಷ್ಟು ಸೊಕ್ಕು ಇರಬೇಕು ಅಂತೀನಿ? ಎಲ್ಲ ಕಾಲಕ್ಕೂ ಅನ್ಯಾಯ ಹಿಂಗೆ ನಡೆಯುತ್ತಲ್ಲಾ.

ಚಮ್ಮಾರ ಕೇರಿಯವ: ನನಗೆ ಮುಂಚಿನಿಂದಲೂ ಅನುಮಾನ ಇದ್ದೇ ಇತ್ತು. ಇಂತಹದೇನೋ ಅನಾಹುತ ನಡದೇ ನಡೆಯುತ್ತೆ ಅಂತಾ. ಆದ್ರೆ ಇಷ್ಟು ಬೇಗ ನಡೆಯುತ್ತೆ ಅಂತ ಗೊತ್ತಿರಲಿಲ್ಲ.

(ಹಾಡು) **ವೈಷ್ಣಲು ಅನಿಯಡಿ ವಾರ್ತಾ ಮಾತ್ರಮೇ ಕಾನಿ**
ದೊಂಗಲಿಂಟ ಕಂಟೇ ದೊರಕಬೋರು
ನೇಲಮೀದ ಮೀರ ನೇರಪ್ಪುಲನೇ ಮಂದು॥ವಿ॥
ಮಾತಿಗಷ್ಟೇ ವೈಷ್ಣವರು
ಹುಡುಕಿದರೆ ಸಿಗುವರೇನು ಮನೆಯ ಕಳ್ಳರು
ನೆಲದ ಮೇಲೆ ಇವರು ಕಲಿಕೆಯ ತಾ ಮುಂದು
ವಿಶ್ವದಾಭಿರಾಮ ವಿನುರ ವೇಮ

ಕುಂಬಾರ ಕೇರಿಯವ: ಇದರಲ್ಲಿ ಕೇವಲ ಪುರೋಹಿತರು ಮಾತ್ರವಲ್ಲ ವರ್ತಕರು ಪಾಳ್ಯಗಾರರು ರಾಜರ ಜತೆಕೂಡಿ ಮಾಡಿರೋ ಪಿತೂರಿ ಇದು. ಇದರ ಹಿಂದೆ ಇಡೀ ಅಧಿಕಾರ ವ್ಯವಸ್ಥೆಯ ಕೈ ಇದ್ದಂಗಿದೆ.

ಬೆಸ್ತರ ಕೇರಿಯವ : ವೇಮನ ಅವರ ಚಲನೆಯ ಮೇಲೆ ಮೊದಲಿಂದಲೂ ಬೇಹುಗಾರರನನ್ನ ಬಿಟ್ಟಿದ್ದರಂತೆ. ಅವರು ಎಲ್ಲಿ ಹೋಗತ್ತಾರೆ

ಏನು ಮಾತಾಡತ್ತಾರೆ ಅನ್ನೋದು ಅರಮನೆಗೆ ನಿತ್ಯವು ವರದಿ ಆಗ್ತಿತ್ತಂತೆ.

ಇನ್ನೊಬ್ಬ : ಹೌದಾ! ಈಗ ನಾವು ಇಲ್ಲಿ ಸೇರಿ ಮಾತಾಡುವುದು ಕೂಡ ರಾಜನಿಗೆ ತಿಳಿಯುತ್ತಾ ಹಾಗಾದರೆ.

ಮತ್ತೊಬ್ಬ : ಯಾರಿಗೆ ಗೊತ್ತು? ನಮ್ಮಲ್ಲಿಯೇ ಯಾರಾದ್ರು ಬೇಹುಗಾರರು ಇದ್ದರೂ ಇರಬಹುದು. ಯಾರನ್ನೂ ನಂಬದೇ ಇರೋದೆ ವ್ಯವಸ್ಥೆ. ಬಡವರ ಹಸಿವು ಮತ್ತು ಮೌಢ್ಯವೇ ಅವರ ಬಲ.

ಒಬ್ಬ : ಕಾಲಾಂತರದ ಅನ್ಯಾಯನ ಹೋಗಲಾಡಿಸಬೇಕು ಅಂತ್ಲೆ ತಾನೆ ವೇಮನ ಪ್ರಯತ್ನಪಟ್ಟಿದ್ದು. ಪಾಪ ಒಳ್ಳೆಯವರಿಗೆ ಕಾಲವಿಲ್ಲ.

ಮೊಗದೊಬ್ಬ : ಅದಕ್ಕೆ ಅವರನ್ನೆ ಇಲ್ಲಾನ್ನಿಸಿಬಿಟ್ರೆ ಈ ಸಮಸ್ಯೆಯೆ ಇರಲ್ಲ ಅಂತ ಈ ಹೀನಕೃತ್ಯಕ್ಕೆ ಕೈ ಹಾಕಿದ್ದಾರೆ ಚಂಡಾಲರು.

ಮಾದಿಗರ ಕೇರಿಯವನು: ಈಗ ಚರ್ಚೆಗೆ ಸಮಯ ಇಲ್ಲ. ಈಗ ವೇಮನ ಅವರನ್ನು ಸೆರೆಯಿಂದ ಬಿಡಿಸುವುದು ಹೆಂಗೆ? ಅದನ್ನು ಯೋಚನೆ ಮಾಡಿ. ಅವರನ್ನ ಮುಗಿಸಬೇಕು ಅಂತ್ಲೆ ಸೆರೆ ಹಿಡದವ್ರೆ ಅಂತ ಸುದ್ದಿ ಹಬ್ಬಿದೆಯಪ್ಪ.

(ಹಾಡು) **ಚದವಿನವಾಡಿಕನ್ನ ಚಾಕಲಿವಾಡು ಮೇಲು**
ಕುಲವೇಲ್ಪುಕನ್ನ ಕುಕ್ಕ ಮೇಲು
ಸಕಲ ಸುರಲಕನ್ನ ಜಾರಭಾಮಿನಿ ಮೇಲು॥ವಿ॥
ಅಕ್ಷರ ಬಲ್ಲವನಿಗಿಂತ ಅಗಸ ಮೇಲು
ಕುಲದೇವರಗಿಂತ ಕುನ್ನಿ ಮೇಲು
ಸುರಕನ್ನೆಯರಿಗಿಂತ ಸೂಳೆ ಮೇಲು
ವಿಶ್ವದಾಭಿರಾಮ ವಿನುರ ವೇಮ

ಬೇಡರ ಕೇರಿವನು : ಈಗ ಎಲ್ಲಾ ಕೇರಿಯವರು ಬಂದಿದ್ದಾರೆ ತಾನೆ?

ಹಲವರು : ಬಂದಿದ್ದೀವಲ್ಲಾ. ಮುಂದೆ ಏನು ಮಾಡ್ಬೇಕು ಅದು ಹೇಳಿ.

(ಹಾಡು) **ಪಟ್ಟು ಬಟ್ಟ ಗಟ್ಟಿ ಪಟ್ಟ ನಾಮಮುಬೆಟ್ಟಿ**
ಒಟ್ಟಿ ಬ್ರಾಂತಿ ಚಂದಿ ವೈಷ್ಣವಡು ಐಯೇ
ಲೊಟ್ಟದಾಗಿ ತನಯುಡು ಲೋಕುಲ ಚರಚುರಾ॥ವಿ॥
ಜರತಾರಿಯುಟ್ಟು ಹಣೆಗೆ ನಾಮವನಿಟ್ಟು

ಬರಿದೇ ಭ್ರಾಂತಿಗೊಂಡು ಆದರು ಹಾರುವರು
ಲೊಳಲೊಟ್ಟೆ ತನಯ ಲೋಕ ಕೆಡಿಸುವನು
ವಿಶ್ವದಾಭಿರಾಮ ವಿನುರ ವೇಮ

ಕುರುಬರವನು : ನಾವು ಸೆರೆಮನೆಯ ಮೇಲೆ ದಾಳಿ ಮಾಡಿದರೆ ಹೇಗೆ? ಅಡ್ಡ ಸಿಕ್ಕ ಒಬ್ಬಬ್ಬರನ್ನ ಕತ್ತರಿಸಿದರೆ ಈ ಅಹಂಕಾರಿಗಳಿಗೆ ಬುದ್ಧಿ ಬರಬಹುದು.

ಒಬ್ಬ : ಬೇಡ ಬೇಡ ಅದು ಸೈನ್ಯ ಇರೋ ಜಾಗ. ನಾವು ಬಲ ಪ್ರಯೋಗ ಮಾಡಿದ್ರೆ ಅವರು ಆಯುಧ ಬಳಸ್ತಾರೆ. ಆಗ ರಕ್ತಪಾತ ಆಗುತ್ತೆ. ಅಂತಹ ಪ್ರಯತ್ನ ಬೇಡ.

ಆಚಾರಿ : ಆಗಂತ ಈಗ ಕೈ ಕಟ್ಟಿ ಕುಳಿತುಕೊಳ್ಳೋ ಸಮಯ ಅಲ್ಲ.

ಬಡಗಿ : ನೋಡಿ ವ್ಯವಸ್ಥೆ ಜನರನ್ನ ಹೆದರಸಿ ಭಯದಲ್ಲಿ ಇಟ್ಟುಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುತ್ತೆ.

ಇನ್ನೊಬ್ಬ : ನಾವೇ ಆ ಕೆಲಸ ಮಾಡಿದ್ರೆ?

ಮತ್ತೊಬ್ಬ : ಅಂದ್ರೆ ಏನು ನಾವು ವ್ಯವಸ್ಥೆಯನ್ನು ಎದುರಿಸಬೇಕು ಬೆದರಿಸಬೇಕು.

ಬಡಗಿ : ಅದೊಂದೇ ಮಾರ್ಗ. ಇಲ್ಲದೆ ಹೋದ್ರೆ ನಮ್ಮ ಯೋಗಿ ವೇಮನಣ್ಣನ ಪ್ರಾಣವನ್ನು ಈ ಪಾಪಿಗಳು ಉಳಿಸಲ್ಲ.

ಮಗದೊಬ್ಬ : ನೋಡಿ ಎಲ್ಲಾ ಊರುಗಳಿಗೂ ಹೇಳಿಕಳಿಸೋಣ. ಸಾವಿರ ಸಾವಿರ ಸಂಖ್ಯೆಯಲ್ಲಿ ಜನ ಸೇರಬೇಕು. ಎಲ್ಲರನ್ನು ರಾಜನ ಅರಮನೆಯ ಹತ್ತಿರ ಬರೋಕೆ ಹೇಳೋಣ.

ಒಬ್ಬ : ಜನ ಸೇರಿದರೆ ಪ್ರಭುತ್ವ ದಿಗಿಲುಗೊಳ್ಳುತ್ತಾ?

ಇನ್ನೊಬ್ಬ : ಖಂಡಿತವಾಗಿ ಜನರ ಶಕ್ತಿಯನ್ನು ಎದಿರುಗೊಳ್ಳುವ ಧೈರ್ಯ ಅದಕ್ಕೆ ಇಲ್ಲ. ಇದಕ್ಕಿಂತ ಉತ್ತಮವಾದ ಬೇರೆ ದಾರಿ ಇಲ್ಲ.

ಒಬ್ಬ : ಏ ಪಾಪ ಆಯಪ್ಪ ಇದ್ದದ್ದನ್ನ ಇದ್ದಂಗೆ ಹೇಳಿದನಪ್ಪ. ಈ ದೊಡ್ಡ ಜಾತಿಗಳಿಗೆ ದೊಡ್ಡಮನುಷ್ಯರಿಗೆ ಯಾಕೆ ಮುಕ್ಕುಳಿಯಲ್ಲಿ ಮೆಣಸಿನಕಾಯಿ ಇಟ್ಟಕಂಡಂಗೆ ಆಗ್ಬೇಕು.

ಮಗದೊಬ್ಬ : ಯಾಕೆ ಅಂದ್ರೆ ಇಷ್ಟು ದಿನ ದೇವರು ಧರ್ಮ ಅಂತ ನಮ್ಮ

ಬೆವರಿನಲ್ಲಿ ಕೈ ತೊಳಿತಿದ್ರಲ್ಲ. ಅದ್ಕೆ ಅಡ್ಡ ಬಂದವನಲ್ಲಾ ಇವನ್ಯಾರೋ ಬೈರಾಗಿ.

ಮತ್ತೂ ಒಬ್ಬ : ಅಲ್ರಿ ತಲೆ ಮೇಲೆ ಸ್ವರ್ಗ ಕಾಲು ಕೆಳಗೆ ನರಕ ಇಲ್ಲಾಂದ್ರೆ ಅವರು ಬದುಕೋದು ಹೆಂಗೆ. ಮುಖ್ಯವಾಗಿ ಅವರಿಗೆ ವೇಮಣ್ಣನ ಪದ್ಯಗಳನ್ನ ತಡಕಳಾಕೆ ಆಗಿಲ್ಲ.

ಇನ್ನೊಬ್ಬ : ನಾವು ಮಾತಿನಲ್ಲಿ ಕಾಲ ಕಳೆಯೋದು ಬೇಡ. ವೇಮನ ಅವರ ತಲೆ ಕಡಿಬೇಕು ಅಂತ್ಲೇ ಸೆರೆ ಹಿಡದವರಂತೆ. ಅದನ್ನ ತಪ್ಪಿಸಾಕೆ ಏನು ಮಾಡಬೇಕು ಹೇಳಿ.

ಮತ್ತೊಬ್ಬ : ಹೊತ್ತು ಹುಟ್ಟುವುದ್ರಲ್ಲಿ ನಾವು ಸೆರೆ ಮನೆಯನ್ನ ಮುತ್ತಿಗೆ ಹಾಕಬೇಕು. ಯಾವುದೇ ಕಾರಣಕ್ಕೂ ನಾವು ದುಡಕಬಾರದು, ಹಿಂಸೆ ಮಾಡಿದ್ರೆ ವೇಮನ್ನ ಅವರಿಗೆ ಬೇಸರ ಆಗಬೌದು. ಎನಂತೀರಾ!

ಮಗದೊಬ್ಬ : ಆದರೆ ಒಂದು ವಿಷಯ, ಇವೊತ್ತು ರಾತ್ರಿನೆ ಆಗಬೇಕು. ಪ್ರತಿಯೊಬ್ಬರು ಒಂದೊಂದು ಊರಿಗೆ ಹೋಗಿ ವಿಷಯ ಮುಟ್ಟಿಸಬೇಕು.

ಮತ್ತೊಬ್ಬ : ನಾಳೆ ಬೆಳಗ್ಗೆ ನಾವು ಅರಮನೆ ಮುಂದೆ ಸೇರಬೇಕು. ಸರಿ ಇನ್ನು ಹೊರಡಿ. ಹೊತ್ತು ಮೀರುತ್ತಿದೆ.

(ಬುರ್ರ ಕತೆಯವರು ಹಾಡುತ್ತಾರೆ:)

ಊರೂರಿಗೆ ವಾರ್ತೆ ಹರಡಿ
ಒಣ ಹುಲ್ಲಿಗೆ ಬೆಂಕಿ ಬಿತ್ತೋ
ರವ ರವ ರವ ಜ್ವಾಲೆ
ಧಗ ಧಗ ಧಗ ಉರಿದು
ಹರಿದು ಬಂತು ಜನ ಸಾಗರ
ಬುಸು ಬುಸು ಗುಡುವ ನಾಗರ
ಹೆಣ್ಣು ಗಂಡು ಮಕ್ಕಳು ಮರಿಗಳು
ಬಡವ ಬಲ್ಲಿದ ಸಕಲ ಜನರು
ಮರೆತು ಬಂದರು ಕುಲದ ಬೇಧ
ವೇಮನ ಮಾತೇ ಅವರಿಗೆ ವೇದ
ಬಂದರು ಬಂದರು ಜನಸಾಗರ
ಸಾವಿರ ಸಾವಿರ ಜನ ಸಾಗರ.

ಸೆರೆಮನೆಯ ಸೆರೆಮಾಡಿ
ಕೋಟೆ ಕಟ್ಟಿ ನಿಂತರು.

ಮಾತು : ಜನಸಾಗರ ಎಲ್ಲೆಲ್ಲಿಂದಲೋ ಹರಿದು ಬಂದು ಪಟ್ಟಣವನ್ನು ಕೋಟೆ ಕಟ್ಟಿ ನಿಂತ್ತದ್ದು ನೋಡಿ ರಾಜ ಮಂತ್ರಿ ಮುಖ್ಯವಾಗಿ ಪುರೋಹಿತರು ಅಧಿಕಾರಿಗಳು ಬೆಕ್ಕಸ ಬೆರಗಾದರು. ವೇಮನನ ಬಗ್ಗೆ ಜನ ತೋರಿಸಿದ ಕಾಳಜಿ ಪ್ರಭುತ್ವಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿತು. ಈ ಪರಿಸ್ಥಿತಿಯನ್ನು ನಿಭಾಯಿಸಲು ರಾಜನ ಆಸ್ಥಾನದಲ್ಲಿ ತುರ್ತು ಸಭೆ ಏರ್ಪಾಟಾಯಿತು.

●

ದೃಶ್ಯ – ೧೩

ರಾಜ : ಎನಿದು ವಿಪರೀತ ಮಂತ್ರಿಗಳೆ, ನಮ್ಮ ಬೇಹುಗಾರರು ಹೇಳುತ್ತಿರುವ ಮಾಹಿತಿ ನಿಜವೇನು?

ಮಂತ್ರಿ : ಪ್ರಭು ನನಗೂ ನಂಬಲಿಕ್ಕೆ ಸಾಧ್ಯವಾಗುತ್ತಿಲ್ಲ. ಒಬ್ಬ ಬೈರಾಗಿಯು ಜನರ ಮೇಲೆ ಇಷ್ಟು ಪ್ರಭಾವ ಗಳಿಸಿಕೊಂಡಿದ್ದನ್ನ ಹಿಂದೆ ಮುಂದೆ ಕೇಳಿದ್ದಿಲ್ಲ.

ಪುರೋಹಿತ : ಪ್ರಭು ಈ ವೇಮನ ಒಬ್ಬ ಹುಚ್ಚ. ಈ ಜನ ಅರೆ ಹುಚ್ಚರು. ತನ್ನ ಕಣ್ಕಟ್ಟು ವಿದ್ಯೆಯಿಂದ ಜನರನ್ನು ಮರಳು ಮಾಡಿದ್ದಾನೆ ಅಷ್ಟೆ.

ರಾಜ : ಸರಿ ಆಗಾದರೆ ನೀವೆ ಹೇಳಿ. ಈ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ?

ಪುರೋಹಿತ : ಪ್ರಭು ಸೈನ್ಯವನ್ನು ಬಳಸಿ ಈ ತಿರುಬೋಕಿ ಜನರನ್ನು ಹತ್ತಿಕ್ಕಬೇಕು. ಸಾರ್ವಜನಿಕವಾಗಿ ಆ ತಿರುಬೋಕಿಯನ್ನು ಗಲ್ಲಿಗೇರಿಸದರೆ ಜನ ಹೆದರಿ ಓಡಿ ಹೋಗುತ್ತಾರೆ.

ರಾಜ : ಹೆದರಿಕೆ ಇದ್ದವರು ಇಲ್ಲಿಯವರೆಗೆ ಬರುತ್ತಾರಾ? ವೇಮನನನ್ನು ಕೊಂದರೆ ತಿರುಗಿ ಬಿದ್ದರೆ ಏನು ಮಾಡುವುದು. ಈ ಜನ ಸಂಬಳದ ಸೈನಿಕರಲ್ಲ. ಆತನಲ್ಲಿ ಪ್ರೀತಿ ಇಟ್ಟು ಬಂದವರು.

ಮಂತ್ರಿ : ಪ್ರಭು ತಾವು ದುಡುಕಬಾರದು. ಯುದ್ಧ ಮಾಡುವುದಕ್ಕೆ ಪ್ರತಿಭಟಿಸುತ್ತಿರುವವರು ನಮ್ಮ ಶತ್ರುಗಳಲ್ಲ. ನಮ್ಮ ಪ್ರಜೆಗಳು ಅವರು ನೀಡುವ ತೆರಿಗೆಯಿಂದ ನಾವು ನಮ್ಮ ಸೈನಿಕರಿಗೆ ಸಂಬಳ ಕೊಡುತ್ತಿದ್ದೇವೆ. ಅಷ್ಟೇ ಏಕೆ ನಮ್ಮ ಪುರೋಹಿತರ ಪೂಜಾ ಖರ್ಚು ಗೌರವಧನ ಎಲ್ಲ ಅವರ ಬೆವರಿನ ಹಣ. ಇದು ಬೆಟ್ಟದಂತಹ ಸಮಸ್ಯೆ. ಇದನ್ನು ಉಗುರಲ್ಲಿ ಹೋಗಿಸಬೇಕು ಕೊಡಲಿ ತೆಗೆದುಕೊಂಡರೆ ಪ್ರಯೋಜನ ಇಲ್ಲ.

(ಅಷ್ಟರಲ್ಲಿ ಸೈನ್ಯಾಧಿಕಾರಿಯ ಆಗಮನ ದೊರೆಗೆ ವಂದಿಸಿ)

ಸೈನ್ಯಾಧಿಕಾರಿ : ಪ್ರಭು ಕ್ಷಮಿಸಬೇಕು, ಪರಿಸ್ಥಿತಿ ಕೈ ಮೀರಿದೆ. ಈಗಾಗಲೇ ಸಾವಿರಾರು ಜನ ಸೆರೆಮನೆಯ ಸುತ್ತ ಕೋಟೆಕಟ್ಟಿ ನಿಂತಿದ್ದಾರೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ಇನ್ನೂ ಸಾವಿರಾರು ಜನ ರಾಜಧಾನಿಯತ್ತ ಧಾವಿಸುತ್ತಿದ್ದಾರೆ. ನಿಜ ಹೇಳಬೇಕೆಂದರೆ ನಮ್ಮ ಸೈನ್ಯಕ್ಕಿಂತ ಎಷ್ಟೋಪಟ್ಟು ಜನ ಜಾಸ್ತಿ ಇದ್ದಾರೆ. ಅವರು ಹಿಂಸೆಗೆ ಇಳಿದರೆ ಸೆರೆಮನೆಯೇನು ಅರಮನೆಯನ್ನು ರಕ್ಷಿಸುವುದೂ ಕಷ್ಟ ಪ್ರಭು.

ಮಂತ್ರಿ : ಪ್ರಭು ನಾವು ವೇಮನ ಅವರನ್ನು ಬಿಡುಗಡೆ ಮಾಡೋಣ. ಜನ ತಾವಾಗಿಯೇ ಅವನ ಹಿಂದೆ ಹೊಗುತ್ತಾರೆ.

ರಾಜ : ಈಗ ಏನು ಹೇಳುತ್ತೀರಿ ಪುರೋಹಿತರೇ. ನಿಮ್ಮ ಮಾತು ಕೇಳಿ ಕೆಟ್ಟೆ. ಆತನನ್ನು ಬಂಧಿಸಿ ತಪ್ಪು ಮಾಡಿದೆ.

ಪುರೋಹಿತ : (ಯೋಚಿಸಿ) ಪ್ರಭು ಈಗಲೂ ನನ್ನ ಮಾತು ಕೇಳಬೇಕು. ಈ ಆತಂಕವನ್ನು ಸುಖಾಂತವಾಗುವ ಮಾರ್ಗ ಹೇಳುತ್ತೇನೆ.

ರಾಜ : ಸುಖಾಂತದ ಮಾರ್ಗ ಹೇಳಿ ಅದನೇ ಹೇಳಿ.

ಪುರೋಹಿತ : ವೇಮನ ಅವರನ್ನ ಗುಟ್ಟಾಗಿ ಸೆರೆಮನೆಯಿಂದ ಅರಮನೆಗೆ ಕರೆತನ್ನಿ. ಅವರನ್ನ ಸೆರೆಯಲ್ಲಿಟ್ಟಿರಲಿಲ್ಲ. ಅವರನ್ನು ಸತ್ಕರಿಸಲು ಕರೆಸಿಕೊಂಡಿದ್ದೆವು ಎಂದು ಘೋಷಣೆ ಮಾಡಿದರೆ ಈ ಸಮಸ್ಯೆ ಹೂ ಎತ್ತಿದ ಹಾಗೆ ಪರಿಹಾರವಾಗುತ್ತದೆ.

ಮಂತ್ರಿ : ಸೆರೆಗೆ ತಳ್ಳಿ ಎಂದು ಸಲಹೆ ಕೊಟ್ಟವರು ನೀವೇ ಈಗ ಸತ್ಕರಿಸಿ ಎನ್ನುತ್ತೀರಿ.

ರಾಜ : ಅದು ಸರಿ ಆ ವೇಮನನ ಜೊತೆ ಇರುವವನನ್ನು ಏನು ಮಾಡುವುದು? ಏನೋ. ಸರ್ವಜ್ಞ ಎಂದೇನೊ ಹೇಳಿದನಲ್ಲಾ.

ಪುರೋಹಿತ : ವೇಮನನಿಗೆ ಪ್ರಜಾಕವಿ ಎಂಬ ಪ್ರಶಸ್ತಿ ನೀಡಲು ಪಕ್ಕದ ರಾಜ್ಯದಿಂದ ಅತಿಥಿಯಾಗಿ ಕರೆಸಿಕೊಂಡಿದ್ದೆವು ಎಂದು ಹೇಳಿದರಾಯಿತು.

ಮಂತ್ರಿ : ವೇಮನ ನಂಬುತ್ತಾರೆಯೇ?

ಪುರೋಹಿತ : ಜನ ನಂಬುತ್ತಾರೆ. ನಮಗೆ ಬೇಕಿರುವುದು ಅದೇ. ಪ್ರಭುಗಳು ಇನ್ನೂ ಪ್ರಸಿದ್ಧರಾಗುತ್ತಾರೆ. ಪ್ರಭುತ್ವ ಮತ್ತಷ್ಟು ಬಲಿಷ್ಠವಾಗುತ್ತದೆ. ಪ್ರತಿಕೂಲವನ್ನು ಅನುಕೂಲ ಮಾಡಿಕೊಳ್ಳುವುದೇ ಜಾಣ್ಮೆ.

ರಾಜ : ವ್ಹಾ ಏನು ಜಾಣ್ಮೆ ನಿಮ್ಮದು ಪುರೋಹಿತರೇ, ನನ್ನನ್ನು ನನ್ನ ರಾಜ್ಯವನ್ನು ಪಾರುಮಾಡಿದಿರಿ.

ಮಂತ್ರಿ : ಭಟರೆ ಅರಮನೆ ಸೆರೆಮನೆಗಳ ಬಳಿ ನೆರೆದಿರುವ ಜನರ ಬಳಿ ಹೋಗಿ ವೇಮನ ಅವರಿಗೆ ಅರಮನೆಯಲ್ಲಿ ಸನ್ಮಾನ ನಡೆಯುವುದು ಇಂದು ಸಂಜೆ ಪ್ರಜಾಕವಿ ಪ್ರಶಸ್ತಿ ಕೊಡಲಾಗುವುದೆಂದು ಪ್ರಕಟಿಸಿ. ಈ ವಾರ್ತೆ ರಾಜ್ಯದ ತುಂಬೆಲ್ಲಾ ಡಾಣ ಡಂಗುರ ಸಾರಿ.

(ಹೊರಗಿನಿಂದ ಡಂಗುರದ ಸದ್ದು ಕೇಳುವುದು. ವೇಮನ ಕವಿಗೆ ಜಯವಾಗಲಿ, ವೇಮನ ಕಾವ್ಯ ಚಿರಾಯುವಾಗಲಿ. ಜನರ ಜಯಘೋಷ ಕೇಳಿಬರುವುದು)

●

ದೃಶ್ಯ – ೧೪

[ತನ್ನ ಟಿಪ್ಪಣಿ ಪುಸ್ತಕದಲ್ಲಿ ಬರೆಯುತ್ತಾ ಇರುತ್ತಾನೆ]

ಬ್ರೌನ್ : ಯೋಗಿ ವೇಮನ ಜನರಿಗಾಗಿ ಬದುಕಿದವನು. ಆದರೆ ಕವಿ ವೇಮನನನ್ನು ಮಾತ್ರ ಜನ ಬದುಕಿಸಿಕೊಂಡರು. ತಮ್ಮ ನಾಲಿಗೆಯ ಮೇಲೆ ಇಟ್ಟುಕೊಂಡು ಕಾಪಾಡಿಕೊಂಡರು. ಆದ್ದರಿಂದಲೇ ಈತ ನಿಜ ಅರ್ಥದಲ್ಲಿ ಪ್ರಜಾಕವಿ. ಜನರ ಕವಿ. ಕೆಳವರ್ಗಗಳಿಗೆ ತುಳಿತಕ್ಕೆ ಒಳಗಾದವರಿಗೆ ಈತನೇ ಆತ್ಮವಿಶ್ವಾಸದ ಗುರುತು. ಈತನನ್ನು ಬದುಕಿರುವಾಗ ಅಪಮಾನಿಸಿದ ಪಂಡಿತ ವರ್ಗ ಈತನ ಕಾವ್ಯವನ್ನು ನಾಶಪಡಿಸಲು ಸುಮಾರು ಇನ್ನೂರು ವರ್ಷಗಳ ಶ್ರಮಪಟಿತ್ತು. ಆ ಮೂಲಕ ಆ ಕವಿತೆಗಳಲ್ಲಿ ಅಂತರ್ಜಲದಂತೆ ಹರಿಯುತ್ತಿರುವ ಸಾಮಾಜಿಕ ನ್ಯಾಯಪರತೆಯನ್ನು ಉಗ್ರವಾಗಿ ನಿಗ್ರಹಿಸುವ ಪ್ರಯತ್ನಗಳು ಯುದ್ಧ ಹುನ್ನಾರಗಳಿಗಿಂತ ಸೂಕ್ಷ್ಮವಾಗಿ ನಡೆದಿರುವುದು ಸ್ವತಃ ನನ್ನ ಅನುಭವಕ್ಕೆ ಬಂತು. 1828ರಲ್ಲಿ ಸುಮಾರು 700 ಪದ್ಯಗಳನ್ನು ಅನೇಕ ಕಷ್ಟಕಾರ್ಪಣ್ಯಗಳಿಂದ ಸಂಗ್ರಹಿಸಲು ಸಾಧ್ಯವಾಯಿತು. ಆದರೆ ಮುದ್ರಣಗೊಂಡ 500 ಪ್ರತಿಗಳಲ್ಲಿ ನನಗೆ ದಕ್ಕಿದ್ದು ಕೇವಲ 50 ಪ್ರತಿಗಳು ಮಾತ್ರ ಉಳಿದ 450 ಪ್ರತಿಗಳು ಪ್ರೆಸ್‌ನಿಂದಲೆ ನಿಗೂಢವಾಗಿ ಕಣ್ಮರೆಯಾಗಿದ್ದವು. ಆ ಪ್ರತಿಗಳು ಏಕೆ ಕಣ್ಮರೆಯಾದವು ಎಂದು ನಿಮಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದರೆ ಸುಮಾರು 10 ವರ್ಷಗಳ ತರುವಾಯ ಈ ಪ್ರತಿಗಳು ಮದ್ರಾಸಿನಲ್ಲಿ ವಿಶ್ವವಿದ್ಯಾಲಯದ ರದ್ದಿಯಲ್ಲಿ ಜೀರ್ಣಾವಸ್ಥೆಯಲ್ಲಿ ನನ್ನ ಕಣ್ಣಿಗೆ ಬಿದ್ದವು. ಅಕ್ಷರ ಅಳಸಿ ಪೇಪರು ಹರಿದು ಚಿಂದಿಯಾಗಿದ್ದವು. ಬಹುಶಃ ನಾನು ಬ್ರಟಿಶ್ ಅಧಿಕಾರಿಯಲ್ಲದೆ ಹೋಗಿದ್ರೆ ನನ್ನ ಸ್ಥಿತಿಯೂ ಹೀಗೆಯೇ ಇರುತ್ತಿತ್ತು ಎನ್ನುವುದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ. ವೇಮನನ ಮೇಲೆ

ಅಂತಹ ಕೋಪವನ್ನು ತೆಲುಗು ಪಂಡಿತ ವರ್ಗ ಹೊಂದಿತ್ತು. ಮುಂದೆಯೂ ಕೂಡ ವೇಮನನ ಮೇಲೆ ಅಗೋಚರ ನಿಷೇಧ ಮುಂದುವರೆಯುವ ಸಂಭವವಿದೆ. ಭಾರತದಂತಹ ತರತಮಗಳ ದೇಶದಲ್ಲಿ ರೂಪುಗೊಂಡ ಇಂತಹ ಕ್ರಾಂತಿ ಕವಿಯನ್ನು ಯುರೋಪಿನಲ್ಲಿ ಕಲ್ಪಿಸಿಕೊಳ್ಳಲು ಕೂಡ ಸಾಧ್ಯವಿಲ್ಲ. ಈತ ತೆಲಗು ಸಂಸ್ಕೃತಿ ಇರುವಷ್ಟು ಕಾಲವೂ ಜೀವಂತವಿರುವ ಕವಿ. ಈತ ಅಮರಯೋಗಿ ಈತನ ಮಾತು ಸಾವಿರದ ಕವಿತೆ. ಈತನ ನೆನಪಿಗೆ ನನ್ನ ಹೃತ್ಪೂರ್ವಕ ನಮಸ್ಕಾರಗಳು.

ಕಾಮಿಯ್ಯೆನವಾಡು ಕವಿಯೌವುನು
ರವಿಯೌವುನು ಕಾಮಿಗಾಕ ಮೋಕ್ಷಗಾಮಿಕಾಡು
ವಿಶ್ವಾದಾಭಿರಾಮ ವಿನುರ ವೇಮ



ಕವಿ, ಸಂಸ್ಕೃತಿ ಚಿಂತಕ ಕೆ.ವೈ. ನಾರಾಯಣಸ್ವಾಮಿಯವರು ಪ್ರಧಾನವಾಗಿ ನಾಟಕಕಾರರು. ಕೆವೈಎನ್ ಅವರು ಬರೆದ ನಾಟಕಗಳು ಹಲವು. "ನ್ಯಾಸ್ತನೆ ನೆಲಬಾಲನೆ"ಯಲ್ಲಿ ಚಕ್ರರತ್ನ, ಅನಭಿಜ್ಞ ಶಾಕುಂತಲ, ಪಂಪಭಾರತ, ಕೈವಾರ ನಾರೇಯಣ, ವಿನುರ ವೇಮ ಈ ಐದು ನಾಟಕಗಳನ್ನು ಸಂಕಲಿಸಲಾಗಿದೆ. ಈ ನಾಟಕಗಳು ಸಮಕಾಲೀನ ಸಂದರ್ಭದ ನೆಲೆಯಲ್ಲಿ ಜಾಗತಿಕ ರಾಜಕಾರಣವನ್ನು ದೇಸೀಯ ವಿದ್ಯಮಾನಗಳನ್ನು ಮುಖಾಮುಖಿಯಾದಂತೆ ರಚಿಸಲಾಗಿದೆ. ಇಲ್ಲಿ ಪುರಾಣಕ್ಕೆ ಸಂಬಂಧಿಸಿದ ವಸ್ತುವಿನ ಜೊತೆಗೆ ಚಾರಿತ್ರಿಕ ಸಂದರ್ಭದ ಹಲವು ವ್ಯಕ್ತಿಗಳನ್ನು, ಸಂಗತಿಗಳನ್ನು, ನಾಟಕಕ್ಕೆ ವಸ್ತುವಾಗಿ ಬಳಸಿಕೊಳ್ಳಲಾಗಿದೆ. ನಾರಾಯಣಸ್ವಾಮಿಯವರು ನಾಟಕವನ್ನು ಕಟ್ಟಿಕೊಡುವ ರೀತಿಯಲ್ಲಿ ಅದರ ತಂತ್ರದಿಂದ ಹಿಡಿದು ಅಲ್ಲಿಯ ಲೋಕದರ್ಶನ ಒಳಗೊಂಡಂತೆ ರಚನಾ ವಿನ್ಯಾಸವೇ ಹೊಸತು ಎನ್ನಿಸುತ್ತದೆ. ವಸ್ತು ಹಳೆಯದೆಂದರೂ ಕಾಣುವ ಕಣ್ಣು ಈ ಕಾಲದ್ದು, ಹೀಗಾಗಿ ವಸ್ತು ನಮ್ಮದು, ನಮ್ಮ ಮನೆಯಂಗಳದ್ದು ಎನ್ನಿಸುವ ಆಪ್ತತೆಯಲ್ಲಿ ಬಿಚ್ಚಿಕೊಳ್ಳುತ್ತದೆ. ಇದು ಕೆವೈಎನ್ ಅವರ ವಿಶೇಷತೆ. ಇವರ ನಾಟಕಗಳ ವಸ್ತು ಕನ್ನಡ ಸಾಂಸ್ಕೃತಿಕ ಜಗತ್ತಿಗೆ ಸಂಬಂಧಿಸಿದ ವಸ್ತುವಾದರೂ ಅದನ್ನು ನಾರಾಯಣಸ್ವಾಮಿಯವರು ಮರು ರಚನೆಗೆ ಒಡ್ಡಿಕೊಂಡಿರುವ ದೃಷ್ಟಿ ಅಪೂರ್ವವಾದುದು. ಇವರ ನಾಟಕಗಳಲ್ಲಿ ಸಂಭಾಷಣೆ, ಹಾಡುಗಳು ಹಿಂದಿನ ನಾಟಕಕಾರರ ರಾಗಗುಂಗಿನ ವೈಭವೀಕರಣದ ಪರಿಕರಗಳಾಗದೇ ಇಡೀ ನಾಟಕದ ಅಂದಸೌಷ್ಟವವನ್ನು ಹಿಡಿದಿಡುವ ರಚನೆಗಳಾಗಿವೆ. ಇಡೀ ನಾಟಕಕ್ಕೆ ಹೊಸಕಳೆಯನ್ನು ತಂದುಕೊಡುವ ಚಿಂತನೆಯ ಧಾರೆಗಳಾಗಿವೆ. ಇವು ಓದುವ ಪಠ್ಯಗಳಾದಷ್ಟೇ ಪರಿಪೂರ್ಣತೆಯಲ್ಲಿ ರಂಗ ಪಠ್ಯಗಳಾಗಿಯೂ ನಿರ್ದೇಶಕರಿಗೆ ಪ್ರಯೋಗದ ಪ್ರೇರಣೆಯನ್ನು ನೀಡುವ ಕೃತಿಗಳಾಗಿವೆ.

ಡಾ॥ ವಸುಂಧರಾ ಭೂಪತಿ
ಅಧ್ಯಕ್ಷರು

KANNADA PUSTAKA PRADHIKARA
KPP 0444 PRICE Rs.: 220/-
9 789352 892679
ನ್ಯಾಸ್ತನೆ ನೆಲಬಾಲನೆ